ವಿಶ್ವವಾಣಿ

ವಿಶ್ವಾಸವೇ ವಿಶ್ವ

100 ವಿಕೆಟ್ ಗಡಿ ದಾಟಿದ ಸಿರಾಜ್

ಆರ್‌ಸಿಬಿ ತಂಡದ ಮಾಜಿ ಸದಸ್ಯ, ಇದೀಗ ಗುಜರಾತ್ ಟೈಟನ್ಸ್ ತಂಡದ ಪರ ಆಡುತ್ತಿರುವ ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಹೈದರಾಬಾದ್‌ನಲ್ಲಿ ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ 17 ರನ್‌ಗೆ 4 ವಿಕೆಟ್ ಪಡೆದು ಮಿಂಚಿದರು. ಇದರೊಂದಿಗೆ ಐಪಿಎಲ್‌ನಲ್ಲಿ 100 ವಿಕೆಟ್‌ಗಳ ಗಡಿ ದಾಟಿರುವ ಸಿರಾಜ್ ತಮ್ಮ ವಿಕೆಟ್ ಗಳಿಕೆಯನ್ನು 102ಕ್ಕೆ ವಿಸ್ತರಿಸಿಕೊಂಡಿದ್ದಾರೆ.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಫಲಿತಾಂಶ ನೀಡುವ ನಾಯಕತ್ವ, ಸ್ಫೂರ್ತಿ ನೀಡುವ ಸಾಧನೆ

ಶ್ರೀ ಎಂ.ಬಿ. ಪಾಟೀಲ, ಮಾನ್ಯ ಬೃಹತ್ & ಮಧ್ಯಮ ಕೈಗಾರಿಕೆಗಳು ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು, ಮತ್ತು **ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ**, ಮಾನ್ಯ ಶಾಸಕರು & ಅಧ್ಯಕ್ಷರು-ಕೆಎಸ್‌ಡಿಎಲ್, ಇವರು ಸನ್ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ ಸಿದ್ದರಾಮಯ್ಯ** ಅವರಿಗೆ ಮೈಸೂರ್ ಸ್ಯಾಂಡಲ್ ಉತ್ಪನ್ನಗಳನ್ನು ನೀಡುತ್ತಿರುವುದು.

ಅದ್ಭುತ ಫಲಿತಾಂಶಗಳೊಂದಿಗೆ, 2024-25ರಲ್ಲಿ ಕೆಎಸ್‌ಡಿಎಲ್‌ನಿಂದ ಮತ್ತೊಮ್ಮೆ ಗಮನಾರ್ಹ ಸಾಧನೆ

ಕರ್ನಾಟಕದ ಐತಿಹಾಸಿಕ ಮೈಸೂರ್ ಸ್ಯಾಂಡಲ್ ಸೋಪ್ ತಯಾರಿಸುವ **ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್ (ಕೆಎಸ್‌ಡಿಎಲ್)** ಮೊದಲಿನಿಂದಲೂ ಅತ್ಯುತ್ತಮ ಗುಣಮಟ್ಟ ಹಾಗೂ ಶ್ರೀಮಂತ ಪರಂಪರೆಗಾಗಿ ಗುರುತಿಸಿಕೊಂಡಿದೆ. ಕಳೆದ ಎರಡು ವರ್ಷಗಳಲ್ಲಿ ಇನ್ನೂ ಕೆಲವು ಸಾಧನೆಗಳ ಗರಿಗಳನ್ನು ಮುಡಿಗೇರಿಸಿಕೊಂಡಿದೆ: ಕಾರ್ಯಪ್ರದರ್ಶನ, ದಾಖಲೆಯ ಲಾಭಗಳು, ಉತ್ಪಾದನೆ ಹೆಚ್ಚಳ, ಬಲಿಷ್ಠ ಮಾರುಕಟ್ಟೆ ಅಸ್ತಿತ್ವ, ಇವೆಲ್ಲವೂ ಚುರುಕು ದೃಷ್ಟಿ, ಉತ್ತಮ ಅನುಷ್ಠಾನ ಹಾಗೂ ಅಭಿವೃದ್ಧಿ ಹೊಂದುವ ಇಚ್ಛಾಶಕ್ತಿಯ ಫಲಿತಾಂಶವಾಗಿದೆ.

ವಾರ್ಷಿಕ ವಹಿವಾಟು

2022–23	₹1,375 ಕೋಟಿ
2023–24	₹1,571 ಕೋಟಿ
2024–25	₹1,788 ಕೋಟಿ

ನಿವ್ವಳ ಲಾಭ

2022–23	₹182+ ಕೋಟಿ
2023–24	₹362+ ಕೋಟಿ
2024–25	₹415+ ಕೋಟಿ

ಈ ಮಹತ್ತರ ಬೆಳವಣಿಗೆಗೆ ಮುಖ್ಯ ಕಾರಣಗಳು

ಉತ್ಪಾದನಾ ಕ್ಷಮತೆ
ನಿರಂತರವಾಗಿ **110%** ಸಾಧನೆ

ರಫ್ತು ಹೆಚ್ಚಳ
25 ರಾಷ್ಟ್ರಗಳಲ್ಲಿ ಮಾರುಕಟ್ಟೆ, **2026**ರ ವೇಳೆಗೆ **80** ರಾಷ್ಟ್ರಗಳಿಗೆ ವ್ಯಾಪಿಸುವ ಗುರಿ

ಕಳೆದ 5 ವರ್ಷಗಳಲ್ಲಿ **29% ಸಿಎಜಿಆರ್** ಸಾಧಿಸಿದೆ ಹಾಗೂ ಸಂಸ್ಥೆಯ ಇತಿಹಾಸದಲ್ಲಿಯೇ **ಅತೀ ಹೆಚ್ಚಿನ ಲಾಭ**ಗಳಿಸಿದೆ

ಮೈಸೂರು ಸ್ಯಾಂಡಲ್ ವೇವ್ ಸರಣಿ ಬಿಡುಗಡೆ: ಪ್ರೀಮಿಯಂ ಸಾಬೂನುಗಳು, ಪೂಜಾ ಸಾಮಗ್ರಿ, ಅಗರಬತ್ತಿ, ಸಾಂಬ್ರಾಣಿ, ದೀಪದ ಎಣ್ಣೆ, ಪ್ಯಾಕೇಜ್ಡ್ ನೀರು

ಪ್ರಮುಖ ಅಂಶಗಳು

- **2 ವರ್ಷಗಳಲ್ಲಿ ₹412 ಕೋಟಿ ವಹಿವಾಟು ಹೆಚ್ಚಳ**
- **ನಿವ್ವಳ ಲಾಭ ದ್ವಿಗುಣ**
- **ಡಿವಿಡೆಂಡ್ ದ್ವಿಗುಣ**
- **ದೈನಂದಿನ ಉತ್ಪಾದನೆ: 1.8 ದಶಲಕ್ಷ ಸಾಬೂನು**
- ಒಟ್ಟು ಉತ್ಪಾದನೆಯಲ್ಲಿ **ಸೋಪುಗಳ ಪಾಲು 70%**
- **ಹೆಚ್ಚು ಶ್ರೀಗಂಧವನ್ನು ಬೆಳೆಸಿ:** 713+ ರೈತರೊಂದಿಗೆ 3,813 ಎಕರೆಗಳಲ್ಲಿ ಶ್ರೀಗಂಧ ಬೆಳೆಸಲು ಪಾಲುದಾರಿಕೆ
- ವಾರ್ಷಿಕ ಆನ್‌ಲೈನ್ ಮಾರಾಟವನ್ನು **₹100 ಕೋಟಿ**ಗೆ ಹೆಚ್ಚಿಸಲು **ಇ-ಕಾಮರ್ಸ್** ವೇದಿಕೆಗಳೊಂದಿಗೆ ಪಾಲುದಾರಿಕೆ
- ಪ್ರಚಾರ ಮತ್ತು ಮಾರಾಟ ಹೆಚ್ಚಿಸಲು ರಾಜ್ಯಾದ್ಯಂತ **'ಮೈಸೂರ್ ಸ್ಯಾಂಡಲ್ ಸೋಪ್ ಮೇಳ'** ಆಯೋಜನೆ

ಹೊಸ ಉತ್ಪನ್ನಗಳು

- 7 ಹ್ಯಾಂಡ್ ಸ್ಯಾನಿಟೈಜರ್‌ಗಳು
- 5 ಹ್ಯಾಂಡ್‌ವಾಶ್ ಉತ್ಪನ್ನಗಳು
- 3 ಶವರ್ ಜೆಲ್‌ಗಳು
- 10 ಹೊಸ ಸಾಬೂನು ಮಾದರಿಗಳು
- ಆಕ್ವಾ ಮಿನರಲ್ ವಾಟರ್

ವಿಷನ್ 2030

- **2030ರ** ವೇಳೆಗೆ **ರೂ.5,000 ಕೋಟಿ** ವಹಿವಾಟು ಗುರಿ
- **ವಿಜಯಪುರದಲ್ಲಿ** ಹೊಸ ಉತ್ಪಾದನಾ ಘಟಕ
- **ರಫ್ತು ಹೆಚ್ಚಿಸುವುದು. ಈಶಾನ್ಯ ಭಾರತ, ಪಂಜಾಬ್, ರಾಜಸ್ತಾನ, ಜಮ್ಮು-ಕಾಶ್ಮೀರ** ರಾಜ್ಯಗಳಿಗೆ ಮಾರುಕಟ್ಟೆ ವಿಸ್ತರಣೆ

ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು. -ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಸಂಸ್ಥೆಯ ಈ ಅದ್ಭುತ ಸಾಧನೆಗೆ ಕಾರಣರಾದ ಕಾರ್ಮಿಕರು, ಸಿಬ್ಬಂದಿ ವರ್ಗ, ನೌಕರರ ಸಂಘ, ಅಧಿಕಾರಿ ವೃಂದ, ಪ್ರಧಾನ ವ್ಯವಸ್ಥಾಪಕರು-ಆಡಳಿತ, ಪ್ರಧಾನ ವ್ಯವಸ್ಥಾಪಕರು-ಹಣಕಾಸು, ಎಲ್ಲರಿಗೂ ಅವರ ಅಮೂಲ್ಯ ಕೊಡುಗೆಗಳಿಗೆ ಧನ್ಯವಾದಗಳು.

ಡಾ. ಎಸ್. ಸೆಲ್ವಕುಮಾರ್, ಭಾ.ಆ.ಸೇ.
ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ

ಡಾ. ಪ್ರಶಾಂತ್ ಪಿಕೆಎಂ, ಐಎಫ್‌ಎಸ್, ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್

@vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಸೋಮವಾರ 07.04.2025 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಬೆಳಕಿನ ಚಿತ್ತಾರದಲ್ಲಿ ಕಣ್ಮನ ಸೆಳೆದ ಶಕ್ತಿ ಸೌಧ

ರಾಜ್ಯದ ಶಕ್ತಿಕೇಂದ್ರವಾಗಿರುವ ವಿಧಾನಸೌಧದ ಶಾಶ್ವತ ದೀಪಾಲಂಕಾರದ ವ್ಯವಸ್ಥೆಯನ್ನು ಭಾನುವಾರ ಉದ್ಘಾಟಿಸಲಾಯಿತು. ಪೋಟೊ: ಸುಧಾಕರ್ ದೇವರಾಜ್

ಸೊಂಪಾದ ಪುಟಗಳು

ಕೃಷ್ಣ ಬೈರೇಗೌಡ ಅಂದ್ರೆ ರಾಹುಲ್‌ಗೆ ಏಕೆ ಇಷ್ಟ?
ಮೂರ್ತಿಪೂಜೆ – ಆರ್.ಟಿ.ವಿಠ್ಠಲಮೂರ್ತಿ 6

ಶಿರಸಿಯ ಸಿರಿ: ಯುಗಾದಿಯ ಶೋಭಾಯಾತ್ರೆ
ವಿದೇಶವಾಸಿ – ಕಿರಣ್ ಉಪಾಧ್ಯಾಯ, ಬಹ್ರೈನ್ 7

ದಾರಿದೀಪೋಕ್ತಿ

ಜೀವನದಲ್ಲಿ ಟೀಕೆ ಮತ್ತು ಪ್ರಶಂಸೆಗಳೆರಡನ್ನೂ ಸಮಸಮವಾಗಿ ಸ್ವೀಕರಿಸುವ ಮನೋಭಾವವನ್ನು ಬೆಳೆಸಿಕೊಂಡರೆ, ಯಾವತ್ತೂ ಸಮಾಧಾನ ಮತ್ತು ನೆಮ್ಮದಿಯಿಂದ ಇರುವುದು ಸಾಧ್ಯ. ಜೀವನದಲ್ಲಿ ಏನೇ ಏರಿಳಿತಗಳಾದರೂ ಆಗ ನಮ್ಮ ವರ್ತನೆಯಲ್ಲಿ ವ್ಯತ್ಯಾಸ ಆಗುವುದಿಲ್ಲ.

ವಕ್ರತುಂಡೋಕ್ತಿ

ಒಳ್ಳೆಯ ಜನರನ್ನು ಹುಡುಕುವುದು ಸುಲಭ. ಅವರು ಒಂದೋ ವೈನ್, ಇಲ್ಲವೇ ಸ್ಕಾಚ್ ಕುಡಿಯುತ್ತಿರುತ್ತಾರೆ.

ಬೆಲೆ ಏರಿಕೆ, ವಿನಯ್ ಪ್ರಕರಣ ವಿರುದ್ಧ ಹೋರಾಟ

ಇಂದಿನಿಂದ ಬಿಜೆಪಿ ಜನಾಕ್ರೋಶ ಯಾತ್ರೆ

ಬೆಂಗಳೂರು: ರಾಜ್ಯ ಸರಕಾರದ ವಿರುದ್ಧದ ಸರಣಿ ಆರೋಪಗಳನ್ನು ಜನರ ಬಳಿಗೆ ತೆಗೆದುಕೊಂಡು ಹೋಗುವ ಉದ್ದೇಶದಿಂದ ರಾಜ್ಯ ಬಿಜೆಪಿ ಇದೀಗ ಸರಣಿ ಹೋರಾಟಕ್ಕೆ ಮುಂದಾಗಿದ್ದು, ಇದರ ಭಾಗವಾಗಿ ಸೋಮವಾರ ಮೈಸೂರಿನಲ್ಲಿ 'ಜನಾಕ್ರೋಶ ಯಾತ್ರೆ'ಗೆ ಚಾಲನೆ ನೀಡಲಿದೆ.

ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಬಳಿಕ, ರಾಜ್ಯದಲ್ಲಿ ನಿತ್ಯ ಬಳಕೆ ವಸ್ತುಗಳ ಮೇಲೆ ನಿರಂತರವಾಗಿ ದರ ಏರಿಸುತ್ತಿದೆ. ಇದರೊಂದಿಗೆ ಮುಸ್ಲಿಮರ ಓಲೈಕೆಗೆ ಗುತ್ತಿಗೆಯಲ್ಲಿ ಮೀಸಲು, ಪರಿಶಿಷ್ಟ ಜಾತಿ-ಪಂಗಡದ ಹಣ ಇತರೆ ಯೋಜನೆಗಳಿಗೆ ಬಳಕೆ ಸೇರಿದಂತೆ ವಿವಿಧ ಆರೋಪಗಳನ್ನು ಮುಂದಿಟ್ಟುಕೊಂಡು ಬಿಜೆಪಿ ಈ ಹೋರಾಟ ಆರಂಭಿಸಿದೆ. ಜನಾಕ್ರೋಶ ಯಾತ್ರೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆಯ ಮೂಲಕವೇ, ಹೋರಾಟ ಆರಂಭಿಸುವ ಮೂಲಕ 'ಸಂದೇಶ' ರವಾನಿಸುವ ಲೆಕ್ಕಾಚಾರದಲ್ಲಿದೆ.

ಈ ಬಗ್ಗೆ ಮಾತನಾಡಿರುವ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ರಾಜ್ಯ ಸರಕಾರದ ಬೆಲೆ ಏರಿಕೆ, ಕಾನೂನು ಸುವ್ಯವಸ್ಥೆ ಕುಸಿತ, ಹೆಚ್ಚುತ್ತಿರುವ ದೌರ್ಜನ್ಯ ಪ್ರಕರಣ ಸೇರಿದಂತೆ ಆಡಳಿತ ವೈಫಲ್ಯವನ್ನು ಖಂಡಿಸಿ ಕಾಂಗ್ರೆಸ್ ವಿರುದ್ಧ ಜನಾಕ್ರೋಶ ಯಾತ್ರೆಗೆ ಚಾಲನೆ ಸಿಗಲಿದೆ. ಮೈಸೂರಿನಲ್ಲಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿದ ಬಳಿಕ ಹೋರಾಟವನ್ನು ಪ್ರಾರಂಭಿಸಲಾಗುವುದು. ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು ಈ ಹೋರಾಟಕ್ಕೆ ಚಾಲನೆ ನೀಡಲಿದ್ದಾರೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ನಿರಂತರ ವಾಗಿ ಬೆಲೆ ಏರಿಕೆ ಮಾಡಲಾಗುತ್ತಿದೆ. ನಾವು ಸರಕಾರದ ವಿರುದ್ಧ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಹೋರಾಟ ಮಾಡುತ್ತೇವೆ. ಸರಕಾರಕ್ಕೆ ಬಿಸಿ ಮುಟ್ಟಿಸುವವರೆಗೂ ಸುಮ್ಮನಿರುವುದಿಲ್ಲ ಎಂದು ಎಚ್ಚರಿಸಿದರು.

→ 4

ಪ್ರಮುಖ ವಿಷಯಗಳೇನು?

- ಅಗತ್ಯ ವಸ್ತುಗಳ ಬೆಲೆ ಏರಿಕೆ
- ಮುಸ್ಲಿಮರ ಓಲೈಕೆ
- ದಲಿತರ ಹಣ ಲೂಟಿ
- ಬಿಜೆಪಿ ಕಾರ್ಯಕರ್ತ ವಿನಯ್ ಆತ್ಮಹತ್ಯೆ

- ಮುಖ್ಯಮಂತ್ರಿ ತವರು ಜಿಲ್ಲೆಯಿಂದ ಯಾತ್ರೆ ಆರಂಭ
- ಬೆಲೆ ಏರಿಕೆ, ಮುಸ್ಲಿಂ ಓಲೈಕೆ ವಿರೋಧಿ ಹೋರಾಟ
- ಒಟ್ಟು ನಾಲ್ಕು ಹಂತದಲ್ಲಿ ನಡೆಯಲಿರುವ ಯಾತ್ರೆ

ಎಲ್ಲೆಲ್ಲಿ ಹೋರಾಟ?

ಹಂತ 1
- ಏ.7 ಮೈಸೂರು, ಚಾಮರಾಜನಗರ
- ಏ.8 ಮಂಡ್ಯ, ಹಾಸನ
- ಏ.9 ಕೊಡಗು, ಮಂಗಳೂರು
- ಏ.10 ಉಡುಪಿ, ಚಿಕ್ಕಮಗಳೂರು
- ಏ.11 ಉತ್ತರಕನ್ನಡ
- ಏ.12 ಶಿವಮೊಗ್ಗ

ಹಂತ 2
- ಏ.16 ಬೆಳಗಾವಿ, ಹುಬ್ಬಳ್ಳಿ
- ಏ.17 ಬಾಗಲಕೋಟೆ, ವಿಜಯಪುರ
- ಏ.18 ಕಲಬುರಗಿ, ಬೀದರ್

ಹಂತ 3
- ಏ.21 ದಾವಣಗೆರೆ, ಹಾವೇರಿ
- ಏ.22 ಗದಗ, ಕೊಪ್ಪಳ
- ಏ.23 ಯಾದಗಿರಿ, ರಾಯಚೂರು
- ಏ.24 ಬಳ್ಳಾರಿ, ವಿಜಯನಗರ
- ಏ.25 ಚಿತ್ರದುರ್ಗ, ತುಮಕೂರು

ಹಂತ 4
- ಏ.27 ಕೋಲಾರ, ಚಿಕ್ಕಬಳ್ಳಾಪುರ
- ಮೇ.3 ಬೆಂಗಳೂರು ಮಹಾನಗರ, ಬೆಂಗಳೂರು ಗ್ರಾಮಾಂತರ, ರಾಮನಗರ

ಮುಖ್ಯಮಂತ್ರಿ ಕುರ್ಚಿ ಅಲುಗಾಡುತ್ತಿರುವಾಗ ಒಳ ಮೀಸಲು ನೆನಪಿಗೆ ಬರುತ್ತದೆ. ಸರಕಾರದ ವಿರುದ್ಧ ಬಿಜೆಪಿ ಹೋರಾಟಕ್ಕೆ ಇಳಿದಾಗ ಕಾಂಗ್ರೆಸ್‌ನವರಿಗೆ ಕೋವಿಡ್‌ನಂತಹ ವರದಿಗಳು ನೆನಪಿಗೆ ಬರುತ್ತವೆ. ಇಂತಹ ಗೊಡ್ಡು ಬೆದರಿಕೆಗೆ ಬಿಜೆಪಿ ಜಗ್ಗುವುದಿಲ್ಲ.
– ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಸಂಸತ್ತಿನ ಅನುಮೋದನೆ ಪಡೆದ ಮರುದಿನವೇ ವಿಧೇಯಕಕ್ಕೆ ಕಾನೂನು ಸ್ವರೂಪ

ರಾಷ್ಟ್ರಪತಿ ಅಂಕಿತ: ವಕ್ಫ್ ತಿದ್ದುಪಡಿ ಕಾಯಿದೆ ಜಾರಿ

ದೆಹಲಿ: ಸಂಸತ್ತಿನ ಉಭಯ ಸದನಗಳಲ್ಲಿ ಅಂಗೀಕಾರಗೊಂಡ, ಪ್ರತಿಪಕ್ಷಗಳ ತೀವ್ರ ವಿರೋಧಕ್ಕೆ ಕಾರಣವಾಗಿರುವ ವಕ್ಫ್ ತಿದ್ದುಪಡಿ ಮಸೂದೆ-2025ಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅಂಕಿತ ಹಾಕಿದ್ದಾರೆ. ಮುಸಲ್ಮಾನ್ ವಕ್ಫ್ (ರದ್ದತಿ) ಮಸೂದೆ-2025ಕ್ಕೂ ರಾಷ್ಟ್ರಪತಿ ಅನುಮೋದನೆ ನೀಡಿದ್ದಾರೆ.

ಶುಕ್ರವಾರ ಮುಂಜಾವ ಸಂಸತ್ತಿನ ಅಂಗೀಕಾರ ಪಡೆದ ವಿಧೇಯಕಕ್ಕೆ ಮರುದಿನವೇ (ಏಪ್ರಿಲ್ 5, 2025) ರಾಷ್ಟ್ರಪತಿಯವರ ಒಪ್ಪಿಗೆ ಸಿಕ್ಕಿದೆ. ವಕ್ಫ್ (ತಿದ್ದುಪಡಿ) ಕಾಯ್ದೆ- 2025 ಉಮೀದ್ ಹೆಸರಿನಲ್ಲಿ ಕಾಯಿದೆಯಾಗಿ ಅನುಷ್ಠಾನಕ್ಕೆ ಬರಲಿದೆ ಎಂದು ಸರಕಾರ ತಿಳಿಸಿದೆ. ಗುರುವಾರ ಮಧ್ಯಾಹ್ನ ಆರಂಭವಾಗಿ 3 ಗಂಟೆಗಳಿಗೂ ಹೆಚ್ಚು ಕಾಲ ನಡೆದ ಚರ್ಚೆಯ ನಂತರ ರಾಜ್ಯಸಭೆಯು ವಿವಾದಾತ್ಮಕ ಶಾಸನಕ್ಕೆ ಅನುಮೋದನೆ ನೀಡಿತ್ತು.

ವಕ್ಫ್ ತಿದ್ದುಪಡಿ ಮಸೂದೆ ಅಂಗೀಕರಿಸುವುದರ ಜೊತೆಗೆ ಸಂಸತ್ತು ಮುಸಲ್ಮಾನ್ ವಕ್ಫ್ (ರದ್ದತಿ) ಮಸೂದೆಯನ್ನೂ ಅನುಮೋದಿಸಿತು. ರಾಷ್ಟ್ರಪತಿ ಅಂಕಿತ ಬಿದ್ದ ಬಳಿಕ ಕಳೆದ ಹಲವು ದಶಕಗಳಿಂದ ಜಾರಿಯಲ್ಲಿದ್ದ ' ಮುಸಲ್ಮಾನ್ ವಕ್ಫ್ ಕಾಯ್ದೆ- 1923' ರದ್ದಾಗಿದೆ.

ಸುಪ್ರೀಂಕೋರ್ಟ್‌ಗೆ ಮತ್ತಷ್ಟು ಅರ್ಜಿ: ಇದೇ ವೇಳೆ, ವಕ್ಫ್(ತಿದ್ದುಪಡಿ) ಮಸೂದೆಗೆ ಪ್ರತಿಪಕ್ಷಗಳು, ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ, ಮುಸ್ಲಿಂ ಸಂಘಟನೆಗಳಿಂದ ವಿರೋಧ ವ್ಯಕ್ತವಾಗಿದ್ದು, ಕಾಂಗ್ರೆಸ್, ಡಿಎಂಕೆ, ಎಎಪಿ, ಮತ್ತು ಎಐಎಂಐಎಂ ಪಕ್ಷಗಳು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿವೆ. 'ನಾಗರಿಕ ಹಕ್ಕುಗಳ ರಕ್ಷಣಾ ಸಂಘ' ಎಂಬ ಎನ್‌ಜಿಒ ಕೂಡಾ ಮಸೂದೆಯ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಲಾಲೂ ಪ್ರಸಾದ್ ಯಾದವ್ ಅವರ ಆರ್‌ಜೆಡಿ ಪಕ್ಷವೂ ಸುಪ್ರೀಂಗೆ ಅರ್ಜಿ ಸಲ್ಲಿಸುವುದಾಗಿ ಹೇಳಿದೆ. ಆದರೆ ಇಂಡಿಯಾ ಒಕ್ಕೂಟದ ಭಾಗವಾಗಿರುವ ಶಿವಸೇನೆ ಉದ್ಧವ್ ಬಣ ವಕ್ಫ್ ವಿಧೇಯಕದ ವಿರುದ್ಧ ಹೋರಾಟ ಮುಗಿದ ಅಧ್ಯಾಯ ಎಂದು ತಿಳಿಸಿದೆ.

ಕಾಂಗ್ರೆಸ್ ಸಂಸದ ಮೊಹಮ್ಮದ್ ಜಾವೇದ್ ಮತ್ತು ಆಲ್ ಇಂಡಿಯಾ ಮಜ್ಲಿಸ್-ಎ-ಇತ್ತೆಹಾದುಲ್ ಮುಸ್ಲಿಮೀನ್ (ಎಐಎಂಐಎಂ) ಅಧ್ಯಕ್ಷ ಅಸಾದುದ್ದೀನ್ ಓವೈಸಿ, ಸುಪ್ರೀಂ ಕೋರ್ಟ್‌ನಲ್ಲಿ ವಕ್ಫ್ (ತಿದ್ದುಪಡಿ) ಮಸೂದೆಯ ಸಿಂಧುತ್ವವನ್ನು ಪ್ರಶ್ನಿಸಿ ಈಗಾಗಲೇ ಅರ್ಜಿ ಸಲ್ಲಿಸಿದ್ದಾರೆ.

ಮಸೂದೆಯು ವಕ್ಫ್ ಆಸ್ತಿಗಳು ಮತ್ತು ಅವುಗಳ ನಿರ್ವಹಣೆಯ ಮೇಲೆ ಹೊಸ ವಕ್ಫ್ ವಿಧೇಯಕ ಅನಿಯಂತ್ರಿತ ನಿರ್ಬಂಧಗಳನ್ನು ವಿಧಿಸಿದೆ ಎಂದು ಜಂಟಿ ಸಂಸದೀಯ ಸಮಿತಿಯ ಸದಸ್ಯರಾಗಿದ್ದ, ಬಿಹಾರದ ಕಿಶನ್‌ಗಂಜ್‌ನ ಲೋಕಸಭಾ ಸಂಸದ ಜಾವೇದ್ ತಮ್ಮ ಅರ್ಜಿಯಲ್ಲಿ ದೂರಿದ್ದಾರೆ.

ಹಳೆಯ ಕಾಯಿದೆ ರದ್ದು

ವಕ್ಫ್ ತಿದ್ದುಪಡಿ ಮಸೂದೆ ಅಂಗೀಕರಿಸು ವುದರ ಜೊತೆಗೆ ಸಂಸತ್ತು ಮುಸಲ್ಮಾನ್ ವಕ್ಫ್ (ರದ್ದತಿ) ಮಸೂದೆಯನ್ನೂ ಅನುಮೋದಿಸಿತು. ರಾಷ್ಟ್ರಪತಿ ಅಂಕಿತ ಬಿದ್ದ ಬಳಿಕ ಕಳೆದ ಹಲವು ದಶಕಗಳಿಂದ ಜಾರಿಯಲ್ಲಿದ್ದ ' ಮುಸಲ್ಮಾನ್ ವಕ್ಫ್ ಕಾಯ್ದೆ- 1923' ರದ್ದಾಗಿದೆ.

ಬಾಂಗ್ಲಾದೇಶ ಮತ್ತೆ ಕಿತಾಪತಿ

ದೆಹಲಿ: ಥಾಯ್ಲೆಂಡ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಬಾಂಗ್ಲಾದ ಸರಕಾರದ ಮುಖ್ಯಸ್ಥ ಮೊಹಮ್ಮದ್ ಯೂನಸ್ ಅವರು ಭೇಟಿ ಮಾಡಿದ ಸಂಬಂಧ ಬಾಂಗ್ಲಾದ ವಕ್ತಾರ ನೀಡಿರುವ ಹೇಳಿಕೆ ಎರಡೂ ದೇಶಗಳ ನಡುವಣ ಸಂಬಂಧವನ್ನು ಮತ್ತೆ ಹಳಿ ತಪ್ಪಿಸುವಂತೆ ಮಾಡಿದೆ. ಯೂನಸ್ ಅವರ ಪತ್ರಿಕಾ ಕಾರ್ಯದರ್ಶಿ ಶಫೀ ಕುಲ್ ಆಲಂ ಶನಿವಾರ ತಮ್ಮ ಫೇಸ್‌ಬುಕ್ ಪೋಸ್ಟ್‌ನಲ್ಲಿ, ಬಾಂಗ್ಲಾದೇಶದ ಮುಖ್ಯ ಸಲಹೆಗಾರರು ಹಸೀನಾ ಅವರನ್ನು ಹಸ್ತಾಂತರಿಸುವಂತೆ ಮಾಡಿದ ಮನವಿಯನ್ನು ಮೋದಿ ಅವರ ಗಮನಕ್ಕೆ ತಂದಿದ್ದು, 'ನಿಮ್ಮ (ಯೂನುಸ್) ಬಗ್ಗೆ ಅವರ (ಹಸೀನಾ) ಅಗೌರವದ ವರ್ತನೆಯನ್ನು ನಾವು ನೋಡಿದ್ದೇವೆ' ಎಂದು ಮೋದಿ ಹೇಳಿರುವುದಾಗಿ ತಿಳಿಸಿದ್ದರು. ಇದು ಚಿತ್ರಣವು ಕುಚೇಷ್ಟೆ ಮತ್ತು ರಾಜಕೀಯ ಪ್ರೇರಿತ ಚಿತ್ರಣ ಎಂದು ಭಾರತ ತೀಕ್ಷ್ಣ ಪ್ರತಿಕ್ರಿಯೆ ನೀಡಿದೆ.

ಎಂ.ಎ.ಬೇಬಿ ಸಿಪಿಐ ಪ್ರ.ಕಾರ್ಯದರ್ಶಿ



ತಿರುವನಂತಪುರ: ಕೇರಳ ಮಾಜಿ ಸಚಿವ ಎಂ.ಎ.ಬೇಬಿ, ಕಮ್ಯುನಿಸ್ಟ್ ಪಾರ್ಟಿ-ಮಾರ್ಕ್ಸಿಸ್ಟ್ (ಸಿಪಿಎಂ) ಪ್ರಧಾನ ಕಾರ್ಯದರ್ಶಿಯಾಗಿ ಭಾನುವಾರ ಮಧುರೈನಲ್ಲಿ ನಡೆದ ಪಕ್ಷದ 24ನೇ ಮಹಾಸಭೆಯಲ್ಲಿ ಆಯ್ಕೆಯಾಗಿದ್ದಾರೆ. 2024ರಲ್ಲಿ ಸೀತಾರಾಮ್ ಯೆಚೂರಿ ನಿಧನ ನಂತರ ಈ ಹುದ್ದೆ ಖಾಲಿ ಯಾಗಿತ್ತು. ನಂತರ ಪ್ರಕಾಶ್ ಕಾರಟ್ ಮಧ್ಯಂತರ ಸಂಯೋಜಕರಾಗಿದ್ದರು.

ಬಿಜೆಪಿ ಕಾರ್ಯಕರ್ತನ ಆತ್ಮಹತ್ಯೆ ಪ್ರಕರಣ: ಹೋರಾಟ ತೀವ್ರಗೊಳಿಸಲು ನಿರ್ಧಾರ

ವಿನಯ್ ಪತ್ನಿ ಹೆಸರಿಗೆ ಬರೆದ ಪತ್ರ ಬಹಿರಂಗ

ಬೆಂಗಳೂರು: ರಾಜ್ಯ ರಾಜಕೀಯದಲ್ಲಿ ತೀವ್ರ ವಿವಾದಕ್ಕೆ ಕಾರಣವಾಗಿರುವ ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣಕ್ಕೆ ಮತ್ತೊಂದು ಟ್ವಿಸ್ಟ್ ಸಿಕ್ಕಿದ್ದು, ವಿನಯ್ ತಮ್ಮ ಪತ್ನಿಗೆ ಬರೆದಿರುವ ಕೊನೆಯ ಪತ್ರ ಇದೀಗ ಮತ್ತೊಂದು ಸುತ್ತಿನ ಹೋರಾಟಕ್ಕೆ ನಾಂದಿ ಹಾಡಿದೆ.

ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಅವರ ಆತ್ಮಹತ್ಯೆ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎನ್ನುವ ಆಗ್ರಹವನ್ನು ಬಿಜೆಪಿ ನಾಯಕರು ಮುಂದುವರಿಸಿದ್ದರೆ, ಇತ್ತ ಕಾಂಗ್ರೆಸಿಗರು ಪ್ರಕರಣವನ್ನು ಸಿಬಿಐಗೆ ಕೊಡುವ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಈ ಎಲ್ಲದರ ನಡುವೆ ಗೃಹ ಸಚಿವ ಡಾ.ಜಿ. ಪರಮೇಶ್ವರ ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ವಿವರಣೆ ನೀಡಿದ್ದಾರೆ ಎನ್ನಲಾಗಿದೆ.

ವಿನಯ್ ಈ ಪತ್ರವನ್ನು ನೇರವಾಗಿ ಪತ್ನಿಗೆ ಕಳುಹಿಸದೇ, ಅವರ ಸಹೋದರ ಸುಶಾಂತ್‌ಗೆ ಕಳುಹಿಸಿದ್ದಾರೆ. ಇದರಲ್ಲಿ ಪೊಲೀಸರು ತಮಗೆ ನೀಡುತ್ತಿರುವ ಮಾನಸಿಕ ಕಿರುಕುಳದ ಬಗ್ಗೆ ಹಾಗೂ ಬಂಧನದಿಂದ ಆಗಿರುವ ಅಪಮಾನದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಈ ಪತ್ರವನ್ನು ಮುಂದಿಟ್ಟುಕೊಂಡು ಶಾಸಕ ಪೊನ್ನಣ್ಣ ಹಾಗೂ ಮಂಥರ್ ಗೌಡ ವಿರುದ್ಧ ಪ್ರಕರಣ ದಾಖಲಿಸುವಂತೆ ಸರಕಾರದ ಮೇಲೆ ಒತ್ತಡ ಹೇರಲು ಬಿಜೆಪಿ ಸಿದ್ಧತೆ ನಡೆಸಿಕೊಂಡಿದೆ.

ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣದ ಸಂಬಂಧ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಸಿಬಿಐಗೆ ವಹಿಸುವ ಅಗತ್ಯವಿಲ್ಲ. ರಾಜ್ಯದ ಪೊಲೀಸರ ತನಿಖೆಯ ನಂತರ ಲೋಪಗಳು ಕಂಡುಬಂದರೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆ. ಶಾಸಕರ ಕೈವಾಡ ಇರುವ ಬಗ್ಗೆ ಕೂಡ ಪರಿಶೀಲನೆ ನಡೆಸಲಾಗುತ್ತದೆ.
– ಡಾ.ಜಿ.ಪರಮೇಶ್ವರ, ಗೃಹ ಸಚಿವ

11 ಭಾರತೀಯ ಬೆಸ್ತರ ಬಿಡುಗಡೆ

ಕೊಲಂಬೊ: ಪ್ರಧಾನಿ ನರೇಂದ್ರ ಮೋದಿಯವರ ಶ್ರೀಲಂಕಾ ಭೇಟಿಯನ್ನು ಗೌರವಿಸುವ ವಿಶೇಷ ಸೂಚನೆಯಾಗಿ ಲಂಕಾ ಸರ್ಕಾರ 11 ಭಾರತೀಯ ಮೀನುಗಾರರನ್ನು ಭಾನುವಾರ ಬಿಡುಗಡೆ ಮಾಡಿದೆ. ಭಾರತೀಯ ಬೆಸ್ತರ ಬಂಧನದ ಬಗ್ಗೆ ಪ್ರಧಾನಿ ಮೋದಿ ಅವರು ತೀವ್ರ ಕಳವಳ ವ್ಯಕ್ತಪಡಿಸಿದ ಒಂದು ದಿನದ ನಂತರ ಲಂಕಾ ಅಧಿಕಾರಿಗಳು 11 ಭಾರತೀಯ ಮೀನು ಗಾರರನ್ನು ಬಿಡುಗಡೆ ಮಾಡಿದ್ದಾರೆ. ಸರಕಾರಿ ಮಾಹಿತಿಯ ಪ್ರಕಾರ ಲಂಕಾ 2024 ರಲ್ಲಿ 528 ಕ್ಕೂ ಹೆಚ್ಚು ಭಾರತೀಯ ಮೀನುಗಾರರನ್ನು ಬಂಧಿಸಿದೆ. ಶನಿವಾರ ಲಂಕಾ ಅಧ್ಯಕ್ಷ ಅನುರ ಕುಮಾರ ದಿಸ್ಸಾನಾಯಕೆ ಅವರೊಂದಿಗೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ್ದ ಮೋದಿ, ಉಭಯ ದೇಶಗಳ ಬೆಸ್ತರ ಸಮಸ್ಯೆ ಗಳನ್ನು ಮಾನವೀಯ ನೆಲೆಯಲ್ಲಿ ಪರಿಹರಿಸುವ ಅಗತ್ಯವಿದೆ ಎಂದು ಹೇಳಿದ್ದರು.

4 ಜನ ಅಪಘಾತಕ್ಕೆ ಬಲಿ

ಹುಬ್ಬಳ್ಳಿ: ನಗರದ ಹೊರವಲಯದ ನೂಲ್ವಿ ಕ್ರಾಸ್ ಬಳಿ ಸಂಭವಿಸಿದ ಭೀಕರ ಅಪಘಾತದಲ್ಲಿ ಕಾರಿನಲ್ಲಿದ್ದ 4 ಜನ ಮಹಿಳೆಯರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ವರೂರ್ ನಿಂದ ಹುಬ್ಬಳ್ಳಿ ಕಡೆ ಬರುತಿದ್ದ ಕ್ವಿಡ್ ಕಾರ್ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯ ಕಾಂಪೌಂಡ್ ಗೆ ಡಿಕ್ಕಿ ಹೊಡೆದು ಈ ಅಪಘಾತ ಸಂಭವಿಸಿದೆ. ಇಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ.

ಅಮೆರಿಕದಲ್ಲಿಯೇ ತೀವ್ರ ವಿರೋಧ, ನಾನಾ ನಗರಗಳಲ್ಲಿ ಪ್ರತಿಭಟನೆ

ಟ್ರಂಪಾಸ್ತ್ರ ತಿರುಗು ಬಾಣ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆಕ್ರಮಣಕಾರಿ ವಿದೇಶಾಂಗ ನೀತಿ ಮತ್ತು ಸುಂಕ ನೀತಿಗೆ ಸ್ವದೇಶದಲ್ಲಿಯೇ ತೀವ್ರ ವಿರೋಧ ವ್ಯಕ್ತವಾಗಿದ್ದು ಭಾನುವಾರ ಅಮೆರಿಕದ ಪ್ರಮುಖ ನಗರಗಳ ಬೀದಿಗಳಲ್ಲಿ ಹತ್ತಾರು ಸಾವಿರ ಜನರು ಪ್ರತಿಭಟನೆ ನಡೆಸಿದರು. ವಾಷಿಂಗ್ಟನ್, ನ್ಯೂಯಾರ್ಕ್, ಹೂಸ್ಟನ್, ಫ್ಲಾರಿಡಾ, ಕೊಲೊರೆಡೋ ಮತ್ತು ಲಾಸ್ ಏಂಜಲಿಸ್ ಮತ್ತಿತರ ಸ್ಥಳಗಳಲ್ಲಿ ಜನರು ಪ್ರತಿಭಟನಾ ರ‍್ಯಾಲಿ ನಡೆಸಿದರು. ಸರ್ಕಾರದ ಹಲವು ಇಲಾಖೆಗಳಲ್ಲಿ ಸಿಬ್ಬಂದಿ ಕಡಿತದಿಂದ ಹಿಡಿದು ವ್ಯಾಪಾರ ಸುಂಕಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ನಾಶಪಡಿಸುವವರೆಗೆ ರಿಪಬ್ಲಿಕನ್ ಪಕ್ಷದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ನೀತಿಗಳ ವಿರೋಧಿಗಳು ಜನರ ಆಕ್ರೋಶಕ್ಕೆ ಕಾರಣವಾಗಿವೆ.

ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ನೀತಿಗಳು ನಮಗೆ ಸಿಟ್ಟು ತರಿಸುತ್ತಿವೆ. ಸರ್ಕಾರದ ಸವಲತ್ತುಗಳನ್ನು ಪಡೆದು ಬಿಳಿಯ ಅತ್ಯಾಚಾರಿಗಳ ಗುಂಪೊಂದು ನಮ್ಮ ದೇಶವನ್ನು ನಿಯಂತ್ರಿಸುತ್ತಿದೆ. ಇದು ಸರಿಯಲ್ಲ ಎಂದು ನ್ಯೂಯಾರ್ಕ್ ವರ್ಣಚಿತ್ರಕಾರ ಶೈನಾ ಕೆಸ್ನರ್ ಮ್ಯಾನ್‌ಹ್ಯಾಟನ್‌ನ ಹೃದಯಭಾಗದಲ್ಲಿ ಮೆರವಣಿಗೆ ನಡೆಸುತ್ತಿದ್ದ ಜನಸಮೂಹವನ್ನು ಉದ್ದೇಶಿಸಿ ಹೇಳಿದ್ದಾರೆ.

ವಾಷಿಂಗ್ಟನ್‌ನಲ್ಲಿ, ಸಾವಿರಾರು ಪ್ರತಿಭಟನಾಕಾರರು ನ್ಯಾಷನಲ್ ಮಾಲ್‌ನಲ್ಲಿ ಜಮಾಯಿಸಿದರು. ಡಜನ್‌ಗಟ್ಟಲೆ ಭಾಷಣಕಾರರು ಟ್ರಂಪ್ ನೀತಿಗೆ ವಿರೋಧ ವ್ಯಕ್ತಪಡಿಸಿದರು. ಟ್ರಂಪ್ ಅವರ ಅತಿರೇಕದ ಆಡಳಿತ ಜನರನ್ನು ವಿನಾಶಕ್ಕೆ ತರುತ್ತಿದೆ ಎಂದು 64 ವರ್ಷದ ಡಯೇನ್ ಕೋಲಿಫ್ರಾತ್ ಹೇಳಿದರು.

ಲಾಸ್ ಏಂಜಲೀಸ್‌ನಲ್ಲಿ, ಡಿಸ್ಟೋಪಿಯನ್ ಕಾದಂಬರಿ ದಿ ಹ್ಯಾಂಡ್‌ಮೇಡ್ಸ್ ಟೇಲ್ ನ ಪಾತ್ರಧಾರಿಯ ವೇಷ ಧರಿಸಿಕೊಂಡು ಬಂದ ಮಹಿಳೆಯೊಬ್ಬರು, 'ನನ್ನ ಗರ್ಭಾಶಯದಿಂದ ಹೊರಬನ್ನಿ' ಎಂಬ ಸಂದೇಶದೊಂದಿಗೆ ದೊಡ್ಡ ಧ್ವಜವನ್ನು ಬೀಸಿದರು. ಕೊಲೊರಾಡೋದ ಡೆನ್ವರ್‌ನಲ್ಲಿ, ಪ್ರತಿಭಟನಾಕಾರರ ದೊಡ್ಡ ಗುಂಪಿನಲ್ಲಿ ಒಬ್ಬ ವ್ಯಕ್ತಿ ಅಮೆರಿಕಕ್ಕೆ ರಾಜ ಇಲ್ಲ ಎಂದು ಓದುವ ಫಲಕವನ್ನು ಹಿಡಿದಿದ್ದರು.

ಯಡಿಯೂರಪ್ಪ ಬಿಟ್ಟರಷ್ಟೇ ಬಿಜೆಪಿ ಸೇರ್ಪಡೆ: ಯತ್ನಾಳ್



ಹುಬ್ಬಳ್ಳಿ: ಎಲ್ಲಿಯವರೆಗೆ ಒಂದು ಕುಟುಂಬದಿಂದ ಬಿಜೆಪಿ ಮುಕ್ತ ಆಗುವುದಿಲ್ಲವೋ ಅಲ್ಲಿಯವರೆಗೆ ನಾನು ಪಕ್ಷ ಸೇರ್ಪಡೆ ಆಗುವುದಿಲ್ಲ. ಯಡಿಯೂರಪ್ಪ ಕುಟುಂಬದಿಂದ ಮುಕ್ತವಾದ ಮೇಲೆ ನಾನು ಬಿಜೆಪಿಗೆ ಹೋಗುತ್ತೇನೆ. ಒಂದು ದಿನ ಎಲ್ಲರೂ ಹೋಗಲೇಬೇಕು. ಯಾವುದು ಶಾಶ್ವತವಲ್ಲ. ನಾನು ಒಳ್ಳೆಯವನು, ದುಷ್ಟರಿಗೆ ನಾನು ದುಷ್ಟ ಎಂದು ಉಚ್ಚಾಟಿತ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದ್ದಾರೆ.

ಮೂರು ಸಾವಿರ ಮಠಕ್ಕೆ ಭೇಟಿ ನೀಡಿದ ವೇಳೆ ಮಾತನಾಡಿರುವ ಅವರು, ಬಿ.ವೈ. ವಿಜಯೇಂದ್ರ ಇನ್ನೊಬ್ಬರ ಭಿಕ್ಷೆ ಮೇಲೆ ಆರಿಸಿ ಬಂದವ. ಆತನಿಗೆ ದಮ್ ಇದ್ದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಆರಿಸಿ ಬರಲಿ. ನಾನು ನನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಚುನಾವಣೆ ಎದುರಿಸಲು ಸಿದ್ಧ. ಕೇವಲ ಭಗವಾಧ್ವಜ ಮೇಲೆ ಆಯ್ಕೆಯಾಗುತ್ತೇನೆ. ನನಗೆ ಮುಸ್ಲಿಮರ ಮತ ಬೇಡ. ವಿಜಯೇಂದ್ರಗೆ ರಾಜೀನಾಮೆ ಕೊಟ್ಟು ಆರಿಸಿ ಬರುವ ತಾಕತ್ ಇದೆಯಾ ಎಂದು ಸವಾಲು ಹಾಕಿದರು. ನಾನೇನೂ ಬಿಜೆಪಿ ಬಿಟ್ಟಿಲ್ಲ, ತಂದೆ ಮಕ್ಕಳು ಸೇರಿ ನನ್ನನ್ನು ಹೊರ ಹಾಕಿದ್ದಾರೆ ಎಂದು ದೂರಿದರು.

ಮೊದಲು ತಮಿಳಿನಲ್ಲಿ ಸಹಿ ಮಾಡಿ: ಭಾಷಾ ವಿಷಯ ಪ್ರಸ್ತಾಪಿಸಿ ಸ್ಟಾಲಿನ್ ಸರಕಾರಕ್ಕೆ ತಿರುಗೇಟು

ತ.ನಾಡಿನಲ್ಲಿ ಚುನಾವಣೆ ಕಹಳೆ ಊದಿದ ಮೋದಿ

ರಾಮೇಶ್ವರಂ: ಶ್ರೀಲಂಕಾ ಭೇಟಿ ಮುಗಿಸಿ ಭಾನುವಾರ ತಮಿಳುನಾಡು ರಾಜ್ಯಕ್ಕೆ ಭೇಟಿ ನೀಡಿರುವ ಪ್ರಧಾನಿ ನರೇಂದ್ರ ಮೋದಿ, 8,300 ಕೋಟಿ ರು.ಗಳ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡುವ ಜತೆ ಭಾಷಾ ವಿವಾದವನ್ನು ಪ್ರಸ್ತಾಪಿಸುವ ಮೂಲಕ 2026ರ ಚುನಾವಣೆಗೆ ಪಕ್ಷದ ಕಹಳೆ ಮೊಳಗಿಸಿದ್ದಾರೆ.

ತಮಿಳುನಾಡಿನ ಪಂಬನ್ ಮತ್ತು ರಾಮೇಶ್ವರಂ ನಗರವನ್ನು ಸಂಪರ್ಕಿಸುವ ದೇಶದ ಮೊದಲ ವರ್ಟಿಕಲ್ ಲಿಫ್ಟ್ (ಮೇಲ್ಮುಖ ತೆರೆದುಕೊಳ್ಳುವ) ರೈಲ್ವೆ ಸೇತುವೆಯನ್ನು ಪ್ರಧಾನಿ ಭಾನುವಾರ ಮಧ್ಯಾಹ್ನ ದೇಶದ ಸೇವೆಗೆ ಅರ್ಪಿಸಿದರು. ಬಳಿಕ ರಾಮೇಶ್ವರಂ-ಚೆನ್ನೈನ ತಂಬರಂ ನಗರಗಳನ್ನು ಸಂಪರ್ಕಿಸುವ ಹೊಸ ರೈಲಿನ ಸಂಚಾರಕ್ಕೂ ಪ್ರಧಾನಿ ಮೋದಿ ಇದೇ ವೇಳೆ ಹಸಿರು ನಿಶಾನೆ ತೋರಿದರು. ಕರಾವಳಿ ಕಾವಲು ಪಡೆಯ ಗಸ್ತು ನೌಕೆಯ ಕಾರ್ಯಾರಂಭಕ್ಕೂ ನೀಡಿದರು.

ಬಳಿಕ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಮೋದಿ, ತಮಿಳುನಾಡು ರಾಜ್ಯದಲ್ಲಿ ಕೇಂದ್ರ ಸರಕಾರ ಮೂರು ಪಟ್ಟು ಅಧಿಕ ಪ್ರಮಾಣದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದೆ. ಈಗಲೂ 8300 ಕೋಟಿ ರು. ಯೋಜನೆಗಳಿಗೆ ಚಾಲನೆ ನೀಡಲಾಗಿದೆ. ಇನ್ನೊಂದೆಡೆ, ತಮಿಳುನಾಡು ಪ್ರವಾಸೋದ್ಯಮಕ್ಕೆ ಅನುಕೂಲವಾಗುವಂತೆ ಪಂಬನ್ ಸೇತುವೆ ಉದ್ಘಾಟಿಸಲಾಗಿದೆ. ಹಾಗಿದ್ದೂ ಕೆಲವರು ಕೇಂದ್ರ ಸರಕಾರವನ್ನು ದೂಷಿಸುತ್ತಲೇ ಇರುತ್ತಾರೆ. ಕೇಂದ್ರ ಹಣ ಕೊಟ್ಟಿಲ್ಲ ಎಂದು ಅಳುವುದೇ ಅವರಿಗೆ ರೂಢಿಯಾಗಿಬಿಟ್ಟಿದೆ ಎಂದು ಪರೋಕ್ಷವಾಗಿ ಡಿಎಂಕೆ ಸರಕಾರ ಮತ್ತು ಸಿಎಂ ಸ್ಟಾಲಿನ್‌ರನ್ನು ಟೀಕಿಸಿದರು.



- ಪಂಬನ್ ಸೇತುವೆ ಉದ್ಘಾಟನೆ, 8 ಸಾವಿರ ಕೋಟಿ ಮೊತ್ತದ ರೈಲ್ವೆ ಯೋಜನೆಗಳಿಗೆ ಚಾಲನೆ
- 3 ಪಟ್ಟು ಅಭಿವೃದ್ಧಿ ನಡೆಸಿದರೂ ಅಳುವುದೇ ರೂಢಿ; ಡಿಎಂಕೆ ಸರಕಾರ ವಿರುದ್ಧ ಮೋದಿ ಟೀಕಾಸ್ತ್ರ

ತಮಿಳಲ್ಲಿ ವೈದ್ಯ ಶಿಕ್ಷಣಕ್ಕೆ ಸಲಹೆ

ಹಿಂದಿ ಭಾಷೆ ವಿರೋಧಿಸುತ್ತಾ ತಮಿಳು ಭಾಷಾ ಪ್ರೇಮ ತೋರುತ್ತಿರುವ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಮತ್ತು ಡಿಎಂಕೆ ಸರಕಾರಕ್ಕೆ ಪ್ರಧಾನಿ ತರಾಟೆಗೆ ತೆಗೆದುಕೊಂಡರು. ತಮಿಳುನಾಡಿನ ವಿವಿಧ ನಾಯಕರಿಂದ ನನಗೆ ಬರುವ ಪತ್ರಗಳಲ್ಲಿ ಯಾರೊಬ್ಬರೂ ತಮಿಳಿನಲ್ಲಿ ಸಹಿ ಮಾಡಿರುವುದಿಲ್ಲ ಎಂದರು. ಆ ಮೂಲಕ ಪರೋಕ್ಷವಾಗಿ ಸಿಎಂ ಸ್ಟಾಲಿನ್ ಮತ್ತು ಡಿಎಂಕೆ ಸರಕಾರದ ಕಾಲೆಳೆದರು. 'ಕನಿಷ್ಠ ಪಕ್ಷ ನಿಮ್ಮ ಸಹಿಯನ್ನಾದರೂ ತಮಿಳಿನಲ್ಲಿ ಮಾಡಿ' ಎಂದೂ ಸಲಹೆ ನೀಡಿದರು. ರಾಜ್ಯದಲ್ಲಿ ಬಡ ಕುಟುಂಬಗಳ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣವನ್ನು ತಮಿಳು ಮಾಧ್ಯಮದಲ್ಲೇ ನೀಡಬೇಕು ಎಂದು ಮುಖ್ಯಮಂತ್ರಿ ಸ್ಟಾಲಿನ್ ಮತ್ತು ಡಿಎಂಕೆ ಸರಕಾರಕ್ಕೆ ಮೋದಿ ಸಲಹೆ ನೀಡಿದರು.

ತಮ್ಮ ಭಾಷಣದಲ್ಲಿ ತಮಿಳು ಭಾಷೆಯನ್ನು ಬಲವಾಗಿ ಪ್ರತಿಪಾದಿಸಿದ ಪ್ರಧಾನಿ ಮೋದಿ, ತಮಿಳು ಭಾಷೆ, ಪರಂಪರೆಯನ್ನು ವಿಶ್ವಾದ್ಯಂತ ಕೊಂಡೊಯ್ಯಲು ಎಲ್ಲಾ ಪ್ರಯತ್ನಗಳು ನಡೆಯುತ್ತಿವೆ ಎಂದು ತಿಳಿಸಿದರು.

ಮೇ 29ರಿಂದ ಶಾಲೆಗಳ ಪುನರಾರಂಭಕ್ಕೆ ಸೂಚನೆ

ಬೆಂಗಳೂರು: ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆಯು 2025- 26ನೇ ಸಾಲಿನ ವಾರ್ಷಿಕ ಶೈಕ್ಷಣಿಕ ವೇಳಾಪಟ್ಟಿ ಬಿಡುಗಡೆ ಮಾಡಿದ್ದು ಮೇ 29ರಿಂದ ಶಾಲೆಗಳನ್ನು ಆರಂಭಿಸಲು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ. ರಾಜ್ಯಪಠ್ಯಕ್ರಮದ ಸರಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ, ಪ್ರೌಢ ಶಾಲೆಗಳಿಗೆ ಇದು ಅನ್ವಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮೇ 29 ರಿಂದ ಸೆಪ್ಟೆಂಬರ್ 19 ರವರೆಗೆ ಮೊದಲ ಅವಧಿ ಹಾಗೂ ಅಕ್ಟೋಬರ್ 8 ರಿಂದ 2026 ರ ಏಪ್ರಿಲ್ 10 ರವರೆಗೆ ಎರಡನೇ ಅವಧಿಯಲ್ಲಿ ಶಾಲೆಗಳು ಕರ್ತವ್ಯ ನಿರ್ವಹಿಸಲಿವೆ. ಸೆ.20 ರಿಂದ ಅ.7 ರವರೆಗೆ ದಸರಾ ರಜೆ ಮತ್ತು 2026ರ ಏಪ್ರಿಲ್ 11 ರಿಂದ ಮೇ 28 ರವರೆಗೆ ಬೇಸಿಗೆ ರಜೆ ಇರಲಿದೆ.

ಕರ್ತವ್ಯದ ದಿನಗಳು 242: ಪ್ರಸಕ್ತ ಸಾಲಿನಲ್ಲಿ 123 ದಿನಗಳು ರಜೆಯ ದಿನಗಳಾಗಿರುತ್ತವೆ. ಉಳಿದ 242 ದಿನಗಳು ಶಾಲೆ ನಡೆಯಲಿವೆ. 242 ದಿನಗಳಲ್ಲಿ ಪರೀಕ್ಷೆ ಮತ್ತು ಮೌಲ್ಯಾಂಕನ ಕಾರ್ಯಕ್ಕಾಗಿ 26 ದಿನಗಳನ್ನು ನಿಗದಿ ಮಾಡಲಾಗಿದೆ. ಪಠ್ಯೇತರ ಚಟುವಟಿಕೆ, ಪಠ್ಯ ಚಟುವಟಿಕೆ, ಸ್ಪರ್ಧೆಗಳ ನಿರ್ವಹಣಾ ಕಾರ್ಯಕ್ಕಾಗಿ 22 ದಿನ ನಿಗದಿಪಡಿಸಲಾಗಿದೆ. ಮೌಲ್ಯಮಾಪನ ಮತ್ತು ಫಲಿತಾಂಶ ವಿಶ್ಲೇಷಣೆ ಕಾರ್ಯಕ್ಕೆ 10 ದಿನ, ಶಾಲಾ ಸ್ಥಳೀಯ ರಜೆಗಳಿಗೆ 04 ದಿನ ಮತ್ತು ಬೋಧನಾ ಕಲಿಕಾ ಪ್ರಕ್ರಿಯೆಗೆ ಉಳಿಯುವ ಕರ್ತವ್ಯಕ್ಕೆ 178 ದಿನಗಳನ್ನು ಮೀಸಲಿಡ ಲಾಗಿದೆ.

ಫನ್‌ತರಂಗ

– ರಘುಪತಿ ಶೃಂಗೇರಿ –



ಭ್ರಷ್ಟ ಕಾಂಗ್ರೆಸ್ ಸರ್ಕಾರದ
ಬೆಲೆ ಏರಿಕೆ
ಮುಸ್ಲಿಂ ಓಲೈಕೆ
ದಲಿತರ ಹಣ ಲೂಟಿ
ವಿರುದ್ಧ
BJP
ರಾಜ್ಯಾದ್ಯಂತ
ಜನಾಕ್ರೋಶ ಯಾತ್ರೆ
ಹಂತ 1
ದಿನಾಂಕ : 07-04-2025
ಮೈಸೂರು & ಚಾಮರಾಜನಗರ
ದಿನಾಂಕ : 08-04-2025
ಮಂಡ್ಯ ಹಾಸನ
ದಿನಾಂಕ : 09-04-2025
ಕೊಡಗು ಮಂಗಳೂರು
ದಿನಾಂಕ : 10-04-2025
ಉಡುಪಿ ಚಿಕ್ಕಮಗಳೂರು
ದಿನಾಂಕ : 11-04-2025
ಉತ್ತರಕನ್ನಡ
ದಿನಾಂಕ : 12-04-2025
ಶಿವಮೊಗ್ಗ
ಹಂತ 2
ದಿನಾಂಕ : 16-04-2025
ಬೆಳಗಾವಿ ಹುಬ್ಬಳ್ಳಿ
ದಿನಾಂಕ : 17-04-2025
ಬಾಗಲಕೋಟೆ ವಿಜಯಪುರ
ದಿನಾಂಕ : 18-04-2025
ಕಲ್ಬುರ್ಗಿ ಬೀದರ್
ಹಂತ 3
ದಿನಾಂಕ : 21-04-2025
ದಾವಣಗೆರೆ ಹಾವೇರಿ
ದಿನಾಂಕ : 22-04-2025
ಗದಗ ಕೊಪ್ಪಳ
ದಿನಾಂಕ : 23-04-2025
ಯಾದಗಿರಿ ರಾಯಚೂರು
ದಿನಾಂಕ : 24-04-2025
ಬಳ್ಳಾರಿ ವಿಜಯನಗರ
ದಿನಾಂಕ : 25-04-2025
ಚಿತ್ರದುರ್ಗ ತುಮಕೂರು
ಹಂತ 4
ದಿನಾಂಕ : 27-04-2025
ಕೋಲಾರ ಚಿಕ್ಕಬಳ್ಳಾಪುರ
ದಿನಾಂಕ : 03-05-2025
ಬೆಂಗಳೂರು ಮಹಾನಗರ ಬೆಂಗಳೂರು ಗ್ರಾಮಾಂತರ ರಾಮನಗರ
ಪ್ರಕಟಣೆ: ಸಮಸ್ತ ಬಿಜೆಪಿ ಕಾರ್ಯಕರ್ತರು
ಬನ್ನಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭಾಗವಹಿಸಿ - ಭ್ರಷ್ಟ ಕಾಂಗ್ರೆಸ್ ಸರ್ಕಾರವನ್ನು ತೊಲಗಿಸೋಣ

ಸಮಾಚಾರ ಸಣ್ಣದಲ್ಲ

26ರ ಯುವತಿ ಸನ್ಯಾಸತ್ವ ಸ್ವೀಕಾರ

ಯಾದಗಿರಿ: ನಗರದ ಜೈನ್ ಬಡಾವಣೆಯ ನಿವಾಸಿ ನಿಖಿತಾ (26) ಐಷಾರಾಮಿ ಜೀವನ ತ್ಯಜಿಸಿ ಸನ್ಯಾಸತ್ವ ಸ್ವೀಕರಿಸಲು ಮುಂದಾಗಿದ್ದಾಳೆ. ಜೈನ್ ಬಡಾವಣೆಯ ನರೇಂದ್ರ ಗಾಂಧಿ ಹಾಗೂ ಸಂಗೀತಾ ಗಾಂಧಿ ದಂಪತಿಗಳ ಪುತ್ರಿ ನಿಖಿತಾ ಅವರು ಕೋಟ್ಯಾಧಿಪತಿಯ ಪುತ್ರಿಯಾಗಿದ್ದರೂ ಸಹ ಜೈನ ಸನ್ಯಾಸತ್ವ ಸ್ವೀಕರಿಸಿ ಜೈನ ಧರ್ಮದ ಸೇವೆಯಲ್ಲಿ ಅಣಿಯಾಗಲು ಮುಂದಾಗಿದ್ದಾಳೆ. ನರೇಂದ್ರ ಗಾಂಧಿ ಅವರಿಗೆ ಇಬ್ಬರು ಹೆಣ್ಣು ಮಕ್ಕಳು ಹಾಗೂ ಪುತ್ರ ಇದ್ದು, ಕಳೆದ ಏಳು ವರ್ಷದಿಂದ ಸನ್ಯಾಸಿ ಆಗಬೇಕೆಂದ ಬಯಸಿದ್ದ ನಿಖಿತಾಳಿಗೆ ಕೊನೆಗೂ ತನ್ನ ಆಸೆ ಪೂರೈಸಿಕೊಂಡಿದ್ದಾಳೆ.

ಕ್ವಾರಿಯಲ್ಲಿ ಸ್ಫೋಟ: ಒಬ್ಬನ ಸಾವು

ರಾಯಚೂರು: ಜಿಲ್ಲೆಯ ಲಿಂಗಸುಗೂರು ತಾಲೂಕಿನ ಮಾಕಾಪುರ ಬಳಿ ಗ್ರಾನೈಟ್ ಕ್ವಾರಿಯಲ್ಲಿ ಸಿಡಿಮದ್ದು ಜೋಡಿಸುವ ವೇಳೆ ಸ್ಫೋಟ ಸಂಭವಿಸಿ ಓರ್ವ ಕಾರ್ಮಿಕ ಸ್ಥಳದಲ್ಲೇ ಸಾವನ್ನಪ್ಪಿದ್ದು, ಇನ್ನೋರ್ವನಿಗೆ ಗಂಭೀರ ಗಾಯಗಳಾಗಿವೆ. ಮೈಮೇಲೆ ಕಲ್ಲುಬಿದ್ದು ಬಾಗಲಕೋಟೆಯ ಇಳಕಲ್‌ನ ವೆಂಕಟೇಶ (38) ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಘಟನೆಯಲ್ಲಿ ಕೊಪ್ಪಳದ ಕುಷ್ಟಗಿ ಮೂಲದ ಮಹಾಲಿಂಗ ಎಂಬವರಿಗೆ ಗಂಭೀರ ಗಾಯಗಳಾಗಿವೆ. ಗ್ರಾನೈಟ್ ಕ್ವಾರಿ ಅಕ್ರಮವಾಗಿ ನಡೆಯುತ್ತಿದ್ದು, ಘಟನೆ ಹೊರಗೆ ಬಾರದಂತೆ ಮೃತದೇಹವನ್ನ ಬಾಗಲಕೋಟೆಗೆ ರವಾನಿಸಲಾಗಿತ್ತು. ಈಗ ಮೃತದೇಹವನ್ನು ಮುದಗಲ್ ಸರಕಾರಿ ಆಸ್ಪತ್ರೆಗೆ ತರಲಾಗಿದೆ. ಗಾಯಾಳುವನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಮುಂದುವರಿದಿದೆ. ಮುದಗಲ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ಘಟನೆ ನಡೆದು ಒಂದು ದಿನ ಕಳೆದರೂ ಪ್ರಕರಣ ದಾಖಲಾಗಿಲ್ಲ. ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಆತ್ಮಹತ್ಯೆಗೆ ಪ್ರಚೋದನೆ: ಇಬ್ಬರ ಬಂಧನ

ಬಂಟ್ವಾಳ: ಅಮ್ಟಾಡಿ ತನಿಯಮನೆ ನಿವಾಸಿ ಜೀವನ್ ತಾವ್ರೊ ಅವರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಕ್ಕೆ ಸಂಬಂಧಿಸಿ, ಪ್ರಚೋದನೆ ನೀಡಿದ ಆರೋಪದ ಮೇಲೆ ಇಬ್ಬರನ್ನು ಬಂಟ್ವಾಳ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಕುರಿಯಾಳ ಮೂಲದ ಪ್ರವೀಣ್ ಡೆಸಾ ಮತ್ತು ರೋಹನ್ ಪಿಂಟೋ ಈ ಆರೋಪದಲ್ಲಿ ಬಂಧಿಸಲ್ಪಟ್ಟವರು. ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ನ್ಯಾಯಾಂಗ ಬಂಧನ ವಿಧಿಸಲಾಗಿದೆ. ಈ ಕುರಿತು ಬಂಟ್ವಾಳ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಅಮ್ಟಾಡಿಯ ತನಿಯಮನೆ ನಿವಾಸಿ ಜೀವನ್ ತಾವ್ರೊ (37) ಫೆ.10ರಂದು ಮನೆಯಲ್ಲಿ ಆತ್ಮಹತ್ಯೆಗೆ ಶರಣಾಗಿದ್ದರು. ಇವರ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಲ್ಲಿ ಕುರಿಯಾಳ ಗ್ರಾಮದ ಪ್ರವೀಣ್ ಡೆಸಾ ಹಾಗೂ ರೋಹನ್ ಪಿಂಟೋ ಇಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವ್ಯಕ್ತಿ ಕೊಲೆ ಪ್ರಕರಣ: 11 ಮಂದಿ ಬಂಧನ

ಬಳ್ಳಾರಿ: ನಗರದ ರಾಣಿತೋಟ ಪ್ರದೇಶದಲ್ಲಿ ವೆಂಕಟೇಶ್ ಎಂಬುವರ ಕೊಲೆ ಪ್ರಕರಣ ಸಂಬಂಧ ಆತನ ಪತ್ನಿ ಹಾಗೂ ಪತ್ನಿ ಪ್ರಿಯಕರ ಸೇರಿದಂತೆ 11 ಮಂದಿಯನ್ನು ಬಳ್ಳಾರಿ ಪೊಲೀಸರು ಬಂಧಿಸಿದ್ದಾರೆ. ಈ ಕುರಿತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ವಿ.ಜೆ. ಶೋಭಾರಾಣಿ ಮಾತನಾಡಿ, ಏ.4 ರಂದು ವೆಂಕಟೇಶ್ ಪತ್ನಿ ನೀಲವೇಣಿ ಅವರು, ದುಷ್ಕರ್ಮಿಗಳು ನನ್ನ ಪತಿ ಮೇಲೆ ಹಲ್ಲೆ ಮಾಡಿ ಕೊಲೆ ಮಾಡಿದ್ದಾರೆಂದು ದೂರು ಕೊಟ್ಟಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ತನಿಖೆ ಕೈಗೊಂಡಾಗ ವೆಂಕಟೇಶ್ ಕೊಲೆಯಲ್ಲಿ ಪತ್ನಿ ನೀಲವೇಣಿ ಕೈವಾಡ ಇರುವುದು ಗೊತ್ತಾಗಿದೆ ಎಂದು ತಿಳಿಸಿದರು. ನೀಲವೇಣಿ ಮತ್ತು ಈ ಪ್ರಕರಣದ ಎರಡನೇ ಆರೋಪಿ ಆನಂದ್ ಸೇರಿ ಶಾಮಿಯಾನ್ ವ್ಯವಹಾರ ನಡೆಸುತ್ತಿದ್ದರು. ಇಬ್ಬರ ನಡುವೆ ಆಪ್ತ ಸಂಬಂಧ ಇತ್ತು. ಹೀಗಾಗಿ ಇಬ್ಬರ ಮೇಲೆ ವೆಂಕಟೇಶ್‌ಗೆ ಅನುಮಾನ ಇರುತ್ತದೆ. ಪದೇ ಪದೆ ಈ ವಿಚಾರವಾಗಿ ಜಗಳ ನಡೆಯುತ್ತಿರುತ್ತದೆ. ಏ.3 ರಂದು ವೆಂಕಟೇಶ್ ಮನೆಯಲ್ಲಿ ಕಾರ್ಯಕ್ರಮ ಇತ್ತು. ಅಂದು ಅವರು ಸಂಬಂಧಿಕರ ಮುಂದೆ ಈ ವಿಚಾರವಾಗಿ ಗಲಾಟೆ ಮಾಡಿದ್ದರು. ನಂತರ ನೀಲವೇಣಿ ಮತ್ತು ಆನಂದ್ ಸೇರಿ ಕೃತ್ಯ ಎಸಗಿದ್ದಾರೆ ಎಂದು ತನಿಖೆಯಲ್ಲಿ ತಿಳಿದು ಬಂದಿದೆ ಎಂದರು.

{ಸಿ.ಟಿ. ರವಿ} ವಿಧಾನಪರಿಷತ್ ಸದಸ್ಯ

ಸಾಯಿಸಿ ರಾಜಕಾರಣ ಮಾಡುವುದು ಕಾಂಗ್ರೆಸ್ ನೀತಿ. ಸಂತೋಷ್ ಪಾಟೀಲ್, ರೋಹಿತ್ ವೇಮುಲು ಸತ್ತಾಗ ರಾಜಕಾರಣ ಮಾಡಿದ್ದರಲ್ಲವೇ? ಗಾಂಧಿ ಹತ್ಯೆಗೂ ಆರ್‌ಎಸ್‌ಎಸ್‌ಗೂ ಸಂಬಂಧವಿಲ್ಲ ಎಂದರೂ ಇಂದಿಗೂ ಆರೋಪ ಮಾಡುತ್ತಿದ್ದಾರೆ. ಇದು ಯಾವ ನೀತಿ? ವಿನಯ್ ಸೋಮಯ್ಯ ಡೆತ್‌ನೋಟ್‌ನಲ್ಲಿ ಬರೆದಿದ್ದು ಸುಳ್ಳಾ?

ಪುಸ್ತಕೋದ್ಯಮ ಸಮುದ್ರವಿದ್ದಂತೆ, ಅದೆಂದು ಬತ್ತುವುದಿಲ್ಲ

ಕರ್ನಾಟಕದಲ್ಲಿ ಓದುಗರ ಸಂಖ್ಯೆಗೆ ಕೊರತೆಯಿಲ್ಲ. ಆದರೆ ಓದುಗರಿಗೆ ಹೊಸ ಪುಸ್ತಕ ಬಂದಿದೆ ಎನ್ನುವುದನ್ನು ಹಾಗೂ ತಲುಪಿಸುವುದನ್ನು ಪ್ರಕಾಶನ ಸಂಸ್ಥೆಗಳು ಮಾಡಬೇಕಿದೆ. ಪುಸ್ತಕೋದ್ಯಮ ಎನ್ನುವ ವಿಶಾಲ ಸಮುದ್ರ ಎಂದಿಗೂ ಬತ್ತುವುದಿಲ್ಲ ಎನ್ನುವುದು ನನ್ನ ವಿಶ್ವಾಸ ಎಂದು ವೀರಲೋಕ ಪ್ರಕಾಶನ ಸಂಸ್ಥೆಯ ಮುಖ್ಯಸ್ಥ ವೀರಕಪುತ್ರ ಶ್ರೀನಿವಾಸ್ ಅಭಿಪ್ರಾಯಪಟ್ಟಿದ್ದಾರೆ. ಪ್ರಕಾಶನ ಕ್ಷೇತ್ರದಲ್ಲಿಯೇ ಮೊದಲ ಬಾರಿಗೆ ವಾರ್ಷಿಕ ಆದಾಯವನ್ನು ಬಿಡುಗಡೆಗೊಳಿಸಿರುವ ವೀರಕಪುತ್ರ ಶ್ರೀನಿವಾಸ್ ಅವರು, ಕನ್ನಡ ಪುಸ್ತಕೋದ್ಯಮದ ಅವಕಾಶ, ಕೊಂಡು ಓದುವವರ ಸಂಖ್ಯೆ, ಸರಕಾರದಿಂದ ಆಗಬೇಕಿರುವ ಸಹಾಯ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಮಾತನಾಡಿದ್ದಾರೆ. ಸಂದರ್ಶನದ ಪೂರ್ಣಪಾಠ ಇಲ್ಲಿದೆ.

ವಿಶ್ವವಾಣಿ ಸಂದರ್ಶನ
ಜಯಂತ್ ಬಸವರಾಜ್

• ಕನ್ನಡ ಪುಸ್ತಕೋದ್ಯಮದ ಪರಿಸ್ಥಿತಿ ಹೇಗಿದೆ?
ಪುಸ್ತಕೋದ್ಯಮ ಎಂಬುದು ಒಂದು ವಿಶಾಲ ಸಮುದ್ರವಿದ್ದಂತೆ ಅದು ಎಂದಿಗೂ ಬತ್ತುವುದಿಲ್ಲ. ಪ್ರತಿ ವರ್ಷ 12 ಸಾವಿರಕ್ಕೂ ಅಧಿಕ ಹೊಸ ಪುಸ್ತಕಗಳು ಮಾರುಕಟ್ಟೆಗೆ ಬರುತ್ತಿವೆ. ಯುವ ಲೇಖಕರ ವಿಭಿನ್ನ ಸಾಹಿತ್ಯಗಳಿಂದಾಗಿ ಅದರ ಶ್ರೀಮಂತಿಕೆ ಹೆಚ್ಚುತ್ತಿದೆ. ಕರ್ನಾಟಕದಲ್ಲಿ ಸುಮಾರು ಸಾವಿರಕ್ಕೂ ಹೆಚ್ಚು ಪ್ರಕಾಶನ ಸಂಸ್ಥೆಗಳಿವೆ. ಓದುಗರಿರುವವರೆಗೂ ಪುಸ್ತಕೋದ್ಯಮ ಎಂದಿಗೂ ಕುಸಿಯುವುದಿಲ್ಲ. ಆದರೆ ಪುಸ್ತಕೋದ್ಯಮದ ವಹಿವಾಟು ಮುಚ್ಚಿದ ಕಪಾಟಿನಲ್ಲಿಟ್ಟಿರುವುದರಿಂದ ಜನರಿಗೆ ಈ ಬಗ್ಗೆ ತಿಳಿಯುತ್ತಿಲ್ಲ. ಸಾಹಿತ್ಯ ಸೇವೆಯೊಂದಿಗೆ ಪುಸ್ತಕೋದ್ಯಮವೂ ಉದ್ಯಮ ಎಂಬುದನ್ನು ಅರಿಯಬೇಕಿದೆ.

• ಕೊಂಡು ಓದುವವರ ಸಂಖ್ಯೆ ಕಡಿಮೆಯಿದೆ ಎನ್ನುವ ಆರೋಪವಿದೆಯಲ್ಲ?
ಮಾರುಕಟ್ಟೆಗೆ ಹೊಸದೊಂದು ವಸ್ತು ಬಂದರೆ ಅದು ಜನರಿಗೆ ತಿಳಿಯುವುದು ಹೇಗೆ? ಅದಕ್ಕೆ ನೀಡುವ ಪ್ರಚಾರದಿಂದ. ಹಾಗೆಯೇ ಪುಸ್ತಕೋದ್ಯಮವೂ ಇದರ ಹೊರತಾಗಿಲ್ಲ. ಪ್ರಕಾಶನ ಸಂಸ್ಥೆಯೊಂದು ಒಂದು ಪುಸ್ತಕವನ್ನು ಮಾರುಕಟ್ಟೆಗೆ ತರುತ್ತಿದೆ ಎಂದರೆ ಮೊದಲು ಅದಕ್ಕೆ ಪ್ರಚಾರ ನೀಡುವುದರೊಂದಿಗೆ ಜನರಿಗೆ ಸರಳವಾಗಿ ದೊರೆಯುವಂತಾಗಬೇಕು. ಈಗ ಯಾವುದೋ ಗ್ರಾಮಾಂತರ ಭಾಗದ ಓದುಗ ಒಂದು ಪುಸ್ತಕ ಕೊಳ್ಳಬೇಕೆಂದರೆ ಅವನು ನಗರದ ಯಾವುದೋ ಭಾಗದಲ್ಲಿರುವ ಮಳಿಗೆ ಹುಡುಕಿ ಹೋಗಬೇಕು. ಇದರ ಬದಲು ಅವನಿರುವ ಜಾಗದಲ್ಲೇ ಪುಸ್ತಕ ದೊರೆತರೆ ಖಂಡಿತ ಅವನು ಖರೀದಿಸುತ್ತಾನೆ. ಕರ್ನಾಟಕದಲ್ಲಿ ಓದುಗರ ಸಂಖ್ಯೆ ಕುಸಿದಿಲ್ಲ ಎನ್ನುವುದಕ್ಕೆ ಸಾವಿರಕ್ಕೂ ಹೆಚ್ಚು ಪ್ರಕಾಶನ ಸಂಸ್ಥೆಗಳು ಉಳಿದಿವೆ.

• ಪ್ರಕಾಶನ ಸಂಸ್ಥೆಯ ಅಭಿವೃದ್ಧಿಗೆ ಪಾಲಿಸಬೇಕಿರುವ ವಿಷಯಗಳೇನು?
ಪ್ರಕಾಶನ ಸಂಸ್ಥೆಯೊಂದು ಅಭಿವೃದ್ಧಿ ಹೊಂದಬೇಕಾದರೆ ಪಾಲಿಸಬೇಕಾದ ವಿಷಯಗಳಲ್ಲಿ ವೃತ್ತಿಪರತೆ ಮೊದಲನೆಯದಾಗಿದೆ. ಇದನ್ನು ಸಾಹಿತ್ಯದ ದೃಷ್ಟಿಯಿಂದ ಮಾತ್ರವಲ್ಲದೆ ಒಂದು ಉದ್ಯಮವಾಗಿ ಭಾವಿಸಿ ಮುಂದುವರಿಯಬೇಕು. ಸಂಸ್ಥೆಯು ತನ್ನದೇ ಆದ ಗುರಿ ಹೊಂದಿ ಅದನ್ನು ಸಾಧಿಸಲು ಬೇಕಾಗುವ ತಯಾರಿ ಮಾಡಬೇಕಿದೆ. ಹೊಸ ಪ್ರಯೋಗದಿಂದ ಮಾತ್ರ ಉದ್ಯಮ ಯಶಸ್ವಿಯಾಗಲು ಸಾಧ್ಯ. ಸಂಸ್ಥೆಗಳು ತಮ್ಮ ಗುರಿ ಮುಟ್ಟುವುದಕ್ಕಾಗಿ ಮಿತಿ ಮೀರಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಇದರೊಂದಿಗೆ ಕೃತಿ ಆಯ್ಕೆಯಲ್ಲಿ ಎಚ್ಚರಿಕೆವಹಿಸಬೇಕು. ಪ್ರಕಾಶನ ಸಂಸ್ಥೆಯ ಎಲ್ಲಾ ಪ್ರಯತ್ನಗಳಿಗೆ ಫಲ ಸಿಗಬೇಕಾದರೆ ಕೃತಿ ಆಯ್ಕೆ ಬಹಳ ಮುಖ್ಯವಾಗಿದೆ. ಲೇಖಕರ ಎಲ್ಲಾ ಕೃತಿಗಳು ಶ್ರೇಷ್ಠ ಸಾಹಿತ್ಯವಾಗಿರುವುದಿಲ್ಲ, ಅವೆಲ್ಲವೂ ಪ್ರಕಟಣೆಗೆ ಅರ್ಹವಿರುವುದಿಲ್ಲ. ಆದ್ದರಿಂದ ಕೃತಿ ಆಯ್ಕೆಗೆ ಒಂದು ಸಮಿತಿ ರಚಿಸಿ ಆ ಕೃತಿ ಪ್ರಸ್ತುತವೋ, ಪ್ರಕಟಣೆಗೆ ಯೋಗ್ಯವೋ ಎಂದು ನಿರ್ಧರಿಸಬೇಕಾಗುತ್ತದೆ. ಈ ಎಲ್ಲಕ್ಕಿಂತ ಮುಖ್ಯವಾಗಿ ಮಾರ್ಕೆಟಿಂಗ್ ಪ್ರಮುಖವಾಗುತ್ತದೆ. ಹೊಸ ವಸ್ತು ಯಾವುದೋ ಒಂದು ಮಾರುಕಟ್ಟೆಗೆ ಬಂದಿದೆ ಎಂದು ಜನರಿಗೆ ತಿಳಿಯುವುದು ಹೇಗೆ ಅದರ ಜಾಹೀರಾತಿನಿಂದ. ಹಾಗೆಯೇ ಪ್ರಕಾಶನ ಸಂಸ್ಥೆ ಒಂದು ಪುಸ್ತಕ ಮಾರುಕಟ್ಟೆಗೆ ತರಬೇಕೆಂದರೆ, ಲೇಖಕರ ಜತೆಗೂಡಿ ಪುಸ್ತಕದ ಸಾರ ಓದುಗರಿಗೆ ತಲುಪುವಂತೆ ಮಾಡಬೇಕು. ಪುಸ್ತಕಗಳು ಮೊದಲು ಜನ ಸಂದಣಿ ಇರುವ ಜಾಗಗಳಿಗೆ ಬರಬೇಕು ತದನಂತರ ಜನರೇ ಪುಸ್ತಕಗಳಿರುವ ಜಾಗ ಹುಡುಕಿಕೊಂಡು ಬರುತ್ತಾರೆ.

» **ಡಿಹಿತ್ಯದಲ್ಲಿ ಗುಣಮಟ್ಟದ ಪುಸ್ತಕದ ಕೊರತೆಯಿದೆ ಎಂಬುದು ಸತ್ಯಕ್ಕೆ ದೂರವಾದ ಮಾತು.**

» **ಕನ್ನಡದಲ್ಲಿ ಪ್ರವಾಸ, ನಳಪಾಕದಿಂದ ಹಿಡಿದು ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕಗಳಿವೆ.**

» **ಪ್ರಕಾಶನ ಸಂಸ್ಥೆಗಳು ಸರಕಾರದಿಂದ ಯಾವುದೇ ಅನುದಾನ ನಿರೀಕ್ಷಿಸುವುದಿಲ್ಲ.**

» **ಆದರೆ ಸರಕಾರ ರಾಜ್ಯದ ಪ್ರತಿ ತಾಲೂಕು ಮಟ್ಟದಲ್ಲಿ ಪುಸ್ತಕ ಮಳಿಗೆ ಪ್ರಾರಂಭಿಸಬೇಕು.**

• ವೀರಲೋಕದ ಒಂದುವರೆ ಕೋಟಿ ವಹಿವಾಟಿನ ಗುಟ್ಟೇನು?
ವೀರಲೋಕ ಪುಸ್ತಕ ಪ್ರಕಾಶನ ಸಂಸ್ಥೆ ಆರಂಭಗೊಂಡು ಎರಡು ವರ್ಷ ಕಳೆದಿದೆ. ಆರಂಭದಲ್ಲಿಯೇ ನಮಗೆ ಸಿಕ್ಕ ವಿಷಯವೇನೆಂದರೆ ಹರಿವ ನೀರಿಗೆ ಬೆಲೆ ಜಾಸ್ತಿ, ನಿಂತ ನೀರಲ್ಲಿ ಹೆಚ್ಚೆಂದರೆ ಕೇವಲ ಪಾಚಿ ಕಟ್ಟಬಹುದಷ್ಟೆ. ಆದ್ದರಿಂದ ನಾವು ರಾಜ್ಯದ ಮೂಲೆ ಮೂಲೆಯಲ್ಲಿ ನಡೆಯುವ ಜಾತ್ರೆ, ಸಮಾರಂಭ, ಪುಸ್ತಕ ಮೇಳಗಳಲ್ಲಿ ನಮ್ಮ ಪ್ರಕಾಶನದ ಮಳಿಗೆ ಇಡುತ್ತಿದ್ದೆವು. ಹಾಗೆಯೇ ವಿದ್ಯಾರ್ಥಿಗಳಿಗೆ ಒಂದು ಅರೆಕಾಲಿಕ ಉದ್ಯೋಗವಕಾಶ ನೀಡುವ ಸಲುವಾಗಿ ಸ್ವಯಂ ಕೃಷಿ ಎಂಬ ಹೆಸರಿನಲ್ಲಿ, ಹೆಚ್ಚು ಜನ ಸೇರುವ ಜಾಗಗಳಲ್ಲಿ ಪುಸ್ತಕ ಮಳಿಗೆ ಇರಿಸಿ ಓದುಗರಿಗೆ ಸುಲಭವಾಗಿ ಪುಸ್ತಕಗಳು ದೊರೆಯುವಂತೆ ಮಾಡಿದೆವು. ಇವುಗಳ ಜತೆಜತೆಗೆ ಆನ್‌ಲೈನ್ ಮಾರ್ಕೆಟಿಂಗ್, ಡಿಜಿಟಲ್ ಮಾರ್ಕೆಟಿಂಗ್‌ಗಳಿಗೆ ಹೆಚ್ಚು ಒತ್ತು ನೀಡಿದ್ದರಿಂದ ವೀರಲೋಕ ಪುಸ್ತಕ ಪ್ರಕಾಶನ ಸಂಸ್ಥೆ ಕಳೆದ ವರ್ಷದಲ್ಲಿ ಒಂದು ಕೋಟಿಗೂ ಅಧಿಕ ವಹಿವಾಟು ನಡೆಸಲು ಸಾಧ್ಯವಾಯಿತು.

ಸರಕಾರದ ಇತ್ತೀಚೆಗೆ ಅನುಷ್ಠಾನಗೊಳಿಸಿರುವ ಮನೆಗೊಂದು ಗ್ರಂಥಾಲಯ ಯೋಜನೆ ನಿಜಕ್ಕೂ ಸ್ವಾಗತಾರ್ಹ. ಇದರಿಂದ ಪ್ರಕಾಶನ ಸಂಸ್ಥೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪುಸ್ತಕ ಮಾರಾಟ ಮಾಡಬಹುದು. ಆದರೆ ಗಮನಹರಿಸಬೇಕಾದ ವಿಷಯವೇನೆಂದರೆ ಸರಕಾರ ಅನುಷ್ಠಾನಗೊಳಿಸಿರುವ ಈ ಯೋಜನೆ ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ಬಂದಿದೆ ಎನ್ನುವುದು. ಜನರೂ ಈ ಯೋಜನೆಯನ್ನು ಸ್ವಯಂ ಪ್ರೇರಣೆಯಿಂದಾಗಿ ತಮ್ಮ ಮನೆಗಳಲ್ಲಿ ಪುಟ್ಟದೊಂದು ಗ್ರಂಥಾಲಯ ತೆರೆಯಬೇಕು.
-ವೀರಕಪುತ್ರ ಶ್ರೀನಿವಾಸ್, ವೀರಲೋಕ ಮುಖ್ಯಸ್ಥ

• ನಿಜಕ್ಕೂ ಕನ್ನಡ ಪುಸ್ತಕ ಓದುಗರ ಸಂಖ್ಯೆ ಕಡಿಮೆ ಇದೆಯೇ?
ಕರ್ನಾಟಕದಲ್ಲಿ ಹೇಗೆ ಕನ್ನಡಿಗ ಸಂಖ್ಯೆ ಕುಸಿಯುವುದಿಲ್ಲವೋ, ಹಾಗೆಯೆ ಕನ್ನಡ ಪುಸ್ತಕ ಓದುರ ಸಂಖ್ಯೆ ಕುಸಿದಿಲ್ಲ. ಅದು ದಿನೇ ದಿನೇ ಹೆಚ್ಚುತ್ತಿದೆ. ಈ ಹಿಂದೆ ಧೀಮಂತ ಲೇಖಕರಾದ ಕುವೆಂಪು, ಬೇಂದ್ರೆ ಅವರ ಸಾಹಿತ್ಯಗಳನ್ನು ಓದುಗರು ಎಷ್ಟು ಇಷ್ಟ ಪಟ್ಟು ಓದುತ್ತಿದ್ದರು? ಈಗ ಅವರ ಸಾಹಿತ್ಯದ ಜತೆಜತೆಗೆ ಆಧುನಿಕ ಜಗತ್ತಿಗೆ ಬೇಕಾದ ಪುಸ್ತಕಗಳು ಕನ್ನಡದಲ್ಲಿ ಬರುತ್ತಿವೆ.

ಸಾಲದೆಂಬಂತೆ ಕರ್ನಾಟಕದಲ್ಲಿ ಅಕ್ಷರಸ್ಥರು ಕೂಡ ಹೆಚ್ಚುತ್ತಿದ್ದಾರೆ. ಹೀಗಿರುವಾಗ ಕನ್ನಡ ಓದುಗರ ಸಂಖ್ಯೆ ಕ್ಷೀಣಿಸುವುದಾದರೂ ಹೇಗೆ? ಆದರೆ ಓದುಗರಿಗೆ ಹೊಸದಾಗಿ ಬರುವ ಪುಸ್ತಕಗಳ ಬಗ್ಗೆ ತಿಳಿಯುವಂತೆ ಮಾಡಬೇಕು.

• ವಾರ್ಷಿಕ ವರದಿ ಬಿಡುಗಡೆ ಹಿಂದಿನ ಉದ್ದೇಶವೇನು?
ಪ್ರತಿ ಉದ್ಯಮ ಕ್ಷೇತ್ರದಲ್ಲಿ ವಾರ್ಷಿಕವಾಗಿ ವರದಿ ಬಿಡುಗಡೆ ಮಾಡುತ್ತಾರೆ, ಪ್ರಸ್ತಕ ವರ್ಷದಲ್ಲಿ ಇಂತಿಷ್ಟು ವ್ಯಾಪಾರ ವಹಿವಾಟು ನಡೆದಿದೆ ಎಂದು. ಆದರೆ ಪುಸ್ತಕೋದ್ಯಮದಲ್ಲಿ ಯಾರೂ ಕೂಡ ತಮ್ಮ ವಹಿವಾಟಿನ ಬಗ್ಗೆ ಮುಕ್ತವಾಗಿ ಹಂಚಿಕೊಳ್ಳಲಿಲ್ಲ. ಇದರಿಂದಾಗಿ ಪುಸ್ತಕೋದ್ಯಮ ಎಂದರೆ ಅದರಲ್ಲಿ ಹಣವಿಲ್ಲ ಅದೊಂದು ಕೇವಲ ಸಾಹಿತ್ಯ ಸೇವೆಯಷ್ಟೆ, ಹೂಡಿಕೆ ಮಾಡಿದ್ದು ಕೂಡ ಹಿಂತಿರುಗುವುದಿಲ್ಲ ಎನ್ನುವ ಮನೋಭಾವ ಎಲ್ಲರಲ್ಲಿ ಬೆಳೆದಿದೆ. ಆದ್ದರಿಂದ ಈ ಉದ್ಯಮಕ್ಕೆ ಹೊಸಬರು ಬರಲಿಲ್ಲ. ವೀರ ಲೋಕ ಪ್ರಕಾಶನ ಈ ಮನಸ್ಥಿತಿ ಬದಲಾಯಿಸಿ ಪುಸ್ತಕೋದ್ಯಮದಲ್ಲಿ ಕೂಡ ಹಣವಿದೆ ಎಂಬುದನ್ನು ತೋರಿಸಿ ಹೊಸಬರನ್ನು ಈ ಉದ್ಯಮದೆಡೆ ಆಕರ್ಷಿಸಬೇಕೆಂಬ ಉದ್ದೇಶದಿಂದ ಈ ಬಾರಿ ವಾರ್ಷಿಕ ವರದಿ ಬಿಡುಗಡೆ ಮಾಡಲಾಯಿತು.

ಇಂದಿನಿಂದ ಬಿಜೆಪಿ ಜನಾಕ್ರೋಶ ಯಾತ್ರೆ

← ಮೊದಲಪುಟದಿಂದ

ಒಂದಾಗುವುದೇ ಬಿಜೆಪಿ?: ಕಳೆದ ವಿಧಾನಮಂಡಲ ಅಧಿವೇಶನದ ವೇಳೆ ಪ್ರತಿಪಕ್ಷ ನಾಯಕ ಅಶೋಕ್ ವಿರುದ್ಧ ಹಿರಿಯ ನಾಯಕ ಸುನೀಲ್‌ಕುಮಾರ್ ಅಸಮಾಧಾನ ವ್ಯಕ್ತಪಡಿಸಿ ಹೊರನಡೆದ ಬಳಿಕ ಪಕ್ಷದ ವರಿಷ್ಠರ ಮಧ್ಯ ಪ್ರವೇಶವಾಗಿತ್ತು. ಯತ್ನಾಳ್ ಅವರನ್ನು ಪಕ್ಷದಿಂದ ಉಚ್ಚಾಟಿಸಿದ ಬಳಿಕ ಯಡಿಯೂರಪ್ಪ ಹಾಗೂ ವಿಜಯೇಂದ್ರ ಬಣ ಸಕ್ರಿಯವಾಗಿದೆ. ಯತ್ನಾಳ್ ಅವರನ್ನು ಪಕ್ಷದಿಂದ ಹೊರಹಾಕಿದ ಬಳಿಕ, ವಿಜಯೇಂದ್ರ ಅವರು ತಮ್ಮ 'ಸಾಮರ್ಥ್ಯ'ವನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ಹೋರಾಟ ಆರಂಭಿಸಿದ್ದಾರೆ. ಈ ವೇಳೆ, ತಟಸ್ಥರಾಗಿದ್ದ ಹಲವು ನಾಯಕರೊಂದಿಗೆ ಚರ್ಚಿಸಿ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವ ಪ್ರಯತ್ನ ನಡೆಸಿದ್ದಾರೆ ಎನ್ನಲಾಗಿದೆ. ಈ ನಡುವೆ ಬೆಂಗಳೂರಿನಲ್ಲಿ ನಡೆದ ಅಹೋರಾತ್ರಿ ಧರಣಿಯಲ್ಲಿ ಜೆಡಿಎಸ್ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ ಎಂದು ಜೆಡಿಎಸ್ ನಾಯಕರು ಅಸಮಾಧಾನ ವ್ಯಕ್ತಪಡಿಸಿದ್ದರು. ಆದರೆ ಇದೀಗ ಜನಾಕ್ರೋಶ ಯಾತ್ರೆಯನ್ನು ಮೈತ್ರಿ ಪಕ್ಷವನ್ನು ಸೇರಿಸಿಕೊಂಡು ಮಾಡದೇ, 'ಏಕಾಂಗಿ'ಯಾಗಿ ಮಾಡುವುದಕ್ಕೆ ಬಿಜೆಪಿ ತೀರ್ಮಾನಿಸಿದೆ. ಆದ್ದರಿಂದ ಈ ಹೋರಾಟದಿಂದಲೂ ಜೆಡಿಎಸ್ ದೂರ ಉಳಿಯಲಿದೆ ಎನ್ನುವುದು ಸ್ಪಷ್ಟವಾಗಿದೆ.

ಮೂಲ ಪಟ್ಟಾಭಿರಾಮ ದೇವರಿಗೆ ವಿಶೇಷ ಪೂಜೆ | ವಿಶ್ವಂಭರ ಮಹಾಯಾಗ ಸಂಪನ್ನ

ಸೋಸಲೆ ಮಠದಲ್ಲಿ ರಾಮನವಮಿ ಉತ್ಸವ

ಮೈಸೂರು: ಶ್ರೀ ರಾಮನವಮಿ ಉತ್ಸವದ ಅಂಗವಾಗಿ ನಗರದ ಕೃಷ್ಣಮೂರ್ತಿ ಪುರಂನ ಸೋಸಲೆ ಶ್ರೀ ವ್ಯಾಸರಾಜರ ಮಠದಲ್ಲಿ ಮಠಾಧೀಶರಾದ ಶ್ರೀ ವಿದ್ಯಾಶ್ರೀಶ ತೀರ್ಥ ಸ್ವಾಮೀಜಿ ಅವರು ಸಂಸ್ಥಾನ ಪೂಜೆ ನೆರವೇರಿಸಿದರು. ಶ್ರೀ ಮೂಲ ಪಟ್ಟಾಭಿರಾಮ ದೇವರು ಮತ್ತು ದಿಗ್ವಿಜಯ ರಾಮದೇವರ ಮೂಲ ಮೂರ್ತಿಗಳಿಗೆ ಪಂಚಾಮೃತ ಅಭಿಷೇಕ, ವಿಶೇಷ ಆರತಿ ನೆರವೇರಿಸಿದರು. ಈ ಪ್ರಸಂಗಕ್ಕೆ ಸಾವಿರಾರು ಭಕ್ತರು ಸಾಕ್ಷಿಯಾದರು.

ಶ್ರೀ ಮಠದ ಆವರಣದಲ್ಲಿ ಇದೇ ಸಂದರ್ಭ ಸಹಸ್ರ ನಾರಿಕೇಳ ವಿಶ್ವಂಭರ ಮಹಾಯಾಗ ಸಂಪನ್ನಗೊಂಡಿತು. ಯಾಗದ ನೇತೃತ್ವ ವಹಿಸಿದ್ದ ಹಿರಿಯ ಪಂಡಿತ ಕೃಷ್ಣ ಕುಮಾರ ಆಚಾರ್ಯ ಪೂರ್ಣಾಹುತಿ ಸಮರ್ಪಿಸಿ ಮಾತನಾಡಿ, ಆಕಾಶಕ್ಕೆ ಅಧಿದೇವತೆ ಗಣಪತಿ. ಯಾವುದೇ ಸತ್ಕಾರ್ಯಕ್ಕೆ ವಿಘ್ನಗಳು ಬಾರದಿರಲಿ ಎಂದು ಗಣೇಶನ ಪೂಜೆ ಮಾಡುವುದು ಸಂಪ್ರದಾಯ. ಆದರೆ ಆತನ ಪೂಜೆ ಮಾಡುವಾಗಲೇ ಸಾಕಷ್ಟು ಅಡ್ಡಿ- ಆತಂಕ ಬರುತ್ತವೆ. ಇವೆಲ್ಲವನ್ನೂ ನಿವಾರಿಸು ಎಂದು ಗಣೇಶನನ್ನು ಆರಾಧಿಸಿದರೆ ಜ್ಞಾನ ಪ್ರಾಪ್ತಿಯಾಗುತ್ತದೆ. ಬದುಕು ಸುಗಮವಾಗುತ್ತದೆ. ಸಂಹಿತೆಗಳಲ್ಲಿ ತಿಳಿಸಿದ ಪದ್ಧತಿಯಂತೆ ಇಲ್ಲಿ ಮಹಾಯಾಗ ನೆರವೇರಿದೆ. ಸಕಲ ಭಕ್ತರಿಗೂ ಶ್ರೀರಾಮನವಮಿ ಸಂದರ್ಭ ಮಂಗಳವಾಗಲಿ ಎಂದು ಪ್ರಾರ್ಥಿಸಲಾಗಿದೆ ಎಂದು ಹೇಳಿದರು.

ಶ್ರೀವ್ಯಾಸತೀರ್ಥ ವಿದ್ಯಾಪೀಠದ ಗೌರವ ಕಾರ್ಯದರ್ಶಿ ಡಾ. ಡಿ.ಪಿ. ಮಧುಸೂದನಾಚಾರ್ಯ, ಗುರುಗಳ ಬಲಸೇವೆ ಪ್ರಮುಖ ಕೃಷ್ಣಾಚಾರ್ಯ, ಹಿರಿಯ ವಿದ್ವಾಂಸ ಸಿ.ಎಚ್. ಶ್ರೀನಿವಾಸಮೂರ್ತಿ ಇದ್ದರು. ಗೋ ಪೂಜೆ, ಭಕ್ತ ಸಮೂಹಕ್ಕೆ ಪಂಚ ಭಕ್ಷ್ಯ ಸಹಿತ ಅನ್ನ ಸಂತರ್ಪಣೆ ನೆರವೇರಿತು.

ಶ್ರೀ ರಾಮನವಮಿ ಉತ್ಸವದ ಅಂಗವಾಗಿ ನಗರದ ಕೃಷ್ಣಮೂರ್ತಿ ಪುರಂನ ಸೋಸಲೆ ಶ್ರೀ ವ್ಯಾಸರಾಜರ ಮಠದಲ್ಲಿ ಮಠಾಧೀಶರಾದ ಶ್ರೀ ವಿದ್ಯಾಶ್ರೀಶ ತೀರ್ಥ ಸ್ವಾಮೀಜಿ ಅವರು ಸಂಸ್ಥಾನ ಪೂಜೆ ನೆರವೇರಿಸಿದರು.

ಹಿಂದೆ ದರ ಏರಿಕೆಯಾದಾಗ ಯಾಕೆ ಮುಷ್ಕರ ಮಾಡಲಿಲ್ಲ: ಡಿಕೆಶಿ

ಲಾರಿ ಮಾಲೀಕರೇ ಆಮಿಷಕ್ಕೆ ಒಳಗಾಗಬೇಡಿ

ಕನಕಪುರ: ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ ಹೊಸದೇನಲ್ಲ. ಹಿಂದೆ ದರ ಏರಿಕೆಯಾದಾಗ ಲಾರಿ ಮಾಲೀಕರು ಯಾಕೆ ಮುಷ್ಕರ ಮಾಡಲಿಲ್ಲ? ಈಗ ರಾಜಕೀಯ ಕಾರಣಕ್ಕಾಗಿ ಮಾಡುತ್ತಿದ್ದಾರೆ. ಮುಷ್ಕರ ದಿಂದ ಅವರಿಗೇ ನಷ್ಟವಾಗುತ್ತದೆ. ಸುಮ್ಮನೆ ರಾಜಕೀಯಕ್ಕೆ ಒಳಗಾಗಬೇಡಿ ಎಂದು ಈಗಲೂ ಲಾರಿ ಮಾಲೀಕರಿಗೆ ನಾನು ಮನವಿ ಮಾಡುವೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಪಟ್ಟಣದಲ್ಲಿ ಭಾನುವಾರ ನಡೆದ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡ ಬಳಿಕ, ಲಾರಿ ಮುಷ್ಕರ ಕುರಿತ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಮಾಲೀಕರು ಮುಷ್ಕರ ಮಾಡಿದರೆ ಅವರಿಗೇ ನಷ್ಟವಾಗುತ್ತದೆ. ಮುಷ್ಕರದಿಂದ ಆಗುವ ನಷ್ಟ ಭರಿಸಲು ಅವರಿಗೆ ಸಾಧ್ಯವಾಗುತ್ತದೆಯೇ?' ಎಂದು ಪ್ರಶ್ನಿಸಿದರು. ಮುಷ್ಕರದಿಂದಾಗಿ ಲಾರಿ ಖರೀದಿ ಇಎಂಐ, ಬಡ್ಡಿ, ಚಾಲಕರ ಸಂಬಳ ಸೇರಿದಂತೆ ಮಾಲೀಕರಿಗೆ ಹಲವು ರೀತಿಯ ಹೊರೆಯಾಗಲಿದೆ. ರಾಜಕೀಯ ಕಾರಣಕ್ಕೆ ಮುಷ್ಕರ ಮಾಡದೆ ತಮ್ಮ ಬದುಕನ್ನು ನೋಡಬೇಕು. ಸರಕಾರದ ಜತೆಗಿದ್ದು ಸಹಕರಿಸಬೇಕು' ಎಂದರು.

ಬಿಡದಿ ಟೌನ್‌ಶಿಪ್ ಯೋಜನೆಗೆ ಎಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದಾಗಲೇ ನೋಟಿಫಿಕೇಷನ್ ಆಗಿದೆ. ಈಗ ವಿರೋಧ ಮಾಡುವವರು ಆಗಲೇ ಯೋಜನೆ ನಿಲ್ಲಿಸ ಬಹುದಿತ್ತಲ್ಲವೇ? ಯೋಜನೆ ವಿರೋಧಿಸಿ ಜೆಡಿಎಸ್ನವರು ಏನು ಬೇಕಾದರೂ ರಾಜಕೀಯ ಮಾಡಲಿ' ಎಂದು ಹೇಳಿದರು.

ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಬಿಡದಿ ಟೌನ್‌ಶಿಫ್ ನಿರ್ಮಾಣವಾಗಲಿದೆ. ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಅವರ ಭೂಮಿಗೆ ದರ ಕೊಡುತ್ತೇವೆ. ಈಗಾಗಲೇ ರೈತರೊಂದಿಗೆ ಮಾತನಾಡಿದ್ದೇವೆ. ಬೆಂಗಳೂರು ನಗರಕ್ಕಿಂತಲೂ ಹೆಚ್ಚಿನ ಹಣ ಸಿಗುವಂತೆ ಮಾಡುವೆ. ಈ ಬಗ್ಗೆ ಯಾರಿಗೂ ಆತಂಕ ಅಥವಾ ಅನುಮಾನ ಬೇಡ.
-ಡಿ.ಕೆ.ಶಿವಕುಮಾರ್, ಡಿಸಿಎಂ

ಆತ್ಮಹತ್ಯೆಗೆ ಮುನ್ನ ಪತ್ನಿಗೆ ಬರೆದ ಪತ್ರ ಬಯಲು, ಕಿರುಕುಳದ ಬಗ್ಗೆ ಪ್ರಸ್ತಾಪ

ವಿನಯ್ ಪ್ರಕರಣಕ್ಕೆ ಹೊಸ ಟ್ವಿಸ್ಟ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ರಾಜಕೀಯದಲ್ಲಿ ತೀವ್ರ ವಿವಾದಕ್ಕೆ ಕಾರಣ ವಾಗಿರುವ ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣಕ್ಕೆ ಮತ್ತೊಂದು ಟ್ವಿಸ್ಟ್ ಸಿಕ್ಕಿದ್ದು, ವಿನಯ್ ತಮ್ಮ ಪತ್ನಿಗೆ ಬರೆದಿರುವ ಕೊನೆಯ ಪತ್ರ ಇದೀಗ ಮತ್ತೊಂದು ಸುತ್ತಿನ ಹೋರಾಟಕ್ಕೆ ನಾಂದಿ ಹಾಡಿದೆ. ಈ ಪತ್ರವನ್ನು ನೇರವಾಗಿ ಪತ್ನಿಗೆ ಕಳುಹಿಸದೇ, ಅವರ ಸಹೋದರ ಸುಶಾಂತ್‌ಗೆ ಕಳುಹಿಸಿದ್ದಾರೆ. ವಿನಯ್ ಆತ್ಮಹತ್ಯೆಗೆ ಮುನ್ನ ಕಳುಹಿಸಿದ್ದಾರೆನ್ನಲಾದ ವಾಟ್ಸ್ ಆ್ಯಪ್ ಸಂದೇಶದಲ್ಲಿ ಜಿಲ್ಲೆಯ ಕಾಂಗ್ರೆಸ್ ವಕ್ತಾರ ಮತ್ತು ವಿರಾಜಪೇಟೆ ಶಾಸಕ ಪೊನ್ನಣ್ಣ ಹಾಗೂ ಮಡಿಕೇರಿ ಶಾಸಕ ಮಂಥರ್ ಗೌಡ ಅವರ ಪ್ರಸ್ತಾಪವಿದೆ. ಆದರೆ ಇದು ಅವರೇ ಕಳುಹಿಸಿದ್ದಾರೆ ಎನ್ನಲು ಖಚಿತತೆ ಇಲ್ಲದ ಕಾರಣ ಪೊಲೀಸರು ಇಬ್ಬರು ಕಾಂಗ್ರೆಸ್ ಕಾಂಗ್ರೆಸ್ ಶಾಸಕರ ಹೆಸರನ್ನು ಎಫ್‌ಐಆರ್‌ನಲ್ಲಿ ಉಲ್ಲೇಖಿಸಿಲ್ಲ. ಇದೀಗ ಈ ಪತ್ರವನ್ನು ಮುಂದಿಟ್ಟುಕೊಂಡು ಹೋರಾಟವನ್ನು ತೀವ್ರಗೊಳಿಸಲು ಬಿಜೆಪಿ ಸಿದ್ಧತೆ ನಡೆಸಿದೆ.

ಪತ್ರದಲ್ಲಿ ಏನಿದೆ?

ನನ್ನ ಕ್ಷಮಿಸಿ ಬಿಡು ಹೆಂಡತಿ!

ಸುಶಾಂತ್, ಈ ಮೆಸೇಜ್‌ನ ನೀನು ಶೋಭಿ(ಶೋಭಿತಾ)ಗೆ ಫಾರ್ವರ್ಡ್ ಮಾಡಬೇಡ, ನೀನೇ ಹೋಗಿ ತೋರಿಸು. ಅವಳು ಈ ಮೆಸೇಜ್ ಓದುವಾಗ ನಾನು ಈ ಲೋಕದಲ್ಲಿ ಇರುವುದಿಲ್ಲ. ಕ್ಷಮಿಸು ಸುಶಾಂತ್.. ಸಾಧ್ವಿನ ಚೆನ್ನಾಗಿ ನೋಡಿಕೊ. ನೀನು ಇನ್ನು ಮುಂದೆ ಶೋಭಿ ಜತೆಯಲ್ಲಿರು. ಬೇರೆ ಕಡೆಯಿರುವುದು ಬೇಡ. ಶೋಭಿ ಹಾಗೂ ಸಾಧ್ವಿಗೆ ಸಹಾಯವಾಗುತ್ತೆ. ಪ್ಲೀಸ್ ಬೆಳಗ್ಗೆ ಹೋಗಿ ಸಾಧ್ವಿದು ಬಟ್ಟೆ ನೀನೇ ಪ್ಯಾಕ್ ಮಾಡು. ಕಾರ್ ಡಾಕ್ಯುಮೆಂಟ್ಸ್ ನನ್ನ ಆಫೀಸ್ ಸಹಪಾಠಿ ರಜತ್‌ಗೆ ಹೇಳು ಶೋಭಿ ಅಥವಾ ನಿನ್ನ ಹೆಸರಿಗೆ ವರ್ಗಾವಣೆ ಮಾಡೋಕೆ. ಬೈಕ್ ಕೀ ಹಾಳಾಗಿದೆ. ಯಾವುದಾದರೂ ಮೆಕ್ಯಾನಿಕ್‌ನ ಕರೆಸಿ, ಸರಿ ಮಾಡಿಸಿ ಅಣ್ಣಗೆ ಕೊಟ್ಟು ಬಿಡು...

ಹಾಯ್ ಶೋಭಿ,

ಈ ಲೆಟರ್‌ನ ನಾನು ಸುಶಾಂತ್‌ಗೆ ಕಳಿಸಿದ್ದು ಯಾಕಂದ್ರೆ ನಿಂಗೆ ಕಳಿಸಿದರೆ ನಿನ್ನ ಸಂಭಾಳಿಸುವವರು ಯಾರೂ ಇರುವುದಿಲ್ಲ, ಸಾರಿ... ಇದು ಕ್ಷಮಿಸುವ ತಪ್ಪಲ್ಲ, ನನಗೆ ಗೊತ್ತು, 2 ತಿಂಗಳಿನಿಂದ ನನ್ನ ಮನಸ್ಸು ಹತೋಟಿಗೆ ಬರುತ್ತಿಲ್ಲ. ನನ್ನ ಮುಖದಲ್ಲಿ ನಗುವಿದ್ದರೂ ಅದು ನಕಲಿ. ನನ್ನ ಮೇಲೆ ಹಾಕಿದ ಎಫ್‌ಐಆರ್‌ನಿಂದಾಗಿ ನಿನಗೆ, ಚಾಚಾಗೆ ಎಷ್ಟು ಬೇಜಾರಾಗಿದೆ ಅಂತ ನಂಗೆ ಗೊತ್ತಿದೆ. ಅವರು ಇನ್ನೂ ನಮ್ಮ ಫೋಟೋ ಹಾಕಿಕೊಂಡು ಅವರ ಗ್ರೂಪ್‌ನಲ್ಲಿ ಹಾಕಿಕೊಳ್ಳುತ್ತಿದ್ದಾರೆ. ನಮ್ಮ ಮೇಲೆ ರೌಡಿಶೀಟ್ ಹಾಕೋಕೆ ಪ್ರಯತ್ನಿಸುತ್ತಿದ್ದಾರೆ.

ಕಳೆದ ವಾರ ಮಡಿಕೇರಿ ಪೊಲೀಸ್ ಕಾಲ್ ಮಾಡಿ, ಬಂದು ತಹಶೀಲ್ದಾರ್ ಮುಂದೆ ಸಹಿ ಮಾಡಬೇಕು ಎಂದು ಒತ್ತಾಯಿಸಿದರು. ನಾನು ಎಷ್ಟು ಮರೆಯಲು ಪ್ರಯತ್ನ ಪಟ್ಟರೂ, ಪುನಃ ಪುನಃ ಅದನ್ನು ನೆನಪಿಸುತ್ತಿದ್ದಾರೆ ಅವರು. ರಿಯಲೀ ವೆರಿ ಸಾರಿ ಮಾ.. ಜಾಮೀನು ಸಿಕ್ಕಿದ ಮರುದಿನ ಪೊಲೀಸರು ರಜತ್ ಮನೆಗೆ ಹೋಗಿ ಅವನನ್ನು ನನ್ನ ಮನೆಯ ವಿಳಾಸ ಕೇಳಿದ್ದಾರೆ. ಅದು ಕೂಡ ಜಾಮೀನು ಸಿಕ್ಕ ನಂತರ. ಅಷ್ಟೆಲ್ಲಾ ಮಾನಸಿಕ ಕಿರುಕುಳ ಕೊಟ್ಟಿದ್ದಾರೆ. ಹೇಳಿಕೊಳ್ಳಲು ಆಗುತ್ತಿಲ್ಲ.

ನಿನ್ನ ನಾನು ಪಡೆಯಲು ಪುಣ್ಯ ಮಾಡಿದ್ದೆ. ನನ್ನ ಎಲ್ಲಾ ಕಷ್ಟದ ಸಮಯದಲ್ಲೂ ನೀನು ನನ್ನ ಸಹಾಯಕ್ಕೆ ಇದ್ದೆ. ಥಾಂಕ್ಯೂ ಯು ಮಾ.. ಸಾಧ್ವಿ ಒಂದು ವಾರ ಕೇಳಬಹುದು. ನಂತರ ಸರಿ ಆಗುತ್ತೆ ಬಿಡು, ಅವಳಿಗೆ ಅಪ್ಪ ದೂರ ಹೋಗಿದ್ದಾರೆ ಅಂತ ಹೇಳು. ಅವಳಿಗೆ ನೀನಿದ್ರೆ ಸಾಕು, ನೀನೇ ಅವಳ ಪ್ರಪಂಚ. ಅವಳು ದೊಡ್ಡವಳಾದ ಮೇಲೆ ಹೇಳು, ಅಪ್ಪ ಅವಳನ್ನು ತುಂಬಾ ಇಷ್ಟ ಪಡುತ್ತಿದ್ದರು ಅಂತ. ಏನೇನೋ ಆಸೆ ಇತ್ತು ಕಣೆ, ಒಳ್ಳೆಯ ಕೆಲಸಕ್ಕೆ ಸೇರಬೇಕು, ಫ್ಲ್ಯಾಟ್ ತಗೋಬೇಕು, ಅಲ್ಲಿ ನಾವು ಜೀವನ ನಡೆಸಬೇಕು ಅಂತ.

ಆದರೆ ನನ್ನ ಮನಸ್ಸಿನಿಂದ ಆ ಎಫ್‌ಐಆರ್ ಘಟನೆಯ ವಿಚಾರ ಹೋಗುತ್ತಿಲ್ಲ. ನನ್ನಿಂದ ನಮ್ಮ ಹಾಗೂ ನಿಮ್ಮ ಕುಟುಂಬದ ಮರ್ಯಾದೆನೇ ಹೋಯ್ತು. ನಾವಿಲ್ಲ ಅಂತ ನನ್ನ ಮನೆಯವರನ್ನು ಬಿಟ್ಟು ಹೋಗಬೇಡ. ನಮ್ಮ ಮನೆಯಲ್ಲಿ ಎಲ್ಲರಿಗೂ ನಂಗೆ ನೀನು ಎಷ್ಟು ಇಷ್ಟಾನೋ ಅಷ್ಟೇ ನಿನ್ನ ಅವರೂ ಇಷ್ಟಪಡುತ್ತಾರೆ. ಅದು ನಿನಗೂ ಗೊತ್ತಿದೆ, ನೀನು ಈವಾಗ ನನ್ನ ಫ್ಯಾಮಿಲಿ ಜತೆ ಹೇಗಿದ್ದೀಯೋ ಹಾಗೆ ಇರು ಪ್ಲೀಸ್.. ಆವಾಗಾವಾಗ ನಮ್ಮ ಮನೆಗೆ ಹೋಗ್ತಿರು. ನಿಂಗೆ ಏನೇ ಕಷ್ಟ ಇದ್ರೂ, ನನ್ನ ಅಣ್ಣನ ಕೇಳು, ಅವನು ನನ್ನ ಡ್ಯಾಡಿ ಇದ್ದ ಹಾಗೆ. ಅಮ್ಮ ಮಂಜು, ಕಂದ, ಎಲ್ಲರೂ ನಿನ್ನ ತುಂಬಾ ಇಷ್ಟಪಡುತ್ತಾರೆ. ಪುನರ್‌ಜನ್ಮ ಅಂತ ಇದ್ರೆ, ಅದು ಸಾಧ್ವಿ, ಹೊಟ್ಟೇಲಿ ಹುಟ್ಟುತ್ತೇನೆ, ಅಲ್ಲಿಯವರೆಗೆ ನಂಗೆ ಪುನರ್‌ಜನ್ಮ ಬೇಡ ಅಂತ ಆ ದೇವರಲ್ಲಿ ಬೇಡಿಕೊಳ್ತೀನಿ. ನನ್ನ ಜಾಸ್ತಿ ನೆನಪಿಟ್ಕೋಬೇಡ, ಲವ್ ಯು ಶೋಭಿ.. ಸಾಧ್ವಿ..

-ವಿನಯ್ ಸೋಮಯ್ಯ

ಇಂದು ವೈರಮುಡಿ ಉತ್ಸವ 2 ಲಕ್ಷ ಜನರು ಸೇರುವ ನಿರೀಕ್ಷೆ

ಪಾಂಡವಪುರ: ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನಲ್ಲಿರುವ ಐತಿಹಾಸಿಕ ಧಾರ್ಮಿಕ ಕ್ಷೇತ್ರ ಮೇಲು ಕೋಟೆಯಲ್ಲಿ ಇಂದು ರಾತ್ರಿ 8 ಗಂಟೆಗೆ ವೈರಮುಡಿ ಬ್ರಹ್ಮೋತ್ಸವ ವಿಜೃಂಭಣೆಯಿಂದ ಜರುಗಲಿದೆ. ಈ ನಿಟ್ಟಿನಲ್ಲಿ ಕಳೆದೊಂದು ವಾರದಿಂದ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ವೈರಮುಡಿ ಉತ್ಸವ ಅಂಗವಾಗಿ ಇಂದು ಬೆಳಗ್ಗೆ 7 ಗಂಟೆಗೆ ಮಂಡ್ಯ ನಗರದ ಜಿಲ್ಲಾ ಖಜಾನೆಯಿಂದ ವಜ್ರ ಖಚಿತ ವೈರ ಮುಡಿ ಹಾಗೂ ಆಭರಣಗಳನ್ನು ಜಿಲ್ಲಾಡಳಿತದ ಸಮ್ಮುಖದಲ್ಲಿ ಮೇಲುಕೋಟೆಯ ಸ್ಥಾನಿಕ ಅರ್ಚಕರು ದೇಗುಲಕ್ಕೆ ಕೊಂಡೊಯ್ಯಲಿದ್ದಾರೆ. ಇದಕ್ಕೂ ಮುನ್ನ ಮಂಡ್ಯದ ಲಕ್ಷ್ಮಿ ಜನಾರ್ದನಾ ದೇಗುಲದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಬಿಗಿ ಭದ್ರತೆಯಲ್ಲಿ ಆಭರಣಗಳು ಸಂಜೆ ವೇಳೆಗೆ ಮೇಲುಕೋಟೆ ತಲುಪಲಿವೆ. ದೇವಾಲಯದ ಆವರಣದಲ್ಲಿ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಆಭರಣಗಳ ಪರಿಶೀಲನೆ ನಡೆಯಲಿದ್ದು, ಬಳಿಕ ಚಲುವನಾರಾಯಣನಿಗೆ ಆಭರಣಗಳನ್ನು ಧರಿಸಿ, ಮೇಲುಕೋಟೆಯ ರಾಜಬೀದಿಯಲ್ಲಿ ವಜ್ರಖಚಿತ ವೈರಮುಡಿ ಉತ್ಸವ ಜರುಗಲಿದೆ. ಸುಮಾರು 2 ಲಕ್ಷ ಜನ ಸೇರುವ ನಿರೀಕ್ಷೆ ಇದ್ದು, ಮಂಡ್ಯ, ಮೈಸೂರು, ಬೆಂಗಳೂರು ನಗರ ಸೇರಿ ರಾಜ್ಯದ ಹಲವು ಜಿಲ್ಲೆಗಳಿಂದ ನೂರಾರು ಬಸ್‌ಗಳ ವ್ಯವಸ್ಥೆ ಕಲ್ಪಿಸಲಾಗಿದೆ. ಬರುವ ಭಕ್ತರಿಗೆ ಶೌಚಾಲಯ, ಕುಡಿಯುವ ನೀರು ಸೇರಿದಂತೆ ಮೂಲ ಸೌಕರ್ಯ ಒದಗಿಸಿದ್ದು, ಪ್ರಸಾದದ ವ್ಯವಸ್ಥೆ ಸಹ ಮಾಡಲಾಗಿದೆ. ನೂರಾರು ಸಿಸಿ ಕ್ಯಾಮೆರಾಗಳನ್ನು ಅಳವಡಿಸಿದ್ದು, ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆ.

2028ಕ್ಕೆ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ

ಹುಬ್ಬಳ್ಳಿ: 2028ರಲ್ಲಿ ಕರ್ನಾಟಕದಲ್ಲಿ ನಡೆಯುವ ಚುನಾವಣೆಯಲ್ಲಿ ಬಿಜೆಪಿ ಸ್ವಂತ ಬಲದಲ್ಲಿ ಅಧಿಕಾರಕ್ಕೆ ಬರಲಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹೇಳಿಕೆ ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಕಾಂಗ್ರೆಸ್ ಎಲ್ಲಿ ಅಧಿಕಾರದಲ್ಲಿ ಇರುತ್ತೋ ಅಲ್ಲಿ ಕ್ರಿಮಿನಲ್ ಗಳು, ಭ್ರಷ್ಟಾಚಾರಿಗಳು ಯಾವ ಭಯವಿಲ್ಲದೆ ಧೈರ್ಯ ವಾಗಿರುತ್ತಾರೆ ಒಂದು ರೀತಿಯಲ್ಲಿ ಸ್ವರ್ಗವಿದ್ದಂತೆ, ಅದಕ್ಕೆ ಕರ್ನಾಟಕವೇ ಸ್ಪಷ್ಟ ಉದಾಹರಣೆಯಾಗಿದೆ ಎಂದು ಆರೋಪಿಸಿದರು. ರಾಜ್ಯದಲ್ಲಿ ಪೆಟ್ರೋಲ್ ಕದಿಯುವಿಕೆ ಸೇರಿದಂತೆ ವಿವಿಧ ಅಕ್ರಮ ಚಟುವಟಿಕೆಗಳು ಕಾಂಗ್ರೆಸ್ ಆಡಳಿತ ದಲ್ಲಿ ಸಹಜ. ಕೋವಿಡ್ ಕಾಲದ ಅಕ್ರಮಗಳ ಬಗ್ಗೆ ತನಿಖೆ, ವರದಿ ಪಡೆದಿರುವುದು ಇದೆಲ್ಲಾ ಬೆದರಿಸುವ ತಂತ್ರವಷ್ಟೇ ಎಂದು ಹೇಳಿದ ಅವರು ತೆಲಂಗಾಣ, ಹಿಮಾಚಲ ಪ್ರದೇಶದಲ್ಲಿ ಆಡಳಿತ ನಡೆಸಲು ಕಾಂಗ್ರೆಸ್ ಪರದಾಡುತ್ತಿದೆ. ಕರ್ನಾಟಕದಲ್ಲೂ ಗ್ಯಾರಂಟಿಯಿಂದ ಆರ್ಥಿಕ ಸಂಕಷ್ಟ ಎದುರಾಗಿದ್ದು, ರಸ್ತೆ ಗುಂಡಿಗಳನ್ನು ಮುಚ್ಚಲು ಸರಕಾರದ ಬಳಿ ಹಣ ಇಲ್ಲವಾಗಿದೆ. ವಕ್ಫ್ ಕಾಯ್ದೆ ಚರ್ಚೆಯಲ್ಲಿ ಸದನದಲ್ಲಿ ಪಾಲ್ಗೊಳ್ಳದೆ, ವಕ್ಫ್ ಕಾಯ್ದೆ ಬಗ್ಗೆ ಇಲ್ಲಸಲ್ಲದ ಹೇಳಿಕೆ ನೀಡುವ ರಾಹುಲ್ಗಾಂಧಿ ಒಬ್ಬ ಪ್ರಬುದ್ಧ ನಾಯಕ ಎಂದು ಹೇಳಿದರು. ಪ್ರಸ್ತುತ 15 ರಾಜ್ಯಗಳಲ್ಲಿ ಬಿಜೆಪಿ ಮುಖ್ಯಮಂತ್ರಿಗಳಿದ್ದಾರೆ. 4 ರಾಜ್ಯಗಳಲ್ಲಿ ಎನ್ ಡಿಎ ಸರಕಾರವಿದೆ. ಹಾಗೆಯೆ ಮುಂದೆ 2028ಕ್ಕೆ ಕರ್ನಾಟಕದಲ್ಲಿ ಸ್ವಂತ ಬಲದೊಂದಿಗೆ ಬಿಜೆಪಿ ಅಧಿಕಾರಕ್ಕೆ ಬರುವುದು ಖಚಿತ ಎಂದು ಹೇಳಿದರು.

ಟ್ವೀಟೂ-ಖಾರಾ

ಆರ್.ಅಶೋಕ್, ಪ್ರತಿಪಕ್ಷ ನಾಯಕ

ಕಡತ ವಿಲೇವಾರಿ ಗ್ಯಾರಂಟಿ ಎಲ್ಲಿದೆ ಸ್ವಾಮಿ. ದಿನ ಬೆಳಗಾದರೆ ಬಣ ಬಡಿದಾಟ ಸಿಎಂ ಗಾದಿಗಾಗಿ ಕಿತ್ತಾಟ ಓಲೈಕೆ ರಾಜಕಾರಣಕ್ಕಾಗಿ ಹಿಂದೂಗಳ ಭಾವನೆಗಳ ಜತೆ ಚೆಲ್ಲಾಟ ಕೇಂದ್ರ ಸರಕಾರದ ಮೇಲೆ ಗೂಬೆ ಕೂರಿಸುವ ನಾಟಕ ಇವುಗಳಲ್ಲೇ ನಿರತರಾಗಿರುವ ಸಿಎಂ siddaramaiah ಹಾಗೂ ಅವರ ಸಚಿವರಿಗೆ ಪಾಪ ಕಡತ ವಿಲೇವಾರಿ ಮಾಡಲು ಸಮಯ ಎಲ್ಲಿದೆ. 30ಕ್ಕೂ ಅಧಿಕ ಇಲಾಖೆಗಳಲ್ಲಿ ಶೇ.45% ಕಡತಗಳು ವಿಲೇವಾರಿ ಆಗದೆ ಬಾಕಿ ಉಳಿದಿದ್ದು, 71,000 ಕಡತೆ ಧೂಳು ಕುಡಿಯುತ್ತಿವೆ.

ಮಧು

ಈ ದರಿದ್ರ ಅಡ್ಜಸ್ಟ್‌ಮೆಂಟ್ ಗಿರಾಕಿಗಳು ತೊಲಗಿದ್ರೆ ಸರಿಹೋಗುತ್ತೆ.



ಸಮಾಚಾರ ಸಣ್ಣದಲ್ಲ

ಕೆಪಿಸಿಸಿ ಅಧ್ಯಕ್ಷತೆ ಬಿಟ್ಟು ಕೊಡಲು ಡಿಕೆಶಿ ಸಿದ

ರಾಮನಗರ: ಹೈಕಮಾಂಡ್ ಸೂಚಿಸಿದರೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಬಿಟ್ಟುಕೊಡಲು ಡಿ.ಕೆ.ಶಿವಕುಮಾರ್ ಸಿದ್ಧರಿದ್ದಾರೆ ಎನ್ನುವ ಮೂಲಕ ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ಅವರು ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಸುಳಿವು ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ನಮ್ಮ ನಾಯಕರು ಯಾವುದೇ ಷರತ್ತಿಲ್ಲದೆ ಕೆಪಿಸಿಸಿ ಅಧ್ಯಕ್ಷ



ಸ್ಥಾನವನ್ನು ಬಿಟ್ಟುಕೊಡಲು ತಯಾರಿದ್ದು, ಹೈಕಮಾಂಡ್ ಸೂಕ್ತ ವ್ಯಕ್ತಿಯನ್ನು ಅಧ್ಯಕ್ಷ ಸ್ಥಾನಕ್ಕೆ ಗುರುತಿಸಿದರೆ ನಾವು ಸ್ವಾಗತಿಸುತ್ತೇವೆ ಎಂದರು. ಕಾಂಗ್ರೆಸ್ ಸರಕಾರದ ವಿರುದ್ಧ ಯುದ್ಧ ಘೋಷಿಸುತ್ತೇನೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಘೋಷಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಬಾಲಕೃಷ್ಣ, ನಮ್ಮ ವಿರುದ್ಧ ಯುದ್ಧಕ್ಕೆ ಬರುವ ಮೊದಲು ಅವರು ಒಗ್ಗೂಡಲಿ. ಬಳಿಕ ಇಬ್ಬರೂ ಸೇರಿ ಜತೆಯಲ್ಲಿ ಯುದ್ಧ ಪ್ರಾರಂಭಿಸಲಿ ಎಂದು ಪಂಥಾಹ್ವಾನ ನೀಡಿದರು.

ಭೀಕರ ಅಪಘಾತ: ನಾಲ್ವರು ಸಾವು

ಹುಬ್ಬಳ್ಳಿ: ಭೀಕರ ರಸ್ತೆ ಅಪಘಾತ ಸಂಭವಿಸಿ, ಕಾರಿನಲ್ಲಿದ್ದ 4 ಜನ ಮಹಿಳೆಯರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಹುಬ್ಬಳ್ಳಿಯ ಹೊರವಲಯದ ನೂಲ್ವಿ ಕ್ರಾಸ್ ಬಳಿ ಈ ಒಂದು ಅಪಘಾತ ಸಂಭವಿಸಿದೆ. ವರೂರ್ ನಿಂದ

ಹುಬ್ಬಳ್ಳಿ ಕಡೆ ಬರುತಿದ್ದ ಕ್ವಿಡ್ ಕಾರ್ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯ ಡಿವೈಡರ್‌ಗೆ ಡಿಕ್ಕಿ ಹೊಡೆದು ನುಜ್ಜು ನುಜ್ಜಾಗಿದೆ. ಪರಿಣಾಮ ಕಾರಿನಲ್ಲಿದ್ದ 4 ಜನ ಮಹಿಳೆಯರು ಸ್ಥಳದಲ್ಲೇ ಮೃತಪಟ್ಟರೆ, ಇಬ್ಬರಿಗೆ ಗಂಭೀರ ಗಾಯಗಳಾಗಿವೆ. ಹುಬ್ಬಳ್ಳಿ ಲಿಂಗರಾಜ್ ನಗರ ನಿವಾಸಿಗಳಾದ ಒಂದೇ ಕುಟುಂಬದ ಸದಸ್ಯರಾದ ಸುಜಾತಾ ಹಿರೇಮಠ (61), ಶಂಕುತಲಾ ಹಿರೇಮಠ (75), ಸಂಪತ್ ಕುಮಾರಿ ಹಿರೇಮಠ (60) ಹಾಗೂ ಗಾಯತ್ರಿ ಹಿರೇಮಠ (65) ಮೃತರಾಗಿದ್ದಾರೆ. ಗಾಯಗೊಂಡ ವ್ಯಕ್ತಿ ವೀರಬಸಯ್ಯ (69) ಇವರಿಗೆ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಲೋಕಾ ಬಲೆಗೆ ಬಿದ್ದ ಕೃಷಿ ಅಧಿಕಾರಿ

ಚಿಕ್ಕಬಳ್ಳಾಪುರ: ತಾಲೂಕು ಕೃಷಿ ಅಧಿಕಾರಿ ಶಂಕರಯ್ಯ ಗುತ್ತಿಗೆದಾರ ಮಂಜುನಾಥ ಬಳಿ 3 ಲಕ್ಷ ಹಣಕ್ಕಾಗಿ ಬೇಡಿಕೆ ಇಟ್ಟಿದ್ದರು. ಈ ಸಂಬಂಧ 2 ಲಕ್ಷ ಲಂಚ ಸ್ವೀಕರಿಸುವಾಗ ದಾಳಿ ಮಾಡಿದ ಲೋಕಾಯುಕ್ತ ತಂಡ ಅಧಿಕಾರಿಯನ್ನು ಬಂಧಿಸಿದೆ. ದಾಳಿಯ ವೇಳೆ ಅಧಿಕಾರಿ ಬಳಿ 30 ಲಕ್ಷಕ್ಕೂ ಅಧಿಕ ಕಂತೆ ಕಂತೆ ಹಣ ಪತ್ತೆಯಾಗಿರುವುದು ಅಧಿಕಾರಿಗಳನ್ನು ಬೆಚ್ಚಿಬೀಳಿಸಿದೆ. ಬಾಗೇಪಲ್ಲಿಯಿಂದ ನೇರವಾಗಿ ಹಣದೊಂದಿಗೆ ಚಿಕ್ಕಬಳ್ಳಾಪುರ ಕೃಷಿ ಜಂಟಿ ನಿರ್ದೇಶಕರ ಕಚೇರಿಗೆ ಶಂಕರಯ್ಯ ಬರುವ ಮಾಹಿತಿ ಪಡೆದ ಲೋಕಾಯುಕ್ತ ಅಧಿಕಾರಿಗಳು ಶನಿವಾರ ದಾಳಿ ಮಾಡಿದ್ದಾರೆ. ಈ ವೇಳೆ ಶಂಕರಯ್ಯ ಬ್ಯಾಗ್ ಚೆಕ್ ಮಾಡಿದಾಗ ಬ್ಯಾಗ್ ನಲ್ಲಿ ಕಂತೆ ಕಂತೆ ಹಣ ಪತ್ತೆಯಾಗಿದೆ. ಈ ವೇಳೆ ಅಧಿಕಾರಿಗಳು ಹಣ ಎಣಿಸಲು ಮಿಷನ್ ತರಿಸಿಕೊಂಡಿದ್ದಾರೆ. 1 ಲಕ್ಷ ಲಂಚ ಮುಂಗಡವಾಗಿ ಶಂಕರಯ್ಯ ಪಡೆದಿದ್ದರು. ಇನ್ನು 2 ಲಕ್ಷ ರು. ಲಂಚ ಪಡೆಯುವ ವೇಳೆ ರೆಡ್ ಹ್ಯಾಂಡ್ ಆಗಿ ಲೋಕಾ ಬಲೆಗೆ ಬಿದ್ದಿದ್ದಾರೆ. ಲೋಕಾಯುಕ್ತ ಎಸ್ ಪಿ ಆಂಟೋನಿ ಜಾನ್ ನೇತೃತ್ವದಲ್ಲಿ ಈ ದಾಳಿ ನಡೆದಿದೆ. ಕಚೇರಿಯ ಅಧಿಕಾರಿಗಳನ್ನು ವಶಕ್ಕೆ ಪಡೆದು ಲೋಕಾಯುಕ್ತ ಅಧಿಕಾರಿಗಳು ವಿಚಾರಣೆ ನಡೆಸಿದ್ದಾರೆ.

ಬಿಜೆಪಿ –ಜೆಡಿಎಸ್‌ನಲ್ಲಿ ಮುಗಿಯದ ಸಮನ್ವಯದ ಕೊರತೆ | ಪ್ರತ್ಯೇಕ ಹೋರಾಟ, ತದ್ವಿರುದ್ಧ ಹೇಳಿಕೆ | ಜಾತಿ ರಾಜಕಾರಣದ ಲೆಕ್ಕಾಚಾರದಲ್ಲಿ ಎರಡೂ ಕಡೆ ನಾಯಕರು

ಮೈತ್ರಿಯಲ್ಲಿ ಕಾಣದ ಒಮ್ಮತ

ವಿಶ್ವವಾಣಿ ವಿಶೇಷ ಬೆಂಗಳೂರು

ರಾಜ್ಯದ ಮೈತ್ರಿ ಪಕ್ಷಗಳಾದ ಬಿಜೆಪಿ ಹಾಗೂ ಜೆಡಿಎಸ್ ನಾನೊಂದು ತೀರ ನೀನೊಂದು ತೀರ ಎನ್ನುವಂತಾಗಿದೆ. ಇತ್ತೀಚೆಗೆ ನಡೆದ ವಿಧಾನಮಂಡಲದ ಉಭಯ ಸದನಗಳಲ್ಲಿ ಆಡಳಿತ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸಲು ಹಲವು ವಿಚಾರಗಳಿದ್ದರೂ ಸಮನ್ವಯದ ಕೊರತೆಯಿಂದ ಅವಕಾಶ ಕೈ ಚೆಲ್ಲಿವೆ. ಈಗಿನ ಬೆಲೆ ಏರಿಕೆ ಹೋರಾಟದಲ್ಲೂ ಜೆಡಿಎಸ್ ಅನ್ನು ಬಿಜೆಪಿ ಕೈಬಿಟ್ಟು ನಡೆದಿರುವುದು ಕೂಡಿ ಬಾಳಲಾಗದ ಸ್ಥಿತಿ ಎದುರಾಗಿದೆ.

ಬಿಜೆಪಿ ರಾಜ್ಯ ಸರಕಾರದ ವಿರುದ್ಧ ಎರಡನೇ ಹಂತದ ಜನಾಕ್ರೋಶ ಯಾತ್ರೆ ಆರಂಭಿಸಿದ್ದರೂ, ವೇದಿಕೆಯನ್ನು ಮೈತ್ರಿ ಪಕ್ಷದೊಂದಿಗೆ ಹಂಚಿಕೊಳ್ಳಲು ಬಯಸಿಲ್ಲ. ಇದಕ್ಕೆ ಸವಾಲಿನ ರೀತಿಯಲ್ಲಿ ಕುಮಾರಸ್ವಾಮಿ ಅವರು ಪ್ರತ್ಯೇಕ ಪ್ರವಾಸ ಕೈಗೊಳ್ಳಲು ತೀರ್ಮಾನಿಸಿದ್ದಾರೆ ಎನ್ನಲಾಗಿದೆ. ಹಳೇ ಮೈಸೂರು ಭಾಗದಲ್ಲಿ ಪಕ್ಷದ ಸಂಘಟನೆಯನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ 15 ಜಿಲ್ಲೆಗಳಲ್ಲಿ ಪ್ರವಾಸ ಮಾಡಲು ತೀರ್ಮಾನಿಸಿದ್ದಾರೆ. ಮೂಲಕ ಮೈತ್ರಿಯಲ್ಲಿ ಎಲ್ಲವೂ ಸರಿಯಿಲ್ಲ ಎನ್ನುವುದು ಸ್ಪಷ್ಟವಾಗಿದೆ.

ಆರಂಭದಲ್ಲಿ ಮುಡಾ ಹಗರಣಕ್ಕೆ ಸಂಬಂಧ ಬಿಜೆಪಿ ಮತ್ತು ಜೆಡಿಎಸ್ ಜಂಟಿಯಾಗಿ ಪಾದಯಾತ್ರೆ ನಡೆಸಿತ್ತು. ಹಳೆ ಮೈಸೂರು ಭಾಗದಲ್ಲಿ ನಡೆದ ಪಾದಯಾತ್ರೆಯಲ್ಲಿ ಜೆಡಿಎಸ್ ತನ್ನ ಅಸ್ತಿತ್ವ ಬಿಟ್ಟುಕೊಡಲು ಸಿದ್ಧವಿರಲಿಲ್ಲ. ಉಪ ಚುನಾವಣೆಯ ಸಂದರ್ಭದಲ್ಲೇ ನಡೆದ ಈ ಪಾದಯಾತ್ರೆಯಲ್ಲಿ ಜೆಡಿಎಸ್ ಸಕ್ರಿಯವಾಗಿ ಭಾಗಿಯಾಗಿತ್ತಾದರೂ, ತಮ್ಮ ಬಲ ಇರುವ ಪ್ರದೇಶಗಳಲ್ಲಿ ಬಿಜೆಪಿಯ ಜತೆಗೆ ಅಂತರ ಕಾಯ್ದುಕೊಂಡು ಶಕ್ತಿ ಪ್ರದರ್ಶನಕ್ಕೆ ಮುಂದಾಗಿತ್ತು. ಪಾದಯಾತ್ರೆಯಲ್ಲೇ ಎರಡು ಪಕ್ಷಗಳ ನಡುವಿನ ಅಂತರ ಕೆಲ ಸಂದರ್ಭಗಳಲ್ಲಿ ಗೋಚರಿಸಿತ್ತಲ್ಲದೆ ನಾಯಕರ ನಡುವಿನ ಮುಸುಕಿನ ಗುದ್ದಾಟಕ್ಕೂ ಕಾರಣವಾಗಿತ್ತು. ಇದಾದ ನಂತರ ನಡೆದ ಅಧಿವೇಶನದ ಸಮಯದಲ್ಲೂ ಕೂಡ ರಾಜ್ಯದ ಹಲವು ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚಿಸಬೇಕಾಗಿತ್ತಾದರೂ, ಬಿಜೆಪಿ ಹಾಗೂ ಜೆಡಿಎಸ್ ನಡುವೆ ಹಲವು ವಿಚಾರದಲ್ಲಿ ಒಗ್ಗಟ್ಟು ಕಂಡುಬರಲಿಲ್ಲ. ಹೀಗಾಗಿ ಬಿಜೆಪಿ ಕೆಲ ವಿಷಯದಲ್ಲಿ ಸಭಾತ್ಯಾಗ ಮಾಡಿ ಪ್ರತಿಭಟಿಸಿತ್ತಲ್ಲದೆ, ಪ್ರಮುಖವಾಗಿ ಬೆಲೆ ಏರಿಕೆಯ ವಿಚಾರದಲ್ಲೂ ಜೆಡಿಎಸ್ ತಮ್ಮ ಪ್ರತಿಭಟನೆ ವ್ಯಕ್ತಪಡಿಸಿರಲಿಲ್ಲ. ಇದು ಮೈತ್ರಿಯಲ್ಲಿನ ಸಮನ್ವಯತೆ ಇಲ್ಲದಿರುವುದು ಗೋಚರವಾಗಿತ್ತು.

ಭಿನ್ನ ನಿಲುವು

ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಹೀನಾಯ ಸೋಲಿನ ಬೆನ್ನಲ್ಲೇ ರಾಜ್ಯದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ನಡೆದಿತ್ತು. ಲೋಕಸಭೆ ಚುನಾವಣೆಯ ಸಂದರ್ಭದಲ್ಲಿ ಈ ಮೈತ್ರಿಯಿಂದ ಬಿಜೆಪಿಗೆ ಆಗಿರುವ ಲಾಭಕ್ಕಿಂತ ಜೆಡಿಎಸ್ ಗೆ ಹೆಚ್ಚು ಲಾಭವಾಗಿತ್ತಾದರೂ, 2 ಸ್ಥಾನಗಳಲ್ಲಿ ಗೆಲುವು ಸಾಧಿಸಿತ್ತು. ಚುನಾವಣಾ ಫಲಿತಾಂಶದ ಬಳಿಕ ರಾಜ್ಯದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಮತ್ತಷ್ಟು ಗಟ್ಟಿಯಾಗಿ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಕೇಂದ್ರದಲ್ಲಿ ಪ್ರಭಾವಿ ಖಾತೆಯನ್ನೇ ನೀಡಲಾಗಿದೆ. ಈ ಮೂಲಕ ಇಬ್ಬರ ನಡುವಿನ ಮೈತ್ರಿ ಮುಂದಿನ ದಿನಗಳಲ್ಲಿ ಮತ್ತಷ್ಟು ಬಲಪಡಲಿದೆ ಎಂಬ ಸಂದೇಶವೂ ರವಾನೆ ಆಗಿತ್ತಾದರೂ ನಂತರದ ಬೆಳವಣಿಗೆಗಳಲ್ಲಿ ಭಿನ್ನ ನಿಲುವುಗಳು ಎದ್ದು ಕಾಣುತ್ತಿದೆ.

ಒಳಗೊಳಗೆ ಅಹಂ

ಜೆಡಿಎಸ್ ನಾಯಕರು ರಾಜ್ಯ ಬಿಜೆಪಿ ನಾಯಕರನ್ನು ವಿಶ್ವಾಸಕ್ಕೆ ಪಡೆದುಕೊಳ್ಳುತ್ತಿಲ್ಲ ಎಂಬ ಆರೋಪ ಒಂದು ಕಡೆಯಾದರೆ, ಬಿಜೆಪಿ ನಾಯಕರು ಜೆಡಿಎಸ್ ನಾಯಕರನ್ನು ಕಡೆಗಣಿಸುತ್ತಿದ್ದಾರೆ ಎಂಬ ಆರೋಪ ಮತ್ತೊಂದು ಕಡೆಯಿದೆ. ಕುಮಾರಸ್ವಾಮಿ ಅವರು ರಾಜ್ಯ ಬಿಜೆಪಿ ನಾಯಕರ ಜತೆಗೆ ಮಾತುಕತೆ ನಡೆಸುವುದಕ್ಕಿಂತ ಹೆಚ್ಚಾಗಿ ನೇರವಾಗಿ ಬಿಜೆಪಿ ರಾಷ್ಟ್ರೀಯ ನಾಯಕರ ಜತೆಗೆ ಸಂಪರ್ಕ ಹೊಂದಿದ್ದಾರೆ. ಎಲ್ಲಾ ನಿರ್ಧಾರಗಳನ್ನು ಅಲ್ಲೇ ತೆಗೆದುಕೊಳ್ಳುತ್ತಾರೆ ಎಂಬ ಆರೋಪ ಇದೆ. ಇದರ ನಡುವೆ ರಾಜ್ಯದಲ್ಲಿ ಜೆಡಿಎಸ್ ಮೈತ್ರಿಯ ಬಗ್ಗೆ ಕೆಲವು ಬಿಜೆಪಿ ನಾಯಕರಿಗೂ ಅಸಮಾಧಾನ ಇದೆ. ಈ ಮೈತ್ರಿಯ ಅಗತ್ಯ ಏನಿದೆ ಎಂಬ ಪ್ರಶ್ನೆ ಅವರು ಆಂತರಿಕ ವಾಗಿ ಮಾಡುತ್ತಿದ್ದಾರೆ. ಇದರಿಂದ ಬಿಜೆಪಿಗೆ ಹೆಚ್ಚು ಲಾಭ ಇಲ್ಲ ಎಂಬ ವಾದವಿದ್ದು, ಅದರಲ್ಲೂ ಬಿಜೆಪಿ ಕೆಲ ಒಕ್ಕಲಿಗ ನಾಯಕರಿಗೆ ಈ ಮೈತ್ರಿ ಬೇಡವಾಗಿರುವುದು ಕಂಡು ಬರುತ್ತಿದೆ.

ಹೆಚ್ಚಾದ ಅಂತರ

ಕಳೆದ ವಾರ ಬಿಜೆಪಿ ದರ ಏರಿಕೆ ವಿರುದ್ಧ ಅಹೋರಾತ್ರಿ ಧರಣಿ ಹಮ್ಮಿಕೊಂಡಿತ್ತಾದರೂ ಇದರಲ್ಲಿ ಜೆಡಿಎಸ್ ಭಾಗಿಯಾಗಿರಲಿಲ್ಲ. ನಮ್ಮ ಪಕ್ಷದ ನಾಯಕರಿಗೆ ಪ್ರತಿಭಟನೆಯಲ್ಲಿ ಭಾಗಿಯಾಗಲು ಆಹ್ವಾನ ಇರಲಿಲ್ಲ ಎಂಬ ವಿಚಾರ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ವ್ಯಕ್ತಪಡಿಸಿದ್ದರು. ಜೆಡಿಎಸ್ ಮೇಲುಗೈ ಆಗುತ್ತದೆ ಎಂದು ಬಿಜೆಪಿ ನಮ್ಮನ್ನ ಕರೆದಿಲ್ಲ. ಮುಡಾ ಪಾದಯಾತ್ರೆಯಲ್ಲಿ ಹೀಗೆಯೇ ಆಯಿತು. ಈಗಲೂ ಹೀಗೆ ಆಗಿದೆ. ಬಿಜೆಪಿ ನಾಯಕರಿಗೆ ಮನವಿ ಮಾಡುತ್ತಿದ್ದೇನೆ. ನಾವು ಒಟ್ಟಾಗಿ ಹೋರಾಟ ಮಾಡಬೇಕು. ರಾಜ್ಯದಲ್ಲಿ ಸಮನ್ವಯ ಸಾಧಿಸಲು ಒಂದು ಸಮಿತಿ ರಚಿಸಿಬೇಕು. ನಾವು ಒಟ್ಟಾಗಿ ರಾಜ್ಯ ಸರಕಾರದ ವಿರುದ್ಧ ಹೋರಾಡಿದರೆ, ಬಲ ಹೆಚ್ಚಾಗುತ್ತದೆ. ಹೆಚ್ಚಿನ ಜನರನ್ನು ತಲುಪಬಹುದು ಎಂದಿದ್ದರು. ಆದರೆ, 'ಅವರ ಹೋರಾಟ ಅವರು ಮಾಡುತ್ತಾರೆ ಬಿಡಿ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಈ ಹಿಂದೆ ಹೇಳಿದ್ದರು. ಈ ಹಿನ್ನೆಲೆಯಲ್ಲಿ ಮೈತ್ರಿ ಕಿತ್ತಾಟ ಮತ್ತೊಮ್ಮೆ ಬಹಿರಂಗಗೊಂಡಿದೆ.

ರಾತ್ರಿ ವಾಹನಗಳ ಸಂಚಾರ ನಿಷೇಧ ಮುಂದುವರಿಸಲು ಒತ್ತಾಯ

ಬಂಡೀಪುರ ಅರಣ್ಯ ಉಳಿಸಿ ಪರಿಸರ ಪ್ರೇಮಿಗಳ ಜಾಥಾ

ಬಂಡೀಪುರದಲ್ಲಿ ರಾತ್ರಿ ಸಂಚಾರ ನಿಷೇಧ ಮುಂದುವರಿಸುವಂತೆ ಬೃಹತ್ ಜಾಥಾ ನಡೆಯಿತು.

ಚಾಮರಾಜನಗರ: ಜಿಲ್ಲೆಯ ಬಂಡೀಪುರದಲ್ಲಿ ರಾತ್ರಿ ವಾಹನಗಳ ಸಂಚಾರ ನಿಷೇಧ ಮುಂದುವರಿಸಬೇಕು, ಯಾವುದೇ ಸಡಿಲಿಕೆ ಇರಬಾರದು ಎಂದು ಆಗ್ರಹಿಸಿ ಪರಿಸರಪ್ರೇಮಿಗಳು ಬೃಹತ್ ಕಾಲ್ನಡಿಗೆ ಜಾಥಾ ನಡೆಸಿದರು.

ಕೇರಳಕ್ಕೆ ಹಾದುಹೋಗುವ ಕಗ್ಗಳದಹುಂಡಿ ಗೇಟ್ ನಿಂದ ಮದ್ದೂರು ಚೆಕ್ ಪೋಸ್ಟ್ ತನಕ ಪರಿಸರ ಹೋರಾಟಗಾರರು, ರೈತರು, ಟೆಕಿಗಳು, ಕೇರಳದ ಪರಿಸರ ಹೋರಾಟಗಾರರು, ಸ್ಥಳೀಯ ಯುವಕರು ಸೇರಿದಂತೆ ಸಹಸ್ರಾರು ಮಂದಿ ಈ ಜಾಥಾದಲ್ಲಿ ಭಾಗಿಯಾದರು.

ಕೇರಳದ ವೈನಾಡು ಪ್ರಕೃತಿ ಸಂರಕ್ಷಣಾ ಸಮಿತಿ ಬಾದೂಷಾ ಮಾತನಾಡಿ, ನಾವು ಕೂಡ ರಾತ್ರಿ ಸಂಚಾರ ಬೇಡ ಎಂದೇ ಹೇಳುತ್ತಿದ್ದೇವೆ, ರಾತ್ರಿ ಸಂಚಾರ ಆರಂಭಗೊಂಡರೆ ಹವಾಲ ಮನಿ, ಗೋಲ್ಡ್ ಸ್ಮಗ್ಲಿಂಗ್ ಆಗುತ್ತದೆ.ವೈನಾಡಿನ ಬಹುತೇಕ ಮಂದಿ ರಾತ್ರಿ ಸಂಚಾರ ಬೇಡ ಎನ್ನುತ್ತಿದ್ದಾರೆ. ಆದರೆ ಕೆಲ ಬೆರಳೆಣಿಕೆ ಮಂದಿ ಕೇಳುತ್ತಿದ್ದಾರೆ. ರಾತ್ರಿ ಸಂಚಾರಕ್ಕೆ ಅವಕಾಶ ಕೊಡಬಾರದು ಎಂದು ಒತ್ತಾಯಿಸಿದರು.

ಪರಿಸರಪ್ರೇಮಿಗಳ ಮನವಿ ಪತ್ರ ಸ್ವೀಕರಿಸಿ ಶಾಸಕ ಗಣೇಶ್ ಪ್ರಸಾದ್ ಮಾತನಾಡಿ, ನಿಷೇಧ ತೆರವು ಕುರಿತು ಯಾವುದೇ ಪ್ರಸ್ತಾವನೆ ಇಲ್ಲ,ಯಥಾಸ್ಥಿತಿ ಕಾಪಾಡಲು ನಮ್ಮ ಬೆಂಬಲವಿದೆ. ಕಾಡು ಕಾಪಾಡುವುದು ಎಲ್ಲರ ಕರ್ತವ್ಯ, ನಿಮ್ಮ ಮನವಿ ಸಚಿವರಿಗೆ ತಿಳಿಸಲಾಗುವುದು, ನಿಮ್ಮ ಬೆಂಬಲಕ್ಕೆ ನಿಲ್ಲಲಾಗುವುದು ಎಂದರು.

ವಾಟಾಳ್ ನಾಗರಾಜ್ ವಿನೂತನ ಧರಣಿ

ಮೈಸೂರು: ಬಂಡೀಪುರದಲ್ಲಿ ರಾತ್ರಿ ಸಂಚಾರ ತೆರವು ವಿರೋಧಿಸಿ, ತೆಂಗಿನಕಾಯಿ ಒಡೆಯುವ ಮೂಲಕ ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ವಿನೂತನವಾಗಿ ನಗರದ ಹಾರ್ಡಿಂಜ್ ವೃತ್ತದ ಬಳಿ ಭಾನುವಾರ ಪ್ರತಿಭಟನೆ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಂಡೀಪುರ ರಾತ್ರಿ ಸಂಚಾರ ಪ್ರಾರಂಭ ಮಾಡುವುದಕ್ಕೆ ಹಲವು ಪ್ರಯತ್ನ ಮಾಡಲಾಗುತ್ತಿದೆ. ಇದರ ಹಿಂದೆ ಯಾರಿದ್ದಾರೆ, ಒತ್ತಡ ಹಾಕುತ್ತಿರುವವರು ಯಾರು? ಕರ್ನಾಟಕ ಸರಕಾರ, ಕೇರಳ ಸರಕಾರಕ್ಕೆ ಮಣಿದು ರಾತ್ರಿ ಸಂಚಾರ ನಿಷೇಧ ತೆರವು ಮಾಡಿದರೆ ಅಪಾಯ ಎದುರಾಗಲಿದೆ ಎಂದು ಕಿಡಿಕಾರಿದರು.

ಒಂಬತ್ತು ಮಂದಿ ವಿರುದ್ಧ ಎಫ್‌ಐಆರ್ ದಾಖಲು

ಬಾಲಕನನ್ನು ಮರಕ್ಕೆ ಕಟ್ಟಿ, ಕೆಂಪಿರುವೆ ಬಿಟ್ಟು ಥಳಿತ

ದಾವಣಗೆರೆ: ಚನ್ನಗಿರಿ ತಾಲೂಕಿನ ಅಸ್ತಾಪನಹಳ್ಳಿ ಗ್ರಾಮದಲ್ಲಿ ಹಕ್ಕಿಪಿಕ್ಕಿ ಸಮುದಾಯದ ಬಾಲಕನನ್ನು ಅರೆಬೆತ್ತಲೆಯಾಗಿ ಅಡಕೆ ಮರಕ್ಕೆ ಕಟ್ಟಿ, ಕೆಂಪಿರುವೆ, ಗೊದ್ದಗಳ ಬಿಟ್ಟು ವಿಕೃತವಾಗಿ ಹಲ್ಲೆ ಮಾಡಿರುವ ಅಮಾನವೀಯ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಘಟನೆಗೆ ಸಂಬಂಧಿಸಿ ಭಾನುವಾರ ಮೂವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಗಿಡ ಮೂಲಿಕೆ ಮಾರಾಟ ಮಾಡಿ ಜೀವನ ನಡೆಸುವ ಹಕ್ಕಿಪಿಕ್ಕಿ ಜನಾಂಗದ ಬಾಲಕ ಕಳ್ಳತನ ಮಾಡಿದ್ದಾನೆ ಮತ್ತು ಗ್ರಾಮದಲ್ಲಿ ತೀರಾ ಅಸಭ್ಯವಾಗಿ ವರ್ತಿಸುತ್ತಿದ್ದ ಎಂದು ಆರೋಪಿಸಿ ಬಾಲಕನನ್ನು ಅಡಕೆ ಮರಕ್ಕೆ ಕಟ್ಟಿ ಹಲ್ಲೆ ನಡೆಸಿ ಚಿತ್ರ ಹಿಂಸೆ ನೀಡಿರುವ ವಿಡಿಯೊ ವೈರಲ್ ಆಗಿದೆ.

ಅಡಕೆ ಮರಕ್ಕೆ ಕಟ್ಟಿ ಹಲ್ಲೆ ಜತೆಗೆ ಮರ್ಮಾಂಗಕ್ಕೆ ಕೆಂಪು ಇರುವೆ, ಗೊದ್ದಗಳ ಬಿಟ್ಟು ಹಿಂಸೆ ನೀಡಿದ್ದು, ಬಾಲಕ ನೋವು ತಾಳಲಾರದೆ ಚೀರಾಡುತ್ತಿರುವುದ ನೋಡಿ ವಿಕೃತವಾಗಿ ನಗುವ, ಚೇಷ್ಟೆ ಮಾಡುವುದು ವಿಡಿಯೊದಲ್ಲಿದೆ. 10ರಿಂದ 15 ಮಂದಿಯ ಯುವಕರ ಗುಂಪು ಕೋಲು, ದೊಣ್ಣೆ, ಡ್ರಿಪ್ಪೈಪ್ನಿಂದ ಹಲ್ಲೆ ಮಾಡಿ ಚಿತ್ರಹಿಂಸೆ ನೀಡಿ ವಿಕೃತಿ ಮೆರೆದಿದ್ದಾರೆ. ಕೆಲ ದಿನಗಳ ಹಿಂದೆ ನಡೆದ ಘಟನೆ ಎನ್ನಲಾಗಿದೆ. ಘಟನೆ ಕುರಿತು ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೂವರ ಬಂಧನ

ಹಲ್ಲೆಗೊಳಗಾದ ಬಾಲಕನ ತಾತ ನೀಡಿದ ದೂರಿನ ಆಧಾರದ ಮೇಲೆ ಸುಭಾಷ್ (23), ಲಕ್ಕಿ(21), ದರ್ಶನ್ (22), ಪರಶು (25), ಶಿವದರ್ಶನ್ (23), ಹರೀಶ್ (25), ಪಟ್ಟಿರಾಜು(20), ಭೂಣಿ (18), ಸುಧನ್ ಅಲಿಯಾಸ್ ಮಧುಸೂಧನ್ (32) ವಿರುದ್ಧ ಚನ್ನಗಿರಿ ಪೊಲೀಸರು ಎಫ್ಐಆರ್ ದಾಖಲಿಸಿಕೊಂಡಿದ್ದಾರೆ. ಸದ್ಯ ಮೂವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಉಳಿದವರ ಪತ್ತೆಗೆ ಶೋಧ ನಡೆಸುತ್ತಿದ್ದಾರೆ ಎಂದು ವರದಿಯಾಗಿದೆ.

ಅಮಿತ್ ಶಾ ಲಿಂಗಾಯತ ವಿರೋಧಿ ಅಲ್ಲ, ಯಡಿಯೂರಪ್ಪ ಲಿಂಗಾಯತ ವಿರೋಧಿ

ಮೂರುಸಾವಿರ ಮಠಕ್ಕೆ ಯತ್ನಾಳ ಭೇಟಿ

ಹುಬ್ಬಳ್ಳಿ: ಮೂರುಸಾವಿರ ಮಠಕ್ಕೆ ಬಸನಗೌಡ ಪಾಟೀಲ ಯತ್ನಾಳ ಭೇಟಿ ನೀಡಿ ಶ್ರೀಗಳ ಆರ್ಶಿವಾದ ಪಡೆದರು.

ಬಿಜೆಪಿಯಿಂದ ಉಚ್ಚಾಟನೆ ಗೊಂಡ ನಂತರ ಇದೇ ಮೊದಲ ಬಾರಿಗೆ ಹುಬ್ಬಳ್ಳಿಗೆ ಆಗಮಿಸಿದ ಯತ್ನಾಳ್ ಅವರು , ಗುರುಸಿದ್ಧ ರಾಜಯೋಗೀಂದ್ರ ಶ್ರೀಗಳನ್ನು ಭೇಟಿಮಾಡಿ ಆಶೀರ್ವಾದ ಪಡೆದು ಸನ್ಮಾನ ಸ್ವೀಕರಿದರು. ನಂತರ ಮಠದಲ್ಲಿಯೇ ಪ್ರಸಾದ ಸೇವಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ನಾನು ಮುಖ್ಯಮಂತ್ರಿ ಆಗೇ ಆಗುತ್ತೇನೆ. ನಾನೂ ಸಿಎಂ ಆದರೆ ಮೊಟ್ಟ ಮೊದಲು ಮುಸ್ಲಿಂ ಮೀಸಲಾತಿ ತೆಗೆದು ಹಾಕುತ್ತೇನೆ. ನೀವೇನು ತಮಾಷೆ ಅಂತ ತಿಳಿಬೇಡಿ. ಮುಂದೊಂದು ದಿನ ನಾನು ಖಂಡಿತಾ ಸಿಎಂ ಆಗ್ತೇನೆ ಎಂದು ತಿಳಿಸಿದರು.

ಅಮಿತ್ ಶಾ ಲಿಂಗಾಯತ ವಿರೋಧಿ ಅಲ್ಲ. ಯಡಿಯೂರಪ್ಪ ಲಿಂಗಾಯತ ವಿರೋಧಿ. ಬೊಮ್ಮಾಯಿ ಮುಖ್ಯಮಂತ್ರಿ ವಿಚಾರ ತಿರುಪತಿಯಲ್ಲಿ ಒಪ್ಪಂದ ಆಗಿತ್ತು. ಬಸವರಾಜ ಬೊಮ್ಮಾಯಿ ಸಿಎಂ ಇದ್ದಾಗ, ನನ್ನನ್ನ ಮಂತ್ರಿ ಮಾಡಿ ಎಂದು ನಾನು ಅವರನ್ನ ಕೇಳಿಲ್ಲ. ಬೊಮ್ಮಾಯಿ ಅವರು ಯಾರ ಮುಂದೆಯೂ ಯತ್ನಾಳ ಸಚಿವ ಸ್ಥಾನ ಕೇಳಿದ್ದರು ಎಂದು ಹೇಳಿದರೆ, ನಾನು ರಾಜಕೀಯ ನಿವೃತ್ತಿ ಪಡೆದುಕೊಳ್ಳುವೆ ಎಂದರು.

ಕೇರಳದಲ್ಲಿ ಶತ್ರು ಸಂಹಾರ ಯಾಗ: ಶತ್ರು ಸಂಹಾರದ ಬಗ್ಗೆ ಮಾರ್ಮಿಕವಾಗಿ ಮಾತನಾಡಿದ ಯಾತ್ನಾಳ,

ಹುಬ್ಬಳ್ಳಿ ಮೂರುಸಾವಿರ ಮಠಕ್ಕೆ ಬಸನಗೌಡ ಪಾಟೀಲ ಯತ್ನಾಳ ಭೇಟಿ ನೀಡಿ ಶ್ರೀಗಳ ಆರ್ಶಿವಾದ ಪಡೆದರು.

ಕೇರಳದಲ್ಲಿ ಶತ್ರು ಸಂಹಾರ ಯಾಗ ಮಾಡಿದ್ದರು. ಪೂಜೆ ಆದ ಕೆಲವೇ ದಿನಗಳಲ್ಲಿ ಸಿದ್ದರಾಮಯ್ಯನವರ ಕಾಲು ನೋವು ಸಮಸ್ಯೆ ಕಾಣಿಸಿಕೊಂಡಿತ್ತು. ಕೇರಳದ ಶತ್ರು ಸಂಹಾರ ಯಾಗಕ್ಕೂ ಸಿದ್ದರಾಮಯ್ಯನವರ ಕಾಲಿನ ಸಮಸ್ಯೆಗೂ ಲಿಂಕ್ ಇದೆ. ನನ್ನ ಮೇಲೆಯೂ ಕೂಡ ಕೇರಳದ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಯತ್ನಾಳ ಸಂಹಾರ ಪೂಜೆ ನಡೆದಿದೆ. ಆದರೆ ಅದರಿಂದ ನನಗೆ ಏನೂ ಆಗಲ್ಲ. ಮಾಟ, ಮಂತ್ರ ಪ್ರಭಾವ ಬೀರಲ್ಲ ಅಂತ ನನ್ನ ಜಾತಕದಲ್ಲಿದೆ. ಈ ಹಿಂದೆ ಕೇವಲ ಕೇರಳದಲ್ಲಿ ಅಷ್ಟೇ ಅಲ್ಲ, ಹುಬ್ಬಳ್ಳಿಯಲ್ಲಿಯೂ ಕೂಡ ನನ್ನ ಸಂಹಾರ ಪೂಜೆ ಆಗಿದೆ. ಪೂಜೆ ಮಾಡಿಸಿದ್ದು ಯಾರೆಂಬುದು ನನಗೆ ಗೊತ್ತಿದೆ ಎಂದು ಹುಬ್ಬಳ್ಳಿಯಲ್ಲಿ ಬಸನಗೌಡ ಪಾಟೀಲ ಯತ್ನಾಳ ಶತ್ರು ಸಂಹಾರದ ಬಗ್ಗೆ ಮಾರ್ಮಿಕವಾಗಿ ಹೇಳಿದ್ದಾರೆ.

ಕೊಡುಗು ಜಿಲ್ಲಾ ಕಾಂಗ್ರೆಸ್‌ನಿಂದ ಬಿಜೆಪಿ ವಿರುದ್ಧ ಬೃಹತ್ ಪ್ರತಿಭಟನೆ

ವಿನಯ್ ಸಾವಿನಲ್ಲೂ ಬಿಜೆಪಿ ರಾಜಕಾರಣ

ಮಡಿಕೇರಿ: ವಿನಯ್ ಸೋಮಯ್ಯ ಅವರ ಆತ್ಮಹತ್ಯೆ ಪ್ರಕರಣವನ್ನು ಬಳಸಿಕೊಂಡು ಸಾವಿನಲ್ಲೂ ರಾಜಕಾರಣ ಮಾಡುತ್ತಾ, ಜಿಲ್ಲೆಯ ಶಾಸಕರನ್ನು ಅವಹೇಳನ ಮಾಡುತ್ತಿರುವ ಬಿಜೆಪಿ ವಿರುದ್ಧ ಕೊಡಗು ಜಿಲ್ಲಾ ಕಾಂಗ್ರೆಸ್‌ನಿಂದ ನಗರದಲ್ಲಿ ಭಾನುವಾರ ಬೃಹತ್ ಪ್ರತಿಭಟನೆ ನಡೆಯಿತು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ ಅವರ ನೇತೃತ್ವದಲ್ಲಿ ಪಕ್ಷದ ಪ್ರಮುಖರು ಮತ್ತು ನೂರಾರು ಸಂಖ್ಯೆಯಲ್ಲಿ ಜಿಲ್ಲೆಯ ವಿವಿಧ ಕಡೆಗಳಿಂದ ಆಗಮಿಸಿದ್ದ ಕಾರ್ಯಕರ್ತರು, ನಗರದ ಗಾಂಧಿ ಮೈದಾನದಿಂದ ಜನರಲ್ ತಿಮ್ಮಯ್ಯ ವೃತ್ತದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಇದೇ ವೇಳೆ ಕೊಡಗು-ಮೈಸೂರು ಮಾಜಿ ಸಂಸದ ಪ್ರತಾಪ ಸಿಂಹ ಅವರ ಪ್ರತಿಕೃತಿಯನ್ನು ದಹಿಸಿ ತಮ್ಮ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಶಾಸಕ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ, ಡಾ. ಮಂತರ್ ಗೌಡ ಪರ ಜೈಕಾರ ಘೋಷಣೆ ಕೂಗಿದ ಪ್ರತಿಭಟನಾಕಾರರು ಆಕ್ರೋಶ ಹೊರಗೆಡವಿದರು.

ಮಾಜಿ ಎಂಎಲ್‌ಸಿ ಅರುಣ್ ಮಾಚಯ್ಯ ಮಾತನಾಡಿ, ಬಿಜೆಪಿಗರು ಸಾವಿನ ವ್ಯಾಪಾರಿಗಳೆಂದು ಟೀಕಿಸಿದರು. ಪ್ರತಿಭಟನೆಯಲ್ಲಿ ಕುಶಾಲನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ.ಶಶಿಧರ್, ಮುಖಂಡರಾದ ಸಂಕೇತ್ ಪೂವಯ್ಯ, ಕೊಲ್ಯದ ಗಿರೀಶ್, ಸುಜು ತಿಮ್ಮಯ್ಯ, ಎಸ್.ಐ. ಮುನೀರ್ ಅಹಮ್ಮದ್, ಹಂಸ, ಇಸ್ಮಾಯಿಲ್, ಬಿ.ಎಸ್.ತಮ್ಮಯ್ಯ, ನೆರವಂಡ ಉಮೇಶ್ ಹಾಗೂ ಪಕ್ಷದ ನೂರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ ಅವರ ನೇತೃತ್ವದಲ್ಲಿ ಪಕ್ಷದ ಪ್ರಮುಖರು ಮತ್ತು ನೂರಾರು ಸಂಖ್ಯೆಯಲ್ಲಿ ಜಿಲ್ಲೆಯ ವಿವಿಧ ಕಡೆಗಳಿಂದ ಆಗಮಿಸಿದ್ದ ಕಾರ್ಯಕರ್ತರು, ನಗರದ ಗಾಂಧಿ ಮೈದಾನದಿಂದ ಜನರಲ್ ತಿಮ್ಮಯ್ಯ ವೃತ್ತದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು.

ವಿನಯ್ ಸೋಮಯ್ಯ ಅವರ ಸಾವಿಗೆ ಶ್ರದ್ಧಾಂಜಲಿ ಸಲ್ಲಿಸುವುದನ್ನು ಬಿಟ್ಟು ಅವರ ಸಾವಿನಲ್ಲೂ ಬಿಜೆಪಿ ರಾಜಕೀಯ ಮಾಡುತ್ತಾ ಪ್ರತಿಭಟನೆ ನಡೆಸುತ್ತಿದೆ. ಇಂತಹ ಯಾವುದೇ ಆರೋಪಗಳಿಗೆ ಕಾಂಗ್ರೆಸ್ ಎದೆ ಗುಂದುವುದಿಲ್ಲ.

ವೀಣಾ ಅಚ್ಚಯ್ಯ, ಮಾಜಿ ಎಂಎಲ್‌ಸಿ

ಸಜ್ಜನಿಕೆ ಇಲ್ಲದವರು ಬಿಜೆಪಿಗರು

ಗಾಂಧಿ ಮೈದಾನದ ಬಹಿರಂಗ ಸಭೆಯಲ್ಲಿ ಪಾಲ್ಗೊಂಡ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ, ಹಿಂದೂ ಧರ್ಮ, ಸಂಸ್ಕೃತಿಗಳ ಸಂರಕ್ಷಣೆ ಬಗ್ಗೆ ಮಾತನಾಡುವ ಬಿಜೆಪಿಗರು, ವಿನಯ್ ಸೋಮಯ್ಯ ಮೃತದೇಹವನ್ನು ತಡೆದು, ಅವರ ಕುಟುಂಬಸ್ಥರಿಗೆ ಕೊನೆಯ ಸಂಸ್ಕಾರಗಳನ್ನು ನಡೆಸಲು ಅಡ್ಡಿ ಮಾಡಿದ್ದಾರೆ. ಮೃತದೇಹವನ್ನು ಸಾಗಿಸಲು ಅವಕಾಶ ಒದಗಿಸುವ ಸಜ್ಜನಿಕೆ ಇಲ್ಲದವರು ಬಿಜೆಪಿಗರು. ಬಿಜೆಪಿ ರಾಜ್ಯ ನಾಯಕರಿಗೆ ಮೃತಪಟ್ಟ ವ್ಯಕ್ತಿಯ ಹೆಸರೇ ತಿಳಿದಿಲ್ಲ. ಅಂತ್ಯ ಸಂಸ್ಕಾರದ ವೇಳೆ ಕೆಲವೇ ಕೆಲ ಬಿಜೆಪಿ ಮುಖಂಡರು ಬಿಟ್ಟರೆ ಬೇರೆ ಯಾರೂ ಇರಲಿಲ್ಲ ಎಂದು ಹೇಳಿದರು.

ತಮಿಳುನಾಡಿನಲ್ಲಿ ಇವರದೇ ಮಿತ್ರ ಪಕ್ಷ ಡಿಎಂಕೆ ಆಡಳಿತದಲ್ಲಿದೆ: ಬೊಮ್ಮಾಯಿ

ಕಾಂಗ್ರೆಸ್ ಮೇಕೆದಾಟು ಸಮಸ್ಯೆ ಬಗೆಹರಿಸಲಿ

ಹಾವೇರಿ: ಮೇಕೆದಾಟು ಯೋಜನೆ ಜಾರಿ ಮಾಡುವುದು ರಾಜ್ಯ ಕಾಂಗ್ರೆಸ್ ಸರಕಾರಕ್ಕೆ ಕೇವಲ ಐದು ನಿಮಿಷದ ಕೆಲಸ. ಆದರೆ ಅದನ್ನು ಜಾರಿ ಮಾಡುವ ಇಚ್ಛಾಶಕ್ತಿ ರಾಜ್ಯ ಸರಕಾರಕ್ಕೆ ಇಲ್ಲ ಎಂದು ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರಕಾರವಿದೆ. ತಮಿಳುನಾಡಿನಲ್ಲಿ ಇವರದೇ ಮಿತ್ರ ಪಕ್ಷ

ಡಿಎಂಕೆ ಆಡಳಿತದಲ್ಲಿದೆ. ಇವರು ಮನಸ್ಸು ಮಾಡಿದರೆ ಐದೇ ಐದು ನಿಮಿಷದಲ್ಲಿ ಮೇಕೆದಾಟು ಯೋಜನೆ ಜಾರಿ ಸಮಸ್ಯೆ ಬಗೆಹರಿಸಬಹುದು ಎಂದರು.

ನಾವು ಮೇಕೆದಾಟು ಯೋಜನೆಗೆ ಒಪ್ಪಿಗೆ ಪಡೆಯುತ್ತೇವೆ. ಬಿಜೆಪಿಯವರು ಎತ್ತಿನಹೊಳೆ ಯೋಜನೆಗೆ ಒಪ್ಪಿಗೆ ನೀಡುತ್ತಾರಾ ಎಂಬ ಡಿಸಿಎಂ ಡಿ.ಕೆ. ಶಿವಕುಮಾರ್ ಸವಾಲಿಗೆ ಉತ್ತರಿಸಿದ ಅವರು, ಈಗಾಗಲೇ ಕಳಸಾ ಬಂಡೂರಿ ನಾಲೆ ಯೋಜನೆಗೆ ಒಪ್ಪಿಗೆ ನೀಡಿದ್ದೇವೆ. ಇನ್ನೇನು ಕೆಲವೇ ದಿನಗಳಲ್ಲಿ ಪರಿಸರ ಇಲಾಖೆ ಸಹ ಒಪ್ಪಿಗೆ ನೀಡಲಿದೆ. ಎತ್ತಿನಹೊಳೆ ಯೋಜನೆಗೆ ಅಂತಾರಾಜ್ಯ ವ್ಯಾಜ್ಯಕ್ಕೆ ಬರುವುದೇ ಇಲ್ಲ ಎಂದು ತಿಳಿಸಿದರು.

ವಿಶ್ವವಾಣಿ ಕುಟುಂಬದ ಸದಸ್ಯರಾಗಲು ಬಯಸುತ್ತೀರಾ
ಇಲ್ಲಿದೆ ಅವಕಾಶ

ಮುಖ್ಯ ಉಪಸಂಪಾದಕ
- ದಿನಪತ್ರಿಕೆಯಲ್ಲಿ 8-10 ವರ್ಷಗಳ ಅನುಭವ. ಎಲ್ಲ ವಿಭಾಗಗಳ ಪರಿಣತಿ.
- ಉತ್ತಮ ಭಾಷಾಂತರ ಜ್ಞಾನ, ನವಮಾಧ್ಯಮದ ಕಲಿಕಾಸಕ್ತಿ

ಹಿರಿಯ ಉಪ ಸಂಪಾದಕ
- ದಿನಪತ್ರಿಕೆಯಲ್ಲಿ 5-7 ವರ್ಷಗಳ ಅನುಭವ. ಎಲ್ಲ ವಿಭಾಗಗಳ ಪರಿಣತಿ.
- ಪ್ರಚಲಿತ ವಿದ್ಯಮಾನಗಳ ಜ್ಞಾನ, ಉತ್ತಮ ಭಾಷಾ ಪ್ರೌಢಿಮೆ, ವಿನ್ಯಾಸ ಕೌಶಲ್ಯ.

ಉಪ ಸಂಪಾದಕ
- ದಿನಪತ್ರಿಕೆಯಲ್ಲಿ 2-3 ವರ್ಷಗಳ ಸುದ್ದಿ ಮನೆ ಅನುಭವ.
- ಪ್ರಚಲಿತ ವಿದ್ಯಮಾನಗಳ ಜ್ಞಾನ, ಭಾಷಾ ಪ್ರೌಢಿಮೆ, ಪುಟ ವಿನ್ಯಾಸ ಪರಿಣತಿ.

ಟ್ರೈನಿ ಉಪಸಂಪಾದಕ
- ಕನ್ನಡದಲ್ಲಿ ಸ್ಪಷ್ಟವಾಗಿ, ತಪ್ಪಿಲ್ಲದೆ ಬರೆಯುವ ಪರಿಣತಿ.
- ಪ್ರಚಲಿತ ವಿದ್ಯಮಾನಗಳ ತಿಳಿವಳಿಕೆ. ಕಲಿಯುವ ಆಸಕ್ತಿ.

ಆಸಕ್ತರು,
ಏಪ್ರಿಲ್ 15ರೊಳಗಾಗಿ ಕೆಳಗೆ ಸೂಚಿಸಿದ ಸಂಪರ್ಕ ಸಂಖ್ಯೆಗೆ
ವಾಟ್ಸ್ಆ್ಯಪ್ ಅಥವಾ ಇಮೇಲ್‌ಗೆ ಅರ್ಜಿಯನ್ನು ಕಳಿಸಬಹುದು

ವಿಶ್ವವಾಣಿ
hr@vishwavani.news
63623 93988

ವಿಶ್ವವಾಣಿ

ಸಂಪಾದಕೀಯ

ನಂಬಿದ ಗುರುವೇ ನೆತ್ತರು ಹೀರಿದರೆ?

ಇದು ನಿಜಕ್ಕೂ ಆಘಾತಕಾರಿ ಬೆಳವಣಿಗೆ. ಬ್ಯಾಡ್ಮಿಂಟನ್ ತರಬೇತಿಗೆ ಬರುತ್ತಿದ್ದ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ್ದು ಮಾತ್ರವಲ್ಲದೆ, ಆಕೆಯ ನಗ್ನಫೋಟೋ ಮತ್ತು ವಿಡಿಯೋಗಳನ್ನು ಚಿತ್ರೀಕರಿಸಿಕೊಂಡಿದ್ದ ತರಬೇತುದಾರನೊಬ್ಬನನ್ನು ಬೆಂಗಳೂರಿನ ಹುಳಿಮಾವು ಠಾಣೆಯ ಪೊಲೀಸರು ಬಂಧಿಸಿ, ಆತನ ವಿರುದ್ಧ ಪೋಕ್ಸೊ ಕಾಯ್ದೆಯ ಅನ್ವಯ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಆರೋಪಿಯು ಸದರಿ ತರಬೇತಿ ಕೇಂದ್ರದಲ್ಲಿ ಮತ್ತಷ್ಟು ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಘೋರ ಸಂಗತಿಯೂ ಬಯಲಾಗಿದೆ. 'ಮಾತೃದೇವೋಭವ, ಪಿತೃದೇವೋಭವ' ಎಂದಿರುವ ನಮ್ಮ ಸಂಸ್ಕೃತಿಯು ಈ ಆಶಯವನ್ನು ಅಷ್ಟಕ್ಕೇ ನಿಲ್ಲಿಸದೆ 'ಆಚಾರ್ಯದೇವೋಭವ, ಅತಿಥಿ ದೇವೋಭವ' ಎಂದೂ ಹೇಳಿದೆ. ಅಂದರೆ, ತಂದೆ-ತಾಯಿಯರನ್ನು ಮಾತ್ರವಲ್ಲದೆ ವಿದ್ಯೆ ಹೇಳಿಕೊಡುವ ಗುರುಗಳನ್ನು ಹಾಗೂ ಮನೆಗೆ ಬರುವ ಅತಿಥಿಗಳನ್ನೂ ದೇವರ ಸ್ಥಾನದಲ್ಲಿ ಕಲ್ಪಿಸಿಕೊಳ್ಳುವ ಸಂಸ್ಕೃತಿ ಮತ್ತು ಪರಂಪರೆ ನಮ್ಮದು. ಅಲ್ಲಿಗೆ, ಅಕ್ಷರ ಹೇಳಿಕೊಡುವ ಗುರುವಾಗಿರಲಿ, ಆಟದ ಕೌಶಲ ಹೇಳಿಕೊಡುವ ತರಬೇತುದಾರನಾಗಿರಲಿ, ಕಲಿಕೆಗೆ ಬಂದಿರುವವರ ಪಾಲಿಗೆ ಆತ ದೇವರೇ. ಇದು ಬಹುತೇಕರ ಗ್ರಹಿಕೆಯೂ ಹೌದು. ಆದರೆ, ಮೇಲೆ ಉಲ್ಲೇಖಿಸಿರುವ ಪ್ರಕರಣದಲ್ಲಿ ಕಾಣವುದು ಗುರುವೆಂಬ ಗಿಳಿಯಲ್ಲ, ಅದು ಹಸಿಮಾಂಸಕ್ಕೆ ಹಪಹಪಿಸುವ ರಣಹದ್ದು. ಇಂಥ ದುರ್ಮಾರ್ಗಿಗಳು ಆಯಕಟ್ಟಿನ ಜಾಗಗಳನ್ನು ಅಮರಿಕೊಂಡಿದ್ದರೆ, ಪೋಷಕರು ಅದಿನ್ಯಾವ ನಂಬಿಕೆಯಿಟ್ಟು ತಮ್ಮ ಮನೆಯ ಹೆಣ್ಣು ಮಕ್ಕಳನ್ನು ಇವರಲ್ಲಿಗೆ ಕಲಿಕೆಗೋ ತರಬೇತಿಗೋ ಕಳಿಸಿಯಾರು? ಶಾಲಾ ಕಾಲೇಜುಗಳಲ್ಲಿ ನೀತಿಪಾಠಗಳ ಬೋಧನೆಗೆ ಒತ್ತು ನೀಡದಿರುವುದೇ ಇಂಥ ಅಪಸವ್ಯಗಳ ಹೆಚ್ಚಳಕ್ಕೆ ಕಾರಣವಾಗುತ್ತಿದೆಯೇ? ಇಂಥ ವಿಕೃತಿಗಳ ದಮನಕ್ಕೆ ಇನ್ನಾವುದಾದರೂ ಮಾರ್ಗೋಪಾಯವಿದೆಯೇ? ಎಂಬೆಲ್ಲ ಪ್ರಶ್ನೆಗಳನ್ನು ಸಂಬಂಧಪಟ್ಟವರು ಕೇಳಿಕೊಳ್ಳಬೇಕಾದ ಕಾಲವೀಗ ಸನ್ನಿಹಿತವಾಗಿದೆ. ಕಾರಣ, ಬೆಳಕಿಗೇ ಬರದ ಇಂಥ ಇನ್ನೆಷ್ಟು ಪ್ರಕರಣಗಳಿವೆಯೋ ಏನೋ? ಅವಕ್ಕೆ ಬಲಿಯಾದ ಕಂದಮ್ಮಗಳು ಅದೆಷ್ಟು ಮೌನವಾಗಿ ರೋದಿಸುತ್ತಿವೆಯೋ ಏನೋ? ದೆಹಲಿಯ ನಿರ್ಭಯಾ ಪ್ರಕರಣದ ತರುವಾಯ ದೇಶವ್ಯಾಪಿ ವ್ಯಕ್ತವಾದ ಪ್ರತಿಭಟನೆಯನ್ನು ಕಂಡ ನಂತರವೂ ಇಂಥ ದುರುಳರ ಅಟ್ಟಹಾಸ ನಿಂತಿಲ್ಲ ಎಂದರೆ ತಪ್ಪಾಗುತ್ತಿರುವುದೆಲ್ಲಿ...?

ಸೊಂಪಾದಕೀಯ

ಪ್ರಾಣ ಬಿಟ್ಟೇವು, ಜಾತಿ ಬಿಡೆವು

ನಮ್ಮ ಸಮಾಜದಲ್ಲಿ ಜಾತಿ ಅನ್ನೋದು ಕೆಲವು ಜನರ ಮೇಲೆ ಎಷ್ಟರ ಮಟ್ಟಿಗೆ ಪ್ರಭಾವ ಬೀರುತ್ತದೆ ಎಂಬುದರ ಬಗ್ಗೆ ಹೊಸದಾಗಿ ಏನೂ ಹೇಳಬೇಕಾಗಿಲ್ಲ. ಆದರೆ, 'ಪ್ರಾಣ ಬಿಟ್ಟೇವು, ಜಾತಿ ಬಿಡೆವು' ಅನ್ನೋ ಕೆಲವರು, ಸಾವಿನ ವಿಷಯದಲ್ಲೂ ಸಣ್ಣತನ ತೋರಿರುವ ಇತ್ತೀಚಿನ ಎರಡು ಉದಾಹರಣೆಗಳನ್ನು ನೋಡಿದಾಗ ಮತ್ತೆ ಮತ್ತೆ ಜಾತಿ ಭೂತ, ಮೂಢನಂಬಿಕೆಗಳ ಭೂತ ನೆನಪಾಗೋದು ಸಹಜ. ಊರೊಂದರಲ್ಲಿ ಹೆಂಗಸೊಬ್ಬರು ಸತ್ತಾಗ, ಆಕೆಯ ಹೆಣ್ಣುಮಕ್ಕಳು ಬೇರೆ ಜಾತಿಯವರನ್ನು ಮದುವೆ ಆಗಿದ್ದಾರೆ ಅನ್ನೋ ಕಾರಣಕ್ಕೆ ಸಂಬಂಧಿಕರು ಯಾರೂ ತಿರುಗಿ ನೋಡಲಿಲ್ಲವಂತೆ. ಕೊನೆಗೆ, ಗ್ರಾಮಸ್ಥರೇ ಮುಂದೆ ನಿಂತು ಅಂತಿಮ ಕಾರ್ಯ ಮಾಡಿದ್ದಾರೆ. ಹಾಗಾಗಿ ನಿಜವಾದ ಸಂಬಂಧಿಕರು ಯಾರು ಅನ್ನೋ ಪ್ರಶ್ನೆ ಇಂಥ ಸಂದರ್ಭದಲ್ಲಿ ಸಹಜ. ಅದಕ್ಕೆ ಉತ್ತರವೂ ಸುಲಭ. ಇನ್ನೊಂದು ಅಮಾನವೀಯ ಘಟನೆಯಲ್ಲಿ ಜನ ತಮ್ಮ ಮೂಢನಂಬಿಕೆಗಳನ್ನು ಯಾವ ಲೆವೆಲ್ಲಿಗೆ ಬೇಕಾದ್ರೂ ತಗೊಂಡ್ ಹೋಗ್ತಾರೆ ಅನ್ನೋದು ಪ್ರೂವ್ ಆಗಿದೆ. ತೊನ್ನು ಸಮಸ್ಯೆ ಇದ್ದ ಹೆಂಗಸೊಬ್ಬರು ಸತ್ತು, ಅವರನ್ನು ಊರಲ್ಲಿ ಹೂಳಲಾಗಿತ್ತು. ಆದರೆ ಆ ಊರಿನ ಸುತ್ತಮುತ್ತ ಮಳೆ ಬಂದರೂ, ಆ ಊರಲ್ಲಿ ಮಾತ್ರ ಮಳೆ ಬಾರದೇ ಇದ್ದಾಗ, ಸೋ ಕಾಲ್ಡ್ ನಾಗರಿಕ ಸಮಾಜದ ಜನ, 'ತೊನ್ನು ಬಂದವರನ್ನು ಸುಟ್ಟು ಹಾಕಬೇಕು, ಅವರನ್ನು ಹೂತಿದ್ದಕ್ಕೇ ಊರಿಗೆ ಬರ ಬಂದಿದೆ' ಎಂದು ಹೇಳಿ ಹೂತಿದ್ದ ಶವವನ್ನು ಹೊರತೆಗೆದು ಸುಟ್ಟು ಹಾಕಿದ್ದಾರೆ. ಇಂಥ ಮೂಢನಂಬಿಕೆಗಳನ್ನು ನೋಡಿಯೇ ದೊಡ್ಡವರು 'ಹುಟ್ಟು ಗುಣ ಸುಟ್ಟರೂ ಹೋಗಲ್ಲ' ಅತ ಹೇಳಿದ್ದರೋ ಏನೋ. ಆದರೆ ಈ ಕೇಸಿನಲ್ಲಿ ಹುಟ್ಟುವ ಮಗುವಿನ ಕಾಲ್ಗುಣ ನೋಡುವವರು ಒಂದು ಕಡೆಯಾದರೆ ಸತ್ತವರ ಕಾಲ್ಗುಣವನ್ನೂ ಬಿಡದವರು ಇನ್ನೊಂದು ಕಡೆ. ಒಟ್ಟಿನಲ್ಲಿ, ಇವರ ಹುಟ್ಟುಗುಣ, ಸತ್ತರೂ ಹೋಗಲ್ಲ, ಹೂತಿದ್ದ ಹೆಣವನ್ನು ಹೊರತೆಗೆದು ಸುಟ್ಟರೂ ಹೋಗಲ್ಲ ಅಂತ ಜನ ಮಾತಾಡಿಕೊಳ್ಳುವ ಹಾಗಾಗಿರೋದಂತೂ ನಿಜ. ಈ ಮೂಲಕ ಮೂಢನಂಬಿಕೆಯ ಜನ, ಗಾದೆಮಾತನ್ನು ಅಕ್ಷರಶಃ ನಿಜ ಮಾಡಿದ್ದಾರೆ. ಬದುಕಿರುವವರನ್ನು ಬದುಕೋಕೆ ಬಿಡದ ಈ ಮೂಢನಂಬಿಕೆಗಳ ಸರದಾರರು, ಈಗ ಸತ್ತು ಹೆಣವಾದವರನ್ನೂ ಹೆಣಗಾಡಿಸುತ್ತಿರೋದು ಮಾತ್ರ ಸತ್ಯ.

ಸಂಪಾದಕರ ಸದ್ಯಶೋಧನೆ

ಗಂಡನನ್ನು ಹೇಗೆ ಕರೆಯುವುದು?

ಕನ್ನಡದಲ್ಲಿ ಹೆಂಡತಿ ತನ್ನ ಗಂಡನನ್ನು ಏನೇನು ಪದಗಳನ್ನು ಬಳಸಿ ಕರೆಯುತ್ತಾಳೆ ಎಂಬ ಪ್ರಶ್ನೆಯನ್ನು 'ಕೋರಾ' ವೆಬ್‌ಸೈಟಿನಲ್ಲಿ ಯಾರೋ ಕೇಳಿದ್ದರು. ಅದಕ್ಕೆ ಒಬ್ಬರು ಹೀಗೆ ಉತ್ತರಿಸಿದ್ದರು- ''ಮನೆಯ ಹಿರಿಯರ ಮುಂದೆ ಅವರು/ಇವರು ಅಂತ, ಮಕ್ಕಳೊಂದಿಗೆ ಮಾತಾಡುವಾಗ ನಿಮ್ಮ ಅಪ್ಪ/ಚಿಕ್ಕಪ್ಪ, ಸೋದರಮಾವ ಅಂತ, ಸಂಬಂಧಿಗಳೊಡನೆ 'ನಮ್ಮ ಯಜಮಾನರು' ಎಂದು ಸಂಬೋಧಿಸುವುದು ವಾಡಿಕೆ. ನಮ್ಮ ಯಜಮಾನರನ್ನು ಕರೆಯಬೇಕೆಂದರೆ ರೀ ಎಂದು ಅಂತಾರೆ. ಕಟ್ಟುನಿಟ್ಟಾದ ಹಾಗೂ ಸಾಂಪ್ರದಾಯಿಕವಾದ ಕುಟುಂಬದಲ್ಲಿ ಬೆಳೆದವರು ತಮ್ಮ ಮನೆಯಲ್ಲಿ ಎಲ್ಲ ಹೆಂಗಸರು ಅವರವರ ಗಂಡನನ್ನ 'ರೀ' ಎಂದೇ ಕರೆಯುತ್ತಾರೆ. ಗಂಡನ ಹೆಸರು ಹೆಂಡತಿ ಬಾಯಲ್ಲಿ ಬರಬಾರದೆಂಬ ಸಂಪ್ರದಾಯವು ಇದೆ. ಅದಲ್ಲದೇ ಗಂಡ ಹೆಂಡತಿಗಿಂತ ವಯಸ್ಸಿನಲ್ಲಿ ದೊಡ್ಡವರಿರುತ್ತಾರೆ. ಹೀಗಾಗಿ ಅವರನ್ನು ಬಹುವಚನ ಕೊಟ್ಟು ಮಾತಾಡಿಸುವುದು ಸಂಪ್ರದಾಯ ಮತ್ತು ರೂಢಿ. ಅದೇ ಯಜಮಾನರು ಹೆಂಡತಿಯನ್ನು 'ಲೇಯ್' ಎಂದು ಹೆಸರು ಹೇಳದೇ ಕರೆಯುವುದುಂಟು''. ಇನ್ನೊಬ್ಬರು ಈ ಪ್ರಶ್ನೆಗೆ ಈ ರೀತಿ ಉತ್ತರಿಸಿದ್ದರು- ''ಇದು ಒಳ್ಳೆ ಪ್ರಶ್ನೆ ಆಯ್ತಲ್ಲ ಮಾರಾಯ್ರೆ, ಅವರವರ ಹೆಂಡತಿಯನ್ನು ಅವರು ಹೇಗಾದರೂ ಕರೆದುಕೊಳ್ಳಲಿ ಬಿಡಿ, ನಾವ್ಯಾಕೆ ತಲೆಬಿಸಿ ಮಾಡಿಕೊಳ್ಳಬೇಕು? ಆದರೂ ಗಂಡಂದಿರು ಹೆಂಡತಿಯರನ್ನು ಕರೆಯುವಷ್ಟು ಭಿನ್ನವಾಗಿ, ಸಲಗೆಯಿಂದ, ಪ್ರೀತಿಯಿಂದ ಬೇರೆ ಯಾವ ಸಂಬಂಧಗಳ ನಡುವೆಯೂ ಸಂಬೋಧನೆಗಳು ಇರುವುದಿಲ್ಲ ಎನ್ನುವುದು ಮಾತ್ರ ಸತ್ಯ. ಕೆಲವರು 'ಲೇ' ಅಂತಾರೆ. ಕೆಲವರು 'ಇವ್ಳೇ' ಅಂತಾರೆ. ಮತ್ತೆ ಕೆಲವರು 'ರೀ' ಅನ್ನಬಹುದು. ಹೆಸರು ಹಿಡಿದು ಕರೆಯುವವರು ಮಾತ್ರ ಜಾಸ್ತಿ ಇರುವುದನ್ನು ಗಮನಿಸಬಹುದು. ಹೆಸರುಗಳನ್ನು ಸಂಕ್ಷಿಪ್ತಗೊಳಿಸಿ ಕರೆಯುವವರು ಅದಕ್ಕಿಂತ ಸ್ವಲ್ಪ ಜಾಸ್ತಿ. ಶಾರದಾ ಅಂತ ಇದ್ದರೆ ಶಾರಿ ಅನ್ನೋರು, ಪಾರ್ವತಿ ಅಂತ ಇದ್ರೆ ಪಾರಿ ಅನ್ನೋರು, ಪ್ರಮೀಳಾ ಅಂತ ಇದ್ರೆ ಪ್ರಮ್ಮಿ ಎನ್ನಬಹುದು, ಹೀಗೆ ಶಾರ್ಟ್ ಮಾಡಿ ಕರೆಯುವವರು ಮಾತ್ರ ಜಾಸ್ತಿ ಇರ್ತಾರೆ. ಇತ್ತೀಚಿನ ಪೀಳಿಗೆಯವರು ಮದುವೆಯಾದ ಹೊಸತರಲ್ಲಿ ಹೆಂಡತಿಯನ್ನು ಚಿನ್ನು, ಮುನ್ನು, ಪುಟ್ಟಿ, ಬೇಬಿ ಇತ್ಯಾದಿ ಕರೆಯುತ್ತಾರೆ. ಹೇಗೆ ಕರೆದರೂ ಹೆಂಡತಿ ಹೆಂಡತಿಯೇ ತಾನೇ..''. ಈ ಪ್ರಶ್ನೆಗೆ ಲೀಲಾದೇವಿ ಎನ್ನುವವರು ಉತ್ತರಿಸಿದ್ದು ಹೀಗೆ- ''ನಾನು ಕಂಡಂತೆ ಹೆಂಡತಿಯನ್ನು ಹೆಸರು ಅಥವಾ ಕಿರುಹೆಸರಿಂದ ಕರೆಯುವುದು ಸಾಮಾನ್ಯ. ಕೆಲ ಗಂಡಂದಿರು ಪ್ರೀತಿಯಿಂದ 'ಚಿನ್ನ, ಪುಟ್ಟಿ, ರಾಣಿ' ಎಂದು ಕರೆಯುತ್ತಾರೆ. ಕೆಲ ಹಿರಿಯರು 'ಏನಮ್ಮ/ನೋಡಮ್ಮ' ಅಂತಾರೆ. ಆದರೆ ನಮ್ಮ ಯಜಮಾನರಿಗೆ ಈ ವಿಧಾನಗಳು ಅನ್ವಯಿಸಲ್ಲ. ನನ್ನ ಹೆಸರು ಲೀಲಾದೇವಿ. ಮನೆಯವರೆಲ್ಲ ಸಾಮಾನ್ಯವಾಗಿ ನನ್ನನ್ನು 'ಲೀಲಾ' ಎಂದು ಕರೆಯುತ್ತಾರೆ. ನನ್ನ ಯಜಮಾನರ ವಿಧಾನ ಮಾತ್ರ ಬೇರೆ. ರಾಯರು ನನ್ನ ಕಳೆದ ಇಪ್ಪತ್ತೊಂದು ವರುಷಗಳ ವೈವಾಹಿಕ ಜೀವನದಲ್ಲಿ ಸದಾ 'ಲೇ' ಎಂದೇ ಕರೆದಿದ್ದಾರೆ. ಪ್ರಣಯತನ, ಮೋಹ, ವಾತ್ಸಲ್ಯ ತೋರುವಾಗ 'ಲೇ ರಾಣಿ' ಅಂತಾರೆ. ಕೆಲವೊಮ್ಮೆ ಸಿಟ್ಟಿಗೆದ್ದು ಏನ್ರೀ? ನನ್ನ ಹೆಸರಾದರು ನೆನಪುಂಟಾ? ಎಂದು ಕೇಳಿದ್ದೇನೆ. 'ಲೇ, ಟೆನ್ಶನ್ ತಗೋಬೇಡ ಕಣೆ ಲೇ ಎಂದು ಉತ್ತರಿಸಿ ನಗುತ್ತ ಹೋಗುತ್ತಾರೆ''. ಇತ್ತೀಚಿನ ದಿನಗಳಲ್ಲಿ ಹೆಂಡತಿ ತನ್ನ ಗಂಡನನ್ನು ಏಕವಚನದಲ್ಲಿ ಸಂಬೋಧಿಸುವುದನ್ನು ಗಮನಿಸಬಹುದು. ಕೆಲವರಂತೂ ಗಂಡನನ್ನು ಹೋಗಲೋ, ಬಾರಲೋ ಅಂತ ಕರೆಯುತ್ತಾರೆ. ಇದು ಅಗೌರವ ಸೂಚಕವಲ್ಲ. ಅವರ ಪಾಲಿಗೆ ಇದು ಸಲುಗೆ. ಗಂಡನನ್ನು ಸರೀಕನಂತೆ, ಆಪ್ತವಾಗಿ ಕರೆಯುವುದರ ಸಂಕೇತ. ಗಂಡ ಹೆಂಡತಿಯ ಹೆಸರನ್ನು ಸಂಬೋಧಿಸುವುದಾದರೆ, ಹೆಂಡತಿಯೇಕೆ ಗಂಡನ ಹೆಸರು ಹೇಳಿ ಕರೆಯಬಾರದು ಎಂಬುದು ವಾದ. ಇದರಲ್ಲಿ ತಪ್ಪೇನೂ ಇಲ್ಲ. ಇದು ಗಂಡ-ಹೆಂಡಿರ ನಡುವಿನ ಒಡಂಬಡಿಕೆ. ಗಂಡನ ಜತೆ ಆತನ ತಂದೆ-ತಾಯಿ ವಾಸವಾಗಿರುವ ಮನೆಯಲ್ಲಿ ಹೆಂಡತಿ ತನ್ನ ಗಂಡನ ಹೆಸರು ಹೇಳಿ ಸಂಬೋಧಿಸುವ ಧೈರ್ಯ ತೋರದಿರಬಹುದು. ಆಗ 'ರೀ' ಸಹಾಯಕಾರಿ. ಇನ್ನು ಕೆಲವರು ಗಂಡನನ್ನು 'ಏನೂಂದ್ರೆ' ಎನ್ನುವುದನ್ನು ಕೇಳಿದ್ದೇನೆ.

ಕೃಷ್ಣ ಭೈರೇಗೌಡ ಅಂದ್ರೆ ರಾಹುಲ್‌ಗೇಕೆ ಇಷ್ಟ?

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ

vveditoped@gmail.com

ಕಳೆದ ವಾರ ದಿಲ್ಲಿಗೆ ಹೋದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮಾಧಾನದಿಂದಲೇ ವಾಪಸ್ಸಾದರು. ಕಾರಣ? ರಾಹುಲ್ ಗಾಂಧಿ ಅವರು ಸಿದ್ದರಾಮಯ್ಯ ನಾಯಕತ್ವದ ಪರವಾಗಿ ಮಾತನಾಡಿದರೆ, ಸೋನಿಯಾ ಗಾಂಧಿಯವರು 'ಸ್ವಲ್ಪ ಕಾಲ ತಾಳ್ಮೆಯಿಂದಿರಿ' ಅಂತ ಡಿ.ಕೆ.ಶಿವಕುಮಾರ್ ಅವರಿಗೆ ಸಂದೇಶ ತಲುಪಿಸಿದ್ದಾರಂತೆ. ಉಳಿದಂತೆ ಸಂಪುಟ ಪುನರ್ ರಚನೆಯಿಂದ ಹಿಡಿದು ಕೆಪಿಸಿಸಿ ಅಧ್ಯಕ್ಷರ ಬದಲಾವಣೆಯ ತನಕ ಯಾವುದಕ್ಕೂ ರಾಹುಲ್ ಗಾಂಧಿಯ ವರೇ ಆಗಲಿ, ಖರ್ಗೆ, ವೇಣುಗೋಪಾಲ್ ಅವರೇ ಆಗಲಿ ಉತ್ಸುಕತೆ ತೋರಿಸಿಲ್ಲ. ಕಾರಣ? ಕರ್ನಾಟಕದಲ್ಲಿರುವ ಪಕ್ಷದ ಸರಕಾರವನ್ನು ಸ್ಥಿರವಾಗಿಸುವುದು ಹೇಗೆ ಎಂಬುದೇ ಈ ಎಲ್ಲರ ಚಿಂತೆ.

ಹೀಗಾಗಿ ಸದ್ಯದ ಪರಿಸ್ಥಿತಿ ಹಾಗೇ ಮುಂದುವರಿಯಲಿ. ಅಗತ್ಯ ಬಿದ್ದಾಗ ಸಣ್ಣ ಪುಟ್ಟ ಬದಲಾವಣೆ ಮಾಡಿಕೊಂಡರಾಯಿತು ಎಂಬುದು ಅವರ ಎಣಿಕೆ. ಇದ್ದುದರಲ್ಲೇ ಹನಿಟ್ರ್ಯಾಪ್ ವಿವಾದದ ಬಗ್ಗೆ ಮಾತನಾಡುವಾಗ, 'ಅದನ್ನು ಕೂಲಾಗಿ ಬಗೆಹರಿಸಿ' ಅಂತ ಸಿದ್ದರಾಮಯ್ಯ ಅವರಿಗೆ ವರಿಷ್ಠರು ಹೇಳಿದ್ದಾರೆ. ಇದರರ್ಥ, ಮೇಲೆದ್ದಾಗ ಸುನಾಮಿಯಂತೆ ಕಂಡ ಹನಿಟ್ರ್ಯಾಪ್ ವಿವಾದ ಆದಷ್ಟು ಬೇಗ ರಗ್ಗು ಹೊದ್ದು ಮಲಗುವುದು ಗ್ಯಾರಂಟಿ.

ಇಷ್ಟಾದರೂ ಈ ಬಾರಿ ದಿಲ್ಲಿಗೆ ಹೋಗುವಾಗ ಸಿದ್ದರಾಮಯ್ಯ ಅವರ ಕ್ಯಾಂಪಿನಲ್ಲಿ ಬೇರೆಯೇ ಲೆಕ್ಕಾಚಾರ ಇತ್ತು. ಅದೆಂದರೆ, ಸೋನಿಯಾ ಗಾಂಧಿ ಅವರು ಸಿದ್ದರಾಮಯ್ಯ ಅವರಲ್ಲಿ ಅಧಿಕಾರ ಬಿಟ್ಟುಕೊಡುವ ಬಗ್ಗೆ ಪ್ರಸ್ತಾಪ ಮಾಡಬಹುದು ಮತ್ತು ಅವರು ಮನವಿ ಮಾಡಿಕೊಂಡರೆ ಸಿದ್ದರಾಮಯ್ಯ ಇಲ್ಲ ಎನ್ನಲಾರರು ಎಂಬುದು. ಕಾರಣ? ಸೋನಿಯಾ ಗಾಂಧಿ ಅವರ ವಿಷಯದಲ್ಲಿ ಸಿದ್ದರಾಮಯ್ಯ ಅವರಿಗೆ ಅಪಾರ ಗೌರವವಿದೆ. ಯಾಕೆಂದರೆ 2006ರಲ್ಲಿ ಜೆಡಿಎಸ್‌ನಿಂದ ಹೊರಬಿದ್ದು, ಅಖಿಲ ಭಾರತ ಪ್ರಗತಿಪರ ಜನತಾದಳದಲ್ಲಿ ಹೊಯ್ದಾಡುತ್ತಿದ್ದ ಸಿದ್ದರಾಮಯ್ಯ ಅವರನ್ನು ಕೈ ನೀಡಿ ಕಾಂಗ್ರೆಸ್ ಹಡಗಿಗೆ ಹತ್ತಿಸಿಕೊಂಡವರು ಸೋನಿಯಾ ಗಾಂಧಿ.

ವಸ್ತುಸ್ಥಿತಿ ಎಂದರೆ ಸಿದ್ದರಾಮಯ್ಯ ಅವರ ಪಕ್ಷ ಸೇರ್ಪಡೆಗೆ ಅವತ್ತು ರಾಜ್ಯ ಕಾಂಗ್ರೆಸ್‌ನ ಬಹುತೇಕ ನಾಯಕರ ವಿರೋಧವಿತ್ತು. ಕಾರಣ? ಜನಸಮುದಾಯದ ನಾಯಕರಾಗಿ ಬೆಳೆದಿದ್ದ ಸಿದ್ದರಾಮಯ್ಯ ಪಕ್ಷಕ್ಕೆ ಬಂದರೆ ತಮ್ಮ ಶಕ್ತಿ ಕುಸಿಯುತ್ತದೆ ಎಂಬ ಆತಂಕ. ಆದರೆ ಇದನ್ನು ಲೆಕ್ಕಿಸದ ಸೋನಿಯಾ ಗಾಂಧಿ ಅವರು ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್‌ಗೆ ಸೇರಿಸಿಕೊಂಡರು. ಮುಂದೆ ಅನಿವಾರ್ಯ ಸನ್ನಿವೇಶಗಳಲ್ಲಿ ಸಿದ್ದರಾಮಯ್ಯ ಅವರಿಗೆ ಅಕಾಮಡೇಟ್ ಮಾಡಿಕೊಡಲು ಕೆಲವು ರಾಜಿಗಳನ್ನು ಮಾಡಿಕೊಂಡರು. ಇದೆಲ್ಲ ಸಿದ್ದರಾಮಯ್ಯ ಅವರಿಗೆ ಗೊತ್ತಿಲ್ಲ? ಹೀಗಾಗಿ ಸೋನಿಯಾ ಗಾಂಧಿ ಬಗ್ಗೆ ಅವರಿಗೆ ತುಂಬ ಗೌರವವಿದೆ. ಆದ್ದರಿಂದ, ಸೋನಿಯಾ ಅವರು ಸಿದ್ದರಾಮಯ್ಯ ಅವರ ಬಳಿ, ''ನಾನು ಡಿ.ಕೆ.ಶಿವಕುಮಾರ್ ಅವರಿಗೆ ಮಾತು ಕೊಟ್ಟಿದ್ದೇನೆ. ಹೀಗಾಗಿ ಅಧಿಕಾರ ಬಿಟ್ಟುಕೊಟ್ಟು ನನ್ನ ಮಾತು ನಡೆಸಿಕೊಡಿ'' ಅಂತ ಹೇಳಿದರೆ ಸಿದ್ದರಾಮಯ್ಯ ಇಲ್ಲ ಅನ್ನಲಾರರು. ಆದರೆ ಅಧಿಕಾರ ಬಿಟ್ಟು ಕೊಡಲು ನಾನು ಸಿದ್ಧ ಎನ್ನುತ್ತಲೇ ಸೋನಿಯಾ ಗಾಂಧಿ ಅವರಿಗೆ ಸ್ಪಷ್ಟ ಸಂದೇಶ ನೀಡಲು ಸಿದ್ದರಾಮಯ್ಯ ತಯಾರಾಗಿದ್ದಾರೆ. ಅದೆಂದರೆ, 'ಭವಿಷ್ಯದ ನಾಯಕನ ಆಯ್ಕೆ ಶಾಸಕಾಂಗ ಪಕ್ಷದಲ್ಲಿಯೇ ನಡೆಯಲಿ. ಇಲ್ಲದಿದ್ದರೆ ಪಕ್ಷ ಹೋಳಾಗಿ, ಸರಕಾರ ಉರುಳುವ ಅಪಾಯವಿದೆ' ಎನ್ನುವುದು. ಒಂದು ಸಲ ಸಿದ್ದರಾಮಯ್ಯ ಈ ಸಂದೇಶ ನೀಡಿ ಬಂದರೆ ಸೋನಿಯಾ ಗಾಂಧಿ ಯೋಚಿಸುತ್ತಾರೆ. ಎಲ್ಲಕ್ಕಿಂತ ಮುಖ್ಯವಾಗಿ ರಾಹುಲ್ ಗಾಂಧಿ ಜತೆ ಚರ್ಚಿಸುತ್ತಾರೆ. ಆ ಸಂದರ್ಭದಲ್ಲಿ ರಾಹುಲ್ ಗಾಂಧಿ ನಾಯಕತ್ವ ಬದಲಾವಣೆಗೆ ಒಪ್ಪುವುದಿಲ್ಲ ಎಂಬುದು ಸಿದ್ದರಾಮಯ್ಯ ಕ್ಯಾಂಪಿನ ಲೆಕ್ಕಾಚಾರ.

ಹಾಗಂತ, ಇಂಥ ಬೆಳವಣಿಗೆ ಯಾವಾಗ ನಡೆಯುತ್ತದೆ ಎಂಬುದರ ನಿಖರ ಅಂದಾಜೂ ಅವರಿಗಿಲ್ಲ. ಹೀಗಾಗಿ ಸಿದ್ದರಾಮಯ್ಯ ಅವರ ದಿಲ್ಲಿ ಭೇಟಿಯ ಸಂದರ್ಭದಲ್ಲೆಲ್ಲ ಇಂಥ ಬೆಳವಣಿಗೆ ಆಗಬಹುದು ಅಂತ ಅವರು ಯೋಚಿಸುತ್ತಾರೆ. ಈ ಬಾರಿಯೂ ಇಂಥ ಯೋಚನೆ ಆ ಕ್ಯಾಂಪಿನ ಪ್ರಮುಖರಲ್ಲಿ ಸುಳಿದಿತ್ತು. ಆದರೆ ಎಂದಿನಂತೆ ಈ ಬಾರಿಯೂ ಅದು ನಿಜವಾಗಲಿಲ್ಲ. ಕುತೂಹಲದ ಸಂಗತಿ ಎಂದರೆ ಇಂಥ ಕಾಲಘಟ್ಟದಲ್ಲೇ ರಾಜ್ಯ ಕಾಂಗ್ರೆಸ್‌ನ ಬಹುತೇಕ ನಾಯಕರಿಗೆ ರಾಹುಲ್ ಗಾಂಧಿಯವರ ನಿಜ ಕನಸುಗಳ ಮಾಹಿತಿ ಸಿಗುತ್ತಿದೆ. ಮತ್ತದು ಸಖತ್ತು ಇಂಟರೆಸ್ಟಿಂಗ್ ಆಗಿದೆ.

• ಕೃಷ್ಣ ಭೈರೇಗೌಡ ಅಂದ್ರೆ ರಾಹುಲ್‌ಗಿಷ್ಟ

ಈ ಮಾಹಿತಿಗಳ ಪ್ರಕಾರ, ಕರ್ನಾಟಕದಲ್ಲಿ ಸಿದ್ದರಾಮಯ್ಯ ಅವರನ್ನು ಬದಲಿಸುವ ಇರಾದೆ ರಾಹುಲ್ ಗಾಂಧಿ ಅವರಿಗಿಲ್ಲ. ಕಾರಣ? ಸ್ಥಿರವಾಗಿರುವ ಸರಕಾರ ಅಲುಗಾಡುವುದು ಅವರಿಗೆ ಬೇಕಿಲ್ಲ. ಇವತ್ತು ಅಹಿಂದ ವರ್ಗಗಳ ನಾಯಕರಾಗಿ ಸಿದ್ದರಾಮಯ್ಯ ಎಮರ್ಜ್ ಆಗಿರುವ ರೀತಿ ಹೇಗಿದೆ ಎಂದರೆ, ಅವರನ್ನು ಬದಲಿಸುವ ಯೋಚನೆ ಸರಕಾರಕ್ಕೆ ಮಾರಕವಾಗಬಹುದು ಎಂಬುದು ರಾಹುಲ್ ಆತಂಕ. ಹೀಗಾಗಿ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಪದವಿಯಿಂದ ಕೆಳಗಿಳಿಸುವ ವಿಷಯದಲ್ಲಿ ಅವರಿಗೆ ಸುತರಾಂ ಒಪ್ಪಿಗೆಯಿಲ್ಲ. ಆದರೆ ಮುಂದಿನ ದಿನಗಳಲ್ಲಿ ಅವರಾಗಿಯೇ ಕೆಳಗಿಳಿಯುವ ಬಯಕೆ ವ್ಯಕ್ತಪಡಿಸಿದರೆ ಆ ಜಾಗಕ್ಕೆ ಯಾರು ಬರಬೇಕು ಅಂತ ಅವರು ಯೋಚಿಸಿದ್ದಾರೆ.

ಮೂಲಗಳ ಪ್ರಕಾರ, ಹಾಲಿ ಕಂದಾಯ ಸಚಿವ ಕೃಷ್ಣ ಭೈರೇಗೌಡರೇ ರಾಹುಲ್ ಗಾಂಧಿ ಕಣ್ಣ ಮುಂದಿರುವ ಪರ್ಯಾಯ ನಾಯಕ. ಕಾರಣ? ಕೃಷ್ಣ ಭೈರೇಗೌಡ ಯುವಕರು. 'ಮಿಸ್ಟರ್ ಕ್ಲೀನ್' ಇಮೇಜ್ ಇರುವವರು. ಅದೇ ಕಾಲಕ್ಕೆ ಸುಶಿಕ್ಷಿತರಾಗಿರುವ ಕೃಷ್ಣ ಭೈರೇಗೌಡ ಕರ್ನಾಟಕದ ಜನಸಂಖ್ಯೆಯ ಶೇ.40ರಷ್ಟಿರುವ ನಗರ ಪ್ರದೇಶದ ಮತದಾರರಿಗೆ ಒಪ್ಪಿಗೆಯಾಗುವ ನಾಯಕ. ಈ ಮಧ್ಯೆ ಬೆಂಗಳೂರು, ಚಿಕ್ಕಬಳ್ಳಾಪುರ, ಕೋಲಾರ ಪಾಕೆಟ್ಟಿನ ಸುಮಾರು ಐವತ್ತು ಕ್ಷೇತ್ರಗಳಲ್ಲಿ ಮರಸು ಒಕ್ಕಲಿಗರು ಪ್ರಬಲರು. ಅವರು ಸಹಜವಾಗಿಯೇ ಕೃಷ್ಣ ಭೈರೇಗೌಡರ ನಾಯಕತ್ವವನ್ನು ಒಪ್ಪುತ್ತಾರೆ.

ಈ ಮಧ್ಯೆ ಕೃಷ್ಣ ಭೈರೇಗೌಡರು ಪರ್ಯಾಯ ನಾಯಕರಾಗಿ ಹೊರಹೊಮ್ಮಿದರೆ ಸಿದ್ದರಾಮಯ್ಯ ಕೂಡಾ ಬೆಂಬಲಿಸುತ್ತಾರೆ. ಹಾಗಾದಾಗ ಪ್ರಬಲ ಕುರುಬ ಸಮುದಾಯ ಸಾಲಿಡ್ಡಾಗಿ ಕಾಂಗ್ರೆಸ್ ಜತೆ ಉಳಿಯುತ್ತದೆ. ಅದೇ ಕಾಲಕ್ಕೆ ಹಾಲಿ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಉಪಮುಖ್ಯಮಂತ್ರಿ ಹುದ್ದೆಗೆ ತಂದರೆ ಒಕ್ಕಲಿಗ ಪ್ಲಸ್ ಅಹಿಂದ ಮತದಾರರು ಕನ್‌ಸಾಲಿಡೇಟ್ ಆಗುತ್ತಾರೆ. ಇವತ್ತು ಬಿಜೆಪಿ ಮತ್ತು ಸಂಘಪರಿವಾರವನ್ನು ಪ್ರಿಯಾಂಕ್ ಖರ್ಗೆ ಎಷ್ಟು ಸಮರ್ಥವಾಗಿ ಎದುರಿಸುತ್ತಿದ್ದಾರೆ ಎಂದರೆ ಈ ಅಂಶ ಕೈ ಪಾಳಯಕ್ಕೆ ಅನುಕೂಲ ಮಾಡಿಕೊಡುತ್ತಿದೆ.

ಹೀಗೆ ಕೃಷ್ಣ ಭೈರೇಗೌಡ-ಪ್ರಿಯಾಂಕ್ ಖರ್ಗೆ ಜೋಡಿಯನ್ನು ಮುಂದಿಟ್ಟುಕೊಂಡು ಅವರ ಜತೆಗೆ ದಿನೇಶ್ ಗುಂಡೂರಾವ್, ಈಶ್ವರ್ ಖಂಡ್ರೆ, ಶರಣಪ್ರಕಾಶ್ ಪಾಟೀಲ್, ಜಮೀರ್ ಅಹ್ಮದ್, ಸಂತೋಷ್ ಲಾಡ್ ಸೇರಿದಂತೆ ರಣಕಲಿಗಳ ದಂಡು ನಿಂತರೆ ತಮ್ಮ ಕನಸಿನ 2029 ಮತ್ತು 2034ಕ್ಕೆ ತಾವು ದಿಲ್ಲಿ ಗದ್ದುಗೆಯನ್ನು ವಶಪಡಿಸಿಕೊಳ್ಳುವ ಪ್ರಯತ್ನಕ್ಕೆ ಪ್ಲಸ್ ಆಗಬಹುದು ಎಂಬುದು ರಾಹುಲ್ ಗಾಂಧಿ ಲೆಕ್ಕಾಚಾರ. ಆದರೆ ಅದು ವರ್ಕ್‌ಔಟ್ ಆಗಬೇಕೆಂದರೆ ಸದ್ಯಕ್ಕೆ ಸಿದ್ದರಾಮಯ್ಯ ನೇತೃತ್ವದ ಸರಕಾರ ಸ್ಥಿರವಾಗಿರಬೇಕು. ಹಾಗಂತಲೇ ಮೊನ್ನೆ ದಿಲ್ಲಿ ದಂಡಯಾತ್ರೆ ಮಾಡಿದ ನಾಯಕರಿಗೆ ರಾಹುಲ್ ಗಾಂಧಿ ಕೊಡಬೇಕಾದ ಮೆಸೇಜನ್ನೇ ಕೊಟ್ಟು ಕಳಿಸಿದ್ದಾರೆ.

• ಜೆಡಿಎಸ್ ಬಗ್ಗೆ ಬಿಜೆಪಿಗೆ ಆತಂಕವೇ?

ಈ ಮಧ್ಯೆ ಬೆಂಗಳೂರಿನ ಜೆಪಿ ನಗರದಲ್ಲಿರುವ ಕೇಂದ್ರ ಸಚಿವ ಕುಮಾರಸ್ವಾಮಿಯವರ ಮನೆಯಲ್ಲಿ ಶನಿವಾರ ಮಹತ್ವದ ಸಭೆ ನಡೆದಿದೆ. ಈ ಸಭೆಯಲ್ಲಿ ಭಾಗವಹಿಸಿದ ಜೆಡಿಎಸ್ ಶಾಸಕರು ಮತ್ತಿತರ ನಾಯಕರು ಬಿಜೆಪಿಯ ರಾಜ್ಯ ನಾಯಕರ ಬಗ್ಗೆ ಕೋಪದಿಂದ ಮಾತನಾಡಿದ್ದಾರೆ. 'ಮೈತ್ರಿ ಅಂತ ಮಾತನಾಡುವ ಬಿಜೆಪಿಗರು ನಮ್ಮನ್ನು ದೂರ ಇಟ್ಟು ಬೆಲೆ ಏರಿಕೆಯ ಬಗ್ಗೆ ಹೋರಾಟ ಮಾಡಿದ್ದಾರೆ. ನಮ್ಮನ್ನು ದೂರವಿಡುವ ಅವರ ಲೆಕ್ಕಾಚಾರಕ್ಕೆ ಅವರಲ್ಲಿರುವ ಆತಂಕವೇ ಕಾರಣ' ಎಂದಿದ್ದಾರೆ. 'ರಾಜ್ಯ ಸರಕಾರದ ವೈಫಲ್ಯದ ಲಾಭ ನಮಗಿಂತ ಹೆಚ್ಚಾಗಿ ಜೆಡಿಎಸ್‌ಗೆ ಸಿಕ್ಕರೆ ಅವರು ನಮ್ಮ ಮೇಲೆ ಸವಾರಿ ಮಾಡಬಹುದು, ಹೀಗಾಗಿ ಅವರನ್ನು ದೂರವಿಟ್ಟು ನಾವು ಪ್ರತ್ಯೇಕವಾಗಿ ಹೋರಾಟ ಮಾಡೋಣ' ಅಂತ ಬಿಜೆಪಿ ನಾಯಕರು ನಿರ್ಧರಿಸಿದ್ದಾರೆ. ಆದ್ದರಿಂದ ನಾವು ಕೂಡಾ ಬಿಜೆಪಿಗರನ್ನು ದೂರವಿಟ್ಟು ಬೆಲೆ ಏರಿಕೆಯ ಬಗ್ಗೆ ಹೋರಾಟ ಮಾಡೋಣ ಎಂದು ಜೆಡಿಎಸ್ ಶಾಸಕರು-ನಾಯಕರು ಆರ್ಭಟಿಸಿದ್ದಾರೆ. ಅವರ ಆಕ್ರೋಶಕ್ಕೆ ಸ್ಪಂದಿಸಿದ ಕುಮಾರಸ್ವಾಮಿ ಅವರು ''ಆಯಿತು ಬಿಡಿ ಬ್ರದರ್. ನಾವೂ ಪ್ರತ್ಯೇಕವಾಗಿ ಹೋರಾಡೋಣ'' ಎಂದಿದ್ದಾರೆ. ಅಲ್ಲಿಗೆ ಬಿಜೆಪಿ-ಜೆಡಿಎಸ್ ಪಾಳಯದಲ್ಲೂ ಭವಿಷ್ಯದ ಸಿಎಂಗಿರಿಗಾಗಿ ಪೈಪೋಟಿ ಶುರುವಾಗಿದೆ ಅಂತಲೇ ಅರ್ಥ.

• ವಿಜಯೇಂದ್ರ ಇರಲಿ ಅಂದ್ರು ಭಿನ್ನರು

ಇನ್ನು ವಿಜಯೇಂದ್ರ ಅವರ ವಿರುದ್ಧ ನಡೆಸುತ್ತಿರುವ ಹೋರಾಟದಲ್ಲಿ ಯತ್ನಾಳ್ ಅವರನ್ನು ಕಳೆದುಕೊಂಡ ಭಿನ್ನರ ಪಡೆ, ಈಗ ವರಸೆ ಬದಲಿಸಿದೆ. ಬಿಜೆಪಿ ಮೂಲಗಳ ಪ್ರಕಾರ, ಕರ್ನಾಟಕ ಬಿಜೆಪಿಯ ಚುನಾವಣಾಧಿಕಾರಿ ಶಿವರಾಜ್ ಸಿಂಗ್ ಚೌಹಾಣ್ ಏಪ್ರಿಲ್ 10ರಂದು ಬೆಂಗಳೂರಿಗೆ ಬರಲಿದ್ದು, ಈ ಸಂದರ್ಭದಲ್ಲಿ ಭಿನ್ನರ ಪಡೆ ಅವರನ್ನು ಭೇಟಿ ಮಾಡಲಿದೆ. ಈ ಭೇಟಿಯ ಸಂದರ್ಭದಲ್ಲಿ ಎರಡು ಬೇಡಿಕೆಗಳನ್ನು ಮುಂದಿಡಲಿರುವ ಪಡೆ, ಒಂದೋ ವಿಜಯೇಂದ್ರ ಅವರನ್ನು ಪಕ್ಷದ ರಾಜ್ಯಾಧ್ಯಕ್ಷ ಸ್ಥಾನದಿಂದ ಬದಲಿಸಿ. ಇಲ್ಲವೇ ಅವರನ್ನೇ ಪಕ್ಷದ ರಾಜ್ಯಾಧ್ಯಕ್ಷರ ಸ್ಥಾನದಲ್ಲಿ ಮುಂದುವರಿಸಿ ಅಂತ ಹೇಳಲಿದೆ.

ಆದರ ಈ ಬೇಡಿಕೆಯಲ್ಲಿ ಒಂದು ಸೂಕ್ಷ್ಮವಿದೆ. ಅದೆಂದರೆ ವಿಜಯೇಂದ್ರ ಪಕ್ಷದ ರಾಜ್ಯಾಧ್ಯಕ್ಷರಾಗಿ ಆಗಸ್ಟ್ ಅಂತ್ಯಕ್ಕೆ 2 ವರ್ಷ ಪೂರ್ಣಗೊಳ್ಳಲಿದೆ. ಹೀಗಾಗಿ ಸಹಜವಾಗಿಯೇ ಈ ಅವಧಿ ಪೂರ್ಣಗೊಳ್ಳಲು ಬಿಡಿ. ಇದಾದ ನಂತರ ಪಕ್ಷಕ್ಕೆ ಹೊಸ ಅಧ್ಯಕ್ಷರನ್ನು ನೇಮಿಸಿ. ಆದರೆ ಈಗ ಮಾತ್ರ ಯಾವ ಕಾರಣಕ್ಕೂ ವಿಜಯೇಂದ್ರ ಅವರನ್ನು ಅಧ್ಯಕ್ಷ ಸ್ಥಾನಕ್ಕೆ ನೇಮಕ ಮಾಡಲಾಗಿದೆ ಎಂದು ಘೋಷಿಸಬೇಡಿ. ಹಾಗೆ ಘೋಷಿಸಿದರೆ ವಿಜಯೇಂದ್ರ ಪುನಃ ಇನ್ನೆರಡು ವರ್ಷದ ಅವಧಿಗೆ ಅಧ್ಯಕ್ಷರಾಗುತ್ತಾರೆ. ಇದು ಸರಿಯಲ್ಲ ಎಂಬುದು ಭಿನ್ನರ ವಾದ. ಇದನ್ನೇ ಅವರು ಬೆಂಗಳೂರಿಗೆ ಬರಲಿರುವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಹೇಳಲಿದ್ದಾರೆ.

• ರೇಣುಕಾಚಾರ್ಯ ಉಚ್ಚಾಟನೆ ಆಗ್ಲೇಬೇಕ್!

ಈ ಮಧ್ಯೆ ಶುಕ್ರವಾರ ಬೆಳಗ್ಗೆ ಮಾಜಿ ಸಚಿವ ಕುಮಾರ್ ಬಂಗಾರಪ್ಪ ಅವರ ನಿವಾಸದಲ್ಲಿ ಸಭೆ ಸೇರಿದ್ದ ಬಿಜೆಪಿ ಭಿನ್ನರ ಪಡೆ ಪಕ್ಷದ ವರಿಷ್ಠರಿಗೆ ಹೊಸ ಸಂದೇಶ ರವಾನಿಸಿದೆ. ಯಾವ ಕಾರಣಕ್ಕಾಗಿ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಲಾಯಿತೋ, ಅದೇ ಕಾರಣಕ್ಕಾಗಿ ವಿಜಯೇಂದ್ರ ಪಡೆಯ ನಾಯಕ ಎಂ.ಪಿ.ರೇಣುಕಾಚಾರ್ಯ ಅವರನ್ನೂ ಪಕ್ಷದಿಂದ ಉಚ್ಚಾಟನೆ ಮಾಡಬೇಕು ಎಂಬುದು ಈ ಸಂದೇಶ.

''ಯತ್ನಾಳ್ ಅವರು ಮಾಡುತ್ತಿದ್ದ ಆರೋಪಗಳ ಬಗ್ಗೆ ನಮಗೆ ಸಹಮತವಿದ್ದರೂ ಅವರು ಹೇಳಿದ್ದನ್ನೆಲ್ಲ ನಾವು ಒಪ್ಪುವುದಿಲ್ಲ. ಆದರೆ ಕಳೆದ ಹಲವು ತಿಂಗಳುಗಳಿಂದ ರೇಣುಕಾಚಾರ್ಯ ಆಡಿದ ಮಾತುಗಳನ್ನು ಕೇಳಿದರೆ ಅವು ಯತ್ನಾಳ್ ಅವರ ಮಾತುಗಳಿಗಿಂತ ಕಠೋರವಾಗಿವೆ. ಹೀಗಾಗಿ ಯತ್ನಾಳ್ ಅವರಿಗಾದ ಶಿಕ್ಷೆ ರೇಣುಕಾಚಾರ್ಯ ಅವರಿಗೂ ಆಗಬೇಕು. ಇಲ್ಲದಿದ್ದರೆ ಇದು ಒನ್ ಸೈಡೆಡ್ ತೀರ್ಮಾನವಾಗುತ್ತದೆ. ಆದ್ದರಿಂದ ಪರಿಸ್ಥಿತಿಯನ್ನು ಬ್ಯಾಲೆನ್ಸ್ ಮಾಡಲು ರೇಣುಕಾಚಾರ್ಯ ಅವರನ್ನೂ ಪಕ್ಷದಿಂದ ಉಚ್ಚಾಟಿಸಬೇಕು. ಯಾವಾಗ ಈ ಕೆಲಸ ಆಗುತ್ತದೋ, ಆಗ ಶಿಸ್ತು ಉಲ್ಲಂಘನೆಯ ವಿಷಯ ಬಂದಾಗ ಎಲ್ಲರಿಗೂ ಒಂದೇ ನ್ಯಾಯ ಎಂಬ ಸಂದೇಶ ರವಾನೆಯಾಗುತ್ತದೆ. ಇಲ್ಲವಾದರೆ ವರಿಷ್ಠರು ವಿಜಯೇಂದ್ರರ ಪರವಾಗಿದ್ದಾರೆ ಎಂಬ ಭಾವನೆ ಉಳಿದು ಗೊಂದಲ ಮುಂದುವರಿಯುತ್ತದೆ'' ಎಂಬುದು ಈ ಪಡೆಯ ಸಂದೇಶ.

ಈ ವಾರ ಕರ್ನಾಟಕಕ್ಕೆ ಬರುತ್ತಿರುವ ರಾಜ್ಯ ಬಿಜೆಪಿಯ ಚುನಾವಣಾಧಿಕಾರಿ ಶಿವರಾಜ್ ಸಿಂಗ್ ಚೌಹಾಣ್‌ರಿಗೆ ಈ ವಿಷಯವನ್ನು ನೇರವಾಗಿ ಹೇಳಲು ಭಿನ್ನರು ತೀರ್ಮಾನಿಸಿದ್ದಾರೆ. ಮೂಲಗಳ ಪ್ರಕಾರ, ಯತ್ನಾಳ್ ಉಚ್ಚಾಟನೆಯ ನಂತರ ಭಿನ್ನರ ಪಡೆ ತಬ್ಬಿಬ್ಬಾಗಿರುವುದು ನಿಜವಾದರೂ ಪರಿಸ್ಥಿತಿಯನ್ನು ಕಾದು ನೋಡಲು ಅದು ತೀರ್ಮಾನಿಸಿದೆ. ಹಾಗೆಯೇ ಯತ್ನಾಳ್ ಅವರನ್ನು ಮರಳಿ ಪಕ್ಷಕ್ಕೆ ಎಳೆತರುವ ಕಾರ್ಯದಿಂದ ಹಿಂದಕ್ಕೆ ಸರಿಯಲು ಯೋಚಿಸಿದೆ. ಇದಕ್ಕಿರುವ ಮೊದಲ ಕಾರಣವೆಂದರೆ, ಯತ್ನಾಳ್ ಅವರು ಯಡಿಯೂರಪ್ಪ-ವಿಜಯೇಂದ್ರ ಅವರ ವಿರುದ್ಧ ತಮ್ಮ ದಾಳಿ ಮುಂದುವರಿಸಲಿ ಎಂಬುದು. ಮತ್ತೊಂದು ಕಾರಣವೆಂದರೆ, ಯತ್ನಾಳ್ ತಮ್ಮ ನಿಜವಾದ ಶಕ್ತಿಯನ್ನು ಕಂಡುಕೊಳ್ಳಲು ಅಸ್ಪದವಾಗಲಿ ಎಂಬುದು. ಹೀಗೆ ಅವರು ತಮ್ಮ ಶಕ್ತಿಯನ್ನು ಕಂಡುಕೊಂಡು ಮತ್ತಷ್ಟು ಬಲಿಷ್ಠರಾಗಿ ಹೊರಹೊಮ್ಮಿದರೆ ಪಕ್ಷಕ್ಕೆ ಅವರ ಅನಿವಾರ್ಯತೆ ಏನು ಅಂತ ವರಿಷ್ಠರಿಗೆ ತೋರಿಸಬಹುದು. ವೈಭವದಿಂದ ಪಕ್ಷಕ್ಕೆ ವಾಪಸ್ಸು ಕರೆತರಬಹುದು ಎಂಬುದು ಅದರ ಯೋಚನೆ.

ನಮ್ಮ ಆರೋಗ್ಯದ ಗುಟ್ಟು ನಮ್ಮ ಕೈಯಲ್ಲೇ ಇದೆ

ತನ್ನಿಮಿತ್ತ

ಡಾ. ಮುರಲೀ ಮೋಹನ ಚೂಂತಾರು

vveditoped@gmail.com

ಇಂದು ವಿಶ್ವ ಆರೋಗ್ಯ ದಿನ

ಪ್ರತಿ ವರ್ಷ ಏಪ್ರಿಲ್ 7ರಂದು 'ವಿಶ್ವ ಆರೋಗ್ಯ ದಿನ'ವನ್ನು ಆಚರಿಸಲಾಗುತ್ತದೆ. 1948ರ ಏಪ್ರಿಲ್ 7ರಂದು ವಿಶ್ವ ಆರೋಗ್ಯ ಸಂಸ್ಥೆ ಉದಯವಾದುದರ ಸವಿನೆನಪಿಗಾಗಿ, 1950ರ ವರ್ಷದಿಂದ ಈ ದಿನವನ್ನು ಆಚರಿಸಿ, ಆರೋಗ್ಯದ ಬಗ್ಗೆ ಜನಜಾಗೃತಿ ಮೂಡಿಸಿಕೊಂಡು ಬರಲಾಗುತ್ತಿದೆ. 'ನಿಮ್ಮ ಆರೋಗ್ಯ ಸೇವೆಗಳ ಬಗ್ಗೆ ತಿಳಿದುಕೊಳ್ಳಿ' ಎಂಬುದು ಮೊದಲ ಸಲದ ದಿನಾಚರಣೆಯ ಧ್ಯೇಯವಾಕ್ಯವಾಗಿತ್ತು. 'ಆರೋಗ್ಯಕರ ಆರಂಭ, ಆಶಾದಾಯಕ ಭವಿಷ್ಯ' (Healthy begining, hopeful future) ಎಂಬುದು 2025ರ ವರ್ಷದ ವಿಶ್ವ ಆರೋಗ್ಯ ದಿನದ ಧ್ಯೇಯವಾಕ್ಯವಾಗಿದೆ.

ಜಗತ್ತಿನ ಎಲ್ಲ ಜನರಿಗೆ ಪರಿಪೂರ್ಣ ಆರೋಗ್ಯ ಸೌಲಭ್ಯ ಇನ್ನೂ ದೊರಕುತ್ತಿಲ್ಲ. ವಿಶ್ವದ ಒಟ್ಟು 800 ಕೋಟಿ ಜನಸಂಖ್ಯೆಯಲ್ಲಿ 150 ದಶಲಕ್ಷ ಮಂದಿ ಬಡತನ ರೇಖೆಗಿಂತ ಕೆಳಗಿನವರಾಗಿದ್ದು, ಅಧಿಕ ವೈದ್ಯಕೀಯ ವೆಚ್ಚದ ಕಾರಣದಿಂದಾಗಿ 'ಆರೋಗ್ಯಭಾಗ್ಯ'ವು ಅವರಿಗೆ ಮರೀಚಿಕೆಯೇ ಆಗಿಬಿಟ್ಟಿದೆ. ದುಡಿದ ಹಣವನ್ನೆಲ್ಲ ಆರೋಗ್ಯ ಸಂರಕ್ಷಣೆಗೇ ವ್ಯಯಿಸಬೇಕಾದ ಅನಿವಾರ್ಯತೆ ಇವರದ್ದಾಗಿರುವುದು ಬಹುದೊಡ್ಡ ವಿಪರ್ಯಾಸ. ಆದ್ದರಿಂದ, ವಿಶ್ವದ ಜನಸಂಖ್ಯೆಯ ಅರ್ಧದಷ್ಟು ಜನಕ್ಕಾದರೂ ಸೂಕ್ತ ವೈದ್ಯಕೀಯ ಸೌಲಭ್ಯ ಕಲ್ಪಿಸುವುದು ವಿಶ್ವ ಆರೋಗ್ಯ ಸಂಸ್ಥೆಯ ಆಶಯವಾಗಿದೆ.

ಜಗತ್ತಿನ ಯಾವ ರಾಷ್ಟ್ರವೂ ಎಲ್ಲರಿಗೂ ಎಲ್ಲಾ ಸಮಯದಲ್ಲೂ ಉಚಿತ ಆರೋಗ್ಯ ಸೌಲಭ್ಯ ನೀಡಲು ಸಾಧ್ಯವಾಗದು; ಆದರೆ ಕನಿಷ್ಠಪಕ್ಷ ಮೂಲಭೂತ ವೈದ್ಯಕೀಯ ಸೌಲಭ್ಯವನ್ನು ನೀಡಿ, ಹಂತಹಂತವಾಗಿ ಅದನ್ನು ಉನ್ನತ ಮಟ್ಟಕ್ಕೇರಿಸಲು ಪ್ರತಿಯೊಂದು ದೇಶವೂ ಆದ್ಯತೆ ನೀಡಬೇಕು. ವೈದ್ಯಕೀಯ ನೆರವು ಎಂದ ಮಾತ್ರಕ್ಕೆ ಬರೀ ಆಸ್ಪತ್ರೆ ಕಟ್ಟಿಸಿ ಉಚಿತ ಜೆನೆರಿಕ್ ಔಷಧಿ ನೀಡಿಬಿಡುವುದಲ್ಲ; ಜನರಿಗೆ ರೋಗ ಬಾರದಂತೆ ಮತ್ತು ಬಂದ ರೋಗ ಉಲ್ಬಣಿಸದಂತೆ ಪೂರಕ ವಾತಾವರಣವನ್ನೂ ಸೃಷ್ಟಿಸಬೇಕು. ಜತೆಗೆ, ರೋಗಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ, ರೋಗದ ಚಿಕಿತ್ಸೆಗಿಂತ ಅದನ್ನು ತಡೆಗಟ್ಟುವುದಕ್ಕಿರುವ ಮಹತ್ವವನ್ನು ಅವರಿಗೆ ಮನವರಿಕೆ ಮಾಡಿಕೊಡಬೇಕು.

ಹಿಂದೆಲ್ಲಾ ಅಪ್ಪಳಿಸುತ್ತಿದ್ದ ಕುಷ್ಠ, ಸಿಫಿಲಿಸ್ ಮುಂತಾದ ಕಾಯಿಲೆಗಳು ಈಗ ಬಹುತೇಕ ಮಾಯವಾಗಿದ್ದರೂ, ಬದಲಾದ ಜೀವನಶೈಲಿ ಮತ್ತು ಆಹಾರ ಪದ್ಧತಿಯಿಂದಾಗಿ ದಿನಕ್ಕೊಂದರಂತೆ ಹೊಸ ಹೊಸ ರೋಗಗಳು ಹುಟ್ಟಿಕೊಳ್ಳುತ್ತಿವೆ. ಮಧುಮೇಹ, ರಕ್ತದೊತ್ತಡ, ಹೃದಯಾಘಾತ, ಖಿನ್ನತೆ ಮುಂತಾದ ರೋಗಗಳ ಸಂಖ್ಯೆ ದಿನೇದಿನೆ ಹೆಚ್ಚುತ್ತಿದೆ. ಸಾಲದೆಂಬಂತೆ ಎಬೋಲಾ, ಕೋವಿಡ್, ಎಚ್1 ಎನ್1 ವೈರಾಣು ಸೋಂಕುಗಳು ಮನುಷ್ಯರನ್ನು ಇನ್ನಿಲ್ಲದಂತೆ ಕಾಡಿವೆ. ಇಂದಿನ ಧಾವಂತದ ಮತ್ತು ಒತ್ತಡದ ಜೀವನಕ್ರಮದಿಂದಾಗಿ ಬಹುತೇಕರಿಗೆ ಆರೋಗ್ಯ ಸಂರಕ್ಷಣೆಯ ಕಡೆಗೆ ಗಮನಹರಿಸಲು ಸಮಯವಿಲ್ಲದಿರುವುದೇ ಬಹುದೊಡ್ಡ ದುರಂತ. 'ಆರೋಗ್ಯವೇ ಭಾಗ್ಯ' ಎಂಬ ಜಾಣನುಡಿಯನ್ನು ನೆನಪಿನಲ್ಲಿಟ್ಟುಕೊಳ್ಳುವುದರ ಜತೆಗೆ, ಇಲ್ಲಿ ನೀಡಲಾಗಿರುವ ಕ್ರಮಗಳನ್ನು ಅನುಸರಿಸಿದಲ್ಲಿ ಸ್ವಸ್ಥ ಬದುಕು ನಿಮ್ಮದಾಗುತ್ತದೆ:

- ಒತ್ತಡದ ಜೀವನಶೈಲಿಗೆ ತಿಲಾಂಜಲಿ ನೀಡಿ. ಆರೋಗ್ಯಕ್ಕಿಂತ ಮಿಗಿಲಾದ ವಸ್ತು ಯಾವುದೂ ಇಲ್ಲ. ಧೂಮಪಾನ-ಮದ್ಯಪಾನದಂಥ ದುಶ್ಚಟಗಳಿಂದ ದೂರವಿರಿ. ಕ್ಯಾನ್ಸರ್‌ನಂಥ ಮಾರಕ ರೋಗಗಳು ಇಂಥ ದುಶ್ಚಟಗಳಿಂದಲೇ ಬರುತ್ತವೆ ಎಂಬುದನ್ನು ಮರೆಯದಿರಿ.
- ಯೋಗ, ಪ್ರಾಣಾಯಾಮ, ಧ್ಯಾನ, ಬಿರುಸು ನಡಿಗೆ, ವ್ಯಾಯಾಮ, ಈಜುಗಾರಿಕೆ ಮುಂತಾದ ಚಟುವಟಿಕೆ ಗಳನ್ನು ದೈನಂದಿನ ಜೀವನದಲ್ಲಿ ಅಳವಡಿಸಿಕೊಂಡರೆ, ಅಧಿಕ ರಕ್ತದೊತ್ತಡ ಹಾಗೂ ಹೃದಯಾಘಾತ ನಿಮ್ಮ ಹತ್ತಿರ ಸುಳಿಯುವುದಿಲ್ಲ.
- ನಾರಿನಂಶ ಮತ್ತು ಪೌಷ್ಟಿಕಾಂಶ ಇರುವ ಆಹಾರಗಳಿಗೆ ಹೆಚ್ಚು ಒತ್ತುಕೊಡಿ. ಹಸಿ ತರಕಾರಿ, ಹಸಿರು ಸೊಪ್ಪು, ಬೇಳೆ-ಕಾಳುಗಳು ನಿಮ್ಮ ಆಹಾರದ ಭಾಗವಾಗಿರಲಿ. ತಾಜಾ ಹಣ್ಣು-ಹಂಪಲು, ನೀರು, ನೈಸರ್ಗಿಕ ಪೇಯಗಳನ್ನು ಧಾರಾಳವಾಗಿ ಸೇವಿಸಿ. ದಿಢೀರ್ ಆಹಾರ/ಸಿದ್ಧ ಆಹಾರ, ಕೃತಕ ಪೇಯಗಳನ್ನು ಅನಿವಾರ್ಯವಾದಲ್ಲಿ ಮಾತ್ರ ಬಳಸಿ. ಜಂಕ್‌ಫುಡ್ ಬೇಡವೇ ಬೇಡ.
- 'ಬೇಗ ಮಲಗಿ, ಬೇಗ ಏಳು' ಎಂಬ ಹಿರಿಯರ ಮಾತನ್ನು ನಿಮ್ಮ ಆರೋಗ್ಯದ ಹಿತದೃಷ್ಟಿಯಿಂದ ಪಾಲಿಸಿ. ತಡರಾತ್ರಿವರೆಗೆ ಮೋಜು-ಮಸ್ತಿ, ಕುಡಿತ-ಕುಣಿತ ಮಾಡಿ ಮಲಗಿ, ಸೂರ್ಯ ನಡುನೆತ್ತಿಗೆ ಬಂದಾಗ ಹಾಸಿಗೆಯಿಂದೇಳುವ ಹವ್ಯಾಸ ಬಹಳ ಅಪಾಯಕಾರಿ.
- ಸ್ಮಾರ್ಟ್‌ಫೋನ್, ಕಂಪ್ಯೂಟರ್‌ಗಳ ಅತಿಬಳಕೆಯನ್ನು ನಿಯಂತ್ರಿಸಿ. ತಂತ್ರಜ್ಞಾನ ಬೆಳೆದಂತೆಲ್ಲಾ ಹೊಸ ಹೊಸ ಉಪಕರಣ ಬರುವುದು ಸಹಜ; ಆದರೆ ದೈನಂದಿನ ಜೀವನದಲ್ಲಿ ಅತಿ ಅನಿವಾರ್ಯವಾದಲ್ಲಿ ಮಾತ್ರವೇ ಇವನ್ನು ಬಳಸಿ.
- ಅನಾರೋಗ್ಯ ಉಂಟಾದಾಗ ಸ್ವಯಂವೈದ್ಯಕ್ಕೆ ಮುಂದಾಗ ಬೇಡಿ, 'ಡಾ.ಗೂಗಲ್'ನ ಸಹವಾಸ ಬೇಡವೇ ಬೇಡ. ನಿಮ್ಮೆಲ್ಲಾ ಸಮಸ್ಯೆ-ಸಂದೇಹಗಳನ್ನು ವೈದ್ಯರು ಪರಿಹರಿಸಬಲ್ಲರು ಎಂಬ ನಂಬಿಕೆ ಗಟ್ಟಿಯಾಗಿರಲಿ. ನಿಯತವಾಗಿ ವೈದ್ಯರ ಸಲಹೆ-ಮಾರ್ಗದರ್ಶನ ಪಡೆಯುತ್ತಿರುವುದು ಒಳ್ಳೆಯ ಪರಿಪಾಠ.

ಬದಲಾಗುತ್ತಿರುವ ಇಂದಿನ ಕಾಲಘಟ್ಟದಲ್ಲಿ ನಾವು ತಿನ್ನುವ ಆಹಾರ, ಸೇವಿಸುವ ಗಾಳಿ, ಜೀವನಶೈಲಿ ಎಲ್ಲವೂ ಕಲುಷಿತವಾಗಿವೆ. ಈ ಕಾರಣದಿಂದಲೇ ಪರಿಪೂರ್ಣ ಆರೋಗ್ಯವಂತ ಮನುಷ್ಯನನ್ನು ಹುಡುಕಿದರೂ ಸಿಗದಂಥ ಪರಿಸ್ಥಿತಿ ಬಂದಿದೆ. ಹೀಗಾಗಿ 'ಆರೋಗ್ಯ' ಎಂಬ ಪರಿಭಾಷೆಯನ್ನು 'ರೋಗವಿಲ್ಲದ ದೇಹಸ್ಥಿತಿ' ಎಂಬುದರ ಬದಲಾಗಿ 'ಜೀವನೋತ್ಸಾಹ' ಎಂದು ವ್ಯಾಖ್ಯಾನಿಸಲಾಗುತ್ತಿದೆ. ಮಧುಮೇಹ, ರಕ್ತದೊತ್ತಡಗಳು ಇದ್ದರೂ ಪ್ರತಿದಿನ ಬೆಳಗ್ಗೆ ಬೇಗ ಎದ್ದು ಕೆಲಸ ಮಾಡುವ ಹುಮ್ಮಸ್ಸು ಹೊಂದಿರುವ ವ್ಯಕ್ತಿಯನ್ನು 'ಆರೋಗ್ಯವಂತ' ಎಂದು ಕರೆಯಬೇಕಾದ ಅನಿವಾರ್ಯತೆ ಎದುರಾಗಿದೆ. ಜತೆಗೆ, ಯಾವುದೇ ರೋಗವಿಲ್ಲದಿದ್ದರೂ ಖಿನ್ನತೆ ಅಥವಾ ಇನ್ನಾವುದೇ ಕಾರಣದಿಂದಾಗಿ ಕೆಲಸ ಮಾಡುವ ಹುಮ್ಮಸ್ಸಿಲ್ಲದಾತನನ್ನು 'ರೋಗಿ' ಎನ್ನುವಂತಾಗಿದೆ.

ಆರೋಗ್ಯವೆಂಬುದು ಮಾರುಕಟ್ಟೆಯಲ್ಲಿ ಸಿಗುವ ವಸ್ತುವಲ್ಲ ಎಂಬುದನ್ನು ಜನರು ಅರಿಯಬೇಕು. ವೈದ್ಯರು ಸೂಚಿಸಿದ ಹತ್ತಾರು ಔಷಧಿಗಳನ್ನು ಸೇವಿಸಿ ನೂರುಕಾಲ ಬದುಕುತ್ತೇವೆ ಎಂಬ ಭ್ರಮೆಯಿಂದ ಜನರು ಹೊರಬರಬೇಕು. ವೈದ್ಯರು ಏನಿದ್ದರೂ ರೋಗಲಕ್ಷಣಗಳನ್ನು ಅಭ್ಯಸಿಸಿ ಔಷಧಿ/ಚಿಕಿತ್ಸೆ ನೀಡುತ್ತಾರೆ ಮತ್ತು ಕೆಲವೊಂದು ಕಾಯಿಲೆಗಳನ್ನು ಗುಣಪಡಿಸುವುದಕ್ಕಿಂತ ನಿಯಂತ್ರಣದಲ್ಲಿ ಇರಿಸುವುದಕ್ಕೆ ಹೆಚ್ಚಿನ ಗಮನ ನೀಡುತ್ತಾರೆ ಎಂಬ ಸಂಗತಿಯನ್ನು ಜನರು ಜೀರ್ಣಿಸಿಕೊಳ್ಳಬೇಕು, ಈ ನಿಟ್ಟಿನಲ್ಲಿ ತಮ್ಮ ಜವಾಬ್ದಾರಿ ಅರಿತು ನಿಭಾಯಿಸಬೇಕು. ಎಲ್ಲ ರೋಗಗಳಿಗೂ ಔಷಧಿಯಿದೆ ಮತ್ತು ಎಲ್ಲ ರೋಗಗಳನ್ನೂ ವೈದ್ಯರು ಗುಣಪಡಿಸುತ್ತಾರೆ ಎಂಬ ಭ್ರಮೆಯಿಂದ ಜನರು ಹೊರಬರಬೇಕು. ಆರೋಗ್ಯ ರಕ್ಷಣೆಗೆ ಸಂಬಂಧಿಸಿದ ಎಲ್ಲವನ್ನೂ ಸರಕಾರವೇ ನೀಡಬೇಕು, ನಿಗಾ ನೋಡಬೇಕು ಎಂದು ನಿರೀಕ್ಷಿಸುವುದು ತರವಲ್ಲ. ಸರಕಾರ ಏನಿದ್ದರೂ ಆಸ್ಪತ್ರೆ-ವೈದ್ಯರು-ಔಷಧಿಗಳನ್ನು ಒದಗಿಸ ಬಹುದು; ಆದರೆ ಆರೋಗ್ಯಕರ ಪರಿಸರವನ್ನು ಕಟ್ಟಿಕೊಳ್ಳುವ ನಿಟ್ಟಿನಲ್ಲಿ ಜನರೂ ಸಹಕಾರದೊಂದಿಗೆ ಕೈಜೋಡಿಸಬೇಕಾಗುತ್ತದೆ. ಕೊಳಚೆ ಪ್ರದೇಶಗಳಲ್ಲಿ ಸೊಳ್ಳೆಗಳ ಹುಟ್ಟು ಹೆಚ್ಚಿ, ಅವುಗಳಿಂದ ರೋಗ ಹಬ್ಬುವ ಸಾಧ್ಯತೆಯಿರುವುದರಿಂದ ತಂತಮ್ಮ ಪರಿಸರವನ್ನು ಚೊಕ್ಕವಾಗಿಟ್ಟುಕೊಳ್ಳುವ ಬಗ್ಗೆ ಪ್ರತಿಯೊಬ್ಬರೂ ಜಾಗ್ರತೆ ವಹಿಸಬೇಕು. ಇಲ್ಲವಾದಲ್ಲಿ, ದಿನಕ್ಕೊಂದು ಹೊಸರೋಗ ಮತ್ತು ಹೊಸ ತಜ್ಞವೈದ್ಯ ಹುಟ್ಟಿಕೊಳ್ಳಬಹುದೇ ಹೊರತು, ಸ್ವಸ್ಥ-ಸದೃಢ-ಸುಂದರ ಸಮಾಜ ನಿರ್ಮಾಣ ವಾಗುವುದಿಲ್ಲ. ನಮ್ಮ ಆರೋಗ್ಯದ ಗುಟ್ಟು ನಮ್ಮ ಕೈಯೊಳಗೇ ಇದೆ ಎಂಬ ಸಾರ್ವಕಾಲಿಕ ಸತ್ಯವನ್ನು ನಾವೆಲ್ಲರೂ ಅರಿಯ ಬೇಕು. ಇಂಥ ಅರಿವು ಮೂಡಿಸುವ ಕೆಲಸವನ್ನು ಸರಕಾರ, ಸಮಾಜ ಮತ್ತು ವೈದ್ಯರು ಮಾಡಬೇಕು. ಇಲ್ಲವಾದಲ್ಲಿ, 'ಎಲ್ಲರಿಗೂ ಆರೋಗ್ಯ' ಎಂಬ ಆಶಯದ ಈಡೇರಿಕೆ ಮರೀಚಿಕೆ ಯಾಗಬಹುದು. ಹೀಗಾಗಿ ವಿಶ್ವ ಆರೋಗ್ಯ ದಿನದಂದು 'ಸ್ವಸ್ಥ-ಸದೃಢ-ಸುಂದರ' ಸಮಾಜವನ್ನು ನಿರ್ಮಿಸಲು ಸಂಕಲ್ಪಿಸೋಣ. ಅದರಲ್ಲಿಯೇ ನಮ್ಮೆಲ್ಲರ ಮತ್ತು ಸಮಾಜದ ಒಳಿತು ಅಡಗಿದೆ ಎಂಬುದನ್ನು ಮರೆಯದಿರೋಣ.

(ಲೇಖಕರು ಬಾಯಿ, ಮುಖ ಮತ್ತು ದವಡೆ ಶಸ್ತ್ರಚಿಕಿತ್ಸಕರು)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಇದು ನಮ್ಮ ತಂಡವೇ?

ಐಪಿಎಲ್ ಪಂದ್ಯಾವಳಿಯ ತಂಡಗಳಲ್ಲಿ ಒಂದೆನಿಸಿರುವ 'ಆರ್‌ಸಿಬಿ'ಯ ಅಭಿಮಾನಿಗಳು 'ಈ ಸಲ ಕಪ್ ನಮ್ದೇ' ಎಂದು ಕಳೆದ ಹತ್ತಾರು ವರ್ಷಗಳಿಂದಲೂ ಹೇಳಿಕೊಂಡೇ ಬರುತ್ತಿದ್ದಾರೆ. ಆದರೆ ಅದು ಗಗನಕುಸುಮವೇ ಆಗಿದ್ದು, ಈ ಬಾರಿಯಾದರೂ ತಂಡವು ಚಾಂಪಿಯನ್ ಆಗಲಿ ಎಂದು ಆಶಿಸುತ್ತಿದ್ದಾರೆ, ಇರಲಿ.

ಆದರೆ, 'ಆರ್‌ಸಿಬಿ' ಎಂಬುದರ ಹೆಸರಿನಲ್ಲಿ ಮಾತ್ರವೇ ಬೆಂಗಳೂರು ಅಂತ ಇದೆಯೇ ಹೊರತು, ತಂಡದಲ್ಲಿ ಕರ್ನಾಟಕದ ಆಟಗಾರರು ಒಬ್ಬರೋ ಇಬ್ಬರೋ ಇರುತ್ತಾರೆ. ಅದು ಕೂಡ ಪ್ರಮುಖ ಆಟಗಾರರಾಗಿ ಅಲ್ಲ, 'ಆಟಕ್ಕುಂಟು ಲೆಕ್ಕಕ್ಕಿಲ್ಲ' ಎಂಬಂತೆ! ಇಂತಿರುವ ತಂಡಕ್ಕೆ 'ನಮ್ಮ ಕರ್ನಾಟಕದ ತಂಡ' ಎಂದು ಅಭಿಮಾನ ವ್ಯಕ್ತಪಡಿಸುವುದು ಹೇಗೆ? ಇದು ಆರ್‌ಸಿಬಿಗೆ ಮಾತ್ರವಲ್ಲದೆ, ಐಪಿಎಲ್ ಆಡುವ ಎಲ್ಲ ತಂಡಗಳಿಗೂ ಅನ್ವಯ. ಹಾಗಾಗಿ ಐಪಿಎಲ್ ಆಯೋಜಕರು ಕನಿಷ್ಠಪಕ್ಷ ಐದು ಮಂದಿ ಸ್ಥಳೀಯ ಆಟಗಾರರನ್ನು ತಂಡವು ಒಳಗೊಳ್ಳುವಂಥ ನಿಯಮವನ್ನು ರೂಪಿಸಲಿ. ಆಗ, 'ಇದು ನಮ್ಮ ತಂಡ' ಎಂಬ ಭಾವ ಮೂಡುತ್ತದೆ. ಜತೆಗೆ ಸ್ಥಳೀಯ ಪ್ರತಿಭೆಗಳಿಗೆ ಅವಕಾಶ ನೀಡಿದಂತೆಯೂ ಆಗುತ್ತದೆ. ಹಣಗಳಿಕೆ ಮತ್ತು ಅಬ್ಬರವೇ ಐಪಿಎಲ್ ಪಂದ್ಯಾವಳಿಯ ಉದ್ದೇಶ ವಾಗದಿರಲಿ.

- ಪತ್ತಂಗಿ ಎಸ್.ಮುರಳಿ, ಬೆಂಗಳೂರು

ಭಾರತದ ನಿಜ 'ರತ್ನ'

ಮೋಹನ್ ವಿಶ್ವ ಅವರು ತಮ್ಮ 'ವೀಕೆಂಡ್ ವಿತ್ ಮೋಹನ್' ಅಂಕಣದಲ್ಲಿ (ಏ.5) ಭಾರತ ಮತ್ತು ಇಡಿ ಪ್ರಪಂಚ ಕಂಡ ಒಬ್ಬ ಧೀಮಂತ ವ್ಯಕ್ತಿಯಾದ ಉದ್ಯಮಿ ರತನ್ ಟಾಟಾ ಅವರ ಬಗ್ಗೆ ಬರೆದಿದ್ದು ಮೆಚ್ಚುಗೆಯಾಯಿತು.



ಯಾರೇ ಆಗಲಿ, ವ್ಯಾಪಾರ-ವಹಿವಾಟನ್ನು ಶುರುಮಾಡಿ ದಾಗ ಇರುವ ಪ್ರಾಮಾಣಿಕತೆ, ವಿಧೇಯತೆ, ಸರಕು ಮಾರಿದ ನಂತರ ಕೊಡುವ ಅಗತ್ಯ ಸೇವೆ, ಪ್ರತಿಯಾಗಿ ಗ್ರಾಹಕರ ಸಲಹೆ - ಸೂಚನೆಗೆ ಕಿವಿಗೊಡುವಿಕೆ ಇವೆಲ್ಲವೂ, ವಹಿವಾಟು ವ್ಯಕ್ತವಾಗಿ ಬೆಳೆದ ನಂತರ ಕಾಣಸಿಗುವುದು ವಿರಳ. ಇನ್ನು, ಕೇವಲ ದುಡ್ಡು ಮಾಡುವ ಉದ್ದೇಶದಿಂದ ಅಂಗಡಿ ತೆರೆದು, ಗ್ರಾಹಕ ಸೇವೆಯ ಕಡೆ ಮುಖಮಾಡದೇ ಇರುವವರು ಕೂಡ ಇದ್ದಾರೆ. ಜಗತ್ತು ಈ ಎಲ್ಲರನ್ನೂ ನೋಡಿದೆ.

ಆದರೆ, ಸಾಕಷ್ಟು ದಶಕಗಳ ಹಿಂದೆಯೇ ಉದ್ಯಮವನ್ನು ಸ್ಥಾಪಿಸಿ, ಇಂದು ಅಡುಗೆ ಉಪ್ಪಿನಿಂದ ಹಿಡಿದು ವಿಮಾನಯಾನದ ತನಕ ತನ್ನ ಗ್ರಾಹಕ ಸೇವೆಯನ್ನು ವಿಸ್ತರಿಸಿದ್ದು ಸರ್ವಮಾನ್ಯ 'ಟಾಟಾ ಸಂಸ್ಥೆ'. ಇದರ ಸಂಸ್ಥಾಪಕರಿಗೆ ನಿಜಕ್ಕೂ ಒಂದು ದೊಡ್ಡ ಸಲಾಂ. ಇಂದು ಈ ಉದ್ಯಮ ಸಮೂಹದಲ್ಲಿ ಲಕ್ಷಗಟ್ಟಲೆ ಉದ್ಯೋಗಿಗಳು ದುಡಿಯುತ್ತಿದ್ದು, ಅಂಥ ಪ್ರತಿಯೊಬ್ಬರನ್ನೂ ಟಾಟಾ ಸಂಸ್ಥೆಯು ತನ್ನ ಸ್ವಂತ ಮಕ್ಕಳಂತೆ ಸಂರಕ್ಷಿಸುತ್ತದೆ, ಅವರ ಬೇಕು ಬೇಡಗಳನ್ನು ಪ್ರಾಮಾಣಿಕವಾಗಿ ಪೂರೈಸುತ್ತದೆ ಎಂದರೆ ದೊಡ್ಡ ಮಾತಲ್ಲ. ಭಾರತದಲ್ಲಿ ಪ್ರಾರಂಭಗೊಂಡು ವಿಶ್ವಾದ್ಯಂತ ವ್ಯಾಪಿಸಿರುವ ಟಾಟಾ ಸಂಸ್ಥೆಯು, ದೇಶ ಕಂಡ ಅತ್ಯಂತ ಹೆಮ್ಮೆಯ, ನಂಬಿಕಸ್ಥ, ವಿಶ್ವಾಸಾರ್ಹ, ಪಾರದರ್ಶಕ, ದೇಶದ ಕಾನೂನು ಪಾಲಿಸುವ-ಗೌರವಿಸುವ ಹಾಗೂ ಗ್ರಾಹಕ-ಪರ ಸಂಸ್ಥೆಯಾಗಿದೆ ಎಂದರೆ ಅತಿಶಯೋಕ್ತಿಯಲ್ಲ. ತಮ್ಮ ಪೂರ್ವಜರು ಕಟ್ಟಿ ಬೆಳೆಸಿದ ಈ ಸಂಸ್ಥೆಗೆ ಮೂರು ದಶಕಕ್ಕೂ ಹೆಚ್ಚು ಕಾಲ ಅಧ್ವರ್ಯುವಾಗಿದ್ದ ರತನ್ ಟಾಟಾ ಅವರು, ಅದಕ್ಕೆ ಸಮಾಜದಲ್ಲಿ ಇನ್ನೂ ಹೆಚ್ಚಿನ ಹೆಸರು ತಂದುಕೊಟ್ಟರು. ಅತಿ ಸರಳ ಬದುಕು ನಡೆಸಿ ವಿಶ್ವಕ್ಕೇ ಮಾದರಿಯಾದರು.

ಮನಸ್ಸು ಮಾಡಿದರೆ ಮತ್ತೊಬ್ಬರು ಕೂಡ ಇಷ್ಟು ದೊಡ್ಡ ಕಂಪನಿಯನ್ನು ಕಟ್ಟಿ ಬೆಳೆಸಬಹುದು; ಆದರೆ ರತನ್ ಟಾಟಾ ಅವರಂಥ ಸರಳ-ಪಾರದರ್ಶಕ ಜೀವನ ನಡೆಸುವುದು ಕಷ್ಟಸಾಧ್ಯ. ರತನ್ ಟಾಟಾ ಅವರು ಮಾಡಿದ ಸತ್ಕರ್ಮಗಳ ಪಟ್ಟಿ ಯಾವ ಲೆಕ್ಕಕ್ಕೂ ಸಿಗದು, ಅಂತೆಯೇ ಅವರ ವ್ಯಕ್ತಿತ್ವದ ಬಗ್ಗೆ ಎಷ್ಟು ಬರೆದರೂ ಕಡಿಮೆಯೇ. ಇಂಥ ಸಾತ್ವಿಕ, ಸಜ್ಜನ, ಸತ್ಪಾತ್ರ ಉದ್ಯಮಿಯ ಬಗ್ಗೆ ಮಾಹಿತಿ ನೀಡಿದ ಅಂಕಣ ಕಾರರಿಗೆ ಹಾಗೂ ಪ್ರಕಟಿಸಿದ ಪತ್ರಿಕೆಗೆ ನನ್ನ ವಿಶೇಷ ನಮನಗಳು.

- ಲಕ್ಷ್ಮೀಕಾಂತ ಪಾಟೀಲ, ಮೈಸೂರು

ಸದಭಿರುಚಿ ಮೂಲೆಗುಂಪು

ನಾವು ಚಿಕ್ಕವರಿದ್ದಾಗ, ಸರಕಾರಿ ಒಡೆತನದ ದೂರದರ್ಶನದಲ್ಲಿ ಸದಭಿರುಚಿಯ ಕಾರ್ಯಕ್ರಮಗಳನ್ನೇ ವೀಕ್ಷಿಸುವ ಸೌಭಾಗ್ಯ ನಮ್ಮದಾಗಿತ್ತು. ಭಾನುವಾರ ಬೆಳಗಿನ 'ರಂಗೋಲಿ' ಚಿತ್ರಗೀತೆಗಳು, ಅಂದು ಸಂಜೆಯ ಚಲನಚಿತ್ರ ಮಾತ್ರವಲ್ಲದೆ, ಯುಜಿಸಿ ಕಾರ್ಯಕ್ರಮವನ್ನೂ ವೀಕ್ಷಿಸುತ್ತಿದ್ದೆವು. ರೈತರಿಗೆ ಉಪಯುಕ್ತ ಮಾಹಿತಿ ನೀಡುವ ಕಾರ್ಯಕ್ರಮವೂ ಇರುತ್ತಿತ್ತು. ಒಟ್ಟಾರೆಯಾಗಿ ಮನೆಮಂದಿಯೆಲ್ಲ ಒಟ್ಟಿಗೆ ಕುಳಿತು ಯಾವುದೇ ಮುಜುಗರವಿಲ್ಲದೆ ಕಾರ್ಯಕ್ರಮಗಳನ್ನು ವೀಕ್ಷಿಸಬಹುದಿತ್ತು. ಆದರೆ, ಈಚೀಚೆಗಂತೂ ಡಿಸ್ಕವರಿ ಚಾನಲ್ ಅನ್ನು ಹೊರತುಪಡಿಸಿದರೆ, ಖಾಸಗಿ ಮನರಂಜನಾ ವಾಹಿನಿಗಳು ಮತ್ತು ಸುದ್ದಿ ವಾಹಿನಿಗಳನ್ನು ವೀಕ್ಷಿಸುವುದಕ್ಕೇ ಮುಜುಗರವಾಗುತ್ತಿದೆ.

ನಮ್ಮ ಕೆಲ ಖಾಸಗಿ ಸುದ್ದಿವಾಹಿನಿಗಳಲ್ಲಿ, ಯಾರಿಗೂ ಉಪಯೋಗಕ್ಕೆ ಬಾರದ ಸಣ್ಣ ಸುದ್ದಿಯೊಂದನ್ನು ಇಟ್ಟುಕೊಂಡು, ಚರ್ಚೆಯ ಹೆಸರಲ್ಲಿ ಮನಸ್ಸಿಗೆ ಬಂದಂತೆ ಮಾತಾಡಿಕೊಂಡು ದಿನಪೂರ್ತಿ ರುಬ್ಬುತ್ತಾರೆ. ಇವಕ್ಕೆ ಹೋಲಿಸಿದರೆ ದೂರದರ್ಶನ 'ಚಂದನ'ದಲ್ಲಿ ಬರುವ 30 ನಿಮಿಷಗಳ ವಾರ್ತೆ ನಿಜಕ್ಕೂ ಆಹ್ಲಾದಕರವಾಗಿರುತ್ತದೆ. ಇನ್ನು ಮನರಂಜನಾ ವಾಹಿನಿಗಳ 'ರಿಯಾಲಿಟಿ ಷೋ'ಗಳ ಕಥೆಯನ್ನು ಹೇಳುವುದೇ ಬೇಡ; ಕೆಲವಂತೂ ಅಷ್ಟರ ಮಟ್ಟಿಗೆ ಅಸಭ್ಯವಾಗಿರುತ್ತವೆ, ಅಸಹ್ಯ ಹುಟ್ಟಿಸುತ್ತವೆ. ಹಿರಿಯ ನಟರೊಬ್ಬರ ಮಗ ನಡೆಸಿಕೊಡುವ ಕಾರ್ಯಕ್ರಮವಂತೂ ಕೆಲವೊಮ್ಮೆ ಸಭ್ಯತೆಯ ಎಲ್ಲೆ ಮೀರುವುದುಂಟು. ಇನ್ನು ಧಾರಾವಾಹಿಗಳಲ್ಲಂತೂ, 'ಒಬ್ಬ ಗಂಡ, ಇಬ್ಬರು ಹೆಂಡತಿಯರು' ಎಂಬ ಫಾರ್ಮುಲಾ ಅಥವಾ ಅನೈತಿಕ ಸಂಬಂಧದ ಕಥೆಯೇ ವೀಕ್ಷಕರಿಗೆ ಕಟ್ಟಿಟ್ಟಬುತ್ತಿ. ಇದರಿಂದ ಸಮಾಜಕ್ಕೆ ಸಿಗುವ ಸಂದೇಶವಾದರೂ ಏನು ಅಂತ ಇಂಥ ಕಾರ್ಯಕ್ರಮಗಳ ನಿರ್ಮಾತೃಗಳು ಒಮ್ಮೆಯಾದರೂ ಯೋಚಿಸಿರುತ್ತಾರೆಯೇ?

ಸಿನಿಮಾಗಳಿಗೆ ಸೆನ್ಸಾರ್ ಮಂಡಳಿ ಇರುವಂತೆ, ಕಿರುತೆರೆ ವಾಹಿನಿಗಳಿಗೂ ಇರಬೇಕು. ಇಂಥದೊಂದು ಕಡಿವಾಣ ಇಲ್ಲದಿದ್ದರೆ ಸಮಾಜದ ಸ್ವಾಸ್ಥ್ಯ ಇನ್ನಷ್ಟು ಕುಸಿಯುವುದರಲ್ಲಿ ಅನುಮಾನವಿಲ್ಲ. ಇನ್ನು ಮುಂದಾದರೂ, ಕಿರುತೆರೆಯಲ್ಲಿ ಕೀಳು ಅಭಿರುಚಿಯ ಕಾರ್ಯಕ್ರಮಗಳು ಬಿತ್ತರವಾಗುವುದು ಕೊನೆಗೊಳ್ಳಲಿ. ನಮ್ಮ ಸಂಸ್ಕೃತಿ-ಪರಂಪರೆಯನ್ನು ಬಿಂಬಿಸುವಂಥ ಅಥವಾ ಮಾಹಿತಿ ಒದಗಿಸುವಂಥ ಕಾರ್ಯಕ್ರಮಗಳು ಪ್ರಸಾರವಾಗಲಿ ಎಂಬುದು ನನ್ನ ಆಶಯ.

- ವೆಂಕಟೇಶ್ ಕೆ.ಎಸ್., ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ಡಾ.ಆನಂದ ಕುಲಿಗೋಡ, ಧಾರವಾಡ**
ಭಟ್ರೇ, ಮೊಯಿಲಿಯವರಿಗೆ ಜ್ಞಾನಪೀಠ ಬಂದರೆ?
- **ಆಗ ಆ ಪ್ರಶಸ್ತಿಯನ್ನು ಪಡೆಯದವರೇ ಗ್ರೇಟ್!**

- **ಎಲ್.ವಿ.ಸತೀಶ್, ಮೈಸೂರು**
ಭಟ್ರೇ, ಹೆಂಡತಿಯನ್ನು ಚೆನ್ನಾಗಿ ನೋಡಿಕೊಂಡರೆ ಜೀವನ ಪಾವನವಂತೆ?
- **ಹಾಗೆ ನೋಡಿಕೊಳ್ಳುವವನ ಜೀವನ ಏನಾಗಿರುತ್ತೆ ಗೊತ್ತಾ?!**

- **ಸೂರ್ಯ, ವೀರಾಜಪೇಟೆ**
ಭಟ್ರೇ, ಯಾವ ಹೆಣ್ಣೂ ನನ್ನ ಏಕಾಗ್ರತೆಗೆ ಭಂಗ ತರಲು ಸಾಧ್ಯವಿಲ್ಲ ಅಂತ ಇಲ್ಲೊಬ್ಬ ಹೇಳ್ತಾನಲ್ಲ?
- **ಆತ ವೃದ್ಧಾಶ್ರಮದ ವಾರ್ಡನ್ ಹುದ್ದೆಗಷ್ಟೇ ಲಾಯಕ್ಕು!**

- **ವೇಣುಗೋಪಾಲ ಕಂಚಿತೋಟ, ಕಡೂರು**
ಸರ್, ಏರಿದ್ದು ಇಳಿಯುತ್ತೆ ಅಂತಾರಲ್ಲ?
- **ಈ ಮಾತು ಎಣ್ಣೆ ರೇಟಿಗೆ ಮಾತ್ರ ಅನ್ವಯಿಸುವುದಿಲ್ಲ!**

- **ಉಜ್ಜನಿ ಜಲೇಂದ್ರ, ಮಲ್ಲುಂಗೆರೆ**
ಭಟ್ರೇ, ಸತ್ತ ಮೇಲೂ ಫೇಸ್‌ಬುಕ್, ವಾಟ್ಸ್ಯಾಪ್ ಮತ್ತು ಇನ್ಸ್ಟಾ ನೋಡುವಂತಿದ್ದರೆ?
- **ಆಗ ಎಲ್ಲರೂ ಸಂತಸದಿಂದ ಸಾಯಲು ಬಯಸುತ್ತಿದ್ದರು!**

- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ಮೂವತ್ಮೂರು ವರ್ಷ ಅಂತರವಿದ್ದರೂ ಸಲ್ಮಾನ್, ರಶ್ಮಿಕಾಗೆ ಕಾಳು ಹಾಕ್ತಾನಲ್ಲ?
- **ಇವನ್ನೆಲ್ಲ ನೋಡಿದರೆ ರಾಹುಲ್ ಗಾಂಧಿಗೆ ಏನನಿಸಬಹುದು ಎಂದು ಯೋಚಿಸಿದ್ದೀಯಾ?!**

- **ಮುತ್ತಣ್ಣ, ಬಾಳ್ಳುಪೇಟೆ**
ಭಟ್ರೇ, ಜಪಾನ್ ಬಗ್ಗೆ ನೀವು ಏನನ್ನೂ ಬರೆಯದೇ ಉಳಿಸುವಂತೆ ಕಾಣುತ್ತಿಲ್ಲವಲ್ಲ?
- **ಹಾಗಾದ್ರೆ, ಈಗಷ್ಟೇ ಶುರು ಹಚ್ಚಿಕೊಂಡಿದ್ದೀರಿ ಅಂತ ಬರ್ಕಲಿ ರಮೇಶ್ ಹೇಳಿದ್ಯಾಕೋ?**

- **ಮಹಾನಂದ ಪಾಟೀಲ,** (ಇಮೇಲ್)
ಭಟ್ರೇ, ರಾಜ್ಯೋತ್ಸವ ಪ್ರಶಸ್ತಿಯನ್ನು ಇನ್ನು ಮುಂದೆ ಯಾರಿಗೆ ಕೊಡ್ತಾರಂತೆ?
- **ಈ ಸಲ ಯೋಗ್ಯರಿಗೆ ಕೊಡಲು ನಿರ್ಧರಿಸಿದ್ದೇವೆ ಎಂದು ಸಚಿವ ತಂಗಡಗಿ ಹೇಳದಿದ್ದರೆ ಸಾಕು!**

- **ಕೇಶವ ಗುರು, ಹುಬ್ಬಳ್ಳಿ**
ಭಟ್ರೇ, ಕೋಪ ಬಂದಾಗ ಏನು ಮಾಡಬೇಕು?
- **ಅದು ನಾವು ಯಾರ ಮೇಲೆ ಕೋಪ ಮಾಡಿಕೊಂಡಿದ್ದೇವೆ ಎಂಬುದನ್ನು ಅವಲಂಬಿಸಿರುತ್ತದೆ!**

- **ಶಶಿಕಲಾ ಹಿರೇಮಠ, ದಾವಣಗೆರೆ**
ಭಟ್ರೇ, ಎಣ್ಣೆ ರೇಟು ಜಾಸ್ತಿಯಾದರೂ ಗಂಡಸರ ಮೇಲೆ ಪರಿಣಾಮ ಬೀರುತ್ತಿಲ್ಲವಲ್ಲ?
- **ಪರಿಣಾಮ ಬೀರೋದು ಎಣ್ಣೆ ಮಾತ್ರ, ಅದರ ರೇಟಲ್ಲ!**

ಶಿರಸಿಯ ಸಿರಿ: ಯುಗಾದಿಯ ಶೋಭಾಯಾತ್ರೆ

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಹಳೆಯದು ಕಳೆಯಿತು, ಹೊಸ ವರ್ಷ ಶುರುವಾಯಿತು. ಬಹುತೇಕ ಜನರಿಗೆ ಯುಗಾದಿ ಎಂದರೆ ಹೊಸ ವರ್ಷಕ್ಕೆ ನಾಂದಿ. ಮನೆಯಲ್ಲಿ ಪೂಜೆ, ಬೇವು-ಬೆಲ್ಲ ಸೇವನೆ, ವಿತರಣೆ. ಅದರೊಂದಿಗೆ, 'ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ, ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ' ಹಾಡು. ಯುಗಾದಿಯನ್ನು ಊರ ಉತ್ಸವದಂತೆ, ನಾಡಹಬ್ಬದಂತೆ ಸಂಭ್ರಮಿಸಿ ಆಚರಿಸುವ, ಇಡೀ ಪಟ್ಟಣವನ್ನೇ ಮದುವಣಗಿತ್ತಿ ಯಂತೆ ಶೃಂಗಾರಗೊಳಿಸುವ ಕುರಿತು ಕೇಳಿದ್ದೀರಾ? ಊರಿನ ಜನರೆಲ್ಲ ಒಟ್ಟಾಗಿ ಕಲೆತು, ಒಂದಷ್ಟು ಶ್ರವಣ, ಒಂದಷ್ಟು ಮನನ, ನಂತರ ಊರಿನ ಪ್ರಮುಖ ಬೀದಿಗಳಲ್ಲಿ ಪಥ ಸಂಚಲನ ನಡೆಸುವ ವಿಷಯ ತಿಳಿದಿದ್ದೀರಾ? ಇಂಥ ವಿಷಯವನ್ನು ಓದಿದರೆ, ಕೇಳಿದರೆ ಅದರ ಅಗಾಧತೆಯ ಅರಿವಾಗುವುದಿಲ್ಲ. ಅದೇನಿದ್ದರೂ ಕಣ್ಣಿನಿಂದ ಕಾಣಬೇಕಾದದ್ದು, ಸ್ವತಃ ಭಾಗವಹಿಸಬೇ ಕಾದದ್ದು, ತನ್ಮೂಲಕ ಅನುಭವಿಸಿ ಆನಂದಿಸಬೇಕಾದದ್ದು.

ಭಾರತೀಯ ಹಬ್ಬಗಳೇ ವಿಶೇಷ. ಅದರಲ್ಲೂ, ಹಿಂದೂ ಧರ್ಮದಲ್ಲಿ ಇರುವಷ್ಟು ಹಬ್ಬಗಳು ಇನ್ನೆಲ್ಲೂ ಇರಲಿಕ್ಕಿಲ್ಲ. ಪ್ರತಿ ಹಬ್ಬಕ್ಕೂ ಅದರದ್ದೇ ಆದ ವಿಶೇಷತೆಯಿದೆ, ಘನತೆಯಿದೆ, ರೀತಿ-ರಿವಾಜಿದೆ, ಆಚರಣೆಯ ವಿಧಾನವಿದೆ. ಅದೆಲ್ಲವೂ ಹೌದಾದರೂ, ಹಬ್ಬವನ್ನು ಒಂದೇ ಮಾತಿನಲ್ಲಿ ಹೇಳುವುದಾದರೆ, ಹಬ್ಬವೆಂದರೆ ಸಂಭ್ರಮ, ಸಡಗರ. ಆದರೆ ಒಪ್ಪಬೇಕಾದ ಮಾತೆಂದರೆ, ಈಗ ಹಬ್ಬಗಳು ಮುಂಚಿನಂತಿಲ್ಲ, ದಿನದಿಂದ ದಿನಕ್ಕೆ ಆಚರಣೆಗಳು ಮೊಟಕುಗೊಳ್ಳುತ್ತಿವೆ, ಸಡಗರ ಕ್ಷೀಣಿಸುತ್ತಿದೆ. ಇದಕ್ಕೆ ಅಪವಾದ ಎಂಬಂತೆ ದೇಶದ ಕೆಲವು ಕಡೆಗಳಲ್ಲಿ ಕೆಲವು ಹಬ್ಬಗಳನ್ನು ವಿಭಿನ್ನವಾಗಿ ಆಚರಿಸುವುದೂ ಇದೆ.

ಇಂಥ ಸುಂದರ ಅಪವಾದ ಹೊತ್ತ ಊರುಗಳಲ್ಲಿ ಶಿರಸಿ ಪಟ್ಟಣವೂ ಒಂದು. ಕಳೆದ 27 ವರ್ಷಗಳಿಂದ 'ಯುಗಾದಿ ಎಂದರೆ ಶಿರಸಿ' ಎನ್ನುವಂತಾಗಿದೆ. ನಿಜ, ಶಿರಸಿಯಲ್ಲಿ ಯುಗಾದಿ ಹಬ್ಬ ನಡೆಯುವ ಹಾಗೆ ರಾಜ್ಯದ, ದೇಶದ, ಅಲ್ಲ ವಿಶ್ವದ ಇನ್ಯಾವುದೇ ಭಾಗದಲ್ಲಿಯೂ ನಡೆಯಲಿಕ್ಕಿಲ್ಲ. ಅಸಲಿಗೆ ಯುಗಾದಿ ಎಂದರೆ ಹಿಂದೂ ವರ್ಷದ ಆರಂಭದ ದಿನ. ಆದರೆ ಶಿರಸಿಯಲ್ಲಿ ಇದು ವರ್ಷದ ಆರಂಭದ ದಿನದೊಂದಿಗೆ ಹಬ್ಬದ ದಿನವೂ ಹೌದು, ಉತ್ಸವದ ದಿನವೂ ಹೌದು, ಯಾತ್ರೆಯ ದಿನವೂ ಹೌದು! ಹಾ, ಹಾ... ಯಾತ್ರೆಯೆಂದರೆ ತೀರ್ಥ ಯಾತ್ರೆಯಲ್ಲ, ಇದು ಶಿರಸಿಯ ಸಿರಿ- ಶೋಭಾಯಾತ್ರೆ!

ಹೀಗೆ ಹೇಳುವುದಕ್ಕೆ ಕಾರಣವಿದೆ. ಶಿರಸಿಯಲ್ಲಿ ಯುಗಾದಿ ಕೇವಲ ಹೆಸರಿಗೆ ಮಾತ್ರ ಯುಗಾದಿಯಲ್ಲ. ಇಲ್ಲಿ ಸ್ವಲ್ಪ ಭಿನ್ನ. ಯುಗಾದಿಗೆ 3-4 ದಿನ ಮುಂಚಿತವಾಗಿಯೇ ಇಡೀ ಊರೇ ಶೃಂಗಾರಗೊಳ್ಳುತ್ತದೆ. ಗಲ್ಲಿ, ಬೀದಿ, ವೃತ್ತಗಳ ಮೇಲೆ ಕೇಸರಿ ಪತಾಕೆ ಎಲ್ಲರನ್ನೂ ಸ್ವಾಗತಿಸಲು ಸಿದ್ಧವಾಗಿರುತ್ತದೆ. ಹಬ್ಬದ ದಿನ ಬಹುತೇಕ ಮನೆಗಳ ಮುಂದೆ ರಂಗೋಲಿ ಹರಡಿಕೊಂಡಿರುತ್ತದೆ. ಬಹುತೇಕ ಹಿಂದೂ ಮನೆಗಳ ಮುಂದೆ ಅಥವಾ ಮನೆಯ ಮೇಲೆ ಕೇಸರಿಯ ಭಗವಾ ಧ್ವಜ ಹಾರಾಡುತ್ತಿರುತ್ತದೆ. ಯುಗಾದಿಯ ದಿನ ಊರಿನ ಜನರು ಬೆಳಗ್ಗೆ ಮನೆಯಲ್ಲಿ ಪೂಜೆ ಪುನಸ್ಕಾರಗಳನ್ನು ನೆರವೇರಿಸಿದರೆ, ಸಾಯಂಕಾಲವಾಗುತ್ತಿದ್ದಂತೆ, ವಿಕಾಸ ಆಶ್ರಮದ ಮೈದಾನದಲ್ಲಿ ಒಟ್ಟುಗೂಡುತ್ತಾರೆ. ಅಲ್ಲಿ ಸೋಂದಾ ಸ್ವರ್ಣವಲ್ಲಿ ಮಠದ ಶ್ರೀಗಳ ಆಶೀರ್ವಚನವಿರುತ್ತದೆ. ಅವರ ಜತೆಗೆ ಬಣ್ಣದ ಮಠದ ಸ್ವಾಮೀಜಿ, ಸೋಂದಾ ಜೈನ ಮಠದ ಸ್ವಾಮೀಜಿ, ಹೀಗೆ ಅಕ್ಕ-ಪಕ್ಕದ ಬೇರೆ ಬೇರೆ ಮಠದ ಸ್ವಾಮೀಜಿಗಳು ಒಂದು ವೇದಿಕೆಯಲ್ಲಿ ಸೇರಿ, ದೀಪ ಬೆಳಗಿ, ಕಾರ್ಯಕ್ರಮವನ್ನು ಉದ್ಘಾಟಿಸುತ್ತಾರೆ. ಆಶೀರ್ವಚನ, ಸಂದೇಶ ನೀಡುತ್ತಾರೆ. ನಂತರ ಶೋಭಾಯಾತ್ರೆಗೆ ಚಾಲನೆ ನೀಡುತ್ತಾರೆ.

ಸಾಯಂಕಾಲ ಸುಮಾರು 6 ಗಂಟೆಗೆ ಆರಂಭವಾಗುವ ಈ ಶೋಭಾಯಾತ್ರೆ, ಸತತ 5-6 ತಾಸು ಊರಿನ ಪ್ರಮುಖ ರಸ್ತೆಗಳಲ್ಲಿ, ಗಲ್ಲಿಗಳಲ್ಲಿ ಸುತ್ತಾಡಿ ಶಿರಸಿಯ ಸುಪ್ರಸಿದ್ಧ ಮಾರಿಕಾಂಬಾ ದೇವಾಲಯದಲ್ಲಿ ಕೊನೆಗೊಳ್ಳುತ್ತದೆ. ಶೋಭಾಯಾತ್ರೆಯಲ್ಲಿ ಸಾವಿರ ಸಾವಿರ ಜನರು ಪಾಲ್ಗೊಳ್ಳುತ್ತಾರೆ. ಈ ಶೋಭಾಯಾತ್ರೆಯ ವಿಶೇಷವೆಂದರೆ, ಶಿರಸಿಯ ಸುತ್ತಮುತ್ತಲಿನ ವಿವಿಧ ಕಲಾತಂಡಗಳು, ಸಂಘ ಸಂಸ್ಥೆಗಳಿಂದ ಹಿಡಿದು, ಮಹಿಳಾ ಮಂಡಳಿ, ಶಿಶುವಿಹಾರ ಕೇಂದ್ರ, ಯುವಕ ಮಂಡಳಿಯವರೆಗಿನ ಹಲವರು ಇದರ ಭಾಗವಾಗುತ್ತಾರೆ. ಸಂಸ್ಥೆ, ಮಂಡಳಿಯ ವತಿಯಿಂದ ಅಥವಾ ಒಂದು ಗಲ್ಲಿಯ ಜನ ಸೇರಿ ಚಲಿಸುವ ಬಂಡಿಯ ಮೇಲೆ ಸ್ತಬ್ಧಚಿತ್ರವನ್ನು ನಿರ್ಮಿಸಿರುತ್ತಾರೆ. ಕೆಲವು ಬಂಡಿಗಳ ಮೇಲೆ ಸ್ತಬ್ಧಚಿತ್ರದ ಹೊರತಾಗಿ, ನೃತ್ಯ, ಮಾತುಗಳು, ಹಿನ್ನೆಲೆ

ಸಂಗೀತ, ಅದಕ್ಕೆ ತಕ್ಕ ಅಭಿನಯ, ಇತ್ಯಾದಿಗಳು ನಡೆಯುತ್ತಿರುತ್ತವೆ. ಇವೆಲ್ಲವೂ ಪುರಾಣ, ಇತಿಹಾಸ ಅಥವಾ ಸಾಮಾಜಿಕ ಕಳಕಳಿಯನ್ನು ಬಿತ್ತರಿಸುವ ಚಿತ್ರಗಳು, ಅಭಿನಯ ಗಳು, ಸಂದೇಶಗಳೂ ಆಗಿರುತ್ತವೆ. ವಿಶೇಷವೆಂದರೆ ಇದರಲ್ಲಿ ಮಹಿಳೆಯರು, ಬಾಲಕಿಯರು, ಚಿಕ್ಕ ಮಕ್ಕಳು ಕೂಡ ಭಾಗವಹಿಸುತ್ತಾರೆ.

ಮೆರವಣಿಗೆಯಲ್ಲಿ ಡೊಳ್ಳು ಕುಣಿತ, ಚಂಡೆ ವಾದನ, ಭಜನೆ, ಕೋಲಾಟ, ಹೂವಿನ ಕೋಲು ಇತ್ಯಾದಿ ಕರ್ನಾಟಕದ ಕಲೆಯನ್ನು ಬಿತ್ತರಿಸುವ ಸ್ಥಳೀಯ ಮತ್ತು ಸುತ್ತಮುತ್ತಲಿನ ಪ್ರದೇಶದ ತಂಡಗಳು ಭಾಗವಹಿಸುತ್ತವೆ. ಆರಂಭದ ವರ್ಷಗಳಲ್ಲಿ ಒಂದು ಕಲಾಪ್ರಕಾರದ ಒಂದೊಂದು ತಂಡ ಮೆರವಣಿಗೆಯಲ್ಲಿ ಭಾಗವಹಿಸುತ್ತಿತ್ತು. ಈಗ ಇವುಗಳ ಸಂಖ್ಯೆ ಹೆಚ್ಚಿ, 4-5 ಡೊಳ್ಳು ಕುಣಿತದ ತಂಡಗಳು, ಅನೇಕ ಭಜನಾ ತಂಡಗಳು ಭಾಗವಹಿಸುತ್ತವೆ. ಬಹುತೇಕ ಎಲ್ಲರೂ ಸ್ವಯಂಪ್ರೇರಿತರಾಗಿಯೇ ಬರುತ್ತಾರೆ. ಹೆಚ್ಚಿನವರಿಗೆ ಸಂದಾಯವಾಗುವುದು ಆಹ್ವಾನಪತ್ರ ಮಾತ್ರವೇ ವಿನಾ ಸಂಭಾವನೆಯಲ್ಲ. ಇವರೆಲ್ಲ ತಮ್ಮ ಖುಷಿಗಾಗಿ, ಊರಿನ ಜನರನ್ನು ಖುಷಿಪಡಿಸುವುದಕ್ಕಾಗಿ ಬಂದು, ಯಾತ್ರೆ (ಮೆರವಣಿಗೆ)ಯಲ್ಲಿ ಪಾಲ್ಗೊಂಡು, ಪ್ರದರ್ಶನ ನೀಡಿ ಹೋಗುವವರು. ಆರಂಭದ ವರ್ಷಗಳಲ್ಲಿ ಹತ್ತರಿಂದ ಇಪ್ಪತ್ತು ಸ್ತಬ್ಧಚಿತ್ರಗಳ ಬಂಡಿಗಳು ಇರುತ್ತಿದ್ದವು. ವರ್ಷದಿಂದ ವರ್ಷಕ್ಕೆ ಇದರ ಸಂಖ್ಯೆಯೂ ಹೆಚ್ಚುತ್ತಿದೆ. ಈ ವರ್ಷ ಐವತ್ತಕ್ಕೂ ಹೆಚ್ಚು ಬಂಡಿಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು. ಇದರ ಜತೆಗೆ, ಕರಡಿಯ ವೇಷ ಹಾಕಿದವರು, ಹುಲಿವೇಷ ತೊಟ್ಟವರು, ಕಥಕ್ಕಳಿಯ ಪೋಷಾಕು ಉಟ್ಟವರು, ಭಾರತೀಯತೆಗೆ ಸಂಬಂಧಿಸಿದ ಉಡುಗೆ ಧರಿಸಿದ ಜನರೂ ಯಾತ್ರೆಯೊಂದಿಗೆ ಪಾಲ್ಗೊಳ್ಳುತ್ತಾರೆ. ನಿಮಗೆ ಆಶ್ಚರ್ಯ ಎನಿಸಬಹುದು, ನಂಬಿಕೆ ಬರದೇ ಇರಬಹುದು, ಸಾಯಂಕಾಲದಿಂದ ಮಧ್ಯರಾತ್ರಿ ಕಳೆಯುವವರೆಗೆ ನಡೆಯುವ ಈ ಶೋಭಾಯಾತ್ರೆಯಲ್ಲಿ ಪೊಲೀಸರಿಗೆ ಹೆಚ್ಚಿನ ಕೆಲಸವೇನೂ ಇರುವುದಿಲ್ಲ. ಏಕೆಂದರೆ ಇಲ್ಲಿ ಸರ ಹರಿಯುವವರು, ಜೇಬು ಕತ್ತರಿಸುವವರು ಅಥವಾ ಹೆಣ್ಣು ಮಕ್ಕಳನ್ನು ಚುಡಾಯಿಸುವವರು ಇರುವುದಿಲ್ಲ. ಸಾವಿರಾರು ಸಂಖ್ಯೆಯಲ್ಲಿರುವ ಮಹಿಳೆಯರು, ಪುರುಷರು, ಯುವಕ ಯುವತಿಯರು, ಒಬ್ಬರನ್ನೊಬ್ಬರು ಸಹೋದರಿ-ಸಹೋದರರಂತೆ, ಬಂಧುಗಳಂತೆ ಕಾಣುತ್ತಾರೆ.

ಶಿರಸಿಯ ಶಾಸಕರು, ಉತ್ತರ ಕನ್ನಡ ಜಿಲ್ಲೆಯ ಸಂಸದರು, ಇತರ ಪ್ರಮುಖ ರಾಜಕೀಯ ಧುರೀಣರೂ ಈ ಶೋಭಾಯಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. ವಿಶೇಷವೆಂದರೆ, ಅವರು ಸಭಾ ಕಾರ್ಯಕ್ರಮದಲ್ಲಿ, ವೇದಿಕೆಯಲ್ಲಿ ಇರದೇ ಜನರೊಂದಿಗೆ ಸಾಮಾನ್ಯರಾಗಿ ಹೆಜ್ಜೆ ಹಾಕುತ್ತಾರೆ. ಅವರ ಅಕ್ಕಪಕ್ಕದಲ್ಲೂ ಪೊಲೀಸರಾಗಲಿ, ಅಂಗರಕ್ಷಕರಾಗಲಿ ಕಾಣುವುದಿಲ್ಲ. ಈ ಯಾತ್ರೆಯಲ್ಲಿ ಪಕ್ಷ ಭೇದವಿಲ್ಲ, ಲಿಂಗ ಭೇದವಿಲ್ಲ, ಇತ್ತೀಚೆಗಂತೂ ಧರ್ಮ ಭೇದವೂ ಇಲ್ಲ. ಏಕೆಂದರೆ ಅನ್ಯಧರ್ಮೀಯರು ಕೂಡ ಈ ಶೋಭಾಯಾತ್ರೆಯಲ್ಲಿ ಪಾಲ್ಗೊಂಡು ತಮ್ಮ ಕೈಲಾದದ್ದನ್ನು ಮಾಡುತ್ತಾ ಸಹಕರಿಸುತ್ತಿದ್ದಾರೆ.

ಈ ಶೋಭಾಯಾತ್ರೆಯಲ್ಲಿ ಪಾಲ್ಗೊಳ್ಳುವ ಸ್ತ್ರೀಯರು ಬಹುತೇಕ ಸೀರೆ, ಲಂಗ-ದಾವಣಿ, ಚೂಡಿದಾರ್ ಇತ್ಯಾದಿ ಭಾರತೀಯ ಉಡುಪುಗಳಲ್ಲಿದ್ದರೆ, ಪುರುಷರು ಬಿಳಿ ಅಂಗಿ ತೊಟ್ಟು, ಹೆಗಲಿಗೆ ಕೇಸರಿ ಶಾಲು ಹಾಕಿರುತ್ತಾರೆ. ಹಣೆಗೆ ಕೇಸರಿ ತಿಲಕವಿಟ್ಟುಕೊಂಡು, ಕೈಯಲ್ಲಿ ಭಗವಾ ಧ್ವಜವನ್ನು ಹಿಡಿದು ಉದ್ಘೋಷಗಳೊಂದಿಗೆ ನಡೆಯುತ್ತಿರುತ್ತಾರೆ. ಮೆರವಣಿಗೆಯ ನಡುವೆ ಅಲ್ಲಲ್ಲಿ ದೊಡ್ಡ ಭಗವಾ ಧ್ವಜ ಸುಮಾರು ಹದಿನೈದರಿಂದ ಇಪ್ಪತ್ತು ಅಡಿ ಎತ್ತರದಲ್ಲಿ ವೃತ್ತಾಕಾರವಾಗಿ ಹಾರಾಡುತ್ತಿರುತ್ತದೆ.

ಈ ವರ್ಷ ಶೋಭಾಯಾತ್ರೆಯಲ್ಲಿ ದೇವಿಯ ಪಲ್ಲಕ್ಕಿಗೆ ಚಾಲನೆ ಸಿಕ್ಕಿದೆ. ಶೋಭಾಯಾತ್ರೆಯಲ್ಲಿ ಎಲ್ಲಕ್ಕಿಂತ ಮುಂದೆ ಪುರುಷರು ಭಗವಾ ಧ್ವಜ ಹಿಡಿದು ನಡೆಯುತ್ತಾರೆ. ನಂತರ ಪಲ್ಲಕ್ಕಿ, ಅದರ ನಂತರ ಇತರ ಬಂಡಿಗಳು ನಡುವೆ ಬೇವು ಬೆಲ್ಲ ಹಂಚುವವರು, ಕಲಾತಂಡ ಹೀಗೆ ಮೆರವಣಿಗೆ ಸಾಗುತ್ತದೆ. ಆರಂಭದಿಂದ ಮಾರಿಕಾಂಬಾ ದೇವಾಲಯ ತಲುಪುವವರೆಗೆ 6-7 ಪ್ರಮುಖ ವೃತ್ತಗಳು ಸಿಗುತ್ತವೆ. ಅಲ್ಲಿ ಕಲಾತಂಡಗಳು ತಮ್ಮ ಪ್ರದರ್ಶನವನ್ನು ಜನರಿಗೆ ತೋರ್ಪಡಿಸುತ್ತವೆ.

ಶೋಭಾಯಾತ್ರೆ ನಡೆಯುವ ಮಾರ್ಗದಲ್ಲಿ ಅಲ್ಲಲ್ಲಿ ತಂಪು ಪಾನೀಯದ, ತಿಂಡಿ-ತಿನಿಸಿನ ಅಂಗಡಿಗಳು ಮಧ್ಯರಾತ್ರಿಯವರೆಗೂ ತೆರೆದಿರುತ್ತವೆ. ಕೆಲವು ಸಂಘ-ಸಂಸ್ಥೆಗಳು ಯಾತ್ರೆಯಲ್ಲಿ ಪಾಲ್ಗೊಂಡವರಿಗಾಗಿ ಇದನ್ನು ಉಚಿತವಾಗಿಯೂ ವಿತರಿಸುತ್ತವೆ. ಇಂಥ ಉತ್ಸವಗಳು ನಡೆಯುವಾಗ ಯಾವುದಾದರೂ ಒಂದು ಸಮಿತಿ ಎಂದು ಇರಬೇಕಲ್ಲ? ಅದಕ್ಕೆ ಒಬ್ಬ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ಸಂಚಾಲಕ ಇತ್ಯಾದಿ ಇರಲೇಬೇಕು, ಇಲ್ಲಿಯೂ ಇರುತ್ತದೆ. ಯುಗಾದಿ ಸಮಿತಿಯವರು ಸಭೆ ನಡೆಸಿ ಆ ವರ್ಷದ ಯೋಜನೆಯನ್ನು ಜನರ ಮುಂದಿಡುತ್ತಾರೆ. ಮನೆಗಳಿಗೆ, ಅಂಗಡಿಗಳಿಗೆ ಭೇಟಿಕೊಡುತ್ತಾರೆ. ಬಾವುಟ ವಿತರಿಸುತ್ತಾರೆ. ಈ ವರ್ಷವಂತೂ ಮನೆ-ಮನೆಗೆ ಹೋಗಿ, ಅಕ್ಷತೆ ನೀಡಿ, ಮನೆಯಿಂದ ಒಬ್ಬರಾದರೂ ಬರಬೇಕು ಎಂದು ಆಹ್ವಾನ ನೀಡಿದ್ದಾರೆ. ಹಾಗೆಯೇ ಮನೆಯವರು, ಅಂಗಡಿಯವರು ಧನಸಹಾಯ ಮಾಡಿದರೆ, ಪಡೆದುಕೊಂಡು ಬರುತ್ತಾರೆ (ಇಲ್ಲಿ ವಸೂಲಿಗೆ ಇಳಿಯುವುದು ಅಥವಾ ಒತ್ತಾಯಪೂರ್ವಕವಾಗಿ ಯಾರನ್ನಾದರೂ ಕಾಡಿಸಿ, ಪೀಡಿಸಿ ಹಣ ಪಡೆಯುವ ಪದ್ಧತಿ ಇಲ್ಲ). ಹಾಗೆ ಒಟ್ಟಾದ ಹಣವನ್ನು ಪತಾಕೆ ಹಾಕುವುದಕ್ಕೆ, ಬ್ಯಾನರ್ ಮತ್ತು ಕರಪತ್ರಗಳನ್ನು ಮುದ್ರಿಸುವುದಕ್ಕೆ, ಕಾರ್ಯಕ್ರಮದ ನಿರ್ವಹಣೆಗೆ ಇತ್ಯಾದಿ ಖರ್ಚು ವೆಚ್ಚಗಳಿಗೆ ವಿನಿಯೋಗಿಸುತ್ತಾರೆ. ಬಹುತೇಕ ಪತಾಕೆ, ಬ್ಯಾನರ್‌ಗಳನ್ನು ಕಾರ್ಯಕರ್ತರೇ ಕಟ್ಟುತ್ತಾರೆ. ವರ್ತಕರು, ವ್ಯಾಪಾರಸ್ಥರು ಸ್ಪಂದಿಸಿ ಉದಾರ ಹೃದಯಿಗಳಾಗಿ ಧನಸಹಾಯಕ್ಕೆ ಮುಂದಾಗುತ್ತಾರೆ. ವಿಶೇಷವೆಂದರೆ ಕಳೆದ 27 ವರ್ಷಗಳಿಂದ ನಡೆದು ಬರುತ್ತಿರುವ ಈ ಉತ್ಸವದಲ್ಲಿ 'ಯಾರೋ ಲೂಟಿ ಹೊಡೆದರಂತೆ', 'ಹಣ ನುಂಗಿದರಂತೆ', 'ಸ್ವಂತಕ್ಕಾಗಿ ಬಳಸಿಕೊಂಡರಂತೆ' ಇತ್ಯಾದಿ ಯಾವುದೇ ಆಪಾದನೆಗಳು ಕೇಳಿಬಂದಿಲ್ಲ.

ಶಿರಸಿಯ ಹೋಳಿಹಬ್ಬ ಎಂದರೆ ಇಂದಿಗೂ ವಿಶೇಷವೇ. ಇಲ್ಲಿ ನಡೆಯುವ ಬೇಡರ ವೇಷ ಮತ್ತೆಲ್ಲೂ ನಡೆಯುವುದಿಲ್ಲ. ಈಗ ಅದರ ಜತೆಗೆ ಶೋಭಾಯಾತ್ರೆಯೂ ಸೇರಿಕೊಂಡು ಶಿರಸಿಯನ್ನು ಸಾಂಸ್ಕೃತಿಕ ಕೇಂದ್ರವನ್ನಾಗಿಸುತ್ತಿದೆ. 27 ವರ್ಷಗಳ ಹಿಂದೆ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನದ ಪೂಜ್ಯ ಶ್ರೀಗಳು ಶೋಭಾಯಾತ್ರೆಯ ಪರಿಕಲ್ಪನೆಯನ್ನು ಆಲೋಚಿಸಿ, ಅದಕ್ಕೆ ಚಾಲನೆ ನೀಡಿದರು. ಅಲ್ಲಿಂದ ಇಲ್ಲಿಯವರೆಗೆ ಈ ಉತ್ಸವದಲ್ಲಿ ರಾಜಕೀಯ ಮೇಲಾಟ, ಜಾತಿ ಧರ್ಮಗಳ ಕೀಳಾಟ, ಚಿತ್ರತಾರೆಯರ ಹೇಸಾಟ, ಪಾನಮತ್ತರ ತೂರಾಟ, ಕರ್ಕಶ ಡಿಜೆ ಶಬ್ದದ ಅಬ್ಬರದಾಟ, ಹುಚ್ಚು ಕುಣಿದಾಟ, ಯಾವುದೂ ಒಳಗೆ ಹೊಕ್ಕಿಲ್ಲ. ಆದ್ದರಿಂದಲೇ ಮಧ್ಯರಾತ್ರಿಯೂ ಮಹಿಳೆಯರು, ಮಕ್ಕಳು ಇದರಲ್ಲಿ ನಿರ್ಭಿಡೆಯಿಂದ ಭಾಗವಹಿಸುತ್ತಾರೆ. ಮನೆಯವರೂ ತಮ್ಮ ಹೆಂಡಿರು ಮಕ್ಕಳನ್ನು ನಿರ್ಭಯರಾಗಿ ಕಳಿಸಿಕೊಡುತ್ತಾರೆ. ಈಗ ನೀವೇ ಹೇಳಿ, ಶಿರಸಿಯಲ್ಲಿ ಯುಗಾದಿ ಕೇವಲ ಮನೆಯ ಹಬ್ಬವಾಗಿರದೆ, ನಾಡಿನ ಹಬ್ಬವಾಗಿ ಮಾರ್ಪಟ್ಟಿದೆ ಎಂದರೆ ಅತಿಶಯೋಕ್ತಿಯೇನೂ ಆಗಲಿಲ್ಲ ಅಲ್ಲವೇ? ಇನ್ನೂ ಒಂದು ಸಂತಸದ ಸುದ್ದಿ ಎಂದರೆ, ಈ ಮಾದರಿಯಲ್ಲಿಯೇ ಈಗ ಅಕ್ಕಪಕ್ಕದ ತಾಲೂಕುಗಳಾದ ಸಿದ್ದಾಪುರ, ಯಲ್ಲಾಪುರದಲ್ಲಿಯೂ ಯುಗಾದಿ ಉತ್ಸವದ ಶೋಭಾಯಾತ್ರೆ ನಡೆಯುತ್ತಿದೆ. ಇದು ರಾಜ್ಯದಾದ್ಯಂತ, ದೇಶದಾದ್ಯಂತ ಪಸರಿಸಲಿ. ಮುಂದೊಂದು ದಿನ ಶಿರಸಿಯಿಂದ ಹೊರಟ ಶೋಭಾಯಾತ್ರೆ ಬೆಂಗಳೂರು ಮಾರ್ಗವಾಗಿ ದೆಹಲಿಯನ್ನು ತಲುಪಲಿ.

ನಾರದ ಸಂಚಾರ

ಕಲಹಪ್ರಿಯ
naadigru@gmail.com

ಇದು ಸ್ಪರ್ಧಾ ರಾಜಕೀಯ!

ರಾಜಕೀಯದಲ್ಲಿ 'ಸ್ಪರ್ಧೆ' ಇರೋದೇನೋ ನಿಮಗೆ ಗೊತ್ತುಂಟು, ಆದರೆ 'ಸ್ಪರ್ಧೆ'ಯೊಂದರ ವಿಷಯದಲ್ಲೂ ರಾಜಕೀಯದ ಗಿರಗಿಟ್ಲೆ ಆಡ್ತಾ ಇರೋದನ್ನ ನೀವು ಬಲ್ಲಿರೋ? ಪೇಳುವಂಥವರಾಗಿ ಸ್ವಾಮೀ! ಅಂಥದೊಂದು ಸುದ್ದಿ 'ಸುಂಯ್' ಅಂತ ಸುತ್ತಾಡಿಕೊಂಡು ಬಂದಿದೆ ಪಕ್ಕದ ತೆಲಂಗಾಣ ರಾಜ್ಯದಿಂದ. ಬಹುತೇಕರಿಗೆ ಈಗಾಗಲೇ ಗೊತ್ತಿರುವಂತೆ, ಮುಂಬರುವ ಮೇ ತಿಂಗಳಲ್ಲಿ 'ಮಿಸ್ ವರ್ಲ್ಡ್' ಸೌಂದರ್ಯ ಸ್ಪರ್ಧೆಯನ್ನು ನಡೆಸಲು ಹೈದರಾಬಾದ್ ನಗರಿ ಸಜ್ಜಾಗುತ್ತಿದೆ. ಆದರೆ, ಇದರಲ್ಲಿ ಸ್ಪರ್ಧಿಗಳು ತಮ್ಮ 'ಮಾರ್ಜಾಲ ನಡಿಗೆ'ಯನ್ನು (ಆಂಗ್ಲದಲ್ಲಿ 'ಕ್ಯಾಟ್ ವಾಕ್' ಕಣ್ರೀ!) ಪ್ರದರ್ಶಿಸುವ ಮೊದಲೇ ಅಲ್ಲಿನ ಎರಡು ಪ್ರಮುಖ ರಾಜಕೀಯ ಪಕ್ಷಗಳು 'ಮಾರ್ಜಾಲ ಮುಷ್ಟಿಯುದ್ಧ'ಕ್ಕೆ ಇಳಿದುಬಿಟ್ಟಿವೆ. ಅವು ಅಧಿಕಾರಾರೂಢ 'ಕಾಂಗ್ರೆಸ್ಸು' ಮತ್ತು ಅಧಿಕಾರ ವಂಚಿತ 'ಬಿಆರೆಸ್ಸು' (ಭಾರತ ರಾಷ್ಟ್ರ ಸಮಿತಿ) ಎಂಬುದು ನಿಮ್ಮ ಗಮನಕ್ಕೆ.

ಈ ಪೈಕಿ ಬಿಆರ್‌ಎಸ್ ಪಕ್ಷದವರು ಮೊದಲಿಗೆ ಗಂಟಲು ಸರಿಮಾಡಿಕೊಂಡು, "ಇಪ್ಪುಡು ಚೂಡಂಡೀ, ನಮ್ ರಾಜ್ಯ ಈಗಾಗಲೇ ಸಿಕ್ಕಾಪಟ್ಟೆ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದೆ; ಹಿಂಗಿರೋವಾಗ ಆಡಳಿತಾರೂಢ ಕಾಂಗ್ರೆಸ್ಸಿಗರಾದ ನೀವು ಈ ಕಾರ್ಯಕ್ರಮಕ್ಕಾಗಿ ಬರೋಬ್ಬರಿ 200 ಕೋಟಿ ರುಪಾಯಿಯಷ್ಟು ಸಾರ್ವಜನಿಕರ ಹಣವನ್ನು ವ್ಯರ್ಥಮಾಡೋದು ತಪ್ಪಲ್ವಾ? ಇದು ಯಾವ ಪುರುಷಾರ್ಥಕ್ಕಾಗಿ ಸ್ವಾಮೀ? ಈಗಾಗಲೇ ಸಂಕಷ್ಟದಲ್ಲಿ ಸಿಲುಕಿರುವ ರೈತರಿಗೆ ಒತ್ತಾಸೆಯಾಗಿ ನಿಲ್ಲಬಲ್ಲ ಒಂದಿಷ್ಟು ಕಲ್ಯಾಣ ಕಾರ್ಯಕ್ರಮಗಳಿಗೆ ಸದರಿ ಹಣವನ್ನು ತಿರುಗಿಸಿದ್ದರೆ ಅವರ ಹೊಟ್ಟೆಯೂ ತಂಪಾಗುತ್ತಿತ್ತಲ್ಲವೇ?" ಎಂದು ಪ್ರಶ್ನಿಸುವ ಮೂಲಕ ಅಪಸ್ವರದ ಆಲಾಪನೆಯನ್ನು ಮಾಡಿಬಿಟ್ಟರಂತೆ.



ಕಲಹಪ್ರಿಯ ನಾರದರಿಗೆ ಬಂದಿರುವ ಮಾಹಿತಿಯ ಪ್ರಕಾರ, ತೆಲಂಗಾಣ ರಾಜ್ಯವನ್ನು ಬ್ರ್ಯಾಂಡ್ ಮಾಡುವಲ್ಲಿನ ಒಂದು ಸದವಕಾಶವಾಗಿ ಸದರಿ 'ಮಿಸ್ ವರ್ಲ್ಡ್'ನಂಥ ಪ್ರತಿಷ್ಠಿತ ಕಾರ್ಯಕ್ರಮವನ್ನು ಕಾಂಗ್ರೆಸ್ ಸರಕಾರ ಪರಿಗಣಿಸುತ್ತಿದೆ ಯಂತೆ. ಇದರ ಭಾಗವಾಗಿ ಸಮರ್ಥನೆಗಿಳಿದ ಸರಕಾರದ ಪ್ರತಿನಿಧಿಗಳು ಬಿಆರ್‌ಎಸ್‌ನವರನ್ನು ಉದ್ದೇಶಿಸಿ, "ಮೀರು ಏಂ ಮಾಡ್ಲಾಡು ತುನ್ನಾರು? ಈ ಕಾರ್ಯಕ್ರಮಕ್ಕೆ ಒಟ್ಟು ವೆಚ್ಚವಾಗ್ತಾ ಇರೋ ಹಣ 54 ಕೋಟಿ ರುಪಾಯಿಗಳಷ್ಟೇ, ಇದರಲ್ಲಿ ರಾಜ್ಯದ ಕೊಡುಗೆ ಇರೋದು ಅರ್ಧದಷ್ಟು ಮಾತ್ರ" ಎಂದು ಹರಸಾಹಸ ಪಟ್ಟು ಸ್ಪಷ್ಟಪಡಿಸಿದರಂತೆ. ಇದು ಸಾಲದೆಂಬಂತೆ, "10 ವರ್ಷಗಳ ಅಧಿಕಾರಾವಧಿಯಲ್ಲಿ ನಿಮ್ಮ ಬಿಆರ್‌ಎಸ್ ಪಕ್ಷವು ರಾಜ್ಯಕ್ಕೆ ಇಂಥ ದೊಂದು ಕಾರ್ಯಕ್ರಮವನ್ನು ತರಲು ವಿಫಲವಾಯ್ತಲ್ರೀ..!!" ಎಂದೂ ಕಾಂಗ್ರೆಸ್ಸಿಗರು ತಮ್ಮ ರಾಜಕೀಯ ಎದುರಾಳಿಗಳನ್ನು ಟೀಕಿಸಿದ್ದೂ ಆಯ್ತಂತೆ!

ಒಟ್ನಲ್ಲಿ, ಸಮಯ-ಸಂದರ್ಭ ಎಂಥದೇ ಇರಲಿ, ಸಮಾವೇಶ ಯಾವುದೇ ಇರಲಿ, ನಮ್ ರಾಜಕೀಯ ಪಕ್ಷಗಳು ಪರಸ್ಪರ ಕಾಲೆಳೆಯೋಕೆ ಚಾತಕ ಪಕ್ಷಿಗಳಂತೆ ಕಾಯ್ತಾ ಇರ್ತವೆ ಅನ್ನೋದು ಮಾತ್ರ ನಿಜ ಕಣ್ರೀ!

ನಾರಾಯಣ ನಾರಾಯಣ!

ಹಾಲು-ಹಣ್ಣು-ತರಕಾರಿ ಹೀಗೆ ಅಗತ್ಯ ವಸ್ತುಗಳ ಬೆಲೆಯೇರಿಕೆಯಿಂದಾಗಿ ಈಗಾಗಲೇ ಏದುಸಿರು ಬಿಡುತ್ತಿರುವ ಶ್ರೀಸಾಮಾನ್ಯರು, ಸದ್ಯದಲ್ಲೇ ಇನ್ನೊಂದು ಸುತ್ತಿನ ಬರೆ ಹಾಕಿಸಿಕೊಳ್ಳಲು ತಮ್ಮ ಅಂಗಾಂಗಗಳನ್ನು ಮುಂದುಮಾಡಿಕೊಳ್ಳಬೇಕಾಗಿ ಬಂದಿದೆ. ಕಾಫಿ, ಚಹಾ ಮತ್ತು ತಿಂಡಿಗಳ ಬೆಲೆಯೇರಿಕೆ ಮಾಡಲು ಹೋಟೆಲ್ ಮಾಲೀಕರು ಈಗಾಗಲೇ ನಿರ್ಧರಿಸಿರುವುದು ಇದಕ್ಕೆ ಕಾರಣ. ಹೀಗಾಗಿ, ಇನ್ನು ಮುಂದೆ ಕಾಫಿ, ಚಹಾ, ತಿಂಡಿಗಳು ಬಾಯಿಗೆ ಮಾತ್ರ ಬಿಸಿಯಾಗಿರೋಲ್ಲ, ಅವುಗಳ ದರಗಳು ಜೇಬನ್ನೂ ಸುಡೋದು ಖಾತ್ರಿ ಅಂತಾಯ್ತು! ಏನು ಮಾಡೋದು.... ಕಾಲಾಯ ತಸ್ಮೈ ನಮಃ!

ಜನಕನ ಆಸ್ಥಾನವೂ, ಅನುಭವ ಮಂಟಪವೂ!

ಬಸವ ಮಂಟಪ

ರವಿ ಹಂಜ್
vveditoped@gmail.com

(ಭಾಗ-1)

ನಾನು ವಿದ್ಯಾರ್ಥಿಯಾಗಿದ್ದಾಗ ನಮ್ಮ ಪ್ರೊಫೆಸರರು ಕೃತಕ ಬುದ್ಧಿಮತ್ತೆ ಕುರಿತಾಗಿ ಬೋಧಿಸುತ್ತಿದ್ದರು. ಅವರು, ಪಾರ್ವತಿಯು ಗಣಪತಿಯನ್ನು ಸೃಷ್ಟಿಸಿದ ಪೌರಾಣಿಕ ಕತೆಯನ್ನು ಹೇಳುತ್ತ, "ಜಗತ್ತಿನ ಪ್ರಪ್ರಥಮ ಕೃತಕ ಬುದ್ಧಿಮತ್ತೆಯನ್ನು ಸೃಷ್ಟಿಸಿದ್ದು ಪಾರ್ವತಿ" ಎಂದು ವಿದ್ಯಾರ್ಥಿಗಳಲ್ಲಿ ವಿಷಯದ ಬಗ್ಗೆ ಆಸಕ್ತಿ ಮೂಡಿಸಿ ನಂತರ ಕೃತಕ ಬುದ್ಧಿಮತ್ತೆಯ ವೈಜ್ಞಾನಿಕ ವಿಷಯವನ್ನು ಮನಮುಟ್ಟುವಂತೆ ವಿವರಿಸುತ್ತಿದ್ದರು. ಇಂಥ ವಿಧಾನವನ್ನು ಸಾಕಷ್ಟು ಉಪಾಧ್ಯಾಯರು ಅಳವಡಿಸಿಕೊಂಡಿರುವರು. ಕಬ್ಬಿಣದ ಕಡಲೆಯಂಥ ವಿಷಯವನ್ನು ದೃಷ್ಟಾಂತಗಳ ಮೂಲಕ ವರ್ಣಿಸಿ ಕೇಳುಗರ ಮನಮುಟ್ಟುವಂತೆ ವರ್ಣಿಸುವ ವಿಧಾನದ ಆದ್ಯ ಸೃಷ್ಟಿಕರ್ತರು ಭಾರತೀಯರು. ಇದೇ ತಂತ್ರವು ಪಂಚತಂತ್ರ, ಪ್ರವಚನಗಳ ದೃಷ್ಟಾಂತ, ಅಥವಾ ಜನಪದ ಕಥೆಗಳದ್ದು. ಒಟ್ಟಾರೆ ರೂಪಕೋಕ್ತಿಯು ಸಾಹಿತ್ಯದ ಪ್ರಮುಖ ವಿಧಾನ.

ವೇದ, ಶಾಸ್ತ್ರ, ಸೂತ್ರ, ಉಪನಿಷತ್ತು, ಆಗಮಗಳ ಸಾರವು ಹೇಗೆ ಧರ್ಮ, ನೀತಿ, ನೈತಿಕತೆ, ಬದ್ಧತೆ, ಸಾಮಾಜಿಕ ನ್ಯಾಯಗಳ ಅನುಷ್ಠಾನದ ಗುರಿ ಹೊಂದಿದ್ದವು ಎಂಬುದನ್ನು ಸಾಮಾನ್ಯರಿಗೆ ತಿಳಿಸಲು ಸೃಜನಶೀಲ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತಗಳನ್ನು ರಚಿಸಲಾಗಿದೆ ಎಂದು ಅನೇಕ ವಿದ್ವಾಂಸರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಮಹಾಕಾವ್ಯ ಗಳು ಭಾರತದ ಶ್ರೀಮಂತ ರೂಪಕೋಕ್ತಿ ಸಾಹಿತ್ಯಕ್ಕೆ ಭದ್ರ ಬುನಾದಿಯನ್ನು ಹಾಕಿಕೊಟ್ಟವು. ಈ ಮಹಾಕಾವ್ಯಗಳ ಮಾದರಿಯನ್ನೇ ಎಲ್ಲಾ ನೀತಿಕತೆ, ದೃಷ್ಟಾಂತ, ಪ್ರವಚನ, ಜನಪದ ಪ್ರಕಾರಗಳು ಅಳವಡಿಸಿಕೊಂಡಿವೆ.

ರಾಮಾಯಣ ಮತ್ತು ಮಹಾಭಾರತಗಳು ಕಾಲ್ಪನಿಕ ಕಾವ್ಯಗಳೆನಿಸಿದರೂ ಅವುಗಳಲ್ಲಿ ಐತಿಹಾಸಿಕ ಅಂಶಗಳಿವೆ. ರಾಮಾಯಣದ ಬಾಲಕಾಂಡದ ಶ್ಲೋಕವೊಂದು ಹೀಗಿದೆ:

ತಸ್ಯಾಃ ಹುಮ್ ಕಾರತಃ
ರವಿ ಸನ್ನಿಭಾಃ ಕಾಂಭೋಜಾ ಜಾತಾಃ
ಅಥ ಉಧಸಃ ಶಸ್ತ್ರ ಪಾಣಯಃ
ಪಹ್ಲವಾಃ ಸಂಜಾತಾಃ
ಯೋನಿ ದೇಶಾತ್ ಯವನಃ ಚ
ತಥಾ ಶಕೃಿಚ ದೇಶಾತ್ ಶಕಾಃ
ರೋಮ ಕುಪೇಶು ಮ್ಲೇಚ್ಛಾಃ ಚ
ಸ ಕಿರಾತಕಾಃ ಹಾರಿತಾಃ

ಅಂದರೆ, ಕಾಮಧೇನುವಿನ ಯಾವ ಯಾವ ಭಾಗಗಳಿಂದ ಕಾಂಭೋಜ, ಪಹಲ್ವ (ಪಲ್ಲವ), ಯವನ, ಶಕ (ಶಾಕ್ಯ), ಮ್ಲೇಚ್ಛರು, ಮತ್ತು ಕಿರಾತಕರು ಹುಟ್ಟಿದರೆಂದು ಈ ಶ್ಲೋಕ ಹೇಳುತ್ತದೆ. ಇಲ್ಲಿ ಮ್ಲೇಚ್ಛರನ್ನು ವಿದೇಶಿ ಅರೆನಾಗರಿಕ ಬಂಡು ಕೋರರೆನ್ನಲಾದರೆ, ಕಿರಾತಕರು ಗುಡ್ಡಗಾಡುವಾಸಿಗಳೆಂದು ತಿಳಿದುಬರುತ್ತದೆ. ಇನ್ನು ಕಾಂಭೋಜ, ಪಹಲ್ವ, ಯವನ, ಶಕರ ಬಗ್ಗೆ ಐತಿಹಾಸಿಕ ದಾಖಲೆಗಳಿವೆ. ಒಟ್ಟಾರೆ ವಾಸ್ತವ ಜನಾಂಗ ರೂಪಕ ಕಾಮಧೇನುವಿನಿಂದ ಉದ್ಭವಿಸಿದರು ಎಂಬುದು ಒಂದು ಅರ್ಥವಾಗದ ರೂಪಕೋಕ್ತಿ.

ಇದೇ ರೀತಿ ವಿಷ್ಣುಪುರಾಣವು, ಜರಾಸಂಧನು ಕೃಷ್ಣನನ್ನು ಗೆಲ್ಲಲಾಗದೇ ಕಾಳಯವನನೆಂಬ ಯವನ ರಾಜನನ್ನು ಆಹ್ವಾನಿಸಿ ಜಂಟಿಯಾಗಿ ಕೃಷ್ಣನ ಮೇಲೆ ಯುದ್ಧ ಹೂಡುತ್ತಾನೆ ಎನ್ನುತ್ತದೆ. ಕಾಳಯವನನ ಶೌರ್ಯಸಾಹಸಗಳನ್ನು ಬಲ್ಲ ಕೃಷ್ಣನು ತನ್ನ ಪ್ರಜೆಗಳನ್ನು ಸುರಕ್ಷಿತವಾಗಿಡಲು ದ್ವಾರಕೆಯನ್ನು ಕಟ್ಟಿದನೆನ್ನಲಾಗುತ್ತದೆ. ಈ ಕಾಳಯವನನು ಯಾವುದೇ ಯುದ್ಧಗಳಲ್ಲಿ ಸೋತಿರದ ಕಾರಣ ಕೃಷ್ಣನು ಸೋಲುವ ಭೀತಿಯಿಂದ ಪಾರಾಗಲು ಉಪಾಯ ಹೂಡುತ್ತಾನೆ. ತಮ್ಮಿಬ್ಬರ ನಡುವಿನ ಕಾಳಗಕ್ಕೆ ಅಪಾರ ಜನಹಾನಿ ಬೇಡವೆಂದು ಕಾಳಯವನನನ್ನು ತಮ್ಮಿಬ್ಬರ ನಡುವಿನ ದ್ವಂದ್ವಯುದ್ಧಕ್ಕೆ ಒಪ್ಪಿಸುತ್ತಾನೆ. ನಂತರ ಉಪಾಯವಾಗಿ ಕಾಳಯವನನನ್ನು ಮುಚುಕುಂದನ ಗುಹೆಗೆ ಕರೆತರುತ್ತಾನೆ. ಮುಚುಕುಂದನಿಂದ ಕಾಳಯವನನ ಸಾವು ವಿಧಿನಿಶ್ಚಿತವಾಗಿದ್ದರಿಂದ ಅಲ್ಲಿ ಕಾಳಯವನನ ಹತ್ಯೆಯಾಗುತ್ತದೆ. ಇದು ಮಹಾಭಾರತದಲ್ಲಿ ಬರುವ ಯವನರ ಸಾರಾಂಶ. ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಬಾಹುಬಲಿ ತನ್ನ ಸೋದರನೊಂದಿಗೆ ದ್ವಂದ್ವಯುದ್ಧದಲ್ಲಿ ತೊಡಗಿದಂತೆಯೇ ಕೃಷ್ಣನು ಕೂಡಾ ಕಾಳಯವನನನ್ನು ದ್ವಂದ್ವಯುದ್ಧಕ್ಕೆ ಆಹ್ವಾನಿಸಿದ್ದುದು. ಅಂದರೆ ಬಾಹುಬಲಿಯ ಕತೆಯ ಮೇಲೆ ಮಹಾಭಾರತದ ಅಥವಾ ಮಹಾಭಾರತದ ಮೇಲೆ ಬಾಹುಬಲಿಯ ಅಂಶಗಳ ಸಾಮ್ಯತೆ, ಧರ್ಮಗಳ ನಡುವಿನ ದ್ವಂದ್ವಯುದ್ಧದ ಪ್ರತೀಕವೇನೋ ಎನಿಸಿಬಿಡುತ್ತದೆ! ಈ ದ್ವಂದ್ವಯುದ್ಧದ ಪ್ರಭಾವ ಇಂದಿನ ಭಾರತೀಯ ಸಿನಿಮಾಗಳ ಮೇಲೆ ಖಂಡಿತಾ ಆಗಿದೆ. ಹಾಗಾಗಿಯೇ ಅಸಂಖ್ಯಾತ ಸಿನಿಮಾಗಳಲ್ಲಿ 'ನಾನೂ ಒಬ್ಬನೇ ಬರ್ತೀನಿ, ನೀನೂ ಒಬ್ಬನೇ ಬಾ' ಎಂದು ನಾಯಕ-ಖಳನಾಯಕರು ಹೊರಡಿಸುವ ಫರ್ಮಾನುಗಳ ಮೂಲ ಕೂಡಾ ಇದೇ ಅನಿಸುತ್ತದೆ. ಒಟ್ಟಾರೆ ರಾಮಾಯಣ ಮತ್ತು ಮಹಾಭಾರತಗಳಲ್ಲಿ ಯವನರು ಹಾಸುಹೊಕ್ಕಾಗಿದ್ದಾರೆ. ಅಂದರೆ ಗ್ರೀಕರು ಭಾರತದಲ್ಲಿ ಐತಿಹಾಸಿಕವಾಗಿ ಮತ್ತು ಪೌರಾಣಿಕವಾಗಿ ಪ್ರಸ್ತುತವಾಗಿದ್ದಾರೆ. ಅದೆಲ್ಲಕ್ಕಿಂತ ಮಿಗಿಲಾಗಿ ರಾಮಾಯಣ ಮತ್ತು ಮಹಾಭಾರತ ಮಹಾಕಾವ್ಯಗಳು ಗ್ರೀಕರು ಭಾರತದಲ್ಲಿ ನೆಲೆ ನಿಂತ ನಂತರವೇ ಸೃಷ್ಟಿಯಾಗಿವೆ. ಇನ್ನು ವ್ಯಾಸರನ್ನು ವೇದಗಳನ್ನು ವಿಭಜಿಸಿದವರೆಂದು ಹೇಳಲಾಗುತ್ತದೆ. ಹಾಗಿದ್ದರೆ ವ್ಯಾಸರು ವೇದಗಳ ರಚನೆಯ ನಂತರದವ ರಾಗಿರಬೇಕು. ವೇದಗಳು ವಿಸ್ತಾರಗೊಂಡು ವಿಭಜನೆಗೊಳ್ಳುವಂಥ ಸಮಗ್ರತೆಯನ್ನು ತಲುಪಿದ ಕಾಲವನ್ನು ವೇದವ್ಯಾಸರ ಕಾಲವೆನ್ನಬಹುದು.

ಇರಲಿ, ಈ ಎಲ್ಲಾ ವಿವರಗಳನ್ನು ಏಕೆ ಹೇಳಲಾಯಿತೆಂದರೆ, ಅಂದಿದ್ದ ಕೆಲ ರಾಜವಂಶಗಳ, ಪಟ್ಟಣಗಳ, ಭೌಗೋಳಿಕ ನಿದರ್ಶನಗಳನ್ನು ಬಳಸಿ, ಕೃತಿಕಾರರು ತಮ್ಮನ್ನೂ ಪಾತ್ರಗಳೆನಿಸಿ ವಿಭಿನ್ನವಾಗಿ ಹೆಣೆದ ರೋಚಕ ರೂಪಕ ತಂತ್ರ ಅಂದಿನ ಎಲ್ಲಾ ಕಾವ್ಯರಚನೆಯ ನಿಯಮಗಳನ್ನು ತಲೆಕೆಳಗು ಮಾಡಿತ್ತು. ಇತಿಹಾಸವಲ್ಲದ ಆದರೆ ಚರಿತ್ರೆ ಎನಿಸುವ, ವಾಸ್ತವವಲ್ಲದ ಆದರೆ ಕಾಲ್ಪನಿಕವೆನಿಸದ, ತತ್ವಶಾಸ್ತ್ರವೆನಿಸದ ಆದರೆ ಅಧ್ಯಾತ್ಮವಿರುವ, ವೇದವಲ್ಲದ ಆದರೆ ನೀತಿಯಿರುವ ಈ ಮಹಾಕಾವ್ಯಗಳು ಎಲ್ಲಾ ವರ್ಗದ ಜನರಿಗೂ ಹಿತವೆನ್ನಿಸಿದ್ದವು. ವೇದ, ಶಾಸ್ತ್ರ, ಸೂತ್ರ, ಆಗಮ, ಉಪನಿಷತ್ತುಗಳ ತರ್ಕ, ನ್ಯಾಯ, ನೀತಿ, ಧರ್ಮ, ಬದ್ಧತೆ, ಕರ್ತವ್ಯಪ್ರಜ್ಞೆ, ಅಧ್ಯಾತ್ಮ, ಸಾಕ್ಷಾತ್ಕಾರದ ಸ್ವರೂಪವನ್ನು ಕಥರೂಪಕ'ದಲ್ಲಿ ಮನನ ಮಾಡಿಸುವ ಈ ಗ್ರಂಥಗಳ ಉದ್ದೇಶ ಅಮೋಘವಾಗಿ ಫಲ ನೀಡಿತು. ಆ ಮಹಾಕಾವ್ಯಗಳ ಖ್ಯಾತಿ ಮುಂದಿನ ಶತಮಾನಗಳಲ್ಲಿ ಅವುಗಳನ್ನು ಹಿಂದೂ ಧರ್ಮಗ್ರಂಥ ಗಳಾಗಿಸಿತು. ಆ ಕಾವ್ಯಗಳ ಅರೆಕಾಲ್ಪನಿಕ ಪಾತ್ರಗಳೆಲ್ಲಾ ಸತ್ಯವೆನಿಸಿ ರೂಪಕಗಳಿಗೆ ತಕ್ಕ ಸ್ಮಾರಕಗಳೆದ್ದವು. ತಮ್ಮ ಅರೆಕಾಲ್ಪನಿಕ ಪಾತ್ರಗಳೆಲ್ಲಾ ವಾಸ್ತವವಾದ ಮೇಲೆ ಬ್ರಾಹ್ಮಣ ವ್ಯಾಸ, ವಾಲ್ಮೀಕಿ ಯರ ಶೂದ್ರ ಪಾತ್ರಗಳೇ ಅವರ ಜೀವನಗಾಥೆ ಯಾಯಿತು. ಆಚಾರ್ಯ ವೇದವ್ಯಾಸ ಬೆಸ್ತರ ಮಹಾಪುರುಷನಾದರೆ, ಆಚಾರ್ಯ ವಾಲ್ಮೀಕಿ ಬೇಡರ ಸತ್ಪುರುಷನಾಗಿಬಿಟ್ಟ. ಹುಟ್ಟು ಮತ್ತು ವೃತ್ತಿಯಿಂದಷ್ಟೇ ಅಲ್ಲದೇ ಪಾತ್ರಗಳಿಂದಲೂ ವರ್ಣಗಳು ಬದಲಾಗುತ್ತದೆಂಬುದಕ್ಕೆ ಈ ಬ್ರಾಹ್ಮಣರು ಸಾಕ್ಷಿಯಾದರು. ಅಯೋಧ್ಯೆಯೆಂದು ಸಾದರಪಡಿಸಿದ್ದ ಸಾಕೇತ, ಅಯೋಧ್ಯೆಯೇ ಆಗಿಹೋಯಿತು.

ಇದನ್ನೇ ಮಾದರಿಯಾಗಿಟ್ಟುಕೊಂಡು ಕೆಲ ರಾಜವಂಶಗಳ, ಪಟ್ಟಣಗಳ, ಭೌಗೋಳಿಕ ನಿದರ್ಶನಗಳನ್ನು ಬಳಸಿ ಮುಂದೆ ಅನೇಕ ಸಂಕಥನಗಳು ಪುರಾಣದ ರೂಪದಲ್ಲಿ, ಭಕ್ತಿಪ್ರಧಾನವಾಗಿ ರೂಪುಗೊಂಡವು. ಭಾರತದಲ್ಲಿ ಶಾಸ್ತ್ರಗಳಿಗಿಂತ ಕಥಾನಕಗಳು ಹೆಚ್ಚು ಹೆಚ್ಚು ಪ್ರಾಧಾನ್ಯ ಪಡೆದುಕೊಂಡವು. ನೂರಾರು ಭಾಷೆಗಳು ಉದಯಿಸಿದವು. ಆಯಾ ಎಲ್ಲಾ ಭಾಷೆಗಳಲ್ಲಿಯೂ ಸಂಸ್ಕೃತ ಮೂಲದ ಮಹಾಕಾವ್ಯಗಳು ಅನುವಾದಗೊಂಡದ್ದಕ್ಕಿಂತ ಹೆಚ್ಚಾಗಿ ಮರುಬರೆಯಲ್ಪಟ್ಟವು.

ಶಾಸ್ತ್ರ ವಿಜ್ಞಾನಗಳ ತವರಾಗಿದ್ದ ಭಾರತದಲ್ಲಿ ನಿಧಾನವಾಗಿ ಶಾಸ್ತ್ರಗಳು ಕುಂಠಿತಗೊಳ್ಳುತ್ತಾ ಭಾಷೆ, ಸಾಹಿತ್ಯ, ಕಾವ್ಯ, ನಾಟಕಗಳ ಭಾವಾವೇಶ, ರೋಚಕತೆಗಳು ಮೆರೆಯುತ್ತಾ ಸಾಗಿದವು. ನಂತರದ ಕಾಲಘಟ್ಟದಲ್ಲಿ ಶಾಸ್ತ್ರಗಳು ಕಾವ್ಯಕಥನಗಳ ಭಾಗವಾಗಿ ಅಭಿವ್ಯಕ್ತಗೊಳ್ಳುತ್ತಿದ್ದವೇ ಹೊರತು ಶಾಸ್ತ್ರಗಳಾಗಿ ಬೋಧಿಸುವುದು ನಿಂತೇಹೋಯಿತು. ಹಾಗಾಗಿ ಆ ರೀತಿ ಅಭಿವ್ಯಕ್ತಗೊಂಡ ಶಾಸ್ತ್ರಗಳೆಲ್ಲಾ ಭವಿಷ್ಯದ ಕಾಲಘಟ್ಟಗಳಲ್ಲಿ ಕಾಲ್ಪನಿಕವೆನಿಸಿ ಕಥೆಗಳಿಗೆ ಮಾತ್ರ ಪ್ರಾಮುಖ್ಯ ದೊರೆಯಿತು. ಶಾಸ್ತ್ರಗಳನ್ನೋ, ನೀತಿಯನ್ನೋ, ಅಧ್ಯಾತ್ಮಿಕ ತತ್ವಗಳನ್ನೋ ಗೂಢಾರ್ಥಗಳನ್ನೋ ಹುದುಗಿಸಿಕೊಂಡಿದ್ದ ಕಾವ್ಯಗಳು ಕೇವಲ ಕಥಾತ್ಮಕಗಳಾಗಿ ಪರಿಗಣಿಸಲ್ಪಟ್ಟವು.

ವಿದೇಶಿ ದಾಳಿಯ ಪಲ್ಲಟದ ಕಾಲದಲ್ಲುಂಟಾದ ಭಕ್ತಿಪಂಥದ ಚಳವಳಿಯಲ್ಲಿ ಭಕ್ತಿಯನ್ನು ಉಕ್ಕಿಸಲು ಮಹಾಕಾವ್ಯಗಳ ಮೇಲ್ಪಂಕ್ತಿಯನ್ನೇ ಪುನಃ ಬಳಸಲಾಯಿತು. ವೇದ, ಉಪನಿಷತ್ತು, ಆಗಮಗಳ ಸಾರವನ್ನೇ ಸರಳ ರೂಪದ ಕವನ, ವಚನ, ಭಜನೆ, ಕೀರ್ತನೆ, ಗುರ್ಬಾಣಿ, ದೋಹಾ, ಕವ್ವಾಲಿ, ಜನಪದ, ಲಾವಣಿ ಮುಂತಾಗಿ ಎಲ್ಲಾ ಆಡುಭಾಷೆಗಳಲ್ಲಿ ರಚಿಸಲಾಯಿತು. ಅಂತೆಯೇ ಈ ಚಳವಳಿಯ ನಾಯಕರ ಕುರಿತಾದ ಅವತಾರಗಳು, ಪವಾಡಗಳು, ದೃಷ್ಟಾಂತಗಳನ್ನು ಸೃಜಿಸಿ ಭಕ್ತಿಯನ್ನು ಉಕ್ಕಿಸಲಾಯಿತು. ಇದಕ್ಕೆ ರೇಣುಕ, ರೇವಣಸಿದ್ಧ, ಶಂಕರ, ಪಂಡಿತಾರಾಧ್ಯ, ರಾಮಾನುಜ, ಬಸವಣ್ಣ ಮತ್ತು ಶರಣ ಸಂಕುಲ, ಜ್ಞಾನದೇವ, ತುಳಸಿದಾಸ, ಮೀರಾ, ಕಬೀರ, ಕನಕ, ಪುರಂದರ... ಹೀಗೆ ಯಾರೂ ಹೊರತಲ್ಲ. ಈ ಎಲ್ಲಾ ವಾಸ್ತವ ವ್ಯಕ್ತಿಗಳು ವ್ಯಾಸ, ವಾಲ್ಮೀಕಿಯರಂತೆ ಪೌರಾಣಿಕ ಕಥಾಪಾತ್ರಗಳೂ ಆಗಿರುವರು. ಈ ಮಹನೀಯರು ಬೋಧಿಸಿದ ತತ್ವಗಳ ಆಧಾರವಾಗಿ ರಚಿಸಿದ ರೂಪಕೋಕ್ತಿಯ ಸಂಕಥನಗಳೇ ಪುರಾಣ ಪ್ರವಚನಗಳು. ಇದಕ್ಕೆ ಬಸವರಾಜದೇವರ ರಗಳೆ, ಬಸವ ಪುರಾಣಗಳೂ ಹೊರತಲ್ಲ!

ಇದೆಲ್ಲವನ್ನೂ ಹೇಳಿದ್ದು ಏಕೆಂದರೆ ಈಗ ಲಿಂಗಾಯತ ಪ್ರತ್ಯೇಕ ಧರ್ಮ ಕೂಗಿಗರ ನಿದ್ದೆಗೆಡಿಸಿರುವ ವೀಣಾ ಬನ್ನಂಜೆಯವರ ಭಾಷಣ! ವೀಣಾ ಬನ್ನಂಜೆಯವರ ಅಭಿಪ್ರಾಯ ಸರಿಯಿದೆ. ಆದರೆ ಅವರು ಉಲ್ಲೇಖಿಸಿದ ಜನಕನ ಆಸ್ಥಾನದ ಗೋಷ್ಠಿ ಸಹ ರಗಳೆ, ಪುರಾಣ, ಶೂನ್ಯ ಸಂಪಾದನೆಯಷ್ಟೇ ಕಾಲ್ಪನಿಕವಲ್ಲದೆ ಇತಿಹಾಸವಲ್ಲ. ಆದರೆ ಜನಕನ ಪುರಾಣ, ಶೂನ್ಯಸಂಪಾದನೆಗಿಂತ ಪುರಾತನ ಎಂಬುದಷ್ಟೇ ಸತ್ಯ!

***

ವೀಣಾ ಬನ್ನಂಜೆ ಅವರ ಅಭಿಪ್ರಾಯ ಮತ್ತು ಅನುಭವ ಮಂಟಪ ಇರಲಿಲ್ಲ ಎಂಬ ಅವರ ಹೇಳಿಕೆಯನ್ನು ವಿರೋಧಿಸುವ ಭರದಲ್ಲಿ ಪುರಾವೆಯಾಗಿ ಶರಣ ಜಾಮದಾರರು ಯಾವ ಹರಿಹರ, ಪಾಲ್ಕುರಿಕೆ ಸೋಮನಾಥರನ್ನು ಮೊನ್ನೆಯತನಕ ವೀರಶೈವ ಪದ ತುರುಕಿದ ಭ್ರಷ್ಟರು ಎಂದಿದ್ದರೋ ಈಗ ಆ ಭ್ರಷ್ಟರ ಪುರಾಣಗಳಿಗೇ ಜೋತು ಬಿದ್ದಿದ್ದಾರೆ. ಇರಲಿ, ಇವೆರಡೂ ಆಕರಗಳು ಬಸವಣ್ಣನು ತನ್ನ ಸಹ ಶರಣರೊಂದಿಗೆ 'ಗೀತಗೋಷ್ಠಿ' ನಡೆಸುತ್ತಿದ್ದನೆಂದು ತಿಳಿಸುತ್ತವೆ. ಈ ಗೀತಗೋಷ್ಠಿಯು ಎಲ್ಲಾ ಭಕ್ತಿಪಂಥಗಳೂ ನಿತ್ಯಸಂಜೆ ಅಥವಾ ವಾರದ ಸತ್ಸಂಗಗಳನ್ನು ಆಚರಿಸುತ್ತಿದ್ದಂತೆಯೇ ಇದ್ದೀತೇ ಹೊರತು ಇಂದಿನ ಪ್ರಜಾಪ್ರಭುತ್ವದ ಸಂಸತ್ತಿನಂತೆ ಇದ್ದಿತು ಎಂಬುದಕ್ಕೆ ಭಾವುಕ ಭ್ರಾಮಕ ಕಲ್ಪನೆಯನ್ನು ಬಿಟ್ಟರೆ ಯಾವುದೇ ಐತಿಹಾಸಿಕ, ಮಾನವಿಕ ಅಂಶ ಕಂಡುಬಂದಿಲ್ಲ. ಈ ಗೀತಗೋಷ್ಠಿಯೇ ಅನುಭವ ಮಂಟಪ ಎಂದರೂ ಅದರ ಹೂರಣ ಇತರೆ ಭಕ್ತಿಪಂಥಗಳ ಸತ್ಸಂಗದಂತೆಯೇ ಹೊರತು ಇನ್ಯಾವುದೂ ಆಗಿರಲು ಸಾಧ್ಯವಿಲ್ಲ. ಮೇಲಾಗಿ ಬಸವಣ್ಣನು ಸಂಗೀತಗಾರನೂ ಸಂಗೀತಪ್ರಿಯನೂ ಆಗಿದ್ದನೆಂದು ಈ ಪುರಾಣ/ರಗಳೆಗಳಲ್ಲದೆ ವಚನಗಳಲ್ಲಿಯೂ ಕಾಣಬರುತ್ತದೆ. ಹಾಗಾಗಿ ಇಲ್ಲಿನ ಗೀತಗೋಷ್ಠಿ ಗೀತಗೋಷ್ಠಿಯೇ ಹೊರತು ಇನ್ಯಾವ ಅನುಭವ ಯಾ ಅನುಭಾವ ಮಂಟಪ ಅಲ್ಲವೆನಿಸುತ್ತದೆ. ಹಾಗಾಗಿ ಈ ಕುರಿತು ಕಪಟರಾಳ ವರ್ಸಸ್ ಉತ್ತಂಗಿ ಚೆನ್ನಪ್ಪನವರ ವಾದ ಅವರವರ ಭಾವಕ್ಕೆ ಭಕುತಿಗೆ ಸಲ್ಲುವಂತೆ ಗೀತಗೋಷ್ಠಿಯೇ ವಿಶ್ವದ ಪ್ರಪ್ರಥಮ ಸಂಸತ್ತು ಎನ್ನುವುದು ಸಹ. ದಿವಂಗತ ನಿಜಲಿಂಗಪ್ಪನವರು ಸಹ ಇದನ್ನು 'ಕವಿ ಮನಸ್ಸಿನ ವರ್ಣನೆ' ಎಂದೇ ಹೇಳಿದ್ದರು. ಆದರೆ ಜಾಮದಾರರು 'ಕಪಟರಾಳ ಬ್ರಾಹ್ಮಣ, ಉತ್ತಂಗಿ ಚೆನ್ನಪ್ಪ ಹುಟ್ಟು ಕ್ರಿಶ್ಚಿಯನ್, ಚೆನ್ನಪ್ಪನವರ ತಂದೆ ಕ್ರಿಶ್ಚಿಯನ್, ಅಜ್ಜ ಕ್ರಿಶ್ಚಿಯನ್, ಹಾಗಾಗಿ ಅವರ ಸಂಶೋಧನೆಯಲ್ಲಿ ಪೂರ್ವಗ್ರಹವಿರಲಿಲ್ಲ' ಎಂದು ತಮ್ಮ ಜಾತಿ ಪೂರ್ವಗ್ರಹವನ್ನು ತೋರುತ್ತಾರೆ. ಅಲ್ಲಮನ 'ಮನದ ಮುಂದಣ ಆಸೆಯೇ ಮಾಯೆ ಕಾಣಾ' ಎಂಬಂತೆ ತಮ್ಮ ಮನದಲ್ಲಿ ಬೇರೂರಿರುವ ಬ್ರಾಹ್ಮಣ ದ್ವೇಷ ಮತ್ತು ಜಾತೀಯ ತೆಯ ಪೂರ್ವಗ್ರಹವನ್ನು ಸದಾ ಮೆರೆಸುವ ಜಾಮದಾರರು 'ಇವನಾರವ ಇವನಾರವ ಎಂದೆನಿಸದಿರಯ್ಯ' ಎಂಬ ಬಸವಣ್ಣನ ಆಶಯದಂತೆ ಬದುಕುವ ಅರ್ಹ ಲಿಂಗಾಯತರೇ? ಎಂಬಲ್ಲಿಗೆ ಅವರ ತಾತ್ವಿಕತೆ ಲಿಂಗಾಹತವಾಗುತ್ತದೆ.

(ಲೇಖಕರು ಶಿಕಾಗೋ ನಿವಾಸಿ ಮತ್ತು ಸಾಹಿತಿ)

ಪ್ರತಿಸ್ಪಂದನ

ಎಚ್.ಆನಂದರಾಮ ಶಾಸ್ತ್ರೀ

ಓಣಿಯ ಮಹತ್ವವನ್ನು ಸಾರಿದ ಉತ್ತರ!

ಇದು ವ್ಯಕ್ತಿನಿಷ್ಠ ಪ್ರತಿಕ್ರಿಯೆ ಅಲ್ಲ, ನೂರಕ್ಕೆ ನೂರು ವಸ್ತುನಿಷ್ಠ ಪ್ರತಿಕ್ರಿಯೆ. ಕಳೆದ 60 ವರ್ಷಗಳಿಂದ ವಿವಿಧ ಪತ್ರಿಕೆಗಳಿಗೆ ಪತ್ರಗಳನ್ನು ಬರೆಯುತ್ತಿರುವ ಮತ್ತು ಎಲ್ಲರ ಪತ್ರಗಳನ್ನು ಓದುತ್ತಿರುವ ನಾನು ಓದುಗರ ನಾಡಿಯನ್ನು ಚೆನ್ನಾಗಿ ಬಲ್ಲೆನಾದ್ದರಿಂದ ನನ್ನ ಈ ಪ್ರತಿಕ್ರಿಯೆಯನ್ನು ಓದುಗರ ಪ್ರಾತಿನಿಧಿಕ ಪ್ರತಿಕ್ರಿಯೆ ಎಂದು ಪರಿಗಣಿಸಬಹುದು.

06.04.2025ರ 'ವಿರಾಮ' ಪುರವಣಿಯ 'Ask the Editor' ಅಂಕಣದಲ್ಲಿ ವಿಶ್ವೇಶ್ವರ ಭಟ್ಟರು ನನ್ನ ಪ್ರಶ್ನೆಗೆ ನೀಡಿರುವ ಉತ್ತರವು 'ಓದುಗರ ಪತ್ರ'ವೆಂಬ ಸಾಮಾಜಿಕ ಮಹತ್ವದ ವಿಷಯವನ್ನು ಆಳವಾಗಿ ವಿಶ್ಲೇಷಿಸಿ ಸರಳ-ಸುಂದರ ಸಾಲುಗಳಲ್ಲಿ ಪ್ರಸ್ತುತಪಡಿಸಿರುವ ಉಪಯುಕ್ತ ಉತ್ತರವಾಗಿದೆ. ಅದೇ ವೇಳೆ, ಅತ್ಯಂತ ಪ್ರಾಮಾಣಿಕ ಮತ್ತು ವಿನಮ್ರ ಉತ್ತರ ಕೂಡ ಅದಾಗಿದೆ.

ಪತ್ರಿಕೆಯೊಂದರ ಸಂಪಾದಕೀಯವನ್ನು 2-3 ಜನ ಮಾತ್ರ ಬರೆದರೆ, 'ಒಬ್ಬ ಓದುಗನ ಪತ್ರ ಸಾವಿರ ಓದುಗರ ಅಭಿಪ್ರಾಯಗಳಿಗೆ ಸಮ' ಎಂಬ ಭಟ್ಟರ ವಿಶ್ಲೇಷಣೆಯು ಒಪ್ಪತಕ್ಕದ್ದಾಗಿದೆ, ಮಾತ್ರವಲ್ಲ, ಅತ್ಯಂತ ಗಮನಾರ್ಹವೂ ಆಗಿದೆ. ಕಳೆದ 60 ವರ್ಷಗಳಲ್ಲಿ, ನನ್ನ ಪತ್ರಗಳೂ ಸೇರಿದಂತೆ ಪತ್ರಿಕೆಗಳಲ್ಲಿ ಪ್ರಕಟವಾದ ಅದೆಷ್ಟೋ ಪತ್ರಗಳು ಉದ್ದೇಶಿತ ಸಾಮಾಜಿಕ ಬದಲಾವಣೆಗಳನ್ನು ತಂದಿವೆ, ಸರಕಾರಗಳು ನಿರ್ಧಾರಗಳನ್ನು ಬದಲಿಸುವಂತೆ ಮಾಡಿವೆ, ಹೊಸ ಯೋಜನೆಗಳನ್ನು ಆರಂಭಿಸುವಂತೆ ಮಾಡಿವೆ, ವಿವಿಧ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಿವೆ, ನಾಡಿಗೆ ಮಾರ್ಗದರ್ಶನ ನೀಡಿವೆ, ನುಡಿಯನ್ನು ತಿದ್ದಿವೆ ಕೂಡ. ಓದುಗರ ಪತ್ರಗಳ ಈ ಮಹತ್ವವನ್ನು ಅರಿತಿರುವುದರಿಂದಲೇ, ಈ ಕುರಿತು ಹೇಳಬೇಕಾದ್ದನ್ನು ಭಟ್ಟರು ಚೊಕ್ಕವಾಗಿ, ಸ್ಫುಟವಾಗಿ ಹೇಳಿದ್ದಾರೆ.

ಓದುಗರ ಪತ್ರಗಳ ಮಟ್ಟ-ವೈವಿಧ್ಯಗಳ ಪ್ರಸ್ತಾಪ, ಪತ್ರಿಕೆಗಳಿಗೆ ಪತ್ರ ಬರೆಯುತ್ತಿದ್ದ ಅತಿಗಣ್ಯರ ಪಟ್ಟಿ, 35 ವರ್ಷಗಳ ಹಿಂದೆ 'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗಿದ್ದ ಮತ್ತು ನಾನು ಓದಿದ್ದ 'ಓದುಗರ ಪತ್ರ, ಚಿತ್ರ ವಿಚಿತ್ರ' ಎಂಬ ಭಟ್ಟರ ಲೇಖನದ ಉಲ್ಲೇಖ, ಇವೆಲ್ಲವೂ ಭಟ್ಟರ ಆ ಉತ್ತರದಲ್ಲಿ ಸೂಕ್ತವಾಗಿ ಅಡಕವಾಗಿದ್ದು, ಇಡೀ ಉತ್ತರವು 'ಓದುಗರ ಪತ್ರ'ಗಳ ಮಹತ್ವವನ್ನು ಪ್ರಚುರಪಡಿಸುವುದರ ಜತೆಗೆ ಪತ್ರಿಕಾ ಸಂಪಾದಕರಲ್ಲಿ ಹೊಸ ಎಚ್ಚರವನ್ನು ಮೂಡಿಸುವಂತಿದೆ.

ಓದುಗರ ಪತ್ರಗಳಿಗೆ ಅವಕಾಶ ಸಾಲದೆಂಬ ನನ್ನ ಆಕ್ಷೇಪವನ್ನು ವಿನಮ್ರವಾಗಿ ಸ್ವೀಕರಿಸಿರುವ ಭಟ್ಟರ ವಿನಯಶೀಲವು, ಭಟ್ಟರಲ್ಲಿರುವ ಮತ್ತು ಎಲ್ಲ ಸಂಪಾದಕರಲ್ಲೂ ಇರಬೇಕಾದ ಪತ್ರಿಕಾಧರ್ಮ ಮತ್ತು ಸಾಮಾಜಿಕ ಬದ್ಧತೆ ಇವುಗಳನ್ನು ತೋರಿಸುತ್ತದೆ. ಇಂಥ ಸಂಪಾದಕರ ಸಂತತಿ ಸಾವಿರವಾಗಲಿ ಎಂಬುದು 75ರ ಈ ಇಳಿ ವಯಸ್ಸಿನಲ್ಲಿ ನನ್ನ ಮನದಾಳದ ಆಶಯ.

(ಲೇಖಕರು ಸಾಹಿತಿ)

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 333

ಸಮಾಚಾರ ಸಣ್ಣದಲ್ಲ

ಪ್ಯಾರಾ ಜಂಪ್ ಟ್ರೈನರ್ ಸಾವು

ಆಗ್ರಾ: ಆಗ್ರಾದಲ್ಲಿ ಶನಿವಾರ ಪ್ಯಾರಾ ಜಂಪ್ ತರಬೇತಿ ನೀಡುತ್ತಿದ್ದ ಭಾರತೀಯ ವಾಯುಪಡೆಯ(ಐಎಎಫ್) 'ಆಕಾಶ್ ಸ್ಕೈಡೈವಿಂಗ್' ತಂಡದ ಪ್ಯಾರಾ ಜಂಪ್ ತರಬೇತಿದಾರ ಎತ್ತರದಿಂದ ಕೆಳಕ್ಕೆ ಬಿದ್ದು ಗಂಭೀರವಾಗಿ ಗಾಯಗೊಂಡು ಸಾವಿಗೀಡಾಗಿದ್ದಾರೆ. 'ಡೆಮೊ ಡ್ರಾಪ್' ನೀಡುತ್ತಿದ್ದಾಗ ತರಬೇತುದಾರರ ಆಕಸ್ಮಿಕವಾಗಿ ಕೆಳಕ್ಕೆ ಬಿದ್ದು ಗಾಯಗೊಂಡಿದ್ದರು. ಚಿಕಿತ್ಸೆ ಫಲಕಾರಿಯಾಗದೇ ಮಿಲಿಟರಿ ಆಸ್ಪತ್ರೆಯಲ್ಲಿ ಅಸುನೀಗಿದರು ಎಂದು 'ಐಎಎಫ್' ತಿಳಿಸಿದ್ದು, ತೀವ್ರ ಶೋಕ ವ್ಯಕ್ತಪಡಿಸಿದೆ.

ಎಂ.ಎ.ಬೇಬಿ ಸಿಪಿಐ ಪ್ರ.ಕಾರ್ಯದರ್ಶಿ

ತಿರುವನಂತಪುರ: ಕೇರಳ ಮಾಜಿ ಸಚಿವ ಎಂ.ಎ.ಬೇಬಿ, ಕಮ್ಯುನಿಸ್ಟ್ ಪಾರ್ಟಿ- ಮಾರ್ಕ್ಸಿಸ್ಟ್ (ಸಿಪಿಎಂ) ಪ್ರಧಾನ

ಕಾರ್ಯದರ್ಶಿಯಾಗಿ ಭಾನುವಾರ ಮಧುರೈನಲ್ಲಿ ನಡೆದ ಪಕ್ಷದ 24ನೇ ಮಹಾಸಭೆಯಲ್ಲಿ ಆಯ್ಕೆಯಾದರು. 2024ರಲ್ಲಿ ಸೀತಾರಾಮ್ ಯೆಚೂರಿ ನಿಧನ ನಂತರ ಈ ಹುದ್ದೆ ಖಾಲಿಯಾಗಿತ್ತು. ನಂತರ ಪ್ರಕಾಶ್ ಕಾರಟ್ ಮಧ್ಯಂತರ ಸಂಯೋಜಕರಾಗಿದ್ದರು. 1954ರಲ್ಲಿ ಕೇರಳದ ಪ್ರಾಕುಲಂನಲ್ಲಿ ಪಿ.ಎಂ. ಅಲೆಕ್ಸಾಂಡರ್-ಲಿಲ್ಲಿ ಅಲೆಕ್ಸಾಂಡರ್ ದಂಪತಿಗೆ ಜನಿಸಿದ ಬೇಬಿ, ಶಾಲಾ ದಿನಗಳಲ್ಲಿ ಭಾರತೀಯ ವಿದ್ಯಾರ್ಥಿ ಒಕ್ಕೂಟದ ಪೂರ್ವ ಸಂಘಟನೆಯಾದ ಕೇರಳ ವಿದ್ಯಾರ್ಥಿ ಒಕ್ಕೂಟಕ್ಕೆ ಸೇರಿದರು. ನಂತರ ರಾಜಕೀಯ ಪ್ರವೇಶಿಸಿದರು. ಬೇಬಿ 1986-98 ಅವಧಿಯಲ್ಲಿ ರಾಜ್ಯಸಭೆ ಸದಸ್ಯರಾಗಿದ್ದರು. ಸಿಪಿಎಂನ ಅತ್ಯುನ್ನತ ನಿರ್ಧಾರ ಕೈಗೊಳ್ಳುವ ವಿಭಾಗವಾದ ಪಾಲಿಟ್ ಬ್ಯೂರೋಗೆ 2012ರಿಂದ ಸದಸ್ಯರಾಗಿದ್ದಾರೆ. ಪಕ್ಷದ ನಾಯಕರ ಒಂದು ಬಣ 'ಅಖಿಲ ಭಾರತ ಕಿಸಾನ್ ಸಭಾ' ಅಧ್ಯಕ್ಷ ಅಶೋಕ್ ಧಾವಳೆ ಅವರನ್ನು ಸಿಪಿಎಂ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಬೆಂಬಲಿಸಿತ್ತು.

ರಾಂಬನ್ ಶಿಬಿರ: ಯೋಧ ಆತ್ಮಹತ್ಯೆ

ರಾಂಬನ್: ಜಮ್ಮು-ಕಾಶ್ಮೀರದ ರಾಂಬನ್ ಜಿಲ್ಲೆಯ ಸೇನಾ ಶಿಬಿರದಲ್ಲಿನ ಯೋಧರೊಬ್ಬರು ಭಾನುವಾರ ಬೆಳಗ್ಗೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಧರ್ಮುಂಡ್ ಮಿಲಿಟರಿ ಆಸ್ಪತ್ರೆಯಲ್ಲಿ ಸೆಂಟ್ರಿ ಕರ್ತವ್ಯದಲ್ಲಿದ್ದ 26ನೇ ರಾಷ್ಟ್ರೀಯ ರೈಫಲ್ಸ್‌ನ ಯೋಧ ವಿಜಯ್ ಕುಮಾರ್ ಭಾನುವಾರ ನಸುಕಿನ 3.40ರಲ್ಲಿ ತಮ್ಮದೇ ಸರ್ವೀಸ್ ರೈಫಲ್‌ನಿಂದ ಗುಂಡು ಹಾರಿಸಿಕೊಂಡಿದ್ದಾರೆ. ಅವರ ಆತ್ಮಹತ್ಯೆಗೆ ಕಾರಣ ಇನ್ನಷ್ಟೇ ತಿಳಿಯಬೇಕಿದೆ. ಯೋಧ ಕುಮಾರ್ ರಾಜಸ್ಥಾನ ಮೂಲದವರು. 2 ತಿಂಗಳ ರಜೆ ನಂತರ ಮಾ.28ರಂದು ಕರ್ತವ್ಯಕ್ಕೆ ಮರಳಿ ಹಾಜರಾಗಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರೈತ ದಲ್ಲೇವಾಲ್ ಉಪವಾಸ ಅಂತ್ಯ

ಚಂಡೀಗಢ: ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸುವುದಷ್ಟೇ ಅಲ್ಲ, ಅದನ್ನು ಕಾನೂನುಬದ್ಧ

ಗೊಳಿಸಿ ಖಾತರಿ ನೀಡಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ 2024ರ ನ.26ರಂದು ಅನಿರ್ದಿಷ್ಟಾವಧಿ ಉಪವಾಸ ಆರಂಭಿಸಿದ್ದ ರೈತ ನಾಯಕ ಜಗಜಿತ್ ಸಿಂಗ್ ದಲ್ಲೇವಾಲ್ ಭಾನುವಾರ ನಿರಶನ ಹೋರಾಟ ಕೈಬಿಟ್ಟಿದ್ದಾರೆ. ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಮತ್ತು ರೈಲ್ವೆ ಖಾತೆ ರಾಜ್ಯ ಸಚಿವ ರವನೀತ್ ಸಿಂಗ್ ಬಿಟ್ಟು, ಮನವಿ ಮಾಡಿದ ಮರುದಿನ ದಲ್ಲೇವಾಲ್ ಉಪವಾಸ ಕೊನೆಗೊಳಿಸಿದ್ದಾರೆ. ಉಪವಾಸ ಅಂತ್ಯಗೊಳಿಸುವುದಾಗಿ ಪಂಜಾಬ್‌ನ ಫತೇಘರ್ ಸಾಹಿಬ್ ಜಿಲ್ಲೆಯ ಸಿರ್‌ಹಿಂದ್‌ನಲ್ಲಿ 'ಕಿಸಾನ್ ಮಹಾಪಂಚಾಯತ್'ನಲ್ಲಿ ದಲ್ಲೆವಾಲ್ ಘೋಷಿಸಿದರು.

ಪಟ್ನಾಯಕ್‌ಗೆ ಬ್ರಿಟಿಷ್ ಸ್ಯಾಂಡ್‌ಮಾಸ್ಟರ್ ಪ್ರಶಸ್ತಿ

ಲಂಡನ್: ವಿಶ್ವವಿಖ್ಯಾತ ಮರಳು ಕಲಾಕೃತಿ ರಚನಾ ಕಲಾವಿದ, ಒಡಿಶಾದ ಸುದರ್ಶನ್ ಪಟ್ನಾಯಕ್ ಅವರಿಗೆ ಬ್ರಿಟನ್‌ನ 'ದಿ ಫ್ರೆಡ್ ಡ್ಯಾರಿಂಗ್ಟನ್ ಸ್ಯಾಂಡ್ ಮಾಸ್ಟರ್ ಪ್ರಶಸ್ತಿ' ಸಂದಿದೆ. ಈ ಪ್ರಶಸ್ತಿ ಪಡೆದ ಮೊದಲ ಭಾರತೀಯ ಕಲಾವಿದ ಎಂಬ ಗೌರವಕ್ಕೆ ಪಟ್ನಾಯಕ್ ಪಾತ್ರರಾಗಿದ್ದಾರೆ. ದಕ್ಷಿಣ ಇಂಗ್ಲೆಂಡ್‌ನ ಡಾರ್ಸೆಟ್ ಕೌಂಟಿ ವೇಮೌತ್‌ನಲ್ಲಿ ಸದ್ಯ ನಡೆಯುತ್ತಿರುವ 'ಸ್ಯಾಂಡ್‌ವರ್ಲ್ಡ್-2025: ಅಂತಾರಾಷ್ಟ್ರೀಯ ಮರಳು ಕಲಾ ಉತ್ಸವ'ದಲ್ಲಿ ಪಟ್ನಾಯಕ್‌ಗೆ ಪ್ರಶಸ್ತಿ ಘೋಷಿಸಲಾಯಿತು. ವೇಮೌತ್ ಮೇಯರ್ ಜಾನ್ ಒರೆಲ್ ಪ್ರಶಸ್ತಿ ಮತ್ತು ಪದಕ ಪ್ರದಾನ ಮಾಡಿದರು. ಪಟ್ನಾಯಕ್ ಈ ಉತ್ಸವದಲ್ಲಿ ವಿಶ್ವ ಶಾಂತಿ ಸಂದೇಶದ 10 ಅಡಿ ಎತ್ತರದ ಗಣೇಶನ ಮರಳು ಶಿಲ್ಪ ರಚಿಸಿ ಗಮನ ಸೆಳೆದಿದ್ದಾರೆ.

{ಸಂಜಯ್ ರಾವತ್} ಶಿವಸೇನೆ ಸಂಸದ

ವಕ್ಫ್ ತಿದ್ದುಪಡಿ ವಿಧೇಯಕ-2025 ವಿಚಾರ ನಮ್ಮ ಮಟ್ಟಿಗೆ ಮುಗಿದ ಅಧ್ಯಾಯ. ನಮ್ಮ ಪಕ್ಷ ಈ ವಿಚಾರವಾಗಿ ಏನು ಮಾಡಬಹುದಿತ್ತೋ ಅಷ್ಟನ್ನು ಮಾಡಿಯಾಗಿದೆ. ಹಾಗಾಗಿ ಶಿವಸೇನೆ(ಉದ್ಧವ್ ಬಣ) ಪಕ್ಷವು ವಕ್ಫ್ ತಿದ್ದುಪಡಿ ಮಸೂದೆ ವಿರುದ್ಧ ಸುಪ್ರೀಂ ಕೋರ್ಟ್ ಮೆಟ್ಟಿಲೇರುವುದಿಲ್ಲ. ನಮ್ಮ ಪಕ್ಷದ ಮಟ್ಟಿಗೆ, 'ಫೈಲ್ ಈಸ್ ಕ್ಲೋಸ್ಡ್'.

ರಾಮೇಶ್ವರಂ-ಪಂಬನ್ ಹೊಸ ರೈಲು, ಕರಾವಳಿ ಗಸ್ತು ನೌಕೆಗೂ ಪ್ರಧಾನಿ ಮೋದಿ ಚಾಲನೆ

ಪಂಬನ್ ಸೇತುವೆ ಲೋಕಾರ್ಪಣೆ

ರಾಮೇಶ್ವರಂ: ತಮಿಳುನಾಡಿನ ಪಂಬನ್ ಮತ್ತು ಹಿಂದೂ ಮಹಾಸಾಗರದಲ್ಲಿನ ದ್ವೀಪದ ರಾಮೇಶ್ವರಂ ನಗರವನ್ನು ಸಂಪರ್ಕಿಸುವ ಪಂಬನ್ ವರ್ಟಿಕಲ್ ಲಿಫ್ಟ್(ಮೇಲ್ಮುಖ ತೆರೆದುಕೊಳ್ಳುವ) ರೈಲ್ವೆ ಸೇತುವೆಯನ್ನು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಮಧ್ಯಾಹ್ನ 12.30ರಲ್ಲಿ ಉದ್ಘಾಟಿಸಿ ದೇಶದ ಸೇವೆಗೆ ಅರ್ಪಿಸಿದರು.

ಲಂಕೆಗೆ ವಾನರ ಸೇನೆಯನ್ನು ಕರೆದೊಯ್ಯಲು ಶ್ರೀರಾಮಚಂದ್ರ ಪುರಾಣ ಕಾಲದಲ್ಲಿ ನಿರ್ಮಿಸಿದ ರಾಮಸೇತು ಪ್ರದೇಶವಾದ ರಾಮೇಶ್ವರಂನಿಂದ ಆರಂಭಗೊಳ್ಳುವ ಪಂಬನ್ ಸೇತುವೆಯನ್ನು ಶ್ರೀ ರಾಮನವಮಿ ದಿನವೇ ಉದ್ಘಾಟನೆ ಮಾಡಿರುವುದು ವಿಶೇಷ.

ರಾಮೇಶ್ವರಂ-ಚೆನ್ನೈನ ತಂಬರಂ ನಗರಗಳನ್ನು ಸಂಪರ್ಕಿಸುವ ಹೊಸ ರೈಲಿನ ಸಂಚಾರಕ್ಕೂ ಪ್ರಧಾನಿ ಮೋದಿ ಇದೇ ವೇಳೆ ಹಸಿರು ನಿಶಾನೆ ತೋರಿದರು. ಜತೆಗೆ ಕರಾವಳಿ ಕಾವಲು ಪಡೆಯ ಗಸ್ತು ನೌಕೆಯ ಕಾರ್ಯಾರಂಭಕ್ಕೂ ಮೋದಿ ಚಾಲನೆ ನೀಡಿದರು. ಈ ಸಂದರ್ಭ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಮತ್ತಿತರರು ಉಪಸ್ಥಿತರಿದ್ದರು.

ಸೇತುವೆಯ ಲೋಕಾರ್ಪಣೆ ಕಾರ್ಯಕ್ರಮಕ್ಕೂ ಮುನ್ನ, ಕರಾವಳಿ ನಗರ ರಾಮೇಶ್ವರಂನಲ್ಲಿ ಬಿಗಿಭದ್ರತೆ ವ್ಯವಸ್ಥೆ ಮಾಡಲಾಗಿತ್ತು. ಪೊಲೀಸರು ಕಟ್ಟೆಚ್ಚರ ವಹಿಸಿದ್ದರು.

ಸೇತುವೆ ವೈಶಿಷ್ಟ್ಯ: ಪಂಬನ್-ರಾಮೇಶ್ವರಂ ನಡುವೆ ಸಂಪರ್ಕ ಕಲ್ಪಿಸುವ 2.08 ಕಿಮೀ ಉದ್ದದ ಸೇತುವೆಯನ್ನು 550 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಲಾಗಿದೆ. ಲಂಡನ್ ಸೇತುವೆ ಮಾದರಿಯಲ್ಲಿಯೇ ಲಂಬ ಕೋನದಲ್ಲಿ ತೆರೆದುಕೊಳ್ಳುವ ಈ ಸೇತುವೆಗೆ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಲಾಗಿದೆ. ಸಮುದ್ರ ಮಾರ್ಗದಲ್ಲಿ ಹಡಗುಗಳ ಸಂಚಾರ ವೇಳೆ ಸೇತುವೆ ಇಬ್ಭಾಗವಾಗಿ ಮೇಲಕ್ಕೆ ತೆರೆದುಕೊಳ್ಳುತ್ತದೆ. ಸೇತುವೆಯಲ್ಲಿ ಎರಡು ಹಳಿಗಳಿದ್ದು ಏಕಕಾಲದಲ್ಲಿ 2 ರೈಲುಗಳು ಸಂಚರಿಸಬಹುದಾಗಿದೆ.



ಪ್ರವಾಸೋದ್ಯಮ ಪ್ರಗತಿ

ಹೊಸ ಪಂಬನ್ ಸೇತುವೆ ಭಾನುವಾರ ಲೋಕಾರ್ಪಣೆಗೊಂಡಿರುವುದರಿಂದ ತಮಿಳುನಾಡು ಪ್ರಾವಸೋದ್ಯಮ ಇನ್ನಷ್ಟು ವೇಗದ ಪ್ರಗತಿ ಹೊಂದಲಿದೆ. ಈ ಸೇತುವೆಯಿಂದ ರಾಮೇಶ್ವರಂಗೆ ತೆರಳುವ ಭಕ್ತರಿಗೆ ಹಾಗೂ ಧನುಷ್ಕೋಡಿ ಪ್ರವಾಸಿಗರಿಗೆ ಹೆಚ್ಚು ಅನುಕೂಲವಾಗಲಿದೆ ಎಂದು ಕೇಂದ್ರ ಸರಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ಸ್ವಯಂಚಾಲಿತ: ಸೇತುವೆ ಎಲೆಕ್ಟ್ರಿಕಲ್ ಆಟೋಮೆಕ್ಯಾನಿಕಲ್ ತಂತ್ರಜ್ಞಾನ ಒಳಗೊಂಡಿದ್ದು, ಮಾನವ ರಹಿತವಾಗಿ ಕಾರ್ಯನಿರ್ವಹಿಸುತ್ತದೆ. 111 ವರ್ಷ ಹಿಂದೆ ಬ್ರಿಟಿಷರ ಕಾಲದಲ್ಲಿ ನಿರ್ಮಾಣಗೊಂಡಿದ್ದ ಹಳೆಯ ಸೇತುವೆ ಹಡಗುಗಳು ಬಂದಾಗ ಸಮುದ್ರಕ್ಕೆ ಸಮಾನಾಂತರವಾಗಿ ತೆರೆದುಕೊಳ್ಳುತ್ತಿತ್ತು. ಹಾಗೆ ತೆರೆದುಕೊಳ್ಳಲು 45 ನಿಮಿಷ ತೆಗೆದುಕೊಳ್ಳುತ್ತಿತ್ತು. ಆದರೆ ಹೊಸ ಸೇತುವೆ 5 ನಿಮಿಷ 3 ಸೆಕೆಂಡ್‌ಗಳಲ್ಲಿ ತೆರೆದುಕೊಳ್ಳುವಷ್ಟು ವೇಗವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಸೇತುವೆ ನಿರ್ಮಾಣದ ಇಂಜಿನಿಯರ್‌ಗಳು ವಿವರಿಸಿದ್ದಾರೆ.

ರಾಮಸೇತು ದರ್ಶನ

ಶ್ರೀಲಂಕಾದಿಂದ ವಿಮಾನದಲ್ಲಿ ವಾಪಸಾಗುವಾಗ ಪ್ರಧಾನಿ ನರೇಂದ್ರ ಮೋದಿ ಅವರು ಪುರಾಣ ಕಾಲದಲ್ಲಿ ನಿರ್ಮಾಣವಾಗಿದ್ದ 'ಶ್ರೀರಾಮಸೇತು' ದರ್ಶನ ಪಡೆದು ಕೃತಾರ್ಥ ಭಾವ ಅನುಭವಿಸಿದ್ದಾರೆ. 'ಲಂಕಾದಿಂದ ಹಿಂತಿರುಗುವಾಗ ರಾಮಸೇತು ದರ್ಶನ ಪಡೆದೆ. ರಾಮನವಮಿಯ ದಿನವಾದ ಇಂದು ಅಯೋಧ್ಯೆಯಲ್ಲಿ ರಾಮಲಲ್ಲಾ ಹಣೆಗೆ 'ಸೂರ್ಯ ತಿಲಕ' ನಡೆಯುತ್ತಿದ್ದ ಸಮಯದಲ್ಲಿಯೇ ನನಗೆ ರಾಮಸೇತು ದರ್ಶನ ಭಾಗ್ಯ ಸಿಕ್ಕಿರುವುದು ಕಾಕತಾಳೀಯ. ಶ್ರೀರಾಮನ ಆಶೀರ್ವಾದ ಸದಾ ನಮ್ಮೆಲ್ಲರ ಮೇಲಿರಲಿ' ಎಂದು 'ಎಕ್ಸ್' ಖಾತೆಯಲ್ಲಿ ಮೋದಿ ಬರೆದಿದ್ದಾರೆ.

8 ಪೊಲೀಸರಿಗೆ ಗಾಯ, 5 ಗ್ರಾಮಸ್ಥರ ಬಂಧನ

ಉತ್ತರ ಪ್ರದೇಶ: ಪ್ರತಿಮೆ ತೆರವಿಗೆ ವಿರೋಧ-ಕಲ್ಲೆಸೆತ

ಸೀತಾಪುರ: ಉತ್ತರ ಪ್ರದೇಶ ರಾಜ್ಯದ ಮಹೋಲಿ ಜಿಲ್ಲೆಯ ವಿಭಾರಾಪುರ ಗ್ರಾಮದಲ್ಲಿ ಸರಕಾರಿ ಜಾಗದಲ್ಲಿದ್ದ ಅಂಬೇಡ್ಕರ್ ಹಾಗೂ ಭಗವಾನ್ ಬುದ್ಧನ ಪ್ರತಿಮೆ ತೆರವುಗೊಳಿಸಲು ಜಿಲ್ಲಾಡಳಿತ ಮುಂದಾದಾಗ ಗ್ರಾಮದ ಕೆಲವರು ಪೊಲೀಸರ ಮೇಲೆ ಕಲ್ಲು ತೂರಿದ್ದರಿಂದ ಗ್ರಾಮದಲ್ಲಿ ಉದ್ವಿಗ್ನತೆ ಉಂಟಾಗಿದೆ.

ಕಲ್ಲು ತೂರಾಟದ ಪರಿಣಾಮ 8 ಪೊಲೀಸರು ಗಾಯಗೊಂಡಿದ್ದಾರೆ. ಪೊಲೀಸ್ ವಾಹನಕ್ಕೂ ಹಾನಿ ಯಾಗಿದೆ. ಕೆಲ ಗ್ರಾಮಸ್ಥರು ಗಾಯಗೊಂಡಿದ್ದಾರೆ. ಘಟನೆ ಸಂಬಂಧ ಇಬ್ಬರು ಮಹಿಳೆಯರು ಸೇರಿದಂತೆ ಐವರನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ಸುದ್ದಿಸಂಸ್ಥೆಗೆ ಭಾನುವಾರ ಸಂಜೆ ಮಾಹಿತಿ ನೀಡಿದ್ದಾರೆ.

ಪಂಚಾಯತ್ ಭವನದ ಮುಂಭಾಗ ಗ್ರಾಮಸ್ಥರು ಮಾ.11ರಂದು ಅಂಬೇಡ್ಕರ್, ಭಗವಾನ್ ಬುದ್ಧನ ಪ್ರತಿಮೆ ಪ್ರತಿಷ್ಠಾಪಿಸಿದ್ದರು. ದೂರು ದಾಖಲಾದ ಬಳಿಕ ತಾಲೂಕು ಆಡಳಿತ ಮಾ.12ರಂದು ಪ್ರತಿಮೆಗೆ ತೆರವಿಗೆ ಆದೇಶಿಸಿ ಗ್ರಾಮಸ್ಥರಿಗೆ ನೋಟಿಸ್ ನೀಡಿತ್ತು. ಗ್ರಾಮಸ್ಥರು ವಿರೋಧ ವ್ಯಕ್ತಪಡಿಸಿದ್ದರಿಂದ ಪ್ರತಿಮೆಗಳನ್ನು ಹಾಗೆಯೇ ಬಿಡಲಾಗಿತ್ತು. ಶನಿವಾರ ಮಹೋಲಿಯಲ್ಲಿ ನಡೆದ ಕುಂದುಕೊರತೆ ನಿವಾರಣಾ ಸಭೆಯಲ್ಲಿ ವಿಷಯ ಪ್ರಸ್ತಾಪವಾದಾಗ ಪ್ರತಿಮೆ ತೆರವಿಗೆ ಮತ್ತೆ ಸೂಚನೆ ನೀಡಲಾಯಿತು. ಅದರಂತೆ ಸ್ಥಳೀಯ ಅಧಿಕಾರಿಗಳ ತಂಡ ಬುಲ್ಡೋಜರ್ ತಂದು ಸರಕಾರಿ ಜಾಗದಲ್ಲಿದ್ದ ಪ್ರತಿಮೆಗಳನ್ನು ತೆರವುಗೊಳಿಸಲು ಮುಂದಾದಾಗ ಪೊಲೀಸರು ಮತ್ತು ಸ್ಥಳೀಯ ಅಧಿಕಾರಿಗಳ ಮೇಲೆ ಗ್ರಾಮದ ಕೆಲವರು ಕಲ್ಲು ತೂರಿದ್ದಾರೆ.

ಅಪಾರ ಶಸ್ತ್ರಾಸ್ತ್ರ ವಶ

ಮಣಿಪುರ: ಬಾಲಕ, 3 ಉಗ್ರರ ಬಂಧನ

ಇಂಫಾಲ: ವರ್ಷಗಳ ಕಾಲದಿಂದ ಜನಾಂಗೀಯ ಸಂಘರ್ಷದಲ್ಲಿ ತತ್ತರಿಸಿರುವ ಮಣಿಪುರ ರಾಜ್ಯ ವಿನ್ನೂ ಶಾಂತಿಯ ಹಾದಿಗೆ ಮರಳಲೇ ಇಲ್ಲ. ಈ ಮಧ್ಯೆ, ಕುಕಿ ಉಗ್ರರ ಚಟುವಟಿಕೆಗಳ ವಿಸ್ತಾರಗೊಳ್ಳುತ್ತಲೇ ಇವೆ.

ಬಾಲಕ ಸೇರಿದಂತೆ ನಾಲ್ವರು ಉಗ್ರರನ್ನು ರಾಜ್ಯ ಪೊಲೀಸರು ಮತ್ತು ಕೇಂದ್ರದ ಅರೆಸೇನಾ ಪಡೆಗಳನ್ನು ಒಳಗೊಂಡ ಜಂಟಿ ಭದ್ರತಾ ಪಡೆ ಭಾನುವಾರ ಬಿಷ್ಣುಪುರ ಮತ್ತು ಕಾಕ್‌ಚಿಂಗ್ ಜಿಲ್ಲೆಗಳಲ್ಲಿ ಬಂಧಿಸಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕ ಮತ್ತು ಇಬ್ಬರು ಉಗ್ರರು ಕೇಂದ್ರ ಸರಕಾರದಿಂದ ನಿಷೇಧಕ್ಕೊಳಗಾಗಿರುವ 'ಕಾಂಗ್ಲೀಪಾಕ್ ಕಮ್ಯುನಿಸ್ಟ್ ಪಕ್ಷ'ದ ಸದಸ್ಯರು. ಈ ಮೂವರನ್ನೂ ಬಿಷ್ಣುಪುರದಲ್ಲಿ ಬಂಧಿಸಲಾಗಿದ್ದರೆ, ಮತ್ತೊಬ್ಬ ಉಗ್ರನನ್ನು ಕಾಕ್‌ಚಿಂಗ್ ಜಿಲ್ಲೆಯಲ್ಲಿ ಬಂಧಿಸಲಾಗಿದೆ. ಈತ ನಿಷೇಧಿತ 'ಯುನೈಟೆಡ್ ಪೀಪಲ್ಸ್ ಪಾರ್ಟಿ ಆಫ್ ಕಾಂಗ್ಲೀಪಾಕ್' ಉಗ್ರ ಸಂಘಟನೆಯ ಸದಸ್ಯ.

ಇನ್ನೊಂದೆಡೆ ಜಿರೀಬಾಮ್ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಶೋಧ ಕಾರ್ಯಾಚರಣೆಯಲ್ಲಿದ್ದಾಗ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳು ಪತ್ತೆಯಾಗಿದ್ದು, ಜಂಟಿ ಭದ್ರತಾ ಪಡೆಗಳು ವಶಕ್ಕೆ ಪಡೆದಿವೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

30ನೇ ಜನ್ಮದಿನಕ್ಕೆ 140 ಕಿ.ಮೀ ನಡಿಗೆ | ಉದ್ಯಮಿ ಅನಂತ್ ಅಂಬಾನಿ ಸಂಕಲ್ಪ

ಅನಂತ ಪಾದಯಾತ್ರೆ ದ್ವಾರಕಾದಲ್ಲಿ ಸಮಾಪ್ತಿ

ದ್ವಾರಕಾ: ಇದೇ ಏಪ್ರಿಲ್ 10ರಂದು ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿ ಸಮೂಹಗಳ ಮುಖ್ಯಸ್ಥ ಮುಕೇಶ್ ಅಂಬಾನಿ ಅವರ ಕಿರಿಯ ಪುತ್ರ ಅನಂತ್ ಅಂಬಾನಿ 30ನೇ ಜನ್ಮದಿನವಾದ ಭಾನುವಾರ ಗುಜರಾತ್ ರಾಜ್ಯದ ಪುಣ್ಯಕ್ಷೇತ್ರದಲ್ಲಿ 140 ಕಿಮೀಗಳ ಪಾದಯಾತ್ರೆಯನ್ನು ಸಮಾಪ್ತಿಗೊಳಿಸಿದರು. 30ನೇ ಜನ್ಮದಿನಕ್ಕೆ ಜಾಮ್ ನಗರದಿಂದ ದ್ವಾರಕಾ ನಗರದವರೆಗೂ ಪಾದಯಾತ್ರೆ ಕೈಗೊಂಡು ಶ್ರೀಕೃಷ್ಣ ಪರಮಾತ್ಮನ ದರ್ಶನ ಪಡೆಯುವ ಸಂಕಲ್ಪ ಮಾಡಿಕೊಂಡಿದ್ದರು. ಅದನ್ನು ಭಾನುವಾರ ಪೂರ್ಣಗೊಳಿಸಿದರು. ಈ ಸಂದರ್ಭ ಪತ್ನಿ ರಾಧಿಕಾ ಮರ್ಚೆಂಟ್ ಮತ್ತು ತಾಯಿ ನೀತಾ ಅಂಬಾನಿ ಜತೆಗೂಡಿದರು.

ಮಾ.29ರಂದು ಜಾಮ್ ನಗರದಿಂದ ಪಾದಯಾತ್ರೆ ಆರಂಭಿಸಿದ್ದ ಅನಂತ್ ಅಂಬಾನಿ, ಪ್ರತಿರಾತ್ರಿ 7ರಿಂದ 8 ಗಂಟೆ ನಡೆದು 20 ಕಿ.ಮೀ ಕ್ರಮಿಸುತ್ತಿದ್ದರು. ರಾಮನವಮಿ ದಿನವಾದ ಭಾನುವಾರ ನಸುಕಿನಲ್ಲಿ ದ್ವಾರಕಾ ನಗರ ತಲುಪಿ ಶ್ರೀ ದ್ವಾರಕಾಧೀಶ ದೇವಸ್ಥಾನಕ್ಕೆ ತೆರಳಿ ದೇವರ ದರ್ಶನ ಪಡೆದು ಪಾದಯಾತ್ರೆ ಸಮಾಪ್ತಿಗೊಳಿಸಿದರು. ಪಾದಯಾತ್ರೆಯ ಉದ್ದಕ್ಕೂ ಹನುಮಾನ್ ಚಾಲೀಸ, ಸುಂದರಕಾಂಡ, ದೇವಿ ಸ್ತೋತ್ರಗಳನ್ನು ಪಠಿಸುತ್ತಾ ಸಾಗಿದ್ದರು.

ಅನಂತ್ ಅಂಬಾನಿ ಅಸ್ತಮಾ, ಬೊಜ್ಜಿನ ಸಮಸ್ಯೆ, ಹಾರ್ಮೋನುಗಳ ಏರುಪೇರು ಸಮಸ್ಯೆಯಂತಹ ಜೀವಿತಾವಧಿಯ ಕಾಯಿಲೆಗಳಿಂದ ಬಳಲುತ್ತಿದ್ದರೂ 140 ಪಾದಯಾತ್ರೆ ನಡೆಸಿದ್ದು ಗಮನಾರ್ಹ.

ಅನಂತ್ ಅಂಬಾನಿ ಪತ್ನಿ ದೇವರ ನಾಮ ಪಠಿಸುತ್ತಾ ಪಾದಯಾತ್ರೆ ಆರಂಭಿಸಿ ದೇವರ ಹೆಸರು ಹೇಳುತ್ತಲೇ ಮುಕ್ತಾಯಗೊಳಿಸಿದೆ. ಇದು ನನ್ನ ಆಧ್ಯಾತ್ಮಿಕ ಪಯಣ. ಈ ಪಯಣದಲ್ಲಿ ನನ್ನ ಜತೆಗೂಡಿ ಪತ್ನಿ, ತಾಯಿ, ಹಿತೈಷಿಗಳಿಗೆ ಧನ್ಯವಾದ.

-ಅನಂತ್ ಅಂಬಾನಿ ಉದ್ಯಮಿ

ನಮ್ಮ ಮದುವೆ ನಂತರ ಪಾದಯಾತ್ರೆ ಕೈಗೊಳ್ಳಬೇಕೆಂದು ಅನಂತ್ ಬಯಸಿದ್ದರು. ಅವರ 30ನೇ ಜನ್ಮದಿನವನ್ನು ದ್ವಾರಕಾದಲ್ಲಿ ಆಚರಿಸುತ್ತಿರುವುದಕ್ಕೆ ಖುಷಿಯಾಗುತ್ತಿದೆ. ಅವರ ಪಾದಯಾತ್ರೆ ಯಶಸ್ವಿಯಾಗಲು ಹರಸಿದ, ಸಹಕರಿಸಿದ ಎಲ್ಲರಿಗೂ ಧನ್ಯವಾದ.

-ರಾಧಿಕಾ ಮರ್ಚೆಂಟ್

ಭಾರತ ನೌಕಾಪಡೆಗೆ ಶ್ಲಾಘನೆ

ಕಡಲ ಮಧ್ಯೆ ಪಾಕ್ ವ್ಯಕ್ತಿ ಶಸ್ತ್ರಚಿಕಿತ್ಸೆ-ಜೀವ ರಕ್ಷಣೆ

ಮುಂಬೈ: ಓಮನ್ ಕರಾವಳಿಯಲ್ಲಿ ಇರಾನಿನ ಮೀನುಗಾರಿಕಾ ಹಡಗಿನಲ್ಲಿದ್ದ ಪಾಕಿಸ್ತಾನದ ಸಿಬ್ಬಂದಿ ಕೈಬೆರಳುಗಳು ತುಂಡಾಗಿ ಭಾರೀ ರಕ್ತಸ್ರಾವವಾಗಿ ಜೀವಕ್ಕೆ ಅಪಾಯ ಎದುರಾಗಿತ್ತು. ಈ ಸಂದರ್ಭ ಇರಾನ್‌ನ ಧೋ ಅಲ್ ಒಮೀದಿಯಿಂದ ಬಂದ ತುರ್ತು ಕರೆಗೆ ಓಗೊಟ್ಟ ಭಾರತೀಯ ನೌಕಪಡೆ ಸಿಬ್ಬಂದಿ ಸ್ಥಳಕ್ಕೆ ತೆರಳಿ ತುರ್ತು ಶಸ್ತ್ರಚಿಕಿತ್ಸೆ ನಡೆಸಿ ಜೀವ ರಕ್ಷಿಸಿದ್ದಾರೆ.

ಭಾರತದ ನೌಕಾಪಡೆಯ ರಹಸ್ಯ ಯುದ್ಧನೌಕೆ ಐಎನ್‌ಎಸ್ ತ್ರಿಕಾಂಡ್ ಓಮನ್ ಕರಾವಳಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಇರಾನ್ ತುರ್ತು ಕರೆಗೆ ಸ್ಪಂದಿಸಿ ಗಾಯಾಳು ಪಾಕ್ ವ್ಯಕ್ತಿಗೆ ಅಗತ್ಯ ವೈದ್ಯಕೀಯ ನೆರವು ನೀಡಿದೆ. ತ್ರಿಕಾಂಡ್ ನೌಕೆಯಲ್ಲಿದ್ದ ವೈದ್ಯಕೀಯ ಸಿಬ್ಬಂದಿ ಗಾಯಾಳುವಿಗೆ ಅರಿವಳಿಕೆ ನೀಡಿ, ತುಂಡಾಗಿ ಬಿದ್ದಿದ್ದ ಬೆರಳುಗಳನ್ನು ಮರು ಜೋಡಣೆ ಮಾಡಿ ಹೊಲಿಗೆ ಹಾಕಿದೆ. ಈ ತುರ್ತು ಶಸ್ತ್ರಚಿಕಿತ್ಸೆ 3 ಗಂಟೆ ಕಾಲ ನಡೆದಿದೆ. ಕೈಬೆರಳು ಶಾಶ್ವತವಾಗಿ ನಷ್ಟವಾಗುವುದನ್ನು ತಪ್ಪಿಸಲಾಗಿದೆ. ಇರಾನ್ ತಲುಪುವವರೆಗೂ ಜತೆಗಿದ್ದು ಗಾಯಾಳುವಿಗೆ ಅಗತ್ಯ ಔಷಧ ನೀಡಲಾಗಿದೆ ಎಂದು ನೌಕಾಪಡೆ ತಿಳಿಸಿದೆ.

ಬಿಜೆಪಿ 45ನೇ ಸಂಸ್ಥಾಪನಾ ದಿನ: ಪ್ರಧಾನಿ ಮೋದಿ ಪ್ರಶಂಸೆ
ದೆಹಲಿ ಕಚೇರಿಯಲ್ಲಿ ಸಂಸ್ಥಾಪಕರಿಗೆ ಜೆಪಿ ನಡ್ಡಾ ಪುಷ್ಪನಮನ

ಕಾರ್ಯಕರ್ತರ ಉತ್ಸಾಹ ಪ್ರೇರಣಾದಾಯಕ

ದೆಹಲಿ: ಭಾರತೀಯ ಜನತಾ ಪಕ್ಷ (ಬಿಜೆಪಿ)ದ 45ನೇ ಸಂಸ್ಥಾಪನಾ ದಿನಾಚರಣೆ ದೆಹಲಿಯಲ್ಲಿರುವ ಪಕ್ಷದ ಪ್ರಧಾನ ಕಚೇರಿಯಲ್ಲಿ ಭಾನುವಾರ ಭಾರೀ ಸಂಭ್ರಮದ ನಡುವೆ ಜರುಗಿದೆ. ಪಕ್ಷದ ಅಧ್ಯಕ್ಷ ಜಗತ್ ಪ್ರಕಾಶ್ ನಡ್ಡಾ ಅವರು ಬಿಜೆಪಿ ಪೂರ್ವಾಶ್ರಮವಾದ ಜನಸಂಘದ ಸಂಸ್ಥಾಪಕರಾದ ಪಂಡಿತ್ ದೀನದಯಾಳ್ ಉಪಾಧ್ಯಾಯ ಮತ್ತು ಶ್ಯಾಮ್‌ಪ್ರಸಾದ್ ಮುಖರ್ಜಿ ಅವರ ಪ್ರತಿಮೆಗೆ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಭಾನುವಾರ ಪುಷ್ಪನಮನ ಅರ್ಪಿಸಿದರು.

ಸದ್ಯ ಶ್ರೀಲಂಕಾ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ 'ಎಕ್ಸ್'ನಲ್ಲಿ ಸರಣಿ ಸಂದೇಶ ರವಾನಿಸಿ ಪಕ್ಷದ ಕಾರ್ಯಕರ್ತರಿಗೆ ಶುಭಾಶಯಗಳನ್ನು ತಿಳಿಸಿದ್ದಾರೆ.

ಪಕ್ಷದ ಕಾರ್ಯಕರ್ತರ ಶ್ರಮ, ಕೊಡುಗೆಯನ್ನು ಕೊಂಡಾಡಿರುವ ಮೋದಿ, ಕಾರ್ಯಕರ್ತರಿಗೆಲ್ಲಾ ಪಕ್ಷದ ಸಂಸ್ಥಾಪನಾ ದಿನದ ಶುಭಾಶಯಗಳು. ನಿಮ್ಮ ಸಂಘಟನಾ ಶಕ್ತಿ, ಪಕ್ಷದ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಉತ್ಸಾಹ ನಿಜಕ್ಕೂ ನಮ್ಮೆಲ್ಲರನ್ನೂ ಬಹಳವಾಗಿ ಪ್ರೇರೇಪಿಸುತ್ತದೆ. ಪಕ್ಷದ ಕಾರ್ಯಕರ್ತರ ಶ್ರಮ ಕಳೆದ ವರ್ಷ ಲೋಕಸಭೆ ಚುನಾವಣೆ, ವಿವಿಧ ರಾಜ್ಯಗಳ ವಿಧಾನಸಭೆ ಚುನಾವಣೆಗಳು ಮತ್ತು ದೇಶಾದ್ಯಂತದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಪಕ್ಷಕ್ಕೆ ಗೆಲುವು ತಂದುಕೊಟ್ಟಿದೆ ಎಂದು ಹೇಳಿದ್ದಾರೆ.

ಹಲವು ದಶಕಗಳಲ್ಲಿ ಪಕ್ಷವನ್ನು ಬಲಪಡಿಸಲು ತಾವುಗಳೆಲ್ಲಾ ತೊಡಗಿಸಿಕೊಂಡ ಬಗೆಯನ್ನು ನಾವು ಸದಾ ಸ್ಮರಿಸುತ್ತೇವೆ. ನಿಮ್ಮ ಪ್ರೋತ್ಸಾಹ ವಿಕಸಿತ ಭಾರತ ಕನಸು ನನಸಾಗಿಸಲು ನಮ್ಮ ಬದ್ಧತೆಯನ್ನು ಹೆಚ್ಚಿಸುತ್ತದೆ. ಪರಿಣಾಮವಾಗಿಯೇ ದೇಶದ ಜನತೆ ಇಂದು ಉತ್ತಮ ಆಡಳಿತವನ್ನು ನೋಡುತ್ತಿದ್ದಾರೆ ಎಂದು ಬರೆದಿದ್ದಾರೆ.



ದೆಹಲಿಯಲ್ಲಿನ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಸ್ಥಾಪಿಸಲಾಗಿರುವ ಜನಸಂಘದ ಸಂಸ್ಥಾಪಕರಾದ ಪಂಡಿತ್ ದೀನದಯಾಳ್ ಉಪಾಧ್ಯಾಯ ಮತ್ತು ಶ್ಯಾಮ್‌ಪ್ರಸಾದ್ ಮುಖರ್ಜಿ ಅವರ ಪ್ರತಿಮೆಗೆ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಭಾನುವಾರ ಪುಷ್ಪನಮನ ಅರ್ಪಿಸಿದರು.

ಆರ್ಥಿಕ ಹುಚ್ಚುತನ, ಅಮೆರಿಕ ವಿನಾಶದ ನೀತಿ: ತಜ್ಞರ ಟೀಕೆ

ಟ್ರಂಪ್ ಆಡಳಿತ ಖಂಡಿಸಿ ಪ್ರತಿಭಟನೆ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒಡೆದು ಆಳುವ ನೀತಿ ಹೊಂದಿದ್ದಾರೆ ಎಂದು ಆರೋಪಿಸಿ ಪ್ರಮುಖ ನಗರಗಳಲ್ಲಿ ಸಾವಿರಾರು ಜನರು ಪ್ರತಿಭಟನೆ ನಡೆಸಿದ್ದಾರೆ.

'ಸುಗಮ ಆಡಳಿತ' ಹೆಸರಲ್ಲಿ ಸರಕಾರದ ಹಲವು ಇಲಾಖೆಗಳಲ್ಲಿ ಸಿಬ್ಬಂದಿ ಕಡಿತ ಮಾಡಿರುವುದು, 60ಕ್ಕೂ ಅಧಿಕ ದೇಶಗಳ ಆಮದು ಉತ್ಪನ್ನಗಳ ಮೇಲೆ ಭಾರೀ ಸುಂಕ ವಿಧಿಸಿರುವುದು, ನಾಗರಿಕ ಸ್ವಾತಂತ್ರ್ಯಕ್ಕೆ ಕತ್ತರಿ ಪ್ರಯೋಗ ನಡೆಸಿರುವುದು ವಿನಾಶಕಾರಿ ಆಡಳಿತ ವೈಖರಿಯಾಗಿದೆ ಎಂದು ಜನರು ವಾಷಿಂಗ್ಟನ್, ನ್ಯೂಯಾರ್ಕ್, ಹ್ಯೂಸ್ಟನ್, ಫ್ಲೋರಿಡ, ಕೊಲರಾಡೊ ಮತ್ತು ಲಾಸ್‌ಏಂಜಲೀಸ್ ಮತ್ತಿತ ನಗರಗಳಲ್ಲಿ ವಿವಿಧ ಘೋಷಣೆಗಳ 'ಭಿತ್ತಿ ಫಲಕ' ಹಿಡಿದು ಪ್ರತಿಭಟನೆ ನಡೆಸಿದ್ದಾರೆ.

ಮ್ಯಾನ್‌ಹಟನ್‌ನಲ್ಲಿ ಪ್ರತಿಭಟನೆ ನಡೆಸಿದ್ದ ಜನಸಮೂಹ ಉದ್ದೇಶಿಸಿ ಮಾತ ನಾಡಿದ ನ್ಯೂಯಾರ್ಕ್ ವರ್ಣ ಚಿತ್ರಕಾರ ಶೈನಾ ಕೆಸ್ನರ್, ಟ್ರಂಪ್ ಆಡಳಿತ ವೈಖರಿ ಮತ್ತು ವಿದೇಶಾಂಗ ನೀತಿಗಳು ನಮಗೆ ಸಿಟ್ಟು ತರಿಸಿವೆ. ಸರಕಾರದ ಸವಲತ್ತು ಪಡೆದು ಬಿಳಿಯ ಅತ್ಯಾಚಾರಿಗಳ ಗುಂಪು ದೇಶವನ್ನು ನಿಯಂತ್ರಿಸಲೆತ್ನಿಸುತ್ತಿದೆ. ಇದು ಸರಿಯಲ್ಲ ಎಂದು ಹೇಳಿದ್ದಾರೆ. ಅಮೆರಿಕದ ಆರ್ಥಿಕತೆಯನ್ನು ಟ್ರಂಪ್ ಹಾಳು ಮಾಡುತ್ತಿದ್ದಾರೆ ಎಂದು ಅರ್ಥಶಾಸ್ತ್ರಜ್ಞ ಜೆಫ್ರಿ ಸ್ಯಾಚ್ಸ್ ಟೀಕಿಸಿದ್ದಾರೆ.

ವಾಷಿಂಗ್ಟನ್‌ನಲ್ಲಿನ ನ್ಯಾಷನಲ್ ಮಾಲ್‌ನಲ್ಲಿ ಸಾವಿರಾರು ಪ್ರತಿಭಟನಾಕಾರರು ಸೇರಿ ಟ್ರಂಪ್ ಆಡಳಿತವನ್ನು ಟೀಕಿಸಿದರು. ಕೆಲ ಭಾಷಣಕಾರರು ಆಕ್ರೋಶ ವ್ಯಕ್ತಪಡಿಸಿದರು. 'ಟ್ರಂಪ್ ಅತಿರೇಕದ ಆಡಳಿತ ಜನರನ್ನು, ದೇಶವನ್ನು ವಿನಾಶಕ್ಕೆ ದೂಡುತ್ತಿದೆ' ಎಂದು ಡಯೇನ್ ಕೋಲಿಫ್ರಾತ್ ಕಳವಳ ವ್ಯಕ್ತಪಡಿಸಿದರು.

'ಮೂವ್‌ಆನ್' ಮತ್ತು 'ವುಮೆನ್ಸ್ ಮಾರ್ಚ್' ಮೊದಲಾದ ಎಡಪಂಥದ ಗುಂಪುಗಳು ಸಾವಿರಕ್ಕೂ ಹೆಚ್ಚು ನಗರಗಳಲ್ಲಿ 'ಹ್ಯಾಂಡ್ಸ್ ಆಫ್' ಹೆಸರಲ್ಲಿ ಪ್ರತಿಭಟನಾ ಸರಣಿ ಆಯೋಜಿಸಿವೆ.

ಲಕ್ಷಾಂತರ ಭಕ್ತರಿಂದ ಅಯೋಧ್ಯೆ ರಾಮಲಲ್ಲಾ ದರ್ಶನ

ದೇಶಾದ್ಯಂತ ಶ್ರೀರಾಮ ನವಮಿ ಸಂಭ್ರಮ

ದೆಹಲಿ: ದೇಶಾದ್ಯಂತ ಶ್ರೀರಾಮನವಮಿ ಸಂಭ್ರಮ ಮನೆ ಮಾಡಿದೆ. ದೇಗುಲಗಳಲ್ಲಿ ಶ್ರೀರಾಮಚಂದ್ರ, ಭಗವಾನರ ವಿಗ್ರಹ, ಫೋಟೊಗಳಿಗೆ ಪೂಜೆ ಸಲ್ಲಿಸಲಾಗಿದ್ದು, ಲಕ್ಷಾಂತರ ಜನತೆ ಭಕ್ತಿ, ಶ್ರದ್ಧೆಯಿಂದ ಪಾಲ್ಗೊಂಡರು.

ಶ್ರೀರಾಮ, ಶ್ರೀ ಹನುಮಂತ ದೇವರ ದೇವಸ್ಥಾನಗಳನ್ನು ವಿಶೇಷವಾಗಿ ಸಿಂಗರಿಸಿ ವಿಶೇಷ ಪೂಜೆ ಮತ್ತು ಅಭಿಷೇಕ ನಡೆಸಲಾಗಿದೆ. ಭಕ್ತರು ಬೆಳಗಿನಿಂದಲೇ ಸಾಲಲ್ಲಿ ನಿಂತು ದರ್ಶನ ಪಡೆದರು. ಅಯೋಧ್ಯೆಯಲ್ಲಿ ಮುಖ್ಯವಾಗಿ ಶ್ರೀರಾಮಲಲ್ಲಾ ಮಂದಿರಲ್ಲಿ ಸಂಭ್ರಮ ಮುಗಿಲು ಮುಟ್ಟಿದೆ. ರಾಮಲಲ್ಲಾ ಸದರ್ಶನಕ್ಕೆ ಭಕ್ತರು ಸಾಗರೋಪಾದಿ ಬಂದರು. ರಾಮನವಮಿ ಪ್ರಯುಕ್ತ ಶ್ರೀರಾಮಲಲ್ಲಾ ಮೂರ್ತಿಗೆ ವಿಶೇಷ ಅಭಿಷೇಕವನ್ನು ಭಾನುವಾರ ನಸುಕಿನಲ್ಲೇ ಕೈಗೊಳ್ಳಲಾಯಿತು. ಅಪರಾಹ್ನ ವೇಳೆ 'ಶೃಂಗಾರ ಪೂಜೆ', ಮಧ್ಯಾಹ್ನ ಮಹಾ ಮಂಗಳಾರತಿ, 56 ಬಗೆಯ ಭಕ್ಷ್ಯಗಳ ನೈವೇದ್ಯ ನೆರವೇರಿಸಲಾಯಿತು.

ರಾಮನವಮಿ ಹಿನ್ನೆಲೆ ಅಯೋಧ್ಯೆಯಲ್ಲಿ ಬಿಗಿಭದ್ರತೆ ವ್ಯವಸ್ಥೆ ಮಾಡಲಾಗಿತ್ತು. ಹೆಚ್ಚಿನ ಸಂಖ್ಯೆಯ ಪೊಲೀಸರನ್ನು ನಿಯೋಜಿಸಲಾಗಿತ್ತು. ಭದ್ರತೆ ದೃಷ್ಟಿಯಿಂದ ಅಯೋಧ್ಯೆಯನ್ನು ಹಲವು ವಲಯಗಳಾಗಿ ವಿಂಗಡಿಸಿ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ. ಹೆಚ್ಚುವರಿಯಾಗಿ ಅರೆಸೇನಾ ಪಡೆಗಳು, ಪಿಎಸಿ ಸಿಬ್ಬಂದಿಗಳನ್ನೂ ನಿಯೋಜಿಸಲಾಗಿದೆ. ಸರಯೂ ನದಿ ಸುತ್ತಮುತ್ತ ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಮತ್ತು ಪೊಲೀಸರು ಕಣ್ಗಾವಲು ಇರಿಸಿದ್ದರು.

ಸೂರ್ಯ ತಿಲಕ

ಸೂರ್ಯವಂಶಿಯಾದ ಬಾಲರಾಮನ ಹಣೆಯನ್ನು ರಾಮನವಮಿಯ ದಿನ ಸೂರ್ಯರಶ್ಮಿ ಸ್ಪರ್ಶಿಸಿದ್ದು, ಈ ದೃಶ್ಯವನ್ನು ದೂರದರ್ಶನದಲ್ಲಿ ನೇರ ಪ್ರಸಾರ ಮಾಡಲಾಗಿದೆ. ಸೂರ್ಯನ ಕಿರಣಗಳು ರಾಮನ ವಿಗ್ರಹದ ಹಣೆಯ ಮೇಲೆ ಬೀಳುತ್ತಿದ್ದಂತೆ ಸೂರ್ಯ ತಿಲಕ ರಚನೆಯಾಯಿತು. ಅಪರೂಪದ ಈ ಅದ್ಭುತ ದೃಶ್ಯವನ್ನು ಮಂದಿರದಲ್ಲಿ ಹಾಜರಿದ್ದ ಸಾವಿರಾರು ಭಕ್ತರು ಕಣ್ತುಂಬಿಕೊಂಡು ಭಾವಪರವಶರಾದರು.

ಮಹಾವಿಷ್ಣುವಿನ 7ನೇ ಅವತಾರವಾದ ಶ್ರೀರಾಮಚಂದ್ರ ಜನಿಸಿದ ರಾಮನವಮಿ ದಿನ ಹಬ್ಬದ ಸಂಭ್ರಮ. ಜನತೆಗೆ ರಾಮ ನವಮಿಯ ಶುಭಾಶಯ. ಶ್ರೀರಾಮನ ಆಶೀರ್ವಾದವಿರಲಿ. ನಮ್ಮ ಎಲ್ಲಾ ಪ್ರಯತ್ನಗಳಲ್ಲಿ ನಮಗೆ ಮಾರ್ಗದರ್ಶನ ನೀಡಲಿ.

-ನರೇಂದ್ರ ಮೋದಿ ಪ್ರಧಾನಿ

ಧರ್ಮ, ನ್ಯಾಯ, ಕರ್ತವ್ಯ ನಿಷ್ಠೆಯ ಸಂದೇಶ ಸಾರುವ ಶ್ರೀರಾಮನವಮಿ ಹಬ್ಬದ ಶುಭಾಶಯಗಳು. ಮರ್ಯಾದಾ ಪುರುಷೋತ್ತಮ ಶ್ರೀರಾಮನು ಮನುಕುಲಕ್ಕೆ ತ್ಯಾಗ, ಬದ್ಧತೆ, ಸಾಮರಸ್ಯ ಮತ್ತು ಶೌರ್ಯದ ಉನ್ನತ ಆದರ್ಶಗಳನ್ನು ಪ್ರಸ್ತುತಪಡಿಸಿದ್ದಾರೆ. ಅವರ ಉತ್ತಮ ಆಡಳಿತದ ಪರಿಕಲ್ಪನೆ ಅಂದರೆ ರಾಮರಾಜ್ಯವನ್ನು ಆದರ್ಶ ಎಂದೇ ಪರಿಗಣಿಸಲಾಗಿದೆ. ದೇಶದ ಜನತೆ ಅಭಿವೃದ್ಧಿ ಹೊಂದಿದ ಭಾರತದ ನಿರ್ಮಾಣಕ್ಕೆ ಒಗ್ಗಟ್ಟಿನಿಂದ ಕೆಲಸ ಮಾಡುವ ಪ್ರತಿಜ್ಞೆ ಮಾಡಬೇಕಿದೆ.

-ದ್ರೌಪದಿ ಮುರ್ಮು ರಾಷ್ಟ್ರಪತಿ

ನಿರ್ಮಾಪಕ ಗೋಕುಲಂ ಗೋಪಾಲನ್

ಎಂಪುರಾನ್ ನಿರ್ಮಾಪಕ ಮನೆಗೆ ಇ.ಡಿ ದಾಳಿ: 1.5 ಕೋಟಿ ರು. ವಶ

ತಿರುವನಂತಪುರಂ: ಪ್ರಸ್ತುತ ಮಲಯಾಳಂ ಚಲನಚಿತ್ರ ರಂಗದ 'ಎಲ್2: ಎಂಪುರಾನ್'



ಬಹುಚರ್ಚಿತ ಸಿನಿಮಾ. ಈಗ ಅದರ ನಿರ್ಮಾಪಕ ರಲ್ಲಿ ಒಬ್ಬರಾದ ಗೋಕುಲಂ ಗೋಪಾಲನ್ ಕೂಡಾ ಮಾಧ್ಯಮದ ಕೇಂದ್ರ ಬಿಂದುವಾಗಿದ್ದಾರೆ. ಅವರ ಒಡೆತನದ ಚಿಟ್ ಫಂಡ್ ಕಂಪನಿಯಲ್ಲಿ ವಿದೇಶಿ ವಿನಿಮಯ ಕಾನೂನು (ಎಫ್‌ಇಆರ್‌ಎ-ಫೆರಾ) ಉಲ್ಲಂಘನೆಯಾಗಿದೆ ಎಂಬ ಆರೋಪದಡಿ ಜಾರಿ ನಿರ್ದೇಶನಾಲಯ ಅವರ ನಿವಾಸ, ಕಚೇರಿ ಮೇಲೆ ದಾಳಿ ನಡೆಸಿದ್ದು, 1.50 ಕೋಟಿ ರು. ನಗದು ವಶಪಡಿಸಿಕೊಂಡಿದೆ.

ಗೋಕುಲಂ ಚಿಟ್ಸ್ ಮತ್ತು ಫೈನಾನ್ಸ್ ಕಂಪನಿ, ಸಕ್ಷಮ ಪ್ರಾಧಿಕಾರದ ಅನುಮತಿಯಿಲ್ಲದೆ ಭಾರತದ ಹೊರಗೆ ವಾಸಿಸುವ ವ್ಯಕ್ತಿಗಳಿಂದ ಚಂದಾದಾರಿಕೆ ಹಣವನ್ನು ಸಂಗ್ರಹಿಸುತ್ತಿದೆ ಎಂಬ ಗುಪ್ತಚರ ಮಾಹಿತಿ ಆಧರಿಸಿ ನಿರ್ಮಾಪಕರ ಮನೆ, ಕಚೇರಿ ಸೇರಿದಂತೆ ಕೇರಳದ ಕೋಝಿಕ್ಕೋಡ್ ಮತ್ತು ತಮಿಳುನಾಡಿನ ಚೆನ್ನೈನ ಎರಡು ಸ್ಥಳಗಳಲ್ಲಿ ಶುಕ್ರವಾರ-ಶನಿವಾರ ದಾಳಿ ನಡೆಸಲಾಗಿದೆ. ಈ ಸಂದರ್ಭ 1.50 ಕೋಟಿ ರು. ನಗದು, ಕೆಲವು ಮಹತ್ವದ ದಾಖಲೆಗಳು ವಶವಾಗಿವೆ ಎಂದು ಜಾರಿ ನಿರ್ದೇಶನಾಲಯ(ಇ.ಡಿ) ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಮೋಹನ್ ಲಾಲ್ ಪ್ರಧಾನ ಪಾತ್ರದಲ್ಲಿರುವ 'ಲೂಸಿಫರ್' ಸಿನಿಮಾದ ಟ್ರೈಲಾಜಿಯ 2ನೇ ಭಾಗವಾಗಿರುವ ಎಲ್2: ಎಂಪುರಾನ್ ಚಿತ್ರಕಥೆ ಕಾರಣ ವಿವಾದಕ್ಕೆ ಒಳಗಾಗಿದೆ. ಬಿಡುಗಡೆ ಬಳಿಕ ಸಿನಿಮಾದಲ್ಲಿನ ಕೆಲವು ದೃಶ್ಯಗಳನ್ನು ತೆಗೆದು ಹಾಕಲಾಗಿದೆ.

ಸಮಾಚಾರ ಸಣ್ಣದಲ್ಲ

ಬೆಲೆ ಏರಿಕೆಗೆ ಬಿಜೆಪಿ ಖಂಡನೆ

ಗೋಕಾಕ: ಬೆಲೆ ಏರಿಕೆ, ತೆರಿಗೆ ಹೆಚ್ಚಳ, ರಾಜ್ಯ ಸರಕಾರದ ವಿರುದ್ಧ ಹಾಗೂ ಏರಿಸಿದ ಬೆಲೆಯನ್ನು ಹಿಂಪಡೆಯಬೇಕು, ಅಲ್ಪಸಂಖ್ಯಾತರಿಗೆ ಸಂವಿಧಾನ ಬಾಹಿರವಾಗಿ ನೀಡಿದ ಕಾಮಗಾರಿಗಳ ಮೀಸಲಾಯಿಯನ್ನು ಆಕ್ಷೇಪಿಸಿ, ಎಸ್.ಸಿ., ಎಸ್.ಟಿ. ಮೀಸಲು ಹಣದ ದುರ್ಬಳಕೆಯನ್ನು ಖಂಡಿಸಿ ಮತ್ತು ಬಿಜೆಪಿಯ 18 ಶಾಸಕರ ಅಮಾನತನ್ನು ವಿರೋಧಿಸಿ ಇಲ್ಲಿನ ಬಿಜೆಪಿ ನಗರ ಹಾಗೂ ಗ್ರಾಮೀಣ ಮಂಡಲದ ವತಿಯಿಂದ ಪ್ರತಿಭಟನೆ ನಡೆಸಿ ತಹಸೀಲ್ದಾರ ಮುಖಾಂತರ ರಾಜ್ಯಪಾಲರಿಗೆ ಮನವಿ ಅರ್ಪಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಗೋಕಾಕ ನರಗ ಮಂಡಲ ಅಧ್ಯಕ್ಷ ಭೀಮಶಿ ಭರಮನ್ನವರ, ಗ್ರಾಮೀಣ ಮಂಡಲ ಅಧ್ಯಕ್ಷ ರಾಜೇಂದ್ರ ಗೌಡಪ್ಪಗೋಳ, ನರಗಸಭೆ ಅಧ್ಯಕ್ಷ ಪ್ರಕಾಶ ಮುರಾರಿ, ಮುಖಂಡರುಗಳಾದ ಲಕ್ಷ್ಮಣ ತಪಸಿ, ಅಬ್ಬಾಸ ದೇಸಂಯಿ, ಶಕೀಲ ಧಾರವಾಡಕರ, ಲಕ್ಕಪ್ಪ ತಹಶೀಲ್ದಾರ, ಬಸವರಾಜ ಆರೆನ್ನವರ, ಬಸವರಾಜ ಮಾಳಗಿ, ಬಾಬು ಮುಳಗುಂದ, ಲಕ್ಷ್ಮಣ ತಳ್ಳಿ, ಸುರೇಶ ಪತ್ತಾರ, ಮಂಜುನಾಥ ಮಾವರಕರ, ವಿರೇಂದ್ರ ಯಕ್ಕೇರಿಮಠ ಸೇರಿದಂತೆ ಅನೇಕರು ಇದ್ದರು.

ಮಕ್ಕಳಿಗೆ ಶಿಕ್ಷಣ ಜತೆ ಸಂಸ್ಕಾರ ನೀಡಿ

ಗೋಕಾಕ: ಶಿವಶರಣೆ ಅಕ್ಕಮಹಾದೇವಿ ವಚನಗಳ ಆಚರಣೆಯೊಂದಿಗೆ ಸಂಸ್ಕಾರವಂತ ಸಮಾಜ ನಿರ್ಮಿಸುವಂತೆ ಶ್ರೀ ವೀಣಾ ಶಶಿಧರ ಸವಣೂರ ಹೇಳಿದರು. ಅವರು ನಗರದ ಬಸವ ಮಂದಿರದಲ್ಲಿ ಶನಿವಾರದಂದು ಗೋಕಾಕ ತಾಲೂಕ ಬಣಜಿಗ ಸಮಾಜ ಕ್ಷೇಮಾಭಿವೃದ್ಧಿ ಸಂಘದ ಮಹಿಳಾ ಘಟಕದಿಂದ ಹಮ್ಮಿಕೊಂಡ ಶಿವಶರಣೆ ಅಕ್ಕಮಹಾದೇವಿ ಜಯಂತೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದರು. 12ನೇ ಶತಮಾನದಲ್ಲಿ ಶರಣರು ಅನುಭವ ಮಂಟಪ ಸ್ಥಾಪಿಸಿ ಮಹಿಳಾ ಸ್ವಾತಂತ್ರ ನೀಡಿದ್ದಾರೆ. ಇಂದು ಮಹಿಳೆಯರು ಎಲ್ಲ ಕ್ಷೇತ್ರದಲ್ಲಿ ಮಾದರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮಹಿಳೆಯರು ತಮ್ಮ ಮಕ್ಕಳಿಗೆ ಶಿಕ್ಷಣದೊಂದಿಗೆ ಉತ್ತಮ ಸಂಸ್ಕಾರ ನೀಡಿ, ಸಂಸ್ಕಾರವಂತ ಸಮಾಜ ನಿರ್ಮಿಸಲು ಶ್ರಮಿಸುವಂತೆ ಕರೆ ನೀಡಿದರು. ಚಿಕ್ಕೋಡಿಯ ಡಾ.ದಯಾನಂದ ನೂಲಿಯವರು ಇಷ್ಟಲಿಂಗದ ಮಹತ್ವವನ್ನು ವಿವರಿಸುತ್ತ ಇಷ್ಟಲಿಂಗ ಪೂಜೆ ಲಿಂಗಾಯತರಿಗೆ ಶ್ರೇಷ್ಠವಾಗಿದ್ದು ಈ ಪೂಜೆಯಿಂದ ಪ್ರಜ್ಞಾವಂತರಾಗಿ ವ್ಯಕ್ತಿತ್ವವಿಕಸನದೊಂದಿಗೆ ಕಷ್ಟಗಳು ಪರಿಹಾರವಾಗುತ್ತವೆ ಎಂದರು. ವೇದಿಕೆಯ ಮೇಲೆ ಹಾರುಗೇರಿಯ ಐ ಆರ್ ಮಠಪತಿ, ಸಂಘದ ಅಧ್ಯಕ್ಷೆ ಮಹಾದೇವಿ ಉಪ್ಪಿನ, ಉಪಾಧ್ಯಕ್ಷೆ ದೀಪಾ ಬೆಲ್ಲದ, ಕಾರ್ಯದರ್ಶಿ ಹರ್ಷಿತಾ ಸವಣೂರ ಇದ್ದರು.

ಶ್ರೀರಾಮೋತ್ಸವ ಶೋಭಾಯಾತ್ರೆಗೆ ಚಾಲನೆ

ಗೋಕಾಕ: ವಿಶ್ವ ಹಿಂದೂ ಪರಿಷತ್, ಬಜರಂಗದಳ ಹಾಗೂ ಶ್ರೀರಾಮೋತ್ಸವ ಸಮಿತಿ ಗೋಕಾಕ ಇವುಗಳ ಸಂಯುಕ್ತಾಶ್ರಯದಲ್ಲಿ ರವಿವಾರದಂದು ಶ್ರೀ ರಾಮೋತ್ಸವದ ಬೃಹತ್ ಶೋಭಾಯಾತ್ರೆಗೆ ಚಾಲನೆ ನೀಡಲಾಯಿತು. ನಗರದ ಶ್ರೀ ಕೊಳವಿ ಹನುಮಂತ ದೇವರ ಗುಡಿಯಿಂದ ಶೋಭಾಯಾತ್ರೆ ಪ್ರಾರಂಭವಾಗಿ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಶ್ರೀ ಸಂಗೊಳ್ಳಿ ರಾಯಣ್ಣ ವೃತ್ತದ ವರೆಗೆ ಭವ್ಯ ಶೋಭಾಯಾತ್ರೆ ಜರುಗಿತು. ಈ ಶೋಭಾಯಾತ್ರೆಯಲ್ಲಿ ಮಹಾಪುರುಷ ವೇಷಧಾರಿಗಳು, ವಿವಿಧ ವಾದ್ಯಮೇಳಗಳು ಪಾಲ್ಗೊಂಡಿದ್ದವು. ಮಠಾಧೀಶರುಗಳಾದ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು, ಡಾ.ಮಲ್ಲಕಾರ್ಜುನ ಮಹಾಸ್ವಾಮಿಗಳು, ಮೌನ ಮಲ್ಲಿಕಾರ್ಜುನ ಮಹಾಸ್ವಾಮಿಗಳು, ಶ್ರೀ ರಾಚೋಟೇಶ್ವರ ಮಹಾಸ್ವಾಮಿಗಳು, ಹಿಂದೂಪರ ಸಂಘಟನೆಗಳ ಮುಖಂಡರುಗಳಾದ ಎಮ್ ಡಿ ಚುನಮರಿ, ಸದಾಶಿವ ಗುದಗೋಳ, ನಾರಾಯಣ ಮಠಾಧಿಕಾರಿ, ಲಕ್ಷ್ಮಣ ಮೀಶಾಳೆ, ಪುರುಷೋತ್ತಮ ಒಡೆಯರ, ಆನಂದ ಪಟಗೀರಿ, ಮಹೇಶ ಬಡೆಪ್ಪಗೋಳ ಉಪಸ್ಥಿತರಿದ್ದರು.

ಶಾಸಕರಿಂದ ತ್ಯಾಗಿ ಭವನ ಲೋಕಾರ್ಪಣೆ

ಕಾಗವಾಡ: ತಾಲೂಕಿನ ಲೋಕೂರು ಗ್ರಾಮದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಸನ್ಮತಿ ಸೂರ್ಯ ತ್ಯಾಗಿ ಭವನವನ್ನು ಮಾಜಿ ಸಚಿವ ಹಾಗೂ ಮಾಜಿ ಶಾಸಕ ಶ್ರೀಮಂತ ಪಾಟೀಲ ರವಿವಾರ ಏ.6ರಂದು ಲೋಕಾರ್ಪಣೆಗೊಳಿಸಿದರು. ಶ್ರೀ 108 ಆಚಾರ್ಯ ಸೂರ್ಯಸಾಗರ ಮುನಿಮಹಾರಾಜರ ಸಾನಿಧ್ಯದಲ್ಲಿ ಲೋಕೂರು ಗ್ರಾಮದಲ್ಲಿ ನೂತನ ಶ್ರೀ 1008 ಆದಿನಾಥ ದಿಗಂಬರ ಜೈನ ಮಂದಿರ ಮತ್ತು ಮಂದಿರದ ಎದುರಿಗೆ ಭವ್ಯ ಮಾನಸಸ್ಥಂಬದ ನಿರ್ಮಾಣಕ್ಕೆ ಭೂಮಿ ಪೂಜೆ ಮತ್ತು ತ್ಯಾಗಿ ಭವನದ ವಾಸ್ತುಶಾಂತಿ ಮತ್ತು ಲೋಕಾರ್ಪಣೆ ಕಾರ್ಯಕ್ರಮವು ಎರಡು ದಿನಗಳ ಕಾಲ ಧಾರ್ಮಿಕ ವಿಧಿ ವಿಧಾನಗಳಿಂದ ನಡೆಯುತ್ತಿದ್ದು, ಇಂದು ಶ್ರೀಮಂತ ಪಾಟೀಲ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಂಡು, ತ್ಯಾಗಿ ಭವನವನ್ನು ಲೋಕಾರ್ಪಣೆಗೊಳಿಸಿದರು. ಈ ಸಮಯದಲ್ಲಿ ಯುವ ಮುಖಂಡ ಶ್ರೀನಿವಾಸ ಪಾಟೀಲ, ಸುಧಾಕರ ಭಗತ, ಮುಂಬೈನ ವಿಶ್ವಸೇನ ಮಿಂಡಾ ಉಪಸ್ಥಿತರಿದ್ದರು.

{ಜಗದೀಶ್ ಶೆಟ್ಟರ್ } ಸಂಸದ

ಪ್ರಜಾತಂತ್ರದ ವ್ಯವಸ್ಥೆಯಲ್ಲಿ ನ್ಯಾಯಾಂಗ, ಶಾಸಕಾಂಗ, ಕಾರ್ಯಾಂಗ, ಮಾಧ್ಯಮ ಮೂಲಕ ಪ್ರಜಾತಂತ್ರ ಯಶಸ್ವಿಯಾಗಿ ನಡೆಯುತ್ತದೆ. ಸಮಾಜದಲ್ಲಿ ಜಾಗೃತಿ, ಜನರಲ್ಲಿ ತಿಳುವಳಿಕೆ ಮೂಡಿಸುವ ಕಾರ್ಯ ಮಾಧ್ಯಮ ನಿರ್ವಹಿಸುತ್ತದೆ.

ಜಿಲ್ಲಾ ಎಲೆಕ್ಟ್ರಾನಿಕ್ ಮೀಡಿಯಾ ಜರ್ನಲಿಸ್ಟ್ ಅಸೋಸಿಯೇಷನ್ ಉದ್ಘಾಟನೆ | ಸಚಿವ ಸತೀಶ ಭಾಗಿ

ಮಾಧ್ಯಮರಂಗದಿಂದ ಆಡಳಿತ ವ್ಯವಸ್ಥೆ ಸುಧಾರಣೆ: ಜಾರಕಿಹೊಳಿ

ಬೆಳಗಾವಿ: ಪ್ರಜಾಪ್ರಭುತ್ವದ ನಾಲ್ಕನೇ ಅಂಗ ಎಂದು ಗುರುತಿಸಲಾಗುವ ಮಾಧ್ಯಮರಂಗವು ಆಡಳಿತ ವ್ಯವಸ್ಥೆ ಸುಧಾರಣೆಗೆ ಅನುಕೂಲ ಕಲ್ಪಿಸುವುದಕ್ಕೆ ಪೂರಕವಾಗಿ ಕಾರ್ಯನಿರ್ವಹಿಸಬೇಕು ಎಂದು ಲೋಕೋಪಯೋಗಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.

> **ಪ್ರಜಾತಂತ್ರದ ವ್ಯವಸ್ಥೆಯಲ್ಲಿ ನ್ಯಾಯಾಂಗ, ಶಾಸಕಾಂಗ, ಕಾರ್ಯಾಂಗ, ಮಾಧ್ಯಮ ಮೂಲಕ ಪ್ರಜಾತಂತ್ರ ಯಶಸ್ವಿಯಾಗಿ ನಡೆಯುತ್ತದೆ. ಸಮಾಜದಲ್ಲಿ ಜಾಗೃತಿ, ಜನರಲ್ಲಿ ತಿಳುವಳಿಕೆ ಮೂಡಿಸುವ ಕಾರ್ಯ ಮಾಧ್ಯಮ ನಿರ್ವಹಿಸುತ್ತದೆ.**
> **ಜಗದೀಶ್ ಶೆಟ್ಟರ್**, ಸಂಸದ

ನಗರದ ಎಸ್.ಜಿ.ಬಿ.ಐ.ಟಿ ಕಾಲೇಜಿನ ಸಭಾಂಗಣದಲ್ಲಿ ರವಿವಾರ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಬೆಳಗಾವಿ ಜಿಲ್ಲಾ ಎಲೆಕ್ಟ್ರಾನಿಕ್ ಮೀಡಿಯಾ ಜರ್ನಲಿಸ್ಟ್ ಅಸೋಸಿಯೇಷನ್ ಉದ್ಘಾಟಿಸಿ ಅವರು ಮಾತನಾಡಿದರು.

ಪತ್ರಕರ್ತರು ಸಂಘಟಿತರಾಗಿ ಅವರ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಅವಕಾಶವಿದೆ. ಜಿಲ್ಲೆಯಲ್ಲಿ ಈಗಾಗಲೇ ಪತ್ರಿಕಾ ಭವನ ನಿರ್ಮಾಣಕ್ಕೆ ನಿವೇಶನ ಮಂಜೂರು ಮಾಡಲಾಗಿದೆ. ಬರುವ ದಿನಗಳಲ್ಲಿ ನೂತನ ಕಟ್ಟನ ನಿರ್ಮಾಣಕ್ಕೆ ಲೋಕೋಪಯೋಗಿ ಇಲಾಖೆಯವತಿಯಿಂದ ಅನುದಾನ ಒದಗಿಸಲಾಗುವುದು ಎಂದು ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು.

ಬೆಳಗಾವಿ ಲೋಕಸಭಾ ಸಂಸದ ಜಗದೀಶ್ ಶೆಟ್ಟರ್ ಮಾತನಾಡಿ, ಸಮಾಜದ ಬದಲಾವಣೆಯಲ್ಲಿ ಎಲೆಕ್ಟ್ರಾನಿಕ್ ಮತ್ತು ಮುದ್ರಣ ಮಾಧ್ಯಮ ಬಹಳ ಮಹತ್ವದ ಪಾತ್ರ ನಿರ್ವಹಿಸುತ್ತದೆ. ಆದ್ದರಿಂದ ತಮ್ಮ ಜವಾಬ್ದಾರಿಯನ್ನು ಅರಿತುಕೊಂಡು ಕಾರ್ಯನಿರ್ವಿಸಬೇಕು ಎಂದು ಕರೆ ನೀಡಿದರು.

ಎಲೆಕ್ಟ್ರಾನಿಕ್ ಮೀಡಿಯಾ ಜರ್ನಲಿಸ್ಟ್ ಅಸೋಸಿಯೇಷನ್ ಅನ್ನು ಸಚಿವ ಸತೀಶ್ ಜಾರಕಿಹೊಳಿ, ಸಂಸದ ಜಗದೀಶ್ ಶೆಟ್ಟರ್ ಅವರು ಉದ್ಘಾಟಿಸಿದರು.

ಬೆಳಗಾವಿ ಉತ್ತರ ವಿಧಾನಸಭಾ ಮತಕ್ಷೇತ್ರದ ಶಾಸಕ ಆಸೀಫ್ (ರಾಜು) ಸೇಠ್, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ ಭೀಮಾಶಂಕರ ಗುಳೇದ್, ಹಿರಿಯ ಪತ್ರಕರ್ತಾದ ಮೆಹಬೂಬ್ ಮಕಾಂದಾರ್, ಸಹದೇವ ಮಾನೆ ಮಾತನಾಡಿದರು. ಸಂಸದ ಜಗದೀಶ್ ಶೆಟ್ಟರ್ ಅವರು ಬೆಳಗಾವಿ ಜಿಲ್ಲಾ ಎಲೆಕ್ಟ್ರಾನಿಕ್ ಮೀಡಿಯಾ ಜರ್ನಲಿಸ್ಟ್ ಅಸೋಸಿಯೇಷನ್ ಚಿಹ್ನೆ ಅನಾವರಣಗೊಳಿಸಿದರು. ಬಳಿಕ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಸಂಘದ ಸದಸ್ಯರಿಗೆ ಗುರುತಿನ ಚೀಟಿಗಳನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಬೈಲಹೊಂಗಲ ಶಾಸಕ ಮಹಾಂತೇಶ ಕೌಜಲಗಿ, ಕಿತ್ತೂರು ಶಾಸಕ ಬಾಬಾಸಾಹೇಬ್ ಪಾಟೀಲ, ಬೆಳಗಾವಿ ನಗರ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಮಾರ್ಬನ್ಯಾಂಗ್, ಮಹಾನಗರ ಪಾಲಿಕೆ ಆಯುಕ್ತರಾದ ಶುಭ.ಬಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಉಪ ನಿರ್ದೇಶಕ ಗುರುನಾಥ ಕಡಬೂರ, ಪತ್ರಕರ್ತರಾದ ಶ್ರೀಕಾಂತ ಕುಬಕಡ್ಡಿ, ಮಂಜುನಾಥ ಪಾಟೀಲ, ಚಂದ್ರು ಶ್ರೀರಾಮಡು, ಶ್ರೀಧರ ಕೋಟಾರಗಸ್ತಿ, ಚಂದ್ರಕಾಂತ ಸುಗಂಧಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಮೊಳಗಿದ ಶ್ರೀರಾಮ ನಾಮ



ಅಥಣಿಯ ರಾಮಮಂದಿರದಲ್ಲಿ ಶ್ರೀರಾಮ ನವಮಿಯ ನಿಮಿತ್ತ ರಾಮಜನ್ಮೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಅಥಣಿ: ಅಥಣಿಯ ಸಮರ್ಥ ರಾಮದಾಸರಿಂದ ಸ್ಥಾಪಿಸಲ್ಪಟ್ಟ ಅತ್ಯಂತ ಪುರಾತನ ರಾಮಮಂದಿರದಲ್ಲಿ ವಿಜೃಂಭಣೆಯಿಂದ ರಾಮನವಮಿ ಆಚರಿಸಲಾಯಿತು. ಬೆಳಗ್ಗೆಯಿಂದಲೇ ರಾಮಮಂದಿರದ ಪ್ರಾಂಗಣದಲ್ಲಿ ರಾಮ ಜನ್ಮಕ್ಕಾಗಿ ತೊಟ್ಟಿಲನ್ನು ಕಟ್ಟಿ , ತೊಟ್ಟಿಲನ್ನು ವಿವಿಧ ಹೂವು, ಎಲೆ, ಗಳಿಂದ ಸಿಂಗರಿಸಲಾಗಿತ್ತು.

ತಳಿರು ತೋರಣಗಳಿಂದ ರಾಮಮಂದಿರವನ್ನು ಅಲಂಕರಿಸಲಾಗಿತ್ತು ಗರ್ಭಗುಡಿಯಲ್ಲಿರುವ ರಾಮ ಲಕ್ಷ್ಮಣ ಸೀತಾ ಮಾತೆಯರ ಮೂರ್ತಿಗಳಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ಬೇರೆಬೇರೆ ನಗರಗಳಿಂದ ವಿವಿಧ ಬಗೆಯ ಹೂವುಗಳನ್ನು ತರಿಸಿ ಸುಂದರವಾಗಿ ಅಲಂಕರಿಸಲಾಗಿತ್ತು. ದೇವಸ್ಥಾನದ ಅರ್ಚಕ ರಾಮದಾಸಿ ಇವರ ನೇತೃತ್ವದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು. ಬೆಲಗ್ಗೆ ಶ್ರೀ ರಾಮ ನಾಮ ಭಜನೆ ಹಾಗೂ ಶ್ರೀ ರಾಮರಕ್ಷಾ ಸ್ತೋತ್ರ ಪಠಣ, ವಿಶೇಷ ಪೂಜೆ, ಕ್ಷೀರಾಭಿಷೇಕ ಹಾಗೂ ಆರತಿಯನಂತರ ಮಂತ್ರಪುಷ್ಪ ಜರುಗಿತು.

ವಿವಿಧ ರೀತಿಯ ಹಣ್ಣುಗಳಿಂದ ನೈವೇದ್ಯ ಮಾಡಲಾಯಿತು. ನಂತರ ಪಂಚಾಮೃತ ಹಾಗೂ ತೀರ್ಥ ವಿತರಿಸಲಾಯಿತಯ. ನಂತರ ರಾಮ ದೇವರ ಬಾಲ ವಿಗ್ರಹವನ್ನು ತೊಟ್ಟಿಲಿಗೆ ಹಾಕುವ ಕಾರ್ಯಕ್ರಮ ಆರಂಭವಾಯಿತು. ಇದೇ ಸಂದರ್ಭದಲ್ಲಿ ವಾದಿರಾಜ ಜಂಬಗಿ ಇವರಿಂದ ಶ್ರೀರಾಮ ನವಮಿಯ ಅಂಗವಾಗಿ ರಾಮ ಜನ್ಮದ ವೃತ್ತಾಂತದ ಪ್ರವಚನ ಕಾರ್ಯಕ್ರಮ ಹಾಗೂ ಹರಿ ಕೀರ್ತನೆ ನಡೆಯಿತು. ಸಾಕಷ್ಟು ಸಂಖ್ಯೆಯಲ್ಲಿ ರಾಮಜನ್ಮದ ವೇಳೆಯಲ್ಲಿ ಭಕ್ತಾದಿಗಳು ಆಗಮಿಸಿದ್ದರು. ಮಧ್ಯಾಹ್ನ 12 ಗಂಟೆಗೆ ರಾಮಜನ್ಮ ಕಾಲದ ಸಮಯದಲ್ಲಿ ರಾಮಚಂದ್ರ ದೇವರ ಬಾಲ ಮೂರ್ತಿಯನ್ನು ತೊಟ್ಟಿಲಿಗೆ ಹಾಕಿ ನಾಮಕರಣ ಮಾಡುವ ಮೂಲಕ ರಾಮಜನ್ಮೋತ್ಸವ ನಡೆಯಿತು. ಶ್ರೀರಾಮ ಜನ್ಮೋತ್ಸವದ ಹಿಂದಿನ ದಿವಸ ಸೀತಾದೇವಿಗೆ ಉಡಿತುಂಬುವ ಕಾರ್ಯಕ್ರಮ ಹಾಗೂ ಶ್ರೀ ಸುಧಾ ಮಹಿಳಾ ಮಿತ್ರಮಂಡಳಿ ಯವತಿಯಿಂದ ಭಜನೆ ಜರುಗಿತು.ಪಂಡಿತ ಬಿಂದುಮಾಧವಾಚಾರ್ಯ ಜೋಶಿ, ಪಂಡಿತ ಜಯರಾಮಾಚಾರ್ಯ ಮದನಪಲ್ಲಿ, ಪುರಸಭಾ ಸದಸ್ಯೆ ಮೃಣಾಲಿನಿ ದೇಶಪಾಂಡೆ, ಕ್ಷಮಾ ರಾಮದಾಸಿ, ಪ್ರವೀಣ ರಾಮದಾಸಿ, ಸುಧೀಂದ್ರ ಬಾದರಾಯಣಿ, ಸಚಿನ ಕುಲಕರ್ಣಿ, ಜಿ.ದಿಗಂಬರ, ಆದೀಪ ಮಾಶಾಳ, ಪ್ರಸಾದ ಜೇರೆ, ಸಂದೇಶ ಕುಲಕರ್ಣಿ, ನಾರಾಯಣ ದೇಶಪಾಂಡೆ, ವಾದಿರಾಜ ಬಾದರಾಯಣಿ, ಸುರೇಶ ಜೋಶಿ, ಗಿರೀಶ ಕುಲಕರ್ಣಿ ಉಪಸ್ಥಿತರಿದ್ದರು.

ಜಗಜೀವನರಾಮ್ ಮೌಲ್ಯ ಮಾದರಿ: ತಾಪಂ ಇಒ

ಗೋಕಾಕ: ಬಾಬು ಜಗಜೀವನರಾವ್ ಅವರು ಒಬ್ಬ ವ್ಯಕ್ತಿಯಲ್ಲ ದೊಡ್ಡ ಜನಶಕ್ತಿಯಾಗಿದ್ದರು ಎಂದು ತಾಲೂಕು ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪರುಶುರಾಮ ಗಸ್ತೆ ಹೇಳಿದರು.

ಶನಿವಾರದಂದು ನಗರದ ಸಮುದಾಯ ಭವನದಲ್ಲಿ ತಾಲೂಕು ಆಡಳಿತ, ಸಮಾಜ ಕಲ್ಯಾಣ ಇಲಾಖೆ, ತಾಲೂಕು ಪಂಚಾಯತ್ ನಗರಸಭೆ ಇವುಗಳನ್ನು ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡ ಡಾ.ಬಾಬು ಜಗಜೀವನರಾವ್ ರವರ 118ನೇ ಜನ್ಮ ದಿನಾಚರಣೆ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು.

ಬಾಬು ಜಗಜೀವನರಾವ್ ಅವರು ಕಾಯಕ ಶರಣರ ತತ್ವಗಳನ್ನು ಪಾಲಿಸಿ ಜೀವನ ನಡೆಸಿದವರು ಎಂದು ಸ್ವಾರ್ಥಕ್ಕಾಗಿ ಇವರು ದುಡಿಯದೆ ದೇಶಕ್ಕಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ದುಡಿದವರು. ಈ ದಿನವನ್ನು ಸಮಾನತೆ ದಿನ ಎಂದು ಆಚರಿಸುತ್ತೇವೆ. ಇಂದು ನಾವು ಸಹ ರಾಷ್ಟ್ರ ನಾಯಕರ ಸಿದ್ದಾಂತಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಅನುಷ್ಠಾನಗೊಳಿಸಬೇಕು ಎಂದ ಅವರು ಜಗಜೀವನರಾವ್ ಅವರು ಕೃಷಿ ಸಚಿವರಾಗಿ, ಕಾರ್ಮಿಕ ಸಚಿವರಾಗಿ, ರಕ್ಷಣಾ ಸಚಿವರಾಗಿ, ಉಪ ಪ್ರಧಾನಿಯಾಗಿ ಕಷ್ಟ ಕಾಲದಲ್ಲಿ ತಮ್ಮ ರಾಜಕೀಯ ಜೀವನವನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸಿದ ಮಹಾನ ನಾಯಕ , ಕೃಷಿ ಸಚಿವರಾದ ಸಂದರ್ಭದಲ್ಲಿ ದೇಶದಲ್ಲಿ ಬರಗಾಲ ಬಿದ್ದಿ ಸಂದರ್ಭದಲ್ಲಿ ಅದನ್ನು ಸಹ ಬಹಳ ಅಚ್ಚುಕಟ್ಟಾಗಿ ನಿಭಾಯಿಸಿ ಹಸಿರು ಕ್ರಾಂತಿಯ ಹರಿಕಾರರಾಗಿ ಹೊರಹೊಮ್ಮಿದರು ಇವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆದು ಸರ್ವರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಸದಾ ಪ್ರಯತ್ನಶೀಲರಾಗಿ ಮುನ್ನಡೆಯಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ತಹಶೀಲ್ದಾರ ಡಾ.ಮೋಹನ ಭಸ್ಮೆ, ಡಾ.ಸಿ.ಕೆ.ನಾವಲಗಿ, ನಗರಸಭೆ ಅಧ್ಯಕ್ಷ ಪ್ರಕಾಶ್ ಮುರಾರಿ, ಮುಖಂಡರುಗಳಾದ ಗೋವಿಂದ ಕಳ್ಳಿಮನಿ, ವೀರಭದ್ರ ಮೈಲನ್ನವರ, ಅಜಿತ್ ಹರಿಜನ್, ರಾಮಪ್ಪ ಮರೆಪ್ಪಗೋಳ, ಸುಧೀರ್ ಜೊಡಟ್ಟಿ, ಅಧಿಕಾರಿಗಳಾದ ಎ.ಬಿ.ಮಲ್ಲಬನ್ನವರ, ಬಿ.ಎ.ಮಾಲದಿನ್ನಿ, ಎಂ.ಎಂ.ನಧಾಫ್, ಎಲ್ ಕೆ.ತೋರನಗಟ್ಟಿ, ಜಯಶೆ ತಾಂಬೂಳೆ, ಡಿ.ಎಸ್. ಕೂಡವಕ್ಕಲಿಗ ಡಾ.ಮೋಹನ ಕಮತ್, ಡಾ. ಎಂ.ಎಸ್.ಕೊಪ್ಪದ ಉಪಸ್ಥಿತರಿದ್ದರು.

ಜಗಜೀವನರಾಮ ಜಯಂತಿ ಉತ್ಸವವನ್ನು ಗಣ್ಯರು ಉದ್ಘಾಟಿಸಿದರು.

ಸಮಾನತೆಗಾಗಿ ಬಾಬೂಜಿ ಹೋರಾಟ

ಡಾ.ಬಾಬು ಜಗಜೀವನ ರಾಮ ಅವರ ಜಯಂತಿ ಕಾರ್ಯಕ್ರಮವನ್ನು ಯುವ ಮುಖಂಡ ಚಿದಾನಂದ ಸವದಿ ಅವರು ಉದ್ಘಾಟಿಸಿದರು.

ಅಥಣಿ: ಹಸಿರು ಕ್ರಾಂತಿಯ ಹರಿಕಾರ, ದೇಶ ಕಂಡ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನರಾಮ ಅವರು ದಲಿತರ ಹಕ್ಕುಗಳಿಗಾಗಿ ನಿರಂತರ ಚಳುವಳಿ ನಡೆಸಿದ್ದು, ಶೋಷಿತ ಹಾಗೂ ಅನ್ಯಾಯ ಅನುಭವಿಸುತ್ತಿರುವ ಜನಾಂಗಗಳಿಗೆ ನಂಬಿಕೆ ಮತ್ತು ಶಕ್ತಿ ನೀಡಿ, ಸಾಮಾಜಿಕ ನ್ಯಾಯ, ಸಮಾನತೆ ಹಾಗೂ ಶಿಕ್ಷಣದ ಹಕ್ಕುಗಳಿಗೆ ಅವರು ನೀಡಿದ ಬೆಂಬಲ ಅತ್ಯಂತ ಸ್ಮರಣೀಯವಾಗಿದೆ ಎಂದು ಯುವ ಮುಖಂಡ ಚಿದಾನಂದ ಸವದಿ ಹೇಳಿದರು.

ಅವರು ಪಟ್ಟಣದ ಲಿಡಕರ್ ಕಾಲೋನಿಯಲ್ಲಿ ಶನಿವಾರ ತಾಲೂಕಾ ಆಡಳಿತ, ತಾಲೂಕಾ ಪಂಚಾಯತ, ಪುರಸಭೆ, ಸಮಾಜ ಕಲ್ಯಾಣ ಇಲಾಖೆಯಿಂದ ಹಸಿರು ಕ್ರಾಂತಿಯ ಹರಿಕಾರ, ಭಾರತದ ಮಾಜಿ ಪ್ರಧಾನಿ ಡಾ. ಬಾಬು ಜಗಜೀವನರಾಮ ಅವರ 118 ನೇ ಜನ್ಮದಿನಾಚರಣೆಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಡಾ, ಬಾಬು ಜಗಜೀವನ್ ರಾವ ಜಯಂತಿಯನ್ನು ಆಚರಿಸುವ ಮೂಲಕ ನಾವು ಅವರ ಆದರ್ಶಗಳನ್ನು ನೆನಪಿಸಿಕೊಳ್ಳಬೇಕು. ಈ ದಿನವು ಸಮಾಜದಲ್ಲಿ ಎಲ್ಲಾ ವರ್ಗದ ಜನರಿಗೂ ಸಮಾನ ಅವಕಾಶ, ಶಿಕ್ಷಣ ಮತ್ತು ಗೌರವ ದೊರಕಬೇಕೆಂಬ ಸಂದೇಶವನ್ನು ಇವತ್ತಿನ ಜನಾಂಗ ಅನುಕರಣೆ ಮಾಡಬೇಕಿದೆ ಎಂದು ಅಭಿಪ್ರಾಯಪಟ್ಟರು. ಮಾಜಿ ಶಾಸಕ ಮಹೇಶ ಕುಮಟಳ್ಳಿ ಭಾವಚಿತ್ರಗಳಿಗೆ ಪೂಜಿಸಲ್ಲಿಸಿ ಮಾತನಾಡಿದರು.

ಉಪನ್ಯಾಸಕರಾಗಿ ಆಗಮಿಸಿದ್ದ ಜೆ. ಎ. ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ಎಂ. ಪಿ ಮೇತ್ರಿ ಮಾತನಾಡಿದರು. ಜಯಂತಿ ಉತ್ಸವ ಸಮಿತಿಯ ಅಧ್ಯಕ್ಷ, ತಹಶೀಲ್ದಾರ್ ಶಿದರಾಯ ಬೋಸಗಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಡಾಕ್ಟರ್ ಬಾಬು ಜಗಜೀವನ್ ರಾಮ್ ಅವರ ಜಯಂತಿ ಉತ್ಸವದ ಅಂಗವಾಗಿ ಇತ್ತೀಚಿಗೆ ಆಯೋಜಿಸಲಾಗಿದ್ದ ಕ್ರೀಡಾಕೂಟದ ವಿಜೇತರಿಗೆ ಪದಕ ಮತ್ತು ಬಹುಮಾನಗಳನ್ನು ವಿತರಿಸಲಾಯಿತು.

ಈ ವೇಳೆ ಪುರಸಭೆ ಉಪಾಧ್ಯಕ್ಷ ಭುವನೇಶ್ವರಿ, ಸದಸ್ಯರಾದ ಮಲಿಕಾರ್ಜುನ ಬುಟಾಳಿ, ವಿಲಿನ ಯಳಮಲ್ಲೆ, ರಾವಸಾಹೇಬ ಐಹೊಳೆ, ಸಯ್ಯದ್ ಅಮಿನ್ ಗದ್ಯಾಳ, ರಿಯಾಜ ಸನದಿ, ವಿನಾಯಕ ದೇಸಾಯಿ, ಪಂಚ ಗ್ಯಾರಂಟಿ ಯೋಜನಾ ಸಮಿತಿಯ ಅಧ್ಯಕ್ಷ ಸಿದ್ಧಾರ್ಥ್ ಸಿಂಗೆ, ಶಿವಶರಣ ಹರಳಯ್ಯ ಸಮಾಜದ ಮುಖಂಡ ಡಾ. ಅನಿಲ ಸೌದಾಗರ, ದಿಲಿಪ ಕಾಂಬಳೆ, ಸುಂದರ ಸೌದಾಗರ, ಶಿವಾನಂದ ಸೌದಾಗರ, ನಾರಾಯಣ ಹೊನಕಾಂಡೆ, ಅತಿಥಿ ಉಪನ್ಯಾಸಕ ಸಿದ್ಧರಾಮ ಕಾಂಬಳೆ, ಅಧಿಕಾರಿಗಳಾದ ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಶಿವಾನಂದ ಕಲ್ಲಾಪುರ, ಸಮಾಜ ಕಲ್ಯಾಣ ಅಧಿಕಾರಿ ಬಸವರಾಜ ಯಾದವಾಡ, ತಾಲೂಕ ವೈದ್ಯಾಧಿಕಾರಿ ಡಾ.ಬಸಗೌಡ ಕಾಗೆ , ರಾಕೇಶ ಅರ್ಜನವಾಡ, ನಿಂಗಣ್ಣ ಬಿರಾದರ, ವೆಂಕಟೇಶ ಕುಲರ್ಕಣಿ, ಮಲಿಕಾರ್ಜುನ ನಾಮದಾರ, ದ್ಯಾನಂದ್ರ ಕಾಂಬಳೆ, ಸಿಡಿಪಿಒ ಮಂಜುನಾಥ, ಪುರಸಭೆ ಮುಖ್ಯ ಅಧಿಕಾರಿ ಅಶೋಕ ಗುಡಿಮನಿ, ಅಭಿಯಂತರ ವೀರಣ್ಣ ವಾಲಿ ಇನ್ನಿತರರು ಉಪಸ್ಥಿತರಿದ್ದರು. ತಹಸೀಲ್ದಾರ್ ಶಿವರಾಯ ಬೋಸಗಿ ಸ್ವಾಗತಿಸಿದರು. ಸಂಗಮೇಶ ಹಚ್ಚಡದ ನಿರೂಪಿಸಿದರು. ಬಸವರಾಜ ಯಾದವಾಡ ವಂದಿಸಿದರು.

ಯತ್ನಾಳ್ ಉಚ್ಚಾಟನೆ ಮರು ಪರಿಶೀಲನೆಗೆ ಒತ್ತಾಯ

ಮೂಡಲಗಿ: ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳರ ಅವರ ಉಚ್ಚಾಟನೆಯನ್ನು ಕೇಂದ್ರದ ನಾಯಕರಿಗೆ ಮರು ಪರಿಶೀಲನೆಗಾಗಿ ಒತ್ತಾಯಿಸಿ, ತಾಲೂಕಿನ ಹಿಂದೂ ಪರ ಸಂಘಟನೆಗಳ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಪಟ್ಟಣದ ಸಂಗೊಳ್ಳಿ ರಾಯಣ್ಣ ವೃತ್ತದಿಂದ ಮೆರವಣಿಗೆ ಮೂಲಕ ಕಲ್ಮೇಶ ವೃತ್ತಕ್ಕೆ ತೆರಳಿ ಪ್ರತಿಭಟನೆ ನಡೆಸಿದರು. ಬಸನಗೌಡ ಪಾಟೀಲ ಯತ್ನಾಳರ ಅವರ ಉಚ್ಚಾಟನೆಗೆ ಕಾರಣವಾದ ಯಡಿಯೂರಪ್ಪ ಕುಟುಂಬಕ್ಕೆ ದಿಕ್ಕಾರ ಕೂಗುವ ಮೂಲಕ ಬಿ.ಎಸ್.ಯಡಿಯೂರಪ್ಪ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಯಡಿಯೂರಪ್ಪ ಅವರ ಭಾವಚಿತ್ರಕ್ಕೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ಮುಖಂಡ ನಿಂಗಪ್ಪ ಫಿರೋಜಿ ಮಾತನಾಡಿ, ಶಾಸಕ ಯತ್ನಾಳ ಅವರು ಪಕ್ಷ ವಿರೋಧಿ ಚಟುವಟಿಕೆ ಮಾಡಿಲ್ಲ. ಪಕ್ಷ ವಿರೋಧಿ ಹೇಳಿಕೆಯನ್ನೂ ನೀಡಿಲ್ಲ. ಅವರನ್ನು ಉಚ್ಚಾಟನೆ ಮಾಡಿರುವುದು ಲಕ್ಷಾಂತರ ಬಿಜೆಪಿ ಕಾರ್ಯಕರ್ತರಿಗೆ ನೋವಾಗಿದೆ. ಕೂಡಲೇ ವರಿಷ್ಠರು ಉಚ್ಚಾಟನೆ ಆದೇಶ ಹಿಂಪಡೆಯಬೇಕು ಎಂದರು.

ಬಿಜೆಪಿ ಕೇಂದ್ರದ ಶಿಸ್ತು ಸಮಿತಿಯ ಯತ್ನಾಳರನ್ನು 6 ವರ್ಷ ಪಕ್ಷದಿಂದ ಉಚ್ಚಾಟನೆ ಮಾಡಿದ್ದು ಸರಿಯಲ್ಲ. ಉತ್ತರ ಕರ್ನಾಟಕದ ಪ್ರಭಾವಿ ನಾಯಕರಲ್ಲಿ ಒಬ್ಬರಾಗಿರುವ ಯತ್ನಾಳರನ್ನು ಪಕ್ಷದಿಂದ ಉಚ್ಚಾಟನೆ ಮಾಡಿರುವುದರಿಂದ ಸಾಕಷ್ಟು ಕಾರ್ಯಕರ್ತರು ನೊಂದಿದ್ದಾರೆ. ಇಡೀ ರಾಜ್ಯದಲ್ಲಿ ಬಸನಗೌಡ ಪಾಟೀಲ ಯತ್ನಾಳ ಅವರ ವಿರುದ್ಧ ಯಾರು ಕುತಂತ್ರ ಮಾಡಿರುವ ವ್ಯಕ್ತಿಗಳು ಸುಟ ಕೇಸ್ ರಾಜಕೀಯ ಮಾಡಿತ್ತಿದ್ದಾರೆ ಆದರೆ ಶಾಸಕ ಯತ್ನಾಳ ಅವರಿಗೆ ಹಿಂದೂಗಳು ಸೇರಿ 100 ಕೋಟಿ ಹಣ ನೀಡಿ ಬೆಂಬಲ ನೀಡುವಂತ ಹೃದಯವಂತಿಗೆ ಇದೇ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಶಿವಬಸು ಹಂದಿಗುಂದ, ಬಸವರಾಜ ಕಾಪಸಿ, ಬಸಲಿಂಗ ನಿಂಗನೂರ, ರವಿ ಮಹಾಲಿಂಗಪೂರ ಮಾತನಾಡಿ, ಯತ್ನಾಳ್ ಅವರು ಲಿಂಗಾಯತ ಸಮುದಾಯದ ಪ್ರಭಾವಿ ನಾಯಕರಾಗಿದ್ದಾರೆ. ಉಚ್ಚಾಟನೆಯಿಂದ ಪಕ್ಷಕ್ಕೆ ನಷ್ಟ ಉಂಟಾಗಲಿದ್ದು,ಎಲ್ಲಾ ಕೋನಗಳಿಂದಲೂ ಮತ್ತೊಮ್ಮೆ ಪರಿಶೀಲಿಸಿ ನಿರ್ಧಾರ ಕೈಗೊಳ್ಳುವುದು ಸೂಕ್ತವೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಂಗಮೇಶ ಕೌಜಲಗಿ, ಸುಭಾಷ್ ಢವಳೇಶ್ವರ, ಪ್ರಶಾಂತ ನಿಡಗುಂದಿ, ಈರಪ್ಪ ಬನ್ನೂರ, ಮೌನೇಶ ಪತ್ತಾರ, ಕೃಷ್ಣ ನಾಸಿ, ಶಿವಲಿಂಗಪ್ಪ ಗೋಕಾಕ, ಸಿ.ಎನ್.ಮುಗಳಖೋಡ, ರಾಮಣ್ಣ ಹಂದಿಗುಂದ, ಜಯಾನಂದ ಪಾಟೀಲ, ಕೆ.ಎಚ್.ನಾಗರಾಳ, ಶಿವನಗೌಡ ಪಾಟೀಲ, ಬಸವರಾಜ ರಂಗಾಪೂರ, ಈರಪ್ಪ ಢವಳೇಶ್ವರ, ಶಂಕರ ಗೌಡಿಗೌಡರ, ಚನ್ನಪ್ಪ ಪಾಟೀಲ, ಚೇತನ್ ನಿಶಾನಿಮಠ, ಶೀತಲ್ ಬೇವಿನಕಟ್ಟಿ, ಅಜ್ಜಪ್ಪ ಕಂಕಣವಾಡಿ, ಈರಣ್ಣ ಅಂಬಿ, ಶೇಖರ ತೆಲಿ, ಸೇರಿದಂತೆ ತಾಲೂಕಿನ ವಿವಿಧ ಹಳ್ಳಿಗಳಿದ ಹಿಂದೂ ಪರ ಸಂಘಟನೆಗಳ ಪದಾಧಿಕಾರಿಗಳು ಇದ್ದರು.

ಯತ್ನಾಳ್ ಉಚ್ಚಾಟನೆಯನ್ನು ಮರು ಪರಿಶೀಲನೆಗಾಗಿ ಒತ್ತಾಯಿಸಿ ಹಿಂದೂ ಪರ ಸಂಘಟನೆ ಗಳ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಸಂಭ್ರಮದ ರಾಮನವಮಿ ಆಚರಣೆ

ಹುಕ್ಕೇರಿ: ತಾಲೂಕಿನ ಬೆಲ್ಲದ ಬಾಗೇವಾಡಿ ಗ್ರಾಮದಲ್ಲಿ ಸಡಗರ ಸಂಭ್ರಮದಿಂದ ರಾಮನವಮಿ ಆಚರಣೆ ಮಾಡಲಾಯಿತು. ಗ್ರಾಮದ ಶ್ರೀ ವಿಠ್ಠಲ ಭಜನಾ ಮಂಡಲದಿಂದ ಆಯೋಜನೆ ಮಾಡಿದ್ದ ರಾಮನವಮಿ ಕಾರ್ಯಕ್ರಮದಲ್ಲಿ ಗ್ರಾಮದ ಮಹಿಳೆಯರು ಭಾಗಿಯಾಗಿ ಶ್ರೀ ಬಾಲರಾಮನಿಗೆ ನಾಮಕರಣ ಮಾಡಿ ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಮಹಿಳೆಯರು ತೊಟ್ಟಿಲು ತೂಗಿ ಬಾಲರಾಮನ ನಾಮಕರಣ ಮಾಡಿ ಅರ್ಥಪೂರ್ಣವಾಗಿ ರಾಮನವಮಿ ಆಚರಣೆ ಮಾಡಿದರು. ಈ ಸಂದರ್ಭದಲ್ಲಿ ಗ್ರಾಮದ ಹಿರಿಯರಾದ ಶಕುಂತಲಾ ರಾಮದುರ್ಗ ಮಾತನಾಡಿ ಶ್ರೀ ರಾಮ ಎನ್ನುವದು ನಮ್ಮ ದೇಶದ ಅಸ್ತಿತ್ವ. ಪ್ರತಿಯೊಬ್ಬರು ಶ್ರೀ ರಾಮನ ತತ್ವಗಳನ್ನ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ರಾಮರಾಜ್ಯ ಸ್ಥಾಪಿಸಲು ಸಾಧ್ಯವಾಗಲಿದೆ ಎಂದರು. ರಾಮನವಮಿ ಸಡಗರದಲ್ಲಿ ವಿಜಯಲಕ್ಷ್ಮಿ ಶೆಟ್ಟಿ, ಪೂರ್ಣಿಮಾ ಕತ್ತಿ, ಸುನೀತಾ ದೇಶಪಾಂಡೆ ಸೇರಿದಂತೆ ಗ್ರಾಮದ ಗುರು ಹಿರಿಯರು ಉಪಸ್ಥಿತರಿದ್ದರು.

ಜಗಜೀವನರಾಮ್ ಆದರ್ಶ ಪಾಲಿಸಿ

ರಾಮದುರ್ಗ: ಹಸಿರು ಕ್ರಾಂತಿಯ ಹರಿಕಾರ ಡಾ. ಬಾಬು ಜಗಜೀವನರಾಮ್ ಅವರ ಆದರ್ಶಗಳನ್ನು ಪಾಲಿಸುವುದರ ಜೊತೆಗೆ ಅವುಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಅವರ ಜಯಂತಿ ಅರ್ಥಪೂರ್ಣವಾಗಲು ಸಾಧ್ಯ ಎಂದು ಶಿಕ್ಷಕ ಎಸ್.ವಿ. ಕಲ್ಯಾಣಶೆಟ್ಟಿ ಹೇಳಿದರು. ಪಟ್ಟಣದ ತಾ.ಪಂ. ಸಭಾಭವನದಲ್ಲಿ ತಾಲೂಕಾ ಆಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಶನಿವಾರ ಹಮ್ಮಿಕೊಂಡ ಹಸಿರು ಕಾಂತ್ರಿಯ ಹರಿಕಾರ, ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನರಾಮ್ ಅವರ 118ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಅವರು, ಶಿಕ್ಷಣದಿಂದಲೆ ದೇಶದ ಪ್ರಗತಿ ಸಾಧ್ಯವಿದ್ದು, ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವತ್ತ ಪಾಲಕರು ಗಮನ ಹರಿಸಬೇಕೆಂದು ಹೇಳಿದರು. ತಹಸೀಲ್ದಾರ ಪ್ರಕಾಶ ಹೊಳೆಪ್ಪಗೋಳ ಅಧ್ಯಕ್ಷತೆ ವಹಿಸಿ ಮಾತನಾಡಿ, ದಲಿತ ವರ್ಗದಿಂದ ಬಂದಿರುವ ಡಾ. ಬಾಬು ಜಗಜೀವನರಾಮ್ ಅವರು ಹೋರಾಟದ ಮೂಲಕ ಸಮುದಾಯಕ್ಕೆ ನ್ಯಾಯ ದೊರಕಿಸಿಕೊಡುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ ಎಂದರು. ಸಮಾಜದ ಮುಖಂಡ ಎಸ್.ಬಿ. ಸಾಲಿಮನಿ ಪ್ರಾಸ್ತಾವಿಕ ಮಾತನಾಡಿದರು. ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜ ಐನಾಪೂರ, ಹೆಸ್ಕಾಂ ವಿಭಾಗದ ಇಇ ಕಿರಣ ಸಣ್ಣಕ್ಕಿ ಸೇರಿದಂತೆ ದಲಿತ ಸಂಘಟನೆ ಮುಖಂಡರು ಉಪಸ್ಥಿತರಿದ್ದರು. ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಪರಶುರಾಮ ಪತ್ತಾರ ಸ್ವಾಗತಿಸಿದರು.

ಬೆಳಗಾವಿ ಹಿಂಡಲಗಾ ಗ್ರಾಮದ ಲಕ್ಷ್ಮೀ ನಗರದ ಶ್ರೀರಾಮ ಕಾಲೋನಿಯಲ್ಲಿ ಪ್ರಭು ಶ್ರೀರಾಮ ಮಂದಿರದ ಜೀರ್ಣೋದ್ಧಾರ, ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಸಮಾರಂಭ ನಡೆಯಿತು. ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ, ಯುವ ಕಾಂಗ್ರೆಸ್ ಮುಖಂಡ ಮೃಣಾಲ್ ಹೆಬ್ಬಾಳಕರ್, ಶಾಸಕ ಬಾಬಾಸಾಹೇಬ್ ಪಾಟೀಲ, ಗ್ರಾಮದ ಹಿರಿಯರು, ಶ್ರೀರಾಮ ಉತ್ಸವ ಕಮಿಟಿಯ ಸದಸ್ಯರು, ಗ್ರಾಮದ ನಾಗರಿಕರು ಉಪಸ್ಥಿತರಿದ್ದರು.

ಹಣ ದುರುಪಯೋಗ: ಬಿಜೆಪಿ ಪ್ರತಿಭಟನೆ

ರಾಮದುರ್ಗ: ಬೆಲೆ ಏರಿಕೆ, ತೆರಿಗೆ ಹೆಚ್ಚಳ ಸೇರಿದಂತೆ, ಎಸ್ ಟಿ-ಎಸ್‌ಸಿ ಮೀಸಲು ಹಣ ದುರುಪಯೋಗ ಮಾಡುತ್ತಿರುವ ರಾಜ್ಯ ಸರಕಾರದ ಕ್ರಮ ಖಂಡಿಸಿ ಬಿಜೆಪಿ ಕಾರ್ಯಕರ್ತರು ಪಟ್ಟಣದಲ್ಲಿ ಪ್ರತಿಭಟನೆ ಮಾಡಿ ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರು. ಪಟ್ಟಣದ ಎಪಿಎಂಸಿ ಮಾರ್ಕೆಟ್ ಯಾರ್ಡ್‌ನ ಗಣಪತಿ ದೇವಸ್ಥಾನದಿಂದ ಮಿನಿ ವಿಧಾನಸೌಧದ ವರೆಗೆ ಬಿಜೆಪಿ ಮಂಡಳ ಅಧ್ಯಕ್ಷ ಡಾ. ಕೆ.ವಿ. ಪಾಟೀಲ ಅವರ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಗ್ಯಾರಂಟಿ ಯೋಜನೆ ನೆಪದಲ್ಲಿ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನರ ಮೇಲೆ ಹೊರೆ ಬಿದ್ದಿದೆ. ದಿನ ಬಳಿಕೆಯ ಹಾಲು, ವಿದ್ಯುತ್, ಪ್ರಯಾಣ ದರ, ಸ್ಟಾಂಪ್ ಶುಲ್ಕ, ಮದ್ಯದ ದರ ಹೆಚ್ಚಳವು ಜನಸಾಮಾನ್ಯ, ಮಧ್ಯಮ ವರ್ಗದವರ ಬದುಕಿಗೆ ರಾಜ್ಯ ಸರಕಾರ ಕೊಡಲಿ ಏಟು ನೀಡಿದೆ.. ದಿನೇ ದಿನೇ ಹೊಸ ತೆರಿಗೆಗಳನ್ನು ವಿಧಿಸಲಾಗುತ್ತಿದೆ. ಕೆಲದಿನಗಳ ಹಿಂದೆ ಡಿಸೇಲ್ ದರವೂ ಹೆಚ್ಚಿದ್ದು, ಸರಕಾರ ಕೂಡಲೇ ಏರಿಸಿದ ಎಲ್ಲಾ ದರಗಳನ್ನು ಹಿಂಪಡೆಯಬೇಕು ಎಂದು ಬಿಜೆಪಿ ಮಂಡಲ ಅಧ್ಯಕ್ಷ ಡಾ. ಕೆ.ವಿ. ಪಾಟೀಲ ಒತ್ತಾಯಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಸಿ.ಎಸ್. ಹಿರೇಮಠ, ಮಲ್ಲಿಕಾರ್ಜುನ ಬಾವಿಕಟ್ಟಿ, ಜಹೀರ ಹಾಜಿ, ಈರನಗೌಡ ಹೊಸಗೌಡ್ರ, ಲಕ್ಕಣ್ಣ ಚಿಕ್ಕರೇವಣ್ಣ, ಕೃಷ್ಣ ರಾಠೋಡ, ರವಿಸೂರ್ಯ, ರಾಧಿಕಾ ಧೂತ್, ಬಾಬುರೆಡ್ಡಿ ಹೆಬ್ಬಳ್ಳಿ, ಮಾರುತಿ ಮೆಟ್ಟಿನ ಸೇರಿದಂತೆ ಇತರರಿದ್ದರು.

ಸಮಾಚಾರ ಸಣ್ಣದಲ್ಲ

ರಾಮ ನವಮಿ ವಿಶೇಷ ಪೂಜೆ

ರಬಕವಿ-ಬನಹಟ್ಟಿ: ಸಮೀಪದ ರಾಂಪುರದಲ್ಲಿ ರಾಮದೇವರ ದೇವಸ್ಥಾನದಲ್ಲಿ ರಾಮ ನವಮಿ ಅಂಗವಾಗಿ ಭಾನುವಾರ ವಿಶೇಷ ಪೂಜೆಯನ್ನು ಹಮ್ಮಿಕೊಳ್ಳಲಾಗಿತ್ತು. ನೂತನವಾಗಿ ನಿರ್ಮಾಣವಾದ ದೇವಸ್ಥಾನದಲ್ಲಿ ಬೆಳಗ್ಗೆ ಮೂರ್ತಿಗಳಿಗೆ ಅಭಿಷೇಕವನ್ನು ನಡೆಸಲಾಯಿತು. ರಾಮ ಲಕ್ಷ್ಮಣ, ಸೀತೆ ಮತ್ತು ಹನುಮಾನ ದೇವರಿಗೆ ವಿಶೇಷ ಪೂಜೆಯನ್ನು ಹಮ್ಮಿಕೊಳ್ಳಲಾಯಿತು. ಹೂ ಮಾಲೆಗಳಿಂದ ಮೂರ್ತಿಗಳನ್ನು ಅಲಂಕಾರಗೊಳಿಸಲಾಗಿತ್ತು. ಸಾಮೂಹಿಕ ಮಂಗಳಾರುತಿ ಕಾರ್ಯಕ್ರಮ ನಡೆಯಿತು. ಮಧ್ಯಾಹ್ನ ಮಹಿಳೆಯರು ರಾಮ ದೇವಸ್ಥಾನಕ್ಕೆ ಆಗಮಿಸಿ ಪೂಜೆ ಸಲ್ಲಿಸಿ ನೈವೇದ್ಯ ಸಲ್ಲಿಸಿದರು. ಈ ಸಂದರ್ಭದಲ್ಲಿ ವಿವೇಕಾನಂದ ಭಸ್ಮೆ, ಗೊಡಚೆಪ್ಪ ಹೊಸಕೋಟಿ, ನಾಝುರೆ, ಬಕರೆ, ಖಟವಾಕರ, ಕೋಪರ್ಡೆ, ಮಾರುತಿ ಗಂಥಡೆ, ಪ್ರಕಾಶ ಸಿಂಗನ್ ಅನೇಕರು ಉಪಸ್ಥಿತರಿದ್ದರು.

ಭರತ ಖಂಡದ ಆರಾಧ್ಯದೈವ ರಾಮ

ರಬಕವಿ-ಬನಹಟ್ಟಿ: ಮರ್ಯಾದಾ ಪುರುಷೋತ್ತಮ ಶ್ರೀರಾಮ ಭರತ ಖಂಡದ ಆರಾಧ್ಯದೈವ. ಸಗುಣ ರಾಮನ ನೆನೆದು ನಾವೆಲ್ಲರೂ ನಿರ್ಗುಣ ರಾಮರಾಗುವತ್ತ ಸಂಕಲ್ಪಿತರಾಗಬೇಕೆಂದು ಹಿರಿಯ ಸಾಹಿತಿ ಮಲ್ಲಿಕಾರ್ಜುನ ಹುಲಗಬಾಳಿ ಹೇಳಿದರು.

ಭಾನುವಾರದಂದು ರಾಮಪುರದ ಶ್ರೀರಾಮ ಮಂದಿರದಲ್ಲಿ ರಬಕವಿಯ ಡಿ.ಕೆ.ಕೊಟ್ರಶೆಟ್ಟಿ ಫೌಂಡೇಶನ್ ಮತ್ತು ಭಾರತ್ ಗ್ಯಾಸ್ ಜಂಟಿಯಾಗಿ ಆಯೋಜಿಸಿದ್ದ ಪ್ರಸಾದ ವಿತರಣೆ ಸಮಾರಂಭದಲ್ಲಿ ಚಿಗಳಿ ಕೃತಿಗೆ ಜಿಲ್ಲಾ ದತ್ತಿ ನಿಧಿ ಪುರಸ್ಕಾರ ದೊರೆತ ಹಿನ್ನೆಲೆಯಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿ, ಶ್ರೀರಾಮ ಪಿತೃವಾಕ್ಯ ಪರಿಪಾಲಕ, ಏಕ ಪತ್ನೀ ವ್ರತಸ್ಥ, ದುಷ್ಟ ಸಂಹಾರ ಮತ್ತು ಶಿಷ್ಟ ರಕ್ಷಣೆಗೆ ಬದ್ಧನಾಗಿ ವನವಾಸ ಜೀವನದಲ್ಲೇ ಕೈಂಕರ್ಯನಾಗಿ ಬಳಿಕ ಅರಸನಾಗಿ ಜನೋಪಕಾರಿಯಾಗಿ ಅಜರಾಮರನಾದ ಗುರುತರ ವ್ಯಕ್ತಿತ್ವದ ಕಾರಣಕ್ಕೆ ದೈವತ್ವದ ಪರಾಕಾಷ್ಠೆಗೇರಿದ. ವ್ಯಕ್ತಿ ಪರಿಪೂರ್ಣತೆಯ ಪ್ರತೀಕನಾಗಿರುವ ಶ್ರೀರಾಮನ ಆದರ್ಶಗಳನ್ನು ನಾವು ಅಳವಡಿಕೊಂಡು ಸಂತೃಪ್ತ ಜೀವನ ನಡೆಸಬೇಕೆಂದರು.

ಈ ಸಂದರ್ಭದಲ್ಲಿ ಫೌಂಡೇಶನ್ ಅಧ್ಯಕ್ಷ ಸೋಮಶೇಖರ ಕೊಟ್ರಶೆಟ್ಟಿ, ಚಂದ್ರಶೇಖರ ಹುಲಗಬಾಳಿ, ಬಸವರಾಜ ದಲಾಲ, ರಾಮದಾಸ ಸಿಂಗನ್, ಗಿರೀಶ ಮುತ್ತೂರ, ವಿವೇಕಾನಂದ ಭಸ್ಮೆ, ಡಾ.ಜಿ.ಎಚ್.ಚಿತ್ತರಗಿ, ಗಜಾನನ ವಜ್ರಮಟ್ಟಿ, ಗಜಾನನ ತೆಗ್ಗಿ, ಬಸವರಾಜ ಕುಳ್ಳೋಳ್ಳಿ, ಖಟಾವಕರ, ವಿಜಯಕುಮಾರ ಹಲಕುರ್ಕಿ, ಭಾರತ ಗ್ಯಾಸ್ ಸಿಬ್ಬಂದಿ ಇದ್ದರು.

ಅಧಿಕಾರದ ದುರಾಸೆಗೆ ಸಾಲ: ಸಿದ್ದು ಸವದಿ

ರಬಕವಿ-ಬನಹಟ್ಟಿ: ಕಾಂಗ್ರೆಸ್ ಪಕ್ಷ ಅಧಿಕಾರದ ದುರಾಸೆಯಿಂದ ರಾಜ್ಯವನ್ನು ಸಂಪೂರ್ಣವಾಗಿ ಸಾಲದಲ್ಲಿ ಮುಳುಗಿಸಿದ್ದು, ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಯಾವುದೆ ಸರಕಾರ ಅಧಿಕಾರಕ್ಕೆ ಬಂದರೂ ಅವರು ಕೇವಲ ಸಾಲಕ್ಕೆ ಬಡ್ಡಿಯನ್ನು ತುಂಬುವುದನ್ನು ಮಾಡಬೇಕು. ಕಾಂಗ್ರೆಸ್ ಪಕ್ಷ ರಾಜ್ಯವನ್ನು ಸಾಲದಲ್ಲಿ ಮುಳುಗಿಸಿದ್ದರಿಂದ ಅಭಿವೃದ್ಧಿ ಕಾರ್ಯಕ್ರಮಗಳು ಸಂಪೂರ್ಣವಾಗಿ ಸ್ಥಗಿತಗೊಂಡಿವೆ ಎಂದು ಶಾಸಕ ಸಿದ್ದು ಸವದಿ ತಿಳಿಸಿದರು. ಬನಹಟ್ಟಿಯ ಭಾರತೀಯ ಜನತಾ ಪಕ್ಷದ ಕಾರ್ಯಾಲಯದಲ್ಲಿ ಹಮ್ಮಿಕೊಂಡ ನೂತನ ಪದಾಧಿಕಾರಿಗಳಿಗೆ ಪದಗ್ರಹಣ, ಪ್ರಮಾಣ ಪತ್ರ ವಿತರಣೆ ಮತ್ತು ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದರು. ಚುನಾವಣೆಯ ಸಂದರ್ಭದಲ್ಲಿ ಪಕ್ಷದ ಬಲವರ್ಧನೆಗಾಗಿ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಬೇಕು. ಪಕ್ಷ ವಹಿಸಿಕೊಟ್ಟ ಕಾರ್ಯಗಳನ್ನು ಪ್ರಾಮಾಣಿಕವಾಗಿ, ಜವಾಬ್ದಾರಿಯುತವಾಗಿ ಮತ್ತು ವೈಯಕ್ತಿಕ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ನಿರ್ವಹಿಸಬೇಕು. ಇಂದು ಅಧಿಕಾರ ವಂಚಿತರು ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚಿನ ಹುದ್ದೆಯನ್ನು ಪಡೆದುಕೊಳ್ಳಬಹುದಾಗಿದೆ ಎಂದು ಶಾಸಕ ಸಿದ್ದು ಸವದಿ ತಿಳಿಸಿದರು. ಬಿಜೆಪಿ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಸಿ.ಟಿ. ಉಪಾಧ್ಯೆ, ಓಬಿಸಿ ಜಿಲ್ಲಾ ಘಟಕದ ಅಧ್ಯಕ್ಷ ಸಂಗಮೇಶ ದಳವಾಯಿ, ನಗರಸಭೆಯ ಅಧ್ಯಕ್ಷೆ ವಿದ್ಯಾ ಧಬಾಡಿ, ಮಹಾಂತೇಶ ಹಿಟ್ಟಿಮನಮಠ ಇದ್ದರು.

ಮಳೆ: ಧರೆಗುರುಳಿದ ಮರ, 2 ಕಾರು ಜಖಂ

ಮಹಾಲಿಂಗಪುರ: ಪಟ್ಟಣ, ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪೂರ್ವ, ಈಶಾನ್ಯ ದಿಕ್ಕುಗಳಿಂದ ಆಗಮಿಸಿದ ಬಿರುಗಾಳಿ ಮತ್ತು ಗುಡುಗು ಸಹಿತ ಮುಂಗಾರು ಪೂರ್ವ ಮಳೆ ಒಂದು ಗಂಟೆ ಕಾಲ ಧಾರಾಕಾರ ಸುರಿದ ಪರಿಣಾಮವಾಗಿ ಪಟ್ಟಣದ ಅಲ್ಲಲ್ಲಿ ಗಿಡ ಮರಗಳು ಧರಾಶಾಯಿಯಾಗಿ ವಾಹನಗಳು, ಮನೆ, ಅಂಗಡಿ ಪತ್ರಾಸ್ ಶೆಡ್ ಗಳಿಗೆ ಹಾನಿಯುಂಟು ಮಾಡಿವೆ. ಪ್ರಸ್ತುತ ಬೇಸಿಗೆ ಕಾಲದ ಏಪ್ರಿಲ್ ತಿಂಗಳು ಆರಂಭಗೊಂಡಿದ್ದು, ಸಹಜವಾಗಿ ಬಿಸಿಲಿನ ಪ್ರಖರತೆ ಕೂಡ ಹೆಚ್ಚುತ್ತ ಸಾಗಿದೆ. ಈ ಕಾರಣದಿಂದ ಬಿಸಿಲಿನ ಝಳಕ್ಕೆ ಜನ ಹೈರಾಣಾಗಿ ಅವರಿಗೆ ದೈನಂದಿನ ಬದುಕು ಸಾಗಿಸುವುದೇ ದುಸ್ತರವಾಗಿತ್ತು. ಏಕಾಏಕಿ ಸುರಿದ ಮಳೆ ಸಂಪೂರ್ಣ ವಾತಾವರಣವನ್ನು ತಂಪಾಗಿಸದೆ ಹೋದರೂ, ಪರವಾಗಿಲ್ಲ ಎನ್ನುವಷ್ಟು ಕೆಲ ಜನತೆಯ ನೆಮ್ಮದಿಗೆ ಕಾರಣವಾದರೆ ಕೆಲವು ಜನರಿಗೆ ಸಂಕಷ್ಟ ತಂದೊಡ್ಡಿದೆ. ಕ್ಷಣಾರ್ಧದಲ್ಲಿ ಬಿರುಗಾಳಿ ಮತ್ತು ಮಳೆ ಒಟ್ಟಿಗೆ ಆರಂಭಗೊಂಡು ರಸ್ತೆಯ ಅವಶೇಷವನ್ನೇ ಅಡಗಿಸಿದ ಅನುಭವ ಜನರಿಗಾಗಿದೆ. ವಡಗೇರಿ ಪ್ಲಾಟ್ ದೇವಸ್ಥಾನದ ದೊಡ್ಡ ಅರಳೆ ಮರ ಪಕ್ಕದಲ್ಲಿ ನಿಲ್ಲಿಸಿರುವ ಓಮ್ನಿ ಹಾಗೂ ಟಾಟಾ ಕಂಪನಿಯ ಎರಡು ಕಾರ್ ಗಾಡಿಗಳ ಮೇಲೆ ಬಿದ್ದು ವಾಹನಗಳು ಭಾಗಶಃ ನಜ್ಜುಗುಜ್ಜಾಗಿವೆ.ಭಗೀರಥ ವೃತ್ತ ಹತ್ತಿರ ನಾಗಪ್ಪ ಯಾದವಾಡ ಎಂಬುವರ ಮನೆ ಮೇಲೆ ನಿರ್ಮಿಸಿದ ಪತ್ರಾಸ್ ಶೆಡ್ ಗಾಳಿಯ ರಭಸಕ್ಕೆ ಮತ್ತೊಬ್ಬರ ಮನೆ ಮೇಲೆ ಒರಗಿದೆ.

ವಿರಾಮ
ಪ್ರತಿ ಭಾನುವಾರ

ನಾನಾ ಕಡೆ ಅಭಿವೃದ್ಧಿ ಕಾಮಗಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ.ಪಾಟೀಲ ಚಾಲನೆ

ಮುಂದಿನ 10 ವರ್ಷದ ಬೇಡಿಕೆಗೆ ವಿದ್ಯುತ್ ಕೇಂದ್ರ

ವಿಜಯಪುರ: ರೈತರು ಶ್ರೀಮಂತರಾಗಬೇಕು ಎಂಬುದು ನನ್ನ ಕನಸು. ಇದನ್ನು ನನಸು ಮಾಡಲು ಮುಂದಿನ 10 ವರ್ಷಗಳವರೆಗೆ ಅಗತ್ಯವಾಗಿರುವ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ವಿತರಣೆ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ ಎಂದು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಹೇಳಿದ್ದಾರೆ.

ಅವರು ಶನಿವಾರ ಮುಸ್ಸಂಜೆ ಬಬಲೇಶ್ವರ ತಾಲೂಕಿನ ಅರ್ಜುಣಗಿ(ನಿಡೋಣಿ) ಮತ್ತು ಕಾಖಂಡಕಿ ಗ್ರಾಮಗಳಲ್ಲಿ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತಾಡಿದರು.

ಅರ್ಜುಣಗಿ(ನಿಡೋಣಿ) ಬಳಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ವತಿಯಿಂದ ನಿರ್ಮಿಸಲಾಗಿರುವ 2/110 ಎಂವಿಎ, 110/11 ಕೆ. ವಿ ವಿದ್ಯುತ್ ವಿತರಣೆ ಕೇಂದ್ರ ಉದ್ಘಾಟಿಸಿ ಅವರು ಮಾತನಾಡಿದ ಅವರು, ಮತಕ್ಷೇತ್ರದಲ್ಲಿ ಜಲಕ್ರಾಂತಿಗೆ ಪೂರಕವಾಗಿ ಇಂಧನ ಕ್ರಾಂತಿ ಮಾಡಲಾಗಿದೆ. ಜಿಲ್ಲೆಯಲ್ಲಿಯೇ ಬಬಲೇಶ್ವರ ಮತಕ್ಷೇತ್ರದಲ್ಲಿ ಅತೀ ಹೆಚ್ಚು ವಿದ್ಯುತ್ ಬೇಡಿಕೆ ಇದೆ. ಇದು ಅಭಿವೃದ್ಧಿಯ ಸಂಕೇತವಾಗಿದ್ದು, ಮುಂದಿನ 10 ವರ್ಷಗಳಿಗೆ ಅಗತ್ಯಕ್ಕೆ ತಕ್ಕಂತೆ ಗುಣಮಟ್ಟದ ವಿದ್ಯುತ್ ಪೂರೈಸಲು ಕ್ರಮ ಕೈಗೊಳ್ಳಲಾಗಿದೆ. ವಿದ್ಯುತ್ ವಿತರಣೆ ಕೇಂದ್ರಗಳನ್ನು ಹೆಚ್ಚಿಸಲು ಇಂಧನ ಸಚಿವ ಕೆ. ಜೆ. ಜಾರ್ಜ್ ಕೂಡ ಸಂಪೂರ್ಣ ಸಹಕಾರ ನೀಡಿದ್ದು, ಅವರಿಗೆ ಧನ್ಯವಾದ ಅರ್ಪಿಸುವುದಾಗಿ ಅವರು ತಿಳಿಸಿದರು.

ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲೂಕಿನ ಅರ್ಜುಣಗಿ(ನಿಡೋಣಿ) ಬಳಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ವತಿಯಿಂದ ನಿರ್ಮಿಸಲಾಗಿರುವ 2/110 ಎಂವಿಎ, 110/11 ಕೆ. ವಿ ವಿದ್ಯುತ್ ವಿತರಣೆ ಕೇಂದ್ರವನ್ನು ಸಚಿವ ಎಂ. ಬಿ. ಪಾಟೀಲ ಉದ್ಘಾಟಿಸಿದರು.

ಈ ಭಾಗದಲ್ಲಿ ಬಾಕಿ ಉಳಿದಿರುವ 23000 ಎಕರೆ ಜಮೀನಿಗೆ ನೀರೊದಗಿಸಲು ರೂ. 319 ಕೋ. ವೆಚ್ಚದ ಯೋಜನೆ ರೂಪಿಸಲಾಗಿದೆ. ವಿತರಣೆ ಕಾಲುವೆ, 5ಎ ಮತ್ತು 5ಬಿ ಲಿಫ್ಟ್ ಮೂಲಕ ನೀರು ಪೂರೈಸುವ ಕಾಮಗಾರಿಗಳಿಗೆ ಶೀಘ್ರದಲ್ಲಿ ಭೂಮಿಪೂಜೆ ಮಾಡಲಾಗುವುದು ಎಂದು ಸಚಿವರು ತಿಳಿಸಿದರು.

ಜಿಲ್ಲೆಯಲ್ಲಿ ಯುವಕರಿಗೆ ಉದ್ಯೋಗ ನೀಡುವ ಗುರಿ

ಕಾಖಂಡಕಿ ಗ್ರಾಮದಲ್ಲಿ 5 ಕೋಟಿ ರು. ವೆಚ್ಚದ ಕಾಖಂಡಕಿ-ಕಾರಜೋಳ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ಸಲ್ಲಿಸಿ, 110 ಕೆ.ವಿ ವಿದ್ಯುತ್ ಸ್ಟೇಷನ್ ಉದ್ಘಾಟಿಸಿದ ಸಚಿವರು ಮಳೆಯಲ್ಲಿಯೇ ಭಾಷಣ ಮಾಡಿದರು. ಮತಕ್ಷೇತ್ರದಲ್ಲಿ ನೀರಾವರಿಯ ಯೋಜನೆಗಳಿಂದಾಗಿ ಹತ್ತಿಪ್ಪತ್ತು ಸಕ್ಕರೆ ಕಾರ್ಖಾನೆಗಳಿಗೆ ಬೇಕಾಗುವಷ್ಟು ಕಬ್ಬನ್ನು ರೈತರು ಬೆಳೆಯುತ್ತಿದ್ದಾರೆ. ಮುಂದಿನ ಪೀಳಿಗೆಯ ಭವಿಷ್ಯದ ಒಳಿತಿಗಾಗಿ ಯೋಜನೆ ರೂಪಿಸಲಾಗಿದೆ. ಇದರಿಂದಾಗಿ ಬೇಸಿಗೆಯಲ್ಲಿಯೂ ನೀರಿನ ಸಮಸ್ಯೆಯಾಗಿಲ್ಲ. ಕಾಖಂಡಕಿ ಗ್ರಾಮದ ಎಲ್ಲ ಬೇಡಿಕೆಗಳನ್ನು ಈಡೇರಿಸಲಾಗಿದ್ದು, ಜಿಲ್ಲೆಯಲ್ಲಿ ಹತ್ತಿಪ್ಪತ್ತು ಸಾವಿರ ಯುವಕರಿಗೆ ಉದ್ಯೋಗ ನೀಡುವ ಗುರಿ ಹೊಂದಿದ್ದೇನೆ. ಸಿಎಸ್ಆರ್ ಫಂಡ್ ಮೂಲಕ ಶಾಲೆಯ ಅಭಿವೃದ್ಧಿ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಮುಖಂಡ ಚನ್ನಪ್ಪ ಕೊಪ್ಪದ, ಕೆಎಂಎಫ್ ಮಾಜಿ ಅಧ್ಯಕ್ಷ ಶ್ರೀಶೈಲಗೌಡ ಪಾಟೀಲ ನಿಡೋಣಿ ಮಾತನಾಡಿ, ಸಚಿವ ಎಂ. ಬಿ. ಪಾಟೀಲ ಅವರು ಮಡ್ಡಿಯನ್ನು ಬಂಗಾರದ ಕಡ್ಡಿಯನ್ನಾಗಿ ಮಾಡಿ ರೈತರ ಬಾಳು ಹಸನಾಗಿಸಿದ್ದಾರೆ. ಅವರು ಹಠವಾದಿ ಮತ್ತು ಛಲವಾದಿಯಾಗಿದ್ದಾರೆ. ತಮಗೆ ವಹಿಸಿದ ಖಾತೆಯನ್ನು ಸಮರ್ಪಕವಾಗಿ ನಿಭಾಯಿಸಿ ಅದರ ಲಾಭವನ್ನು ರೈತರಿಗೆ ತಲುಪಿಸುತ್ತಿದ್ದಾರೆ. ಮತಕ್ಷೇತ್ರದಲ್ಲಿ ಗುಣಮಟ್ಟದ ವಿದ್ಯುತ್ ಸರಬರಾಜಾಗುತ್ತಿದೆ. ಇಲಾಖೆಗಳು ಜನರ ಮನೆ ಬಾಗಿಲಿಗೆ ಸೇವೆ ಒದಗಿಸಲು ಕ್ರಮ ಕೈಗೊಂಡಿದ್ದಾರೆ ಎಂದು ಹೇಳಿದರು. ಕರ್ನಾಟಕ ಬಾಲವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಮಾತನಾಡಿದರು. ಇದೇ ವೇಳೆ ರೈತ ರುದ್ರಗೌಡ ಡೆಂಗಿ ಅವರು ತಮ್ಮ ಹೊಲದಲ್ಲಿ ಬೆಳೆದ ದ್ರಾಕ್ಷಿಯನ್ನು ಸಚಿವರಿಗೆ ಸಮರ್ಪಿಸಿದರು.

ಈ ಸಂದರ್ಭದಲ್ಲಿ ಶ್ರೀ ಸಂಗಮೇಶ ನಾಗಪ್ಪ ಹಿರೇಮಠ, ಮುಖಂಡರಾದ ಈರಗೊಂಡ ಬಿರಾದಾರ, ವಿ. ಎಸ್. ಪಾಟೀಲ, ವಿನಾಯಕ ಕೊಟ್ಟಲಗಿ, ಅಶೋಕ ಕಾಖಂಡಕಿ, ವಿದ್ಯಾರಾಣಿ ತುಂಗಳ, ಸಾಹೇಬಗೌಡ ಪಾಟೀಲ, ಡಾ. ಕೆ. ಎಚ್ ಮುಂಬಾರೆಡ್ಡಿ, ರಮೇಶ ದೇಸಾಯಿ, ಬಾಬುಗೌಡ ಪಾಟೀಲ, ಮಾದುರಾಯ ಬಿರಾದಾರ, ನಾಗರಾಜ ಕುಲಕರ್ಣಿ, ಮಹೇಶಗೌಡ ಪಾಟೀಲ ಕುಮಠೆ, ಅಧಿಕಾರಿಗಳಾದ ರಮೇಶ ಪವಾರ, ಸಿದ್ದಪ್ಪ ಬಿಂಜಗೇರಿ, ಜಗದೀಶ ಜಾಧವ, ಮಹಾದೇವ ತಳವಾರ, ಪ್ರಮೋದ ಹೊಟ್ಟಿ, ಭೀಮಾಶಂಕರ ಮುಂತಾದವರು ಉಪಸ್ಥಿತರಿದ್ದರು.

ಭಾರತೀಯ ಜನತಾ ಪಕ್ಷದ ಸಂಸ್ಥಾಪನಾ ದಿನಾಚರಣೆ | ಸಂಸದ ಪಿ.ಸಿ.ಗದ್ದಿಗೌಡರ ಅಭಿಮತ

ಕಾರ್ಯಕರ್ತರೇ ಬಿಜೆಪಿ ಪಕ್ಷಕ್ಕೆ ಶಕ್ತಿ

ಬಾಗಲಕೋಟೆ: ಭಾರತೀಯ ಜನತಾ ಪಕ್ಷವು ರಾಷ್ಟ್ರೀಯ ತತ್ವಗಳ ಮೇಲೆ ನಿರ್ಮಿಸಲಾದ ಸಂಘಟನೆ. ಕಾರ್ಯಕರ್ತರೇ ನಮ್ಮ ಪಕ್ಷದ ಶಕ್ತಿ ಎಂದು ಸಂಸದ ಪಿ.ಸಿ.ಗದ್ದಿಗೌಡರ ಹೇಳಿದರು.

ನವನಗರದಲ್ಲಿರುವ ಭಾರತೀಯ ಜನತಾ ಪಾರ್ಟಿ ಜಿಲ್ಲಾ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ ರಾಮ ನವಮಿ ಹಾಗೂ ಬಿಜೆಪಿ ಸಂಸ್ಥಾಪನಾ ದಿನಾಚರಣೆಯಲ್ಲಿ ಭಾರತ ಮಾತೆ ಹಾಗೂ ಪಕ್ಷ ಸಂಸ್ಥಾಪಕರ ಭಾವಚಿತ್ರಕ್ಕೆ ಪುಷ್ಪಾಂಜಲಿ ಮೂಲಕ ಗೌರವ ನಮನ ಸಲ್ಲಿಸಿ ಅವರು ಮಾತನಾಡಿದರು.

ನಾವು ಭಾರತ್ ಮಾತಾ ಕಿ ಜೈ ನಿಂದ ಶಕ್ತಿಯನ್ನು ಪಡೆಯುತ್ತೇವೆ. ಇದು ನಮ್ಮ ಕೇಂದ್ರ ವಿಷಯವಾಗಿದೆ. ಭಾರತ್ ನಮ್ಮ ಭೂಮಿ, ಮಾತಾ ಅಂದರೆ ನಮ್ಮ ಪರಂಪರೆ ಮತ್ತು ಸಂಸ್ಕೃತಿ ಇನ್ನು ಜೈ ಜನರ ಆಕಾಂಕ್ಷೆಗಳು. ರಾಷ್ಟ್ರದ ಬಗೆಗಿನ ನಮ್ಮ ಆಳವಾದ ಬದ್ಧತೆಯ ಅಭಿವ್ಯಕ್ತಿಯಾಗಿದೆ ಎಂದರು.

ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಮಾತನಾಡಿ, ದೀನ ದಯಾಳ ಉಪಾಧ್ಯಾಯ, ಶ್ಯಾಮ ಪ್ರಸಾದ ಮುಖರ್ಜಿ, ಅಟಲ್ ಬಿಹಾರಿ ವಾಜಪಾಯಿ, ಲಾಲ್ ಕೃಷ್ಣ ಅಡ್ವಾಣಿ ಯಂತಹ ಆದರ್ಶ ಪುರುಷರು ಕಟ್ಟಿ ಪಕ್ಷ ಬಿಜೆಪಿ, ಆ ಎಲ್ಲ ಮಹನಿಯರ ಕನಸುಗಳನ್ನು ಇಂದು ನರೇಂದ್ರ ಮೋದಿಯವರ ನನಸು ಮಾಡುತ್ತಿದ್ದಾರೆ ಎಂದರು.

ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಮಾತನಾಡಿ, ಕಳೆದ ಹಲವು ದಶಕಗಳಲ್ಲಿ ನಮ್ಮ ಪಕ್ಷವನ್ನು ಬಲಪಡಿಸಲು ತಮ್ಮನ್ನು ತಾವು ತೊಡಗಿಸಿಕೊಂಡ ಎಲ್ಲ ಕಾರ್ಯಕರ್ತರನ್ನು ನಾವು ಸ್ಮರಿಸಿಕೊಳ್ಳೋಣ. ಈ ಮಹತ್ವದ ದಿನವು ಭಾರತದ ಪ್ರಗತಿಯ ಕಡೆಗೆ ಕೆಲಸ ಮಾಡಲು ಮತ್ತು ವಿಕಸಿತ್ ಭಾರತದ ಕನಸನ್ನು ನನಸಾಗಿಸಲು ನಮ್ಮ ಬದ್ಧತೆಯನ್ನು ಪುನರುಚ್ಚರಿಸುತ್ತದೆ ಎಂದರು.



ಬಾಗಲಕೋಟೆಯ ನವನಗರದಲ್ಲಿರುವ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಸಂಸ್ಥಾಪನಾ ದಿನ ಆಚರಿಸಲಾಯಿತು.

> ಗ್ರಾಮ, ನಗರ, ಜಿಲ್ಲೆ ಮತ್ತು ರಾಜ್ಯ ಅಭಿವೃದ್ಧಿಯಾದರೆ ದೇಶದ ಅಭಿವೃದ್ಧಿ ಸಾಧ್ಯ. ಆ ನಿಟ್ಟಿನಲ್ಲಿ ಪ್ರದಾನಿ ಮೋದಿಯವರು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ. ಅವರಂತೆ ನಮ್ಮ ನಮ್ಮ ಕ್ಷೇತ್ರಗಳಲ್ಲಿ ನಮ್ಮ ವೈಯಕ್ತಿಕ ಸ್ವಾರ್ಥವನ್ನು ಬಿಟ್ಟು ಕ್ಷೇತ್ರದ ಅಭಿವೃದ್ಧಿಗೆ ಮುಂದಾಗಬೇಕು.
> -ವೀರಣ್ಣ ಚರಂತಿಮಠ, ಮಾಜಿ ಶಾಸಕರು

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಮಾತನಾಡಿ, ಪಕ್ಷ ಬೆಳೆದು ಬಂದ ದಾರಿ ಹಾಗೂ ಮುಂದಿನ ಸಂಘಟನಾತ್ಮಕ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು.

ಮುಖಂಡರಾದ ಜಿ.ಎನ್.ಪಾಟೀಲ,ಡಾ. ಎಂ.ಎಸ್.ದಡ್ಡೆನ್ನವರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಲ್ಲಯ್ಯ ಮುಗನೂರಮಠ, ಗುಂಡುರಾವ ಶಿಂಧೆ, ಉಪಾಧ್ಯಕ್ಷೆ ಭಾಗೀರಥಿ ಪಾಟೀಲ, ಜ್ಯೋತಿ ಭಜಂತ್ರಿ, ಸರಸ್ವತಿ ಕುರಬರ, ಭುವನೇಶ್ವರಿ ಕುಪ್ಪಸ್ತ, ಜಯಶ್ರೀ ಏಕಬೋಟೆ, ಯಲ್ಲಪ್ಪ ಬೆಂಡಿಗೇರ, ರಾಜು ಮುದೇನೂರ, ಈರಪ್ಪ ಶಿರಗನ್ನವರ, ಚೆನ್ನಯ್ಯ ಹಿರೇಮಠ, ಸುರೇಶ ಕೊಣ್ಣೂರ, ಕಲ್ಲಪ್ಪ ಭಗವತಿ, ಮಲ್ಲೇಶ ಬಿಜಾಪುರ, ಬಸವರಾಜ ಹುನಗುಂದ, ಉಮೇಶ ಹಂಚಿನಾಳ, ಶ್ರೀಧರ ನಾಗರಬೆಟ್ಟ, ಚಂದ್ರಕಾಂತ ಪತ್ತಾರ, ಶ್ರೀಶೈಲ ಗಾಣಿಗೇರ, ಮುತ್ತು ಕುರಬರ, ರಾಜು ಗಾಣಿಗೇರ, ಕಿರಣಸಿಂಗ್ ರಾಠೋಡ, ಭುವನೇಶ್ವರ ಪೂಜಾರ, ಚೆನ್ನಬಸವರಾಜ ಬುಡ್ಡರ ಸೇರಿದಂತೆ ಇತರರಿದ್ದರು.

ಬಾಬು ಜಗಜೀವನ ರಾಮ್ ಹಸಿರು ಕ್ರಾಂತಿಯ ಹರಿಕಾರ

ಗುಳೇದಗುಡ್ಡದ ತಹಶೀಲ್ದಾರ ಕಚೇರಿಯಲ್ಲಿ ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನರಾಂ ಅವರ ಜಯಂತಿ ಆಚರಿಸಲಾಯಿತು.

ಗುಳೇದಗುಡ್ಡ: ಕೃಷಿ ಕ್ಷೇತ್ರದಲ್ಲಿ ಸುಧಾರಣೆ ಮಾಡಿ, ದೇಶವನ್ನು ಹಸಿವಿನಿಂದ ಮುಕ್ತಗೊಳಿಸುವ ಸಂಕಲ್ಪತೊಟ್ಟ ಡಾ. ಬಾಬು ಜಗಜೀವನ್ ರಾಂ ಅವರು ಹಸಿರು ಕ್ರಾಂತಿಯ ಹರಿಕಾರರಾಗಿದ್ದಾರೆ. ಡಾ. ಜಗಜೀವನರಾಂ ಅವರ ಶ್ರಮವನ್ನು ವ್ಯರ್ಥ ಮಾಡದೇ ನಮ್ಮ ಜವಾಬ್ದಾರಿ ಏನು ಎಂದು ಅರಿತುಕೊಂಡು ಸಮಾಜ ಸುಧಾರಣೆಗೆ ಶ್ರಮವಹಿಸಬೇಕು. ಅವರ ತತ್ವಾದರ್ಶಗಳನ್ನು ಮುಂದಿನ ಯುವಪೀಳಿಗೆ ಅಳವಡಿಕೊಳ್ಳಬೇಕು ಎಂದು ತಹಸೀಲ್ದಾರ್ ಮಂಗಳಾ ಎಂ ಹೇಳಿದರು.

ತಾಲೂಕು ಆಡಳಿತದಿಂದ ತಹಸೀಲ್ದಾರ ಕಾರ್ಯಾಲಯದಲ್ಲಿ ಹಮ್ಮಿಕೊಂಡದ್ದ ಡಾ. ಬಾಬು ಜಗಜೀವನರಾಂ ಅವರು 118ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ಸ್ವಾತಂತ್ರ್ಯದ ನಂತರ ಭಾರತದಲ್ಲಿ ಆಳವಾಗಿ ಬೇರೂರಿದ್ದ ಮೇಲು-ಕೀಳು, ತಾರತಮ್ಯ, ಅಸ್ಪೃಶ್ಯತೆ, ಜಾತಿ ವ್ಯವಸ್ಥೆ, ಮೌಢ್ಯತೆದ ಮನೋಭಾವಗಳನ್ನು ತೊಡೆದು ಹಾಕಲು ಡಾ.ಬಾಬು ಜಗಜೀವನ ರಾಮ್ ಅವರು ಪ್ರಮುಖ ಪಾತ್ರ ವಹಿಸಿದರು ಎಂದರು.

ನಿವೃತ್ತ ಶಿಕ್ಷಕ ವಸಂತ ಚವ್ಹಾಣ ಮಾತನಾಡಿ, ಡಾ. ಬಾಬು ಜಗಜೀವನರಾಂ ಅವರು ಸಮ ಬಾಳು ಸಮಪಾಲು ಜಾತಿ, ಮತ ಬೇಧವಿಲ್ಲದೇ ಎಲ್ಲರಿಗೂ ಅವಕಾಶ ಸಿಗಬೇಕು ಎಂದು ಹಗಲಿರುಳು ಶ್ರಮಿಸಿದ ನಾಯಕರು ಎಂದರು.

ಈ ಸಂದರ್ಭದಲ್ಲಿ ವಿಶೇಷ ತಹಸೀಲ್ದಾರ್ ಮಹೇಶ ಗಸ್ತೆ, ಪುರಸಭೆ ಉಪಾಧ್ಯಕ್ಷ ರಾಜು ಹೆಬ್ಬಳ್ಳಿ, ತಾಪಂ. ಇಓ ಮಲ್ಲಿಕಾರ್ಜುನ ಬಡಿಗೇರ, ಸಮಾಜದ ಮುಖಂಡರುಗಳಾದ ಯಮನಪ್ಪ ದಳಪತಿ. ವೈ.ಆರ್ ಹೆಬ್ಬಳ್ಳಿ. ಪರಶುರಾಮ ಮಾದರ, ಶಂಕ್ರಪ್ಪ ಹುಲಮನಿ, ಪಕೀರಪ್ಪ ತಳವಾರ, ರೆಡ್ಡಿ ನಡುವಿನಮನಿ, ರಮೇಶ ಗಚ್ಚಿನಮನಿ. ಹಿರಿಯಪ್ಪ ಮಾದರ, ಈರಣ್ಣ ಬಂಡಿವಡ್ಡರ, ದ್ಯಾಮಣ್ಣ ಗೌಡರ, ಪುರಸಭೆ ಸದಸ್ಯ ಯಲ್ಲಪ್ಪ ಮನ್ನಿಕಟ್ಟಿ, ಶ್ರೀಕಾಂತ ಹುನಗುಂದ, ಮಹ್ಮದರಫೀಕ್ ಮಕಾಂದಾರ, ಬಸವರಾಜ ಹಲಕುರ್ಕಿ, ಟಿ.ಎಂ ಚೇಕರೆಡ್ಡಿ, ಸಮಾಜ ಕಲ್ಯಾಣ ಇಲಾಖೆ ಆನಂದ ಮಬ್ರುಂಕರ, ಆರ್.ಎನ್ ರಂಜಾನ್, ಕೃಷಿ ಅಧಿಕಾರಿ ಆನಂದ ಗೌಡರ, ಪಶ ವೈದ್ಯಾಧಿಕಾರಿ ಸುರೇಶ ಜಾಧವ ಮತ್ತಿತರರು ಇದ್ದರು.

ಪರಿಷತ್ ಸ್ಥಾನ ನೀಡಲು ಆಗ್ರಹ

ಕೊಲ್ಹಾರ: ಪಟ್ಟಣದ ಕಾಂಗ್ರೆಸ್ ಹಿರಿಯ ಮುಖಂಡ, ಮಾಜಿ ಜಿ. ಪಂ ಸದಸ್ಯ ಕಲ್ಲು ದೇಸಾಯಿಯವರಿಗೆ ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ ಕಾಂಗ್ರೆಸ್ ವರಿಷ್ಠರು ಪರಿಗಣೆಗೆ ತೆಗೆದುಕೊಳ್ಳಬೇಕು ಎಂದು ಪ. ಪಂ ಅಧ್ಯಕ್ಷ ಸಿ. ಎಸ್ ಗಿಡ್ಡಪ್ಪಗೋಳ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಆರ್. ಬಿ ಪಕಾಲಿ, ಹಿರಿಯ ಕಾಂಗ್ರೆಸ್ ಮುಖಂಡರಾದ ಎಸ್. ಬಿ ಪತಂಗಿ, ಬಿ.ಯು ಗಿಡ್ಡಪ್ಪಗೋಳ, ತೌಸೀಪ ಗಿರಗಾವಿ, ದಶರಥ ಈಟಿ ಒತ್ತಾಯಿಸಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿ ಹಮ್ಮಿಕೊಂಡು ಮಾತನಾಡಿದ ಅವರು ಸುಮಾರು 25 ವರ್ಷಗಳಿಂದ ಕಾಂಗ್ರೆಸ್ ಪಕ್ಷಕ್ಕಾಗಿ ಅವಿರತವಾಗಿ ಶ್ರಮಿಸಿರುವ ಮಾಜಿ ಜಿ. ಪಂ ಸದಸ್ಯರಾದ ಕಲ್ಲು ದೇಸಾಯಿ ಅವರಿಗೆ ಕಾಂಗ್ರೆಸ್ ವರಿಷ್ಠರು ವಿಧಾನ ಪರಿಷತ್ ಸ್ಥಾನವನ್ನು ನೀಡುವ ಮೂಲಕ ಅವರ ಶ್ರಮಕ್ಕೆ ಪ್ರತಿಫಲ ನೀಡಬೇಕು, ಕಲ್ಲು ದೇಸಾಯಿಯವರು ಕಾಂಗ್ರೆಸ್ ಯುವ ನಾಯಕರಾಗಿ ಜಿ. ಪಂ ಸದಸ್ಯರಾಗಿ ರಾಜಕೀಯದಲ್ಲಿ ಅನುಭವವುಳ್ಳವರಾಗಿದ್ದು ನೀಡಿದ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸುವ ಸಾಮರ್ಥ್ಯವುಳ್ಳವರಾಗಿದ್ದಾರೆ ಹಾಗಾಗಿ ಕಾಂಗ್ರೆಸ್ ವರಿಷ್ಠರು ಕಲ್ಲು ದೇಸಾಯಿಯವರ ಪಕ್ಷ ನಿಷ್ಠೆ ಹಾಗೂ ನಾಯಕತ್ವ ಗುರುತಿಸಿ ವಿಧಾನ ಪರಿಷತ್ ಸ್ಥಾನವನ್ನು ನೀಡಬೇಕು ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಪ. ಪಂ ಸದಸ್ಯರಾದ ಶ್ರೀಶೈಲ್ ಗೌಡರ್, ತೌಸೀಪ ಗಿರಗಾವಿ, ಮಹಾಂತೇಶ್ ಬಿಡಪ್ಪಗೋಳ, ನಿಂಗಪ್ಪ ಗಣಿ, ಶಿವಪ್ಪ ವಾಲಿಕಾರ, ಕಾಂಗ್ರೆಸ್ ಮುಖಂಡರಾದ ಇಕ್ಬಾಲ್ ನದಾಫ್, ಬನಪ್ಪ ಬಾಲಗೊಂಡ, ಅನ್ವರ್ ಕಂಕರಪೀರ್, ತಿಪ್ಪಣ್ಣ ಕುದರಿ ಹಾಗೂ ಇನ್ನಿತರರು ಇದ್ದರು.

ಎಂ.ಬಿ. ಪಾಟೀಲ ಮುಂದಿನ ಸಿಎಂ ಆಗಲಿ: ಶ್ರೀಗಳು

ಆಲಮೇಲ: ನಾನು ನನ್ನದ್ದು ಅಂತಾ ಈ ಜಗದಲ್ಲಿ ಸ್ವಾರ್ಥ ಹೆಚ್ಚಾಗಿದೆ ಈಗೀನ ರಾಜಕೀಯ ವಾತಾವರಣ ಕಲುಷಿತವಾಗಿದೆಸಕಲ ಜೀವರಾಶಿಗಳಲ್ಲಿ ಮನುಷ್ಯ ಜನ್ಮ ಶ್ರೇಷ್ಠ ಜನ್ಮವಾಗಿದೆ ಎಂದು ಹಾಸನ ಜಿಲ್ಲೆ ಹಾರನಹಳ್ಳಿ ಕೋಡಿಮಠ ಸಂಸ್ಥಾನದ ಡಾ.ಶಿವಾನಂದ ಶಿವಯೋಗಿ ರಾಜೇಂದ್ರ ಮಹಾಸ್ವಾಮೀಗಳು ಹೇಳಿದರು.

> ಕೋಡಿಹಳ್ಳಿ ಮಠ ಸ್ವಾಮಿಗಳು ಏನಾದರೂ ಹೇಳಿದ್ದಾರೆಂದರೆಜನರಿಗೆ ಮತ್ತು ನಮ್ಮ ರಾಜಕಾರಣಿಗಳಿಗೆ ತುಂಬಾ ಕುತೂಹಲ ಯಾವ ಕಾಲಜ್ಞಾನ ಬಗ್ಗೆ ಹೇಳುತ್ತಾರೆ ಎಂಬುದು ಒಂದು ಕುತೂಹಲ ಆ ಮಠದ ಒಂದು ಮಹಿಮೆಯಾಗಿದೆ ಅವರಿಂದ ಬಂದಂತಹ ಹೇಳಿಕೆಗಳು ದೈವಶಕ್ತಿ ಹೇಳಿಕೆ ಆಗಿರುತ್ತವೆ.
> -ಎಂ.ಬಿ. ಪಾಟೀಲ, ಜಿಲ್ಲಾ ಉಸ್ತುವಾರಿ ಸಚಿವ

ತಾಲೂಕಿನ ಕಡಣಿ ಗ್ರಾಮದ ಶ್ರೀ ಭೋಗಲಿಂಗೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಧರ್ಮಸಭೆ ಮತ್ತು ಸಾಮೂಹಿಕ ವಿವಾಹದಲ್ಲಿ ಭಾಗವಹಿಸಿ ಮಾತನಾಡಿದರು. ನಂತರ ಅವರು ಜೀವನದಲ್ಲಿ ಅರಿಷ್ವರ್ಗಗಳು ಚೆನ್ನಾಗಿದ್ದರೇ ಮಾತ್ರ ಮನುಷ್ಯ ಜೀವನ ಸಾರ್ಥಕವಾಗುತ್ತದೆ, ಶರೀರ ಎಂಬ ವಾಹನಕ್ಕೆ ಕಾಮ, ಕ್ರೋಧ, ಲೋಭಮದ, ಮೋಹ, ಮತ್ಸರ ಎಂಬ ಚಾಲಕರಿದ್ದಾರೆ ಇವರು ಸರಿಯಾಗಿ ಕಾರ್ಯನಿರ್ವಹಿಸಿದರೇ ಮಾತ್ರ ಜೀವನ ಪಾವನವಾಗುತ್ತದೆ.

ಕಾರ್ಯಕ್ರಮವನ್ನುಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಉದ್ಘಾಟಿಸಿದರು.

ಉತ್ತರ ಕರ್ನಾಟಕದಿಂದ ಎಂ.ಬಿ.ಪಾಟೀಲ ಮುಖ್ಯಮಂತ್ರಿಗಳಯಾಗಿ ನೋಡವ ಆಸೆ ನಮಗಿದೆ ಎಂದರು.

ಶಾಸಕ ಅಶೋಕ ಮನಗೂಳಿ ಮಾತನಾಡಿ ನಮ್ಮ ಸರಕಾರಕ್ಕೆ ರಾಜ್ಯಕ್ಕೆ ಐದು ಗ್ಯಾರೆಂಟಿ ನೀಡಿದರೆ ನಮ್ಮ ಕ್ಷೇತ್ರದ ಜನರಿಗೆ ನಾನು ಏಳು ಗ್ಯಾರೆಂಟಿಯ ಭರವಸೆ ನೀಡಿದ್ದೆ ಐದು ಗ್ಯಾರಂಟಿ ಜತೆ ಆಲಮೇಲ ತೋಟಗಾರಿಕೆ ಕಾಲೇಜು ಮತ್ತು ಕಡಣಿ ಬ್ಯಾರೇಜ್ ಇವುಗಳನ್ನು ಸಹ ನಮ್ಮ ಸರಕಾರ ಸಚಿವ ಸಂಪುಟದಲ್ಲಿ ಅನುಮೋದನೆ ನೀಡಿ ಹಣ ಬಿಡುಗಡೆ ಮಾಡಿ ಎಂದರು.

ಆಳಂದ ಶಾಸಕ ಬಿ.ಆರ್ ಪಾಟೀಲ ಮತ್ತು ಸೋನ್ನ ದಾಸೋಹಮಠದ ಶಿವಾನಂದ ಮಹಾಸ್ವಾಮಿಗಳು ಮಾತನಾಡಿದರು.

ಈ ಸಂದರ್ಭದಲ್ಲಿ ಚಂದ್ರಗುಂಡ ಶಿವಾಚಾರ್ಯ, ಅಭಿನವ ಪುಂಡಲಿಂಗ ಮಹಾಶಿವಯೋಗಿಗಳು, ಚಂದ್ರಶೇಖರ ಶಿವಾಚಾರ್ಯರು, ಅಭಿನವ ಮುರುಗೇಂದ್ರ ಶಿವಾಚಾರ್ಯರು, ಶ್ರೀಶ್ರೀಶೈಲ ಮಹಾಸ್ವಾಮಿಗಳು, ಸಂದೀಪ ಜೆ ಪಾಟೀಲ, ಗುತ್ತಿಗೆದಾರ ವೀರಭದ್ರ ಕತ್ತಿ, ಭೋಗಪ್ಪ ಲಾಳಸಂಗಿ, ಪ ಪಂ ಅಧ್ಯಕ್ಷ ಸಾಧೀಕ ಸುಂಬಡ, ಪ ಪಂ ಸದಸ್ಯ ಅಶೋಕ ಕೊಳಾರಿ, ಬಸವರಾಜ್ ಕುಮಸಗಿ, ಬಸಲಿಂಗಪ್ಪ ಕತ್ತಿ. ಮ.ಕೇದಾರನಾಥ್ ಕತ್ತಿ,ಶಿವುಕುಮಾರ ಗುಂದಗಿ, ಬಸವರಾಜ್ ಬಾಗೆವಾಡಿ. ದೌಲಪ್ಪ ಸೊನ್ನ. ಸಿಪಿಐ ನಾನಾಗೌಡ ಪಾಟೀಲ, ಅರವಿಂದ ಅಂಗಡಿ,ರಮೇಶ ಭಂಟನೂರ, ಶ್ರೀಶೈಲ ಮಠಪತಿ,ಪ್ರಭುವಾಲೀಕಾರ,ಬಸವರಾಜ ತಾವಗೇರಿ, ಸಂತೋಷ ಕಟಬರ ,ಶಿವಶರಣ ಗುಂದಗಿ ಸೇರಿದಂತೆ ಅನೇಕರಿದ್ದರು.

ಸಾಮೂಹಿಕ ವಿವಾಹದ ನಿಮಿತ್ಯವಾಗಿ 16 ಸಾಮೂಹಿಕ ವಿವಾಹಗಳು ಜರುಗಿದವು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಆಧುನಿಕ ಕೃಷಿ ಭಾರತದ ರೂವಾರಿ ಜಗಜೀವನ ರಾಮ್

ಬಾಗಲಕೋಟೆ: ಲಿಂಗ, ಜಾತಿ, ಧರ್ಮ ಎನ್ನದೇ ಮುನ್ನಡೆದು, ಸ್ವಾತಂತ್ರ್ಯ ಚಳುವಳಿಯಲ್ಲಿಯೂ ಸಕ್ರೀಯವಾಗಿ ಭಾಗವಹಿಸಿದ್ದ ಡಾ. ಬಾಬು ಜಗಜೀವನ ರಾಮ್ ಅವರ ಜ್ಞಾನ ಮತ್ತು ಆದರ್ಶಗಳನ್ನು ನಾವೆಲ್ಲ ಮೈಗೂಡಿಸಿಕೊ ಳ್ಳಬೇಕು ಎಂದು ವಿಧಾನ ಪರಿಷತ್ ಸದಸ್ಯ ಪಿ.ಎಚ್ .ಪೂಜಾರ ಹೇಳಿದರು.

ಇಲ್ಲಿನ ನವನಗರದ ಡಾ.ಬಾಬು ಜಗಜೀವನ ರಾಮ್ ಭವನದಲ್ಲಿ, ಜಿಲ್ಲಾಡಳಿತ, ಜಿಪಂ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ವತಿಯಿಂದ ಆಯೋಜಿಸಿದ್ದ ಡಾ. ಬಾಬು ಜಗಜೀವನ ರಾಮ್ ಅವರ 118ನೇ ಜಯಂತ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸ್ವತಂತ್ರ ಭಾರತದ ದೀನ, ದಲಿತ ಹಾಗೂ ದಮನಿತರ ಧ್ವನಿಯಾಗಿ ಇತಿಹಾಸದ ಪುಟಗಳಲ್ಲಿ ಅಜರಾಮರವಾಗಿ ಉಳಿದ ಆಧುನಿಕ ಭಾರತದ ನಿರ್ಮಾತ. ಜತೆಗೆ ಹಸಿರು ಕ್ರಾಂತಿಯ ಹರಿಕಾರ ಎಂದೇ ಖ್ಯಾತರಾದವರು ಡಾ.ಬಾಬು ಜಗಜೀವನ ರಾಮ್. ಕೃಷಿ, ಕಾನೂನು, ಸಂಪರ್ಕ ಸೇರಿದಂತೆ ದೇಶದ ವಿವಿಧ ಕ್ಷೇತ್ರಗಳ ಪ್ರಗತಿಗೆ ಅವರ ಕೊಡುಗೆ ಅಪಾರವಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಮಾತನಾಡಿ,

ಬಾಗಲಕೋಟೆಯಲ್ಲಿ ಜಿಲ್ಲಾಡಳಿತದಿಂದ ಹಮ್ಮಿಕೊಂಡಿದ್ದ ಡಾ. ಬಾಬು ಜಗಜೀವನ ರಾಮ್ ಜಯಂತಿಯನ್ನು ಗಣ್ಯರು ಉದ್ಘಾಟಿಸಿದರು.

ಡಾ.ಬಾಬು ಜಗಜೀವನ ರಾಮ್ ಅವರು ದೇಶ ಕಂಡ ಶ್ರೇಷ್ಠ ಮುತ್ಸದ್ದಿ. ತಮ್ಮ ಅಧಿಕಾರಾವಧಿಯಲ್ಲಿ ಪೋಸ್ಟ್ ಆಫೀಸಗಳ ಸ್ಥಾಪನೆ ಮೂಲಕ ಸಂಪರ್ಕ ಕ್ರಾಂತಿ ಸೃಷ್ಟಿಸಿದವರು. ದೇಶದ ಹಸಿರು ಕ್ರಾಂತಿಯಲ್ಲಿ ಇವರ ಪಾತ್ರ ಮಹತ್ವದ್ದು, ಅಂತಹ ಮಹನೀಯರ ಬದುಕಿನ ಸಂದೇಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ನಾವು ಅವರಿಗೆ ನೀಡುವ ಅತಿದೊಡ್ಡ ಕೊಡುಗೆ ಎಂದರು.

ಶಿವಮೊಗ್ಗ ಕುವೆಂಪು ವಿಶ್ವವಿದ್ಯಾಲಯದ ಕನ್ನಡ ಭಾರತಿ ವಿಭಾಗದ ಪ್ರಾಧ್ಯಾಪಕ ಡಾ.ಶಿವಾನಂದ ಕೆಳಗಿನಮನಿ ಮಾತನಾಡಿ, ಕೆಳ ಸಮುದಾಯದ ಪರವಾಗಿ ಧ್ವನಿ ಎತ್ತಿದ ಎರಡು ಗಟ್ಟಿಧ್ವನಿಗಳೆಂದರೆ ಡಾ. ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನ ರಾಮ್ ಅವರಾಗಿದ್ದಾರೆ. ಅವರನ್ನು ರಾಜಕೀಯ ಪಕ್ಷಗಳು ಪ್ರತ್ಯೇಕ ಸಮುದಾಯಗಳಿಗೆ ಸೀಮಿತಗೊಳಿಸುತ್ತಿವೆ ಎಂದು ಹೇಳಿದರು.

ಆಲ್ ಇಂಡಿಯಾ ಬಿಎಸ್ಪಿ ಉಪಾಧ್ಯಕ್ಷ ವೈ.ಸಿ.ಕಾಂಬಳೆ ಹಾಗೂ ಜಿಪಂ ಸಿಇಒ ಶಶಿಧರ ಕುರೇರ್ ಮಾತನಾಡಿದರು. ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಸದಾಶಿವ ಬಡಿಗೇರ, ಸಮುದಾಯದ ಹಿರಿಯರು ಸೇರಿದಂತೆ ಇತರರಿದ್ದರು.

ಕಲೆಯಲ್ಲಿ ಸಾಧನೆಗೆ ತರಬೇತಿ ಅಗತ್ಯ



ಮಯೂರಿ ನಾಟ್ಯ ಕಲಾ ಅಕಾಡೆಮಿಯ ಭರತನಾಟ್ಯ ಶಾಲೆಯನ್ನು ಸಿದ್ಧಲಿಂಗ ಸ್ವಾಮೀಜಿ ಉದ್ಘಾಟಿಸಿದರು.

ಬಸವನಬಾಗೇವಾಡಿ: ಭರತ ನಾಟ್ಯಕ್ಕೆ ತನ್ನದೇಯಾದ ಇತಿಹಾಸವಿದೆ. ಇಂತಹ ಕಲೆಯಲ್ಲಿ ಸಾಧನೆ ಮಾಡಲು ತರಬೇತಿ ಅಗತ್ಯವಿದೆ. ಭರತನಾಟ್ಯ ತರಬೇತಿ ನೀಡಿಲು ಪಟ್ಟಣದಲ್ಲಿ ಆರಂಭವಾದ ನಾಟ್ಯ ಶಾಲೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸ್ಥಳೀಯ ವಿರಕ್ತಮಠದ ಸಿದ್ಧಲಿಂಗ ಸ್ವಾಮೀಜಿ ಹೇಳಿದರು.

ಪಟ್ಟಣದ ಕಾಳಿಕಾದೇವಿ ದೇವಸ್ಥಾನದ ಸಭಾಭವನದಲ್ಲಿ ಭಾನುವಾರ ಮಯೂರಿ ನಾಟ್ಯ ಕಲಾ ಅಕಾಡೆಮಿಯ ಭರತನಾಟ್ಯ ಶಾಲೆಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಅವರಿಗೆ ಸೂಕ್ತವಾದ ತರಬೇತಿ ನೀಡಲು ಇಂತಹ ವೇದಿಕೆ ಸಹಕಾರಿಯಾಗಲಿವೆ ಎಂದರು.

ಕಣಕಾಲದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ನೀಲಗಂಗಾ ಯರನಾಳ ಮಾತನಾಡಿ, ನಾಟ್ಯ ಕಲೆಯಲ್ಲಿರುವ ಆಸಕ್ತರನ್ನು ಗುರುತಿಸಿ ಅವರಿಗೆ ಸೂಕ್ತ ಮಾರ್ಗದರ್ಶನ ಹಾಗೂ ತರಬೇತಿ ನೀಡುವ ಉದ್ದೇಶದಿಂದ ಮಹಿಳೆಯರೆ ಈ ಶಾಲೆ ಆರಂಭಿಸಿದ್ದು ಇತರರಿಗೆ ಪ್ರೇರಣೆಯಾಗುವಂತಿದೆ ಎಂದು ಹೇಳಿದರು.

ಸಾಹಿತಿ ಅರುಂಧತಿ ಹತ್ತಿಕಾಳ ಮಾತನಾಡಿ, ಮಕ್ಕಳನ್ನು ಪುಸ್ತಕದ ಹುಳುಗಳನ್ನಾಗಿ ಮಾಡದೇ, ನಮ್ಮ ದೇಶದ ಕಲೆ, ಸಂಸ್ಕೃತಿಯನ್ನು ಪರಿಚಯಿಸುವ ಕೆಲಸವಾಗಬೇಕು. ತಂತ್ರಜ್ಞಾನ ಎಷ್ಟೇ ಮುಂದುವರೆದರು ಸಂಸ್ಕೃತಿ ಮರೆಯಬಾರದು. ಕಲೆ, ಸಾಹಿತ್ಯದ ಮಹತ್ವ ಅರಿತುಕೊಳ್ಳಬೇಕು ಎಂದರು.

ನಿವೃತ್ತ ಉಪಪ್ರಾಚಾರ್ಯ ಎಸ್.ಎಸ್.ಝಳಕಿ, ಡಾ.ವಿಣಾ ಗುಳೇದಗುಡ್ಡ, ಪೂರ್ಣಿಮಾ ಚೌಧರಿ, ಲಕ್ಷ್ಮೀ ತೇರದಾಳಮಠ, ರಾಜೇಶ್ವರಿ ಯರನಾಳ, ಮಹಾದೇವಿ ಬಿರಾದಾರ, ಶಿವು ಮಡಿಕೇಶ್ವರ ಇದ್ದರು.

ಚಿತ್ತವಿಹಾರ

ಐತಿಹಾಸಿಕ ದಾಖಲೆಗಳು

ನೂರು ವರ್ಷಗಳಿಗೂ ಹಿಂದೆ ನಮ್ಮಲ್ಲಿ ಮುದ್ರಣ ತಂತ್ರಜ್ಞಾನದ ವ್ಯಾಪಕವಾಗಿ ಬಳಸಲು ಆರಂಭವಾದ ಸಂದರ್ಭದಲ್ಲಿ, ವಿವಿಧ ಸಮಾರಂಭಗಳ ಆಹ್ವಾನ ಪತ್ರಿಕೆಗಳನ್ನು ಮುದ್ರಿಸುವ ಪರಿಪಾಠ ರೂಢಿಗೆ ಬಂತು. ಇಂತಹ ಒಂದು ಆಮಂತ್ರಣ ಪತ್ರಿಕೆ ಕಾಣಲು ಸಿಕ್ಕಿತು; ಇದು ನೂರು ವರ್ಷಗಳಿಗಿಂತಲೂ ಹಳೆಯದಾದ ಒಂದು ಆಮಂತ್ರಣ ಪತ್ರಿಕೆ. ಇದು ಕೇವಲ ಒಂದು ಆಮಂತ್ರಣ ಪತ್ರಿಕೆಯಲ್ಲ, ಬದಲಿಗೆ ಒಂದು ಕಾಲದ ಜೀವಂತ ಇತಿಹಾಸ. ಈ ಮಂಗಲ ಪತ್ರಿಕೆಯು ಉತ್ತರಕನ್ನಡದ ಶಿರಿವಂತೆ ತ್ರಿಪುರಾಂತಕ ಸ್ವಾಮಿಯ ದೇವಾಲಯದಲ್ಲಿ ನಡೆ ಯುವ ಉತ್ಸವದ ಕುರಿತಾದ ಮಾಹಿತಿ. ಅಂದಿನ ಜನರ ನಂಬಿಕೆಗಳು, ಸಂಪ್ರದಾಯಗಳು ಮತ್ತು ಸಾಮಾಜಿಕ ಸಂಬಂಧಗಳ ಬಗ್ಗೆ ಬೆಳಕು ಚೆಲ್ಲುವ, ಐತಿಹಾಸಿಕ ದಾಖಲೆಯಾಗಿದೆ.



ಹಳೆಯ ಆಮಂತ್ರಣ ಪತ್ರಿಕೆಗಳು ಕಾಲದ ಕನ್ನಡಿಗಳು: ಸುಮಾರು ನೂರು ವರ್ಷಗಳಿಗಿಂತಲೂ ಹಳೆಯದಾದ ಈ ಆಮಂತ್ರಣ ಪತ್ರಿಕೆಯು, ಅಂದಿನ ಕಾಲದ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಜೀವನದ ಚಿತ್ರಣವನ್ನು ನೀಡುವ ಐತಿಹಾಸಿಕ ದಾಖಲೆಯಾಗಿದೆ. ಸಂಸ್ಕೃತ ಮಿಶ್ರಿತ ಹಳೆಗನ್ನಡ ಶೈಲಿಯಲ್ಲಿ ನಿರೂಪಿಸಿರುವ ಈ ಆಮಂತ್ರಣ ಪತ್ರಿಕೆ, ಆ ಕಾಲದ ಭಾಷೆ, ಬರವಣಿಗೆಯ ಶೈಲಿ, ಮತ್ತು ಮುದ್ರಣ ತಂತ್ರಜ್ಞಾನವನ್ನು ತೋರಿಸುತ್ತವೆ. ಪದಗಳ ಬಳಕೆ, ವಾಕ್ಯಗಳ ರಚನೆ ಮತ್ತು ವಿನ್ಯಾಸವು ಇಂದಿನ ಆಡುಮಾತಿನ ಮತ್ತು ಬರವಣಿಗೆಯ ಶೈಲಿಗಿಂತ ಭಿನ್ನವಾಗಿದೆ. ಈ ಪತ್ರಿಕೆ, ಉತ್ಸವಗಳು, ಆಚರಣೆಗಳು, ಮತ್ತು ಧಾರ್ಮಿಕ ವಿಧಿಗಳ ಬಗ್ಗೆ ತಿಳಿದುಕೊಳ್ಳಲು ಸಹಾಯ ಮಾಡುತ್ತದೆ. ಇಲ್ಲಿ ಸುವಾಸಿನಿಯರಿಗೆ ಸಂತರ್ಪಣೆ ಏರ್ಪಡಿಸಿರುವ ಬಗ್ಗೆ ಉಲ್ಲೇಖ ವಿದೆ. ದೇವಾಲಯದ ಆಡಳಿತ ಮಂಡಳಿ ಮತ್ತು ಭಕ್ತರ ಪಾಲ್ಗೊಳ್ಳುವಿಕೆಯು ಸಮುದಾಯದ ಒಗ್ಗಟ್ಟನ್ನು ತೋರಿಸುತ್ತದೆ.ಮುದ್ರಣ ತಂತ್ರ ಜ್ಞಾನವು ಇಂದಿನ ಆಧುನಿಕ ಮುದ್ರಣ ವಿಧಾನಗಳಿಗಿಂತ ಭಿನ್ನವಾಗಿದೆ. ಕಾಗದದ ಗುಣಮಟ್ಟ ಮತ್ತು ಮುದ್ರಣದ ಶೈಲಿಯು ಆ ಕಾಲದ ಲಭ್ಯವಿರುವ ಸಂಪನ್ಮೂಲಗಳು ಮತ್ತು ತಂತ್ರ ಜ್ಞಾನವನ್ನು ಪ್ರತಿಬಿಂಬಿಸುತ್ತದೆ. ಒಂದು ನಿರ್ದಿಷ್ಟ ದೇವಾಲಯ ಅಥವಾ ಪ್ರದೇಶದ ಇತಿಹಾಸ ವನ್ನು ತಿಳಿಯಲು ಇಂತಹ ದಾಖಲೆಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಹಳೆಯ ಕಾಲದ ಇಂತಹ ಆಮಂತ್ರಣ ಪತ್ರಿಕೆಗಳು ಕೇವಲ ಒಂದು ಕಾರ್ಯಕ್ರಮದ ಆಹ್ವಾನವಲ್ಲ, ಬದಲಿಗೆ ಒಂದು ಕಾಲದ ಸಂಸ್ಕೃತಿ, ಧರ್ಮ, ಸಮಾಜ ಮತ್ತು ಭಾಷೆಯ ಜೀವಂತ ದಾಖಲೆಯಾಗಿದೆ.

● ಹೊಸ್ಮನೆ ಮುತ್ತು

ಹನಿ ಮಳೆ

ಪ್ರಯಾಣ

ಬಸ್ಸಿನ ತುಂಬಾ ಪ್ರಯಾಣಿಕರು
ಮುಂದೆ ಸರಿಸುವರು ನೂಕಿ ದೂಕಿ
ನಡುವೆ ಸದ್ದು ಮಾಡಿದೆ ಗ್ಯಾರಂಟಿ!
ಸಾಹಸಿಯೇ ಸರಿ ಬಂದವನು ಬದುಕಿ!

● ವೆಂಕಟೇಶ ಚಾಗಿ

@vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ವಿಶ್ವವಾಣಿ
ಬೆಂಗಳೂರು
07-04-2025
ಸೋಮವಾರ

ಇತ್ತೀಚೆಗೆ ಚಿತ್ರದುರ್ಗ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ನಡೆದ ಅಣಕು ಮೋಡಿಯ ಸಂದರ್ಭದಲ್ಲಿ ತೆಗೆದ ಚಿತ್ರ.

ಮೋಡಿ ಮಾಡುವರಿವರು!

● ಎಂ. ಪರಮೇಶ್ವರ ಮದ್ದಿಹಳ್ಳಿ

ಯುಗಾದಿ ಬಂತೆಂದರೆ ನಮ್ಮೂರಲ್ಲಿ ಎರಡನೇ ಹಬ್ಬದ ದಿನ ಸಾಯಂಕಾಲ, ಹಿಂದಿನ ಕಾಲದಲ್ಲಿ ಹಾಕುತ್ತಿದ್ದ ನೈಜ ಮೋಡಿಯ ಅಣಕು ಪ್ರದರ್ಶನ ನಿಜಕ್ಕೂ ವಿಶೇಷ ಜನಪದ ಆಚರಣೆ. ಜತೆಗೆ, ಹುಲಿ ವೇಷ, ಗೊರವರ ವೇಷ ಹಾಕಿ ಊರಿನ ಜನಗಳಿಗೆ ರಸದೂಟವನ್ನು ಉಣ್ಣಿಸಿದಂತೆ ಹಬ್ಬಕ್ಕೆ ಮೆರಗು. ನೆಂಟರು ಅಣ್ಣ ತಮ್ಮಂದಿರು ಎಲ್ಲಾ ಸೇರಿ ಊರ ಮುಂದಿನ ವಿಸ್ತಾರ ಜಾಗದಲ್ಲಿ ಮೋಡಿ ಹಾಕುವ ಕಾರ್ಯಕ್ರಮ ಸಾಂಪ್ರದಾಯಿಕವಾಗಿ ನಡೆಸಿಕೊಂಡು ಬರುತ್ತಿದ್ದಾರೆ.

ಮೋಡಿ ಹಾಕುವುದು - ಸವಾಲು ಒಡ್ಡುವ ಮತ್ತು ಅದನ್ನು ಸ್ವೀಕರಿಸುವ ಒಂದು ಬಗೆಯ ಸ್ಪರ್ಧೆ, ಆಟ. ಮೋಡಿ ಹಾಕು ಎಂಬ ಶಬ್ದಕ್ಕೆ ಸಾಮಾನ್ಯವಾಗಿ ಮಂಕು ಕವಿಸು, ದಿಗ್ಭ್ರಮೆಗೊಳಿಸು, ಅತೀಂದ್ರಿಯ ಅನುಭವವನ್ನು ಉಂಟುಮಾಡು ಎಂಬ ಅರ್ಥಗಳಿವೆ. ಮೋಡಿ ಹಾಕುವುದನ್ನು, ಮೋಡಿ ಎತ್ತುವುದನ್ನು ವೃತ್ತಿಯಾಗಿಸಿಕೊಂಡಿರುವವರನ್ನು ಮೋಡಿಕಾರರೆಂದು ಕರೆಯಲಾಗುತ್ತದೆ.

ಮೋಡಿಹಾಕಲು ಎರಡು ಗುಂಪುಗಳಿರಬೇಕು. ಒಂದು ಗುಂಪಿನವರು ಮಣ್ಣಿನ ನೆಲದ ಮೇಲೆ ಮಂಡಲಗಳನ್ನು ಎಳೆದು ಮೋಡಿಹಾಕಿದರೆ ಇನ್ನೊಂದು ಗುಂಪಿನವರು ಅದನ್ನು ಎತ್ತುತ್ತಾರೆ. ಮೋಡಿ ಹಾಕುವುದಕ್ಕೆ ಒಂದು ನಿಶ್ಚಿತ ಸ್ಥಳವನ್ನು ಗೊತ್ತು ಮಾಡಲಾಗುತ್ತದೆ. ಮೋಡಿ ಹಾಕುವ ವಿಷಯವನ್ನು ತಮ್ಮಟೆ ಬಡಿದು ಊರಿಗೆಲ್ಲ ಸಾರುತ್ತಾರೆ. ಮೋಡಿ ಹಾಕುವ, ಮೋಡಿಯನ್ನು ಎತ್ತುವ ಪ್ರತಿಸ್ಪರ್ಧಿಗಳು ಆ ಊರಿನಲ್ಲಿ ಯಾರಾದರೂ ಇದ್ದರೆ ಈ ವಿಷಯ ಅವರಿಗೆ ಸವಾಲು ಹಾಕಿದಂತೆ ಇರುತ್ತದೆ.

ಏಳು ಮಂಡಲಗಳು

ಮಧ್ಯಾಹ್ನದ ಉರಿಬಿಸಿಲಿನಲ್ಲಿ ಮೋಡಿ ಹಾಕುವುದು ಸಾಮಾನ್ಯ. ಮೊದಲಿಗೆ ಏಳು ಮಂಡಲಗಳನ್ನು (ಚಚ್ಚೌಕಾಕಾರದ ಮನೆಗಳು) ಮಣ್ಣಿನ ನೆಲದ ಮೇಲೆ ಬೂದಿಯ ಪಟ್ಟೆಯಿಂದ ಬರೆಯುತ್ತಾರೆ. ಏಳನೆಯ ಮಂಡಲದ ತಲೆ ಭಾಗದಲ್ಲಿ ಮೋಡಿ ಒಡ್ಡಿರುವವನ ದೇವತೆ ಇತ್ಯಾದಿಗಳಿರುತ್ತವೆ. ತೆಂಗಿನಕಾಯಿ, ಸೂಜಿಗಳನ್ನು ಚುಚ್ಚಿದ ನಿಂಬೆಹಣ್ಣು, ಕೋಳಿಮೊಟ್ಟೆ, ಪಾವಲಿ (ನಾಲ್ಕಾಣೆ ನಾಣ್ಯ), ಬೇವಿನ ಸೊಪ್ಪು, ಅರಿಶಿಣದ ನೀರುಳ್ಳ ಮೊಗೆ ಇವನ್ನು ಪಂಥವಾಗಿ ಇಟ್ಟಿರುತ್ತಾರೆ. ಈ ವಸ್ತುಗಳಲ್ಲಿ ಮೋಡಿ ಹಾಕಿರುವ ಪಕ್ಷದವರ ಎಲ್ಲಾ ಬಲಾಬಲಾಗಳೂ ಕೇಂದ್ರೀಕೃತ ವಾಗಿರು ತ್ತವೆ. ಮೋಡಿ ಎತ್ತುವವನು ತನ್ನ ಮನೆ ದೇವರಿಗೆ ನಮಸ್ಕರಿಸಿ ರಂಗಕ್ಕೆ ಇಳಿಯುತ್ತಾನೆ. ಆಗ ಡೋಲಿನ ಶಬ್ದ ಕಿವಿ ಚಿಟ್ ಎನ್ನಿಸುವಂತಿರುತ್ತದೆ. ಮೋಡಿ ಎತ್ತುವವನು ಮೊದಲನೆಯ ಮಂಡಲದಿಂದ ಪ್ರಾರಂಭಿಸುತ್ತಾನೆ. ಮಂತ್ರತಂತ್ರಗಳನ್ನೆಲ್ಲ ಲಂಘಿಸಿ ಒಂದೊಂದಾಗಿ ಹೋರಾಡಿ ಮಂಡಲಗಳ ವಸ್ತುಗಳನ್ನು ಎತ್ತುತ್ತಾನೆ. ಅನೇಕ ಸಾರಿ ವಸ್ತುಗಳನ್ನು ಎತ್ತಲಾರದೆ, ಅವುಗಳ ಭಾರಕ್ಕೆ ಬೀಳುವುದು ಉಂಟೆಂದು ನಮ್ಮ ಹಿರಿಯರು ಹೇಳುತ್ತಾರೆ. ಮೈ ಉರಿಯೆಂದು ಕೆರೆದು ಕೊಳ್ಳುವುದು, ಜೊಲ್ಲುಸೋರಿ ಮೂರ್ಛೆ ಹೋದಂತೆ ಬೀಳುವುದೂ ಉಂಟು. ಆ ಸಮಯದಲ್ಲಿ ಮೋಡಿ ಎತ್ತುವವನ ಪಕ್ಷದ ಇನ್ನೊಬ್ಬ ವ್ಯಕ್ತಿ ಕಪ್ಪು ಇತ್ಯಾದಿ ಮಾಂತ್ರಿಕ ವಸ್ತುಗಳಿಂದ ಸೋಲುತ್ತಿರುವವನಿಗೆ ಶಕ್ತಿ ತುಂಬುತ್ತಾನೆ ಅಥವಾ ತಾನೇ ಮೋಡಿ ಎತ್ತಲು ಮುನ್ನುಗ್ಗುತ್ತಾನೆ. ಹೆಂಗಸರು ಮತ್ತು ಹದಿನಾಲ್ಕು ವರ್ಷದ ಹುಡುಗರೂ ಮೋಡಿಯನ್ನು ಎತ್ತುವುದುಂಟು.

ಚೇಳಾಗುವ ಬೇವಿನ ಸೊಪ್ಪು

ಮೋಡಿ ಎತ್ತುವಾಗ ಶಕ್ತಿಯ ಆವಾಹನೆಗೆ ಸಂಬಂಧಿಸಿದಂತೆ ಅನೇಕ ಮಾಂತ್ರಿಕ ಹಾಡುಗಳನ್ನು ಹಾಡುತ್ತಾರೆ. ಎಲ್ಲ ಮಂಡಲಗಳನ್ನು ದಾಟುವತನಕ ಗಂಭೀರವಾದ, ನಗೆ ಹುಟ್ಟಿಸುವ ಮತ್ತು ಆಶ್ಚರ್ಯಚಕಿತವಾದ ಅನೇಕ ಸನ್ನಿವೇಶಗಳು ಎದುರಾಗುತ್ತವೆ. ಮೊಟ್ಟೆ ಹಾರಿಕೊಂಡು ಹೋಗುವುದು, ಬೇವಿನ ಸೊಪ್ಪು ಚೇಳಾಗುವುದು, ಮೋಡಿ ಹಾಕುವವರು ಮತ್ತು ಎತ್ತುವವರು ಓಡಿಹೋಗಿ ಮರಕಚ್ಚಿಕೊಳ್ಳುವುದು, ನೀರಿಗೆ ಬೀಳುವುದು ಹೀಗೆ (ಹಿಂದೆ) ಮಾಡುತ್ತಿದ್ದರಂತೆ. ಈಗ ಯಾರಿಗೂ ಹಾಗೆ ಮಾಡುವುದಕ್ಕೆ ಬರುವುದಿಲ್ಲ! ಅಥವಾ ಅಂಥದ್ದನ್ನು ಮಾಡುವುದು ಕಡಿಮೆ. ಇದರ ನಡುವೆ ಮೋಡಿಹಾಕುವವರಲ್ಲಿ ಹಾಗೂ ಮೋಡಿ ಎತ್ತುವವರಲ್ಲಿ ನಾಟಕೀಯ ಸಂಭಾಷಣೆ ಕೂಡ ನಡೆಯುತ್ತಿರುತ್ತವೆ. ಒಂದೊಂದು ಸಾರಿ ಮೋಡಿ ಎತ್ತುವವರು ಎಲ್ಲವನ್ನೂ ಎತ್ತಿ ಗೆದ್ದು ಸವಾಲು ಹಾಕುವುದುಂಟು. ಇಲ್ಲವೆ, ಒಂದೆರಡು ಮಂಡಲಗಳನ್ನು ಮಾತ್ರ ದಾಟಿ ಮುಂದೆ ಮುನ್ನಗ್ಗಲಾರದೆ ತನ್ನ ಅಶಕ್ತತೆಯನ್ನು ತೋರಿಸಿಕೊಳ್ಳಬಹುದು. ಆಗ ಬಾಕಿ ಉಳಿದ ಮಂಡಲಗಳನ್ನು ಮೋಡಿವಿದ್ಯೆ ಬಲ್ಲ ಬಲಿಷ್ಠರು ಯಾರಾದರೂ ಎತ್ತಬಹುದು. ಜೊತೆಗೆ ಮೋಡಿಹಾಕುವಾಗ ಮೋಡಿಕರ ಮಾಂತ್ರಿಕ ವಸ್ತುಗಳಾದ ಬಿಳಿ ಎಕ್ಕದ ಬೇರು ಚಾವಟಿ, ಬೇವಿನಸೊಪ್ಪು, ಕಪ್ಪಿನ ಭರಣಿ ಮೊದಲಾದವನ್ನು ಕೂಡ ಬಳಸುತ್ತಾನೆ. ಮೋಡಿ ಹಾಕುವುದರಲ್ಲಿ ಕೂಡ ಮನರಂಜನೆ ಪ್ರಧಾನವಾದರೂ, ಸಾಮಾನ್ಯವಾಗಿ ಒಪ್ಪಂದಗಳ ಮೇಲೆ ಇದು ಎರಡು ಬಣಗಳಿಂದ ನಡೆಯುತ್ತದೆ. ಮೋಡಿ ಹಾಕುವುದನ್ನೇ ಪ್ರಧಾನ ಕಸುಬಾಗುಳ್ಳ ಮೋಡಿಕಾರರು ಇಂದಿಗೂ ಇದ್ದಾರೆ ಎನ್ನಲಾಗಿದೆ.

ಮಹಾಭಾರತದಲ್ಲಿ ಉಲ್ಲೇಖ

ಮೋಡಿವಿದ್ಯೆ ತುಂಬ ಪ್ರಾಚೀನವಾದದ್ದು. ಮಹಾಭಾರತದಲ್ಲಿ ಗಾರುಡಿಗರ ಉಲ್ಲೇಖವಿದೆ. ಜನಪದ ಕಾವ್ಯಗಳನ್ನು ನೋಡುವಾಗ ಮೋಡಿಗೆ ಸಂಬಂಧಿಸಿದ ಅನೇಕ ಸಂದರ್ಭಗಳು ಕಾಣಬರುತ್ತವೆ. ಪ್ರಸಿದ್ಧ ಜನಪದ ಕಾವ್ಯಗಳಾದ ಮಂಟೇಸ್ವಾಮಿ ಕಾವ್ಯ, ಮಲೆಯ ಮಾದೇಶ್ವರ ಕಾವ್ಯಗಳಲ್ಲಿ ಅನೇಕ ನಿದರ್ಶನಗಳಿವೆ. ಮಂಟೇಸ್ವಾಮಿ ಕಾವ್ಯದ ಆರಂಭದಲ್ಲಿಯೇ ಗಾರುಡಿಗರ ಹುಡುಗರು ಹಾಕಿದ ಮೋಡಿಯನ್ನು ರಾಚಪ್ಪಾಜಿ ಗೆದ್ದು ಆ ಬಾಲಕರಿಗೆ ಹಾಗೂ ಅವರ ಹಿರಿಯರಿಗೆ ಬುದ್ಧಿ ಕಲಿಸುವ ಪ್ರಸಂಗ ವಿಶಿಷ್ಟವಾಗಿದೆ. ಮೋಡಿಕಾರರಿಗೆ, ಮೋಡಿಗೆ ಹಿಂದಿನಷ್ಟು ಪ್ರಾಮುಖ್ಯ ಇಂದು ಇಲ್ಲ. ಈ ಕಲೆ ಈಗ ಹೊಟ್ಟೆಪಾಡಿನ ಒಂದು ಸಾಧನವಾಗಿ ಮಾತ್ರ ಉಳಿದಿದೆ. ಒಂದು ಕಾಲಕ್ಕೆ ರಾಜರು ಹಾಗೂ ಸರ್ಕಾರದ ಸಂಬಂಧವನ್ನು ಹೊಂದಿದ್ದ ಈ ಪ್ರದರ್ಶನಕಾರರು, ಇಂದು ಮರೆಯಾಗುತ್ತಿದ್ದಾರೆ. ನಮ್ಮ ಹಳ್ಳಿಯಲ್ಲಿ ಇಂದಿಗೂ ಅದನ್ನು ಮನರಂಜನೆ ಹಾಗೂ (ನೈಜ ಮೋಡಿ ಅಲ್ಲದಿದ್ದರೂ) ಅಣಕು ಪ್ರದರ್ಶನದ ರೀತಿ ಆಚರಿಸಿಕೊಂಡು ಬರುತ್ತಿದ್ದಾರೆ.

ನೋಡುವ ದೃಷ್ಟಿಕೋನದಲ್ಲಿದೆ ಸಂತಸ

ಗಿಡದಿ ನಗುತಿರುವ ಹೂ ಪ್ರಕೃತಿ ಸಖನಿಗೆ ಚೆಂದ
ಮಡದಿ ಮುಡಿದಿರುವ ಹೂ ಯುವಕಂಗೆ ಚೆಂದ
ಗುಡಿಯೊಳಗೆ ಕೊಡುವ ಹೂ ದೈವಭಕ್ತಗೆ ಚೆಂದ
ಬಿಡಿಗಾಸು ಹೂವಳಗೆ - ಮಂಕುತಿಮ್ಮ

ಗಿಡದಲ್ಲಿ ನಗುವ ಹೂ ಪ್ರಕೃತಿಪ್ರಿಯನಿಗೆ ಚೆಂದವಾಗಿ ಕಾಣಿಸಿದರೆ, ಅದೇ ಹೂ ರಸಿಕನಿಗೆ ತನ್ನ ಹೆಂಡತಿ ಮುಡಿಯಲ್ಲಿದ್ದರೆ ಚೆಂದವಾಗಿ ಕಾಣುತ್ತದೆ. ಮತ್ತೆ ಅದೇ ಹೂ ದೇವರಲ್ಲಿ ಅಲಂಕೃತವಾಗಿದ್ದರೆ ಅದು ದೇವಭಕ್ತನಿಗೆ ಚೆಂದವಾಗಿ ಕಂಡರೆ, ಹೂ ಮಾರುವ ಹೂವಾಡಗಿತ್ತಿಗೆ ಆ ಹೂವಿನಿಂದ ನಾಲ್ಕು ಕಾಸು ಬಂದರೆ ಅದೇ ಚೆಂದವಾಗಿ ಅವಳಿಗೆ ಕಾಣುತ್ತದೆ. ಹೀಗೆ ಒಂದೇ ವಸ್ತುವು ಈ ಜಗದಲ್ಲಿಯ ಬೇರೆ ಬೇರೆ ಜನರಿಗೆ ಬೇರೆ ಬೇರೆ ರೀತಿಯಲ್ಲಿ ಆಕರ್ಷಿಸುತ್ತಾ, ಅವರವರ ಮನಸ್ಸಿನ ಮತದಂತೆ ಆ ವಸ್ತುವು ಇರಬೇಕೆಂದು ಬೇರೆ ಬೇರೆ ರೀತಿಯಲ್ಲಿ ಯೋಚಿಸುತ್ತಾರೆ ಎಂದು ಈ ಕಗ್ಗದಲ್ಲಿ ಡಿವಿಜಿ ಯವರು ಹೇಳಿದ್ದಾರೆ.

ಒಬ್ಬರ ಮನಸ್ಸಿನಂತೆ ಒಬ್ಬರ ಮನಸ್ಸು ಎಂದಿಗೂ ಇರುವುದಿಲ್ಲ, ಒಬ್ಬೊಬ್ಬರದೂ ಒಂದೊಂದು ಅಭಿಪ್ರಾಯ. ಒಬ್ಬರಿಗೆ ಸಖ್ಯವಾದ ವಸ್ತು ಮತ್ತೊಬ್ಬರಿಗೆ ಸಖ್ಯವಾಗಲೇ ಬೇಕು ಎಂಬುದೇನೂ ಇಲ್ಲ. ಒಬ್ಬರಿಗೆ ಇಷ್ಟವಾಗದ ವಿಚಾರ, ವಿಷಯಗಳು ಮತ್ತೊಬ್ಬರಿಗೆ ಇಷ್ಟವಾಗಬಾರದು ಎಂಬೂದಿಲ್ಲ. ಒಬ್ಬೊಬ್ಬರ ಗುಣ, ಒಬ್ಬೊಬ್ಬರ ವಿಚಾರ, ಒಬ್ಬೊಬ್ಬರ ಸಿದ್ಧಾಂತ, ಒಬ್ಬೊಬ್ಬರ ಆಚಾರ ವಿಚಾರ ಗಳು, ನಡವಳಿಕೆ, ಮನಸ್ಥಿತಿ ಹೀಗೆ ನಡೆ, ನುಡಿ, ನೋಟ ಗಳೆಲ್ಲವೂ ವೈವಿಧ್ಯತೆಯಿಂದಲೇ ಕೂಡಿರುವಂತಹುದಾಗಿದೆ. ಇಲ್ಲಿ ಅವರವರ ವಿಚಾರಕ್ಕೆ ಅವರವರು ಸ್ವತಂತ್ರರೂ ಆಗಿರುತ್ತಾರೆ. ಈ ಬಗ್ಗೆ ಈ ಕಗ್ಗದಲ್ಲಿ ಒಂದು ಹೂವಿನ ಉಪಮೆಯನ್ನು ಕೊಟ್ಟು ಇರುವಂತಹ ಒಂದೇ ವಸ್ತುವು ಹಲವರಲ್ಲಿ ಹಲವು ರೀತಿಯ ಭಾವನೆಗಳನ್ನು ಬಿತ್ತುತ್ತವೆ ಎಂಬುದನ್ನು ವಿವರಿಸಿದ್ದಾರೆ.


ಶುಭೋದಯಕ್ಕೊಂದು ಕಗ್ಗ
ರವೀ ಚಿಕ್ಕನಾಯಕನಹಳ್ಳಿ

ಗಿಡದಲ್ಲಿ ನಗುವ ಹೂವು ಪ್ರಕೃತಿಸಖನಿಗೆ ಚೆಂದವಾಗಿ ಕಾಣುತ್ತದೆ. ಅಂದರೆ ಆ ಪ್ರಕೃತಿಪ್ರಿಯನಿಗೆ ಹೂವು ಗಿಡದಲ್ಲಿ ನಳನಳಿಸುತ್ತಿದರೆ ಮಾತ್ರವೇ ಆತನಿಗೆ ಸಂತೋಷವಾಗುವುದು, ಬೇರೆಲ್ಲೋ ಆ ಹೂವನ್ನು ನೋಡಲು ಆತನು ಇಚ್ಚಿಸುವುದಿಲ್ಲ, ಹಾಗಾಗಿ ಆತನಿಗೆ ಹೂವು ಗಿಡದಲ್ಲಿ ಇದ್ದರೇನೇ ಆತನಿಗೆ ಸಂತೋಷವನ್ನು ತರುವುದು. ಹಾಗೆಯೇ ಒಬ್ಬ ರಸಿಕಪ್ರಿಯನಿಗೆ ಆ ಗಿಡದಲ್ಲಿಯ ಹೂವು ತನ್ನ ಹೆಂಡತಿಯ ತುರುಬಿನಲ್ಲಿದ್ದರೆ ಆತನಿಗೆ ಸಂತೋಷ. ಆತನಿಗೆ ಅದೇ ಹೂವು ಗಿಡದಲ್ಲಿದ್ದರೆ ಆತನ ಭಾವನೆಗಳೇನೂ ಪುಟಿಯುವುದಿಲ್ಲ, ಆತನಿಗೆ ಆ ಹೂವಿನ ಸೌಂದರ್ಯ ಕಾಣುವುದು ಆ ಹೂವು ತನ್ನ ಹೆಂಡತಿಯ ತುರುಬಿನಲ್ಲಿ ಇದ್ದರೆ ಮಾತ್ರವೇ ಆ ಹೂವಿನ ಸೌಂದರ್ಯ ಆತನಿಗೆ ಅನಾವರಣಗೊಳ್ಳುವುದು. ಇನ್ನು ದೈವಭಕ್ತಂಗೆ ಆ ಹೂವಿನ ಸೌಂದರ್ಯ ಕಾಣುವುದು ತಾನು ನಂಬಿರುವ ದೇವರ ಮೇಲೆ ಆ ಹೂವು ಅಲಂಕೃತವಾದರೆ ಮಾತ್ರವೇ ಆತನಿಗೆ ಖುಷಿ ಆಗುವುದು. ಹೂವನ್ನು ಮಾರಿ ನಾಲ್ಕು ಕಾಸು ಸಂಪಾದಿಸಿ ಅದರಿಂದ ಹೊಟ್ಟೆ ಹೊರೆಯ ಹೂವಾಡಗಿತ್ತಿಗೆ ಆ ಹೂವು ಕೇವಲ ತನ್ನ ಆದಾಯದ ಮೂಲವಾಗುತ್ತದೆ. ಅವಳಿಗೆ ಆ ಹೂವನ್ನು ಮಾರಿಕೊಂಡು ನಾಲ್ಕು ಕಾಸು ಸಂಪಾದನೆ ಮಾಡಿಕೊಂಡರೆ ಮಾತ್ರವೇ ಅವಳಿಗೆ ಸಂತಸ ತರುತ್ತದೆ. ಹೀಗೆ ಇಲ್ಲಿ ಇರುವುದು ಹೂವು ವಸ್ತುವಾದರೂ ಅದು ಪ್ರಕೃತಿ ಸಖನಿಗೆ, ರಸಿಕನಿಗೆ, ಭಕ್ತನಿಗೆ, ಹೂವಾಡಗಿತ್ತಿಗೆ ಬೇರೆ ಬೇರೆಯಾಗಿ, ಭಿನ್ನಭಿನ್ನವಾಗಿ ಕಾಣುತ್ತಾ ಹೋಗುತ್ತದೆ. ಹಾಗೆಯೇ ಈ ಮನುಷ್ಯನೂ ಸಹ ಒಂದೊಂದು ವಸ್ತುವನ್ನು ಆತನು ನೋಡುವ ದೃಷ್ಟಿಕೋನಗಳೇ ಬೇರೆ ಬೇರೆಯಾಗಿರುತ್ತದೆ. ಆದುದರಿಂದ ಯಾವುದರಿಂದ ಯಾವುದೋ ಒಳ್ಳೆಯದೊ ಅದನ್ನು ಮಾತ್ರವೇ ನೀನು ಸ್ವೀಕರಿಸುವಂತವನಾಗು. ಲೋಕದ ಅಭಿಪ್ರಾಯದ ಗೊಡವೆ ನಿನಗೇಕೆ ? ಎಂಬುದು ತಿಳಿಯುತ್ತದೆ. ಒಟ್ಟಿನಲ್ಲಿ ಎಲ್ಲಾ ಕಾಲದಲ್ಲೂ, ಎಲ್ಲರಿಗೂ, ಎಲ್ಲಾ ವಸ್ತುಗಳು ಸಹ್ಯವಾಗಲೇಬೇಕೆಂದಿಲ್ಲ, ಅದು ಅವರವರ ವೈಯಕ್ತಿಕ ಅಭಿ ಪ್ರಾಯಗಳು ಹಾಗೂ ವಾಂಛೆಗಳು ಎಂಬುದನ್ನು ಈ ಕಗ್ಗದಲ್ಲಿ ಹೇಳಿದ್ದಾರೆ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

1	■	2		3	■	4		5
6			■	7			■	
	■				■	8	9	
■	10	■	11		12	■		■
13				■	14			
■		■	15	16		■		■
17		18	■		■	19	■	20
	■	21				22		
23			■	24			■	

ಎಡದಿಂದ ಬಲಕ್ಕೆ

2. ಕಣ್ಣಿಗೆ ಕಾಣದಂತೆ ಮರೆಯಾಗು (3)
4. ಮೂರಕ್ಷರದ ಲಕ್ಷ್ಯ (3)
6. ಎಚ್ಚರ ಅಥವಾ ಜಾಗ್ರತೆ (3)
7. ಹೆಣ್ಣು ಪಿಶಾಚಿಯ ಹೆಸರು (3)
8. ಕಾಯುವಿಕೆ ಅಥವಾ ಹೊಳೆಯುವಿಕೆ (3)
11. ಸೊಳ್ಳೆ ಅಥವಾ ನೊಣ (3)
13. ಗಲಾಟೆ, ಗೊಂದಲಕ್ಕೆ ಮತ್ತೊಂದು ಹೆಸರು (4)
14. ಶಿವನಿಗೆ ಮತ್ತೊಂದು ಹೆಸರು (4)
15. ಅಸ್ತವ್ಯಸ್ತವಾಗಿ ಬಂದಿರುವ ಅಭಿನಯ (3)
17. ಚಿಕ್ಕ ಸೌಟಿನಂತಹ ಸಾಧನ (3)
21. ವಿರಳವಾಗಿ ಬಂದಿರುವ ಮತ್ತೊಂದು ತಾವರೆ (3)
22. ಮಿತ್ರನಿಗೆ ಇನ್ನೊಂದು ಹೆಸರು (3)
23. ರಸಭರಿತ ಮಾವು (3)
24. ಅನ್ಯರೆಡೆಗಿನ ಸಹಾಯ (3)

ಮೇಲಿಂದ ಕೆಳಕ್ಕೆ

1. ಒಂದೇ ಕಡೆಗೆ ಗುರಿಯಿಟ್ಟಂತಹ (3)
2. ಸೋಲಿಲ್ಲದ ಎಂದರ್ಥ (3)
3. ಅರ್ಜುನನಿಗೆ ಹೀಗೊಂದು ಹೆಸರು (4)
4. ಕೆಲವೊಮ್ಮೆ ಕಬ್ಬಿಣದ ಕಡಲೆಯಾಗುವ ವಿಷಯ (3)
5. ಎರಡು ಕಡೆಯಿಂದ ನೋಡಿದರೂ ಹೊಸದು (3)
9. ಹಿಂದಿನ ಕಾಲದಿಂದ ನಡೆದುಕೊಂಡು ಬಂದಿರುವ ಸಂಪ್ರದಾಯ (4)
10. ಪೂಜೆಗೆ ಯೋಗ್ಯವಾದ ದುಂಡಗಿನ ಕಪ್ಪುಶಿಲೆ (4)
11. ಕೊಳೆಯಾದಂತಹ ಎಂದರ್ಥ (3)
12. ಕಟಕಟನೆ ಸದ್ದು ಮಾಡುತ್ತಾ ಬಂದಿದ್ದು ಮೋಸ (3)
16. ಪಕ್ಕದ ಗೃಹ (4)
17. ಇವನೊಬ್ಬ ಜಾಣನೇ ಸರಿ (3)
18. ಬಹಳವಾದ ಆಸೆ (3)
19. ಅಸ್ತವ್ಯಸ್ತವಾಗಿ ಬಂದಿರುವ ಮರದ ಮೆಟ್ಟು (3)
20. ಬಸುರಿಯ ಆಸೆ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ
2. ಅಡಗು 4. ಗಮನ 6. ಕಾಳಜಿ 7. ಡಾಕಿಣಿ 8. ತಪನ 11. ಮಶಕ 13. ಗಲಿಬಿಲಿ 14. ಪಶುಪತಿ 15. ನನೆಟ 17. ಚಮಚ 21. ಪದುಮ 22. ಗೆಳೆಯ 23. ರಸಾಲ 24. ನೆರವು

ಮೇಲಿಂದ ಕೆಳಕ್ಕೆ
1. ಏಕಾಗ್ರ 2. ಅಜಿತ 3. ಗುಡಾಕೇಶ 4. ಗಣಿತ 5. ನವೀನ 9. ಪರಂಪರೆ 10. ಸಾಲಿಗ್ರಾಮ 11. ಮಲಿನ 12. ಕಪಟ 16. ನೆರೆಮನೆ 17. ಚತುರ 18. ಚಪಲ 19. ಹಾಗೆವು 20. ಬಯಕೆ

ರಾಮನ ನಡೆ ಚೆಂದ, ಕೃಷ್ಣನ ನುಡಿ ಚಂದ

ರಾಮ, ಕೃಷ್ಣರು ಆದರ್ಶ ಪುರುಷೋತ್ತಮರು. ನಾವು ಹೇಗಿರಬೇಕೆಂದು ಮರ್ಯಾದಾ ಪುರುಷೋತ್ತಮ ಶ್ರೀರಾಮ ಬದುಕಿನ ಮೂಲಕ ಹೇಳಿದ್ದಾನೆ. ಶ್ರೀ. ಕೃಷ್ಣ ನುಡಿದ 'ಭಗವದ್ಗೀತೆ' ಯಂತೆ, ಶ್ರೀ ರಾಮ ನಡೆದು ತೋರಿಸಿದ. ಅದಕ್ಕಾಗಿಯೇ ಹಿರಿಯರು ಹೇಳಿರುವುದು ರಾಮನ ನಡೆ ಚೆಂದ, ಕೃಷ್ಣನ ನುಡಿ ಚಂದ. ರಾಮನ ಜನನ ನಡು ಮಧ್ಯಾಹ್ನವಾದರೆ, ಕೃಷ್ಣನ ಜನನ ನಡುರಾತ್ರಿ. ಬೇಸಿಗೆ ಕಾಲದಲ್ಲಿ ಅರಮನೆಯಲ್ಲಿ ರಾಮ ಜನಿಸಿದರೆ, ಭೋರ್ಗರೆಯುವ ಮಳೆಗಾಲದಲ್ಲಿ ಸೆರೆಮನೆಯಲ್ಲಿ ಕೃಷ್ಣನ ಜನನ. ರಾಮ ಹಿರಿಯ ಮಗನಾದರೆ, ಕೃಷ್ಣ ಕೊನೆಯ ಎಂಟನೆಯವ. ರಾಮ ಶುಕ್ಲಪಕ್ಷವಾದರೆ, ಕೃಷ್ಣ ಕೃಷ್ಣಪಕ್ಷ. ರಾಮನ ಬದುಕು ತೆರೆದಿಟ್ಟ ಪುಸ್ತಕವಾದರೆ, ಕೃಷ್ಣನದ್ದು ರಹಸ್ಯ, ನಿಗೂಢ. ರಾಮ ಏಕಪತ್ನಿ ವ್ರತಸ್ಥ. ಕೃಷ್ಣ 16108 ಪತ್ನಿಯರ ವಲ್ಲಭ. ರಾಮ ಮರ್ಯಾದಾ ಪುರುಷೋತ್ತಮ. ಕೃಷ್ಣ ಲೀಲಾ ಪುರುಷೋತ್ತಮ.

ರಾಮನ ಆಗಮನಕ್ಕೆ ವಿಶ್ವವೇ ಕಾತರಿಸಿತ್ತು. ರಾಮ ಎಂಬ ಶಬ್ದಕ್ಕೆ ಆಡು, ಆಟವಾಡು ಎಂಬ ಅರ್ಥ. ನಾವು ಪ್ರವಾಸಕ್ಕೆ ಹೋಗುವಾಗ ಹೇಗೆ ತಮ್ಮ ಸರಂಜಾಮಗಳನ್ನು ಹೊತ್ತೊಯ್ಯುತ್ತೇವೋ ರಾಮ ಭೂಲೋಕಕ್ಕೆ ಬರುವಾಗಲೇ ಎಲ್ಲಾ ವಿಷಯಗಳನ್ನು ಹೊತ್ತುತಂದಿದ್ದ. ಧೈರ್ಯ, ಕರ್ತವ್ಯನಿಷ್ಠೆ, ಮಾತಾ ಪಿತೃವಾಕ್ಯ ಪರಿಪಾಲನೆ, ರಾಜ್ಯಾಡಳಿತ, ಪ್ರಜಾಪರಿಪಾಲನೆ, ಕರ್ತವ್ಯ, ಗೌರವ, ಏಕಪತ್ನೀವ್ರತ, ಸೋದರ ಪ್ರೇಮ ಹೀಗೇ ಅನೇಕ ವಿಚಾರದಲ್ಲಿ ಸರ್ವಕಾಲಕ್ಕೂ ರಾಮಚರಿತೆ ಅತ್ಯಮೂಲ್ಯ ಕೊಡುಗೆಯಾಗಿದೆ! ಪಾವನರನ್ನು ಪಾವನಗೊಳಿಸಲು ಜನರಿದ್ದಾರೆ. ಪತಿತರನ್ನು ಪಾವನ ಮಾಡಲು ರಾಮನಿದ್ದಾನೆ.

ಯುದ್ಧವೇ ಮಾಡದೆ ಪಾಂಡವರಿಗೆ ಜಯತಂದುಕೊಟ್ಟದ್ದ ಶ್ರೀಕೃಷ್ಣ!ಮಹಾಭಾರತದಲ್ಲಿ ಶ್ರೀಕೃಷ್ಣನ ನಡೆ ಇಂದಿಗೂ ಪ್ರೇರಣೀಯ! ನ್ಯಾಯ ನೀತಿಯನ್ನು ಪಾಲಿಸುತ್ತಿದ್ದಂತೆಯೇ, ಚತುರತೆಯೂ ಕೂಡ ಯುದ್ಧವನ್ನು ಗೆಲ್ಲಲು ಅವಶ್ಯಕ ಎಂಬುದನ್ನು ಕೃಷ್ಣನು ತನ್ನ ನುಡಿಗಳಿಂದ ಹಲವಾರು ಬಾರಿ ನಿರೂಪಿಸಿದ್ದಾನೆ. ಆದ್ದರಿಂದಲೇ ಕೃಷ್ಣನನ್ನು ರಾಜಕೀಯ ಚತುರ ಎಂದು ಇತಿಹಾಸವು ನೆನಪಿಸಿಕೊಳ್ಳುತ್ತದೆ. ಇಂದಿನ ರಾಜಕೀಯವನ್ನು ಗಮನಿಸುವಾಗಲೂ ಹಲವು ಬಾರಿ ಕೃಷ್ಣನ ಜಾಣ ನಡೆಗಳು ನಮಗೆ ಕಾಣಿಸುತ್ತದೆ.

ಒಂದೊಳ್ಳೆ ಮಾತು
ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ರಾಮ, ಕಷ್ಣ ಒಂದೇ ದೇವರ ಅವತಾರವಾದರೂ ಅವರ ನಡೆ ನುಡಿಗಳಲ್ಲಿ ವ್ಯತ್ಯಾಸವಿದೆ. ರಾಮನ ನಡೆ ಚೆಂದ ಕೃಷ್ಣನ ನುಡಿ ಚಂದ. ಕೃಷ್ಣ ನುಡಿದಂತೆ ನುಡಿದಾಗ, ರಾಮ ನಡೆದಂತೆ ನಡೆದಾಗ ಜಗವ ಗೆಲ್ಲುವ ಹಾದಿ ಸುಗಮವಾಗುತ್ತದೆ.

ರಾಮ ಕೃಷ್ಣರ ಬಗೆಗಿನ ಈ ಮಾತುಗಳು ನಮಗೆ ಜೀವನಕ್ಕೆ ಪ್ರೇರಣೆಯಾಗಿವೆ. ಭಾರತೀಯ ಧರ್ಮ ಮತ್ತು ಪೌರಾಣಿಕ ಪ್ರತಿಮೆಗಳ ಐತಿಹ್ಯವೇ ಅಂತದ್ದು. ಹುಟ್ಟಿನಿಂದ ಸಾವಿನವರೆಗೂ ನಮ್ಮನ್ನು ಒಂದೊಳ್ಳೆ ಮಾರ್ಗದಲ್ಲಿ ನಡೆಸುವ ಅನೇಕ ಜೀವನ ಪಾಠಗಳನ್ನು ಭಗವಂತನ ಹಲವಾರು ರೂಪಗಳ ಮೂಲಕ, ಅವನ ಕಥಾನಕಗಳ ಮೂಲಕ ಮನದಟ್ಟು ಮಾಡುವಂಥದ್ದು. ಒಮ್ಮೆ ಯೋಚಿಸಿ ನೋಡಿ, ವಿದೇಶಗಳಲ್ಲಿ ಯಾವುದೇ ಧರ್ಮದ ಹಿನ್ನೆಲೆ ಇಲ್ಲದೆ ಹುಟ್ಟಿಕೊಂಡ ಜನಾಂಗಗಳು ಈಗಾಗಲೇ ಮಾನಸಿಕ ಸ್ಥಿಮಿತವನ್ನೇ ಕಳೆದುಕೊಂಡು, ಖಿನ್ನತೆ, ಆತಂಕ , ಅಸಮಾಧಾನ ಹೀಗೆ ನಾನಾ ರೀತಿಯ ಮಾನಸಿಕ ಗೊಂದಲಕ್ಕೆ ಒಳಗಾಗಿ ಹೈರಾಣಾಗಿದ್ದಾರೆ. ನಮಗೆ ಅದೆಂಥ ಪರಿಸ್ಥಿತಿಯಲ್ಲೂ ನಮ್ಮನ್ನು ಕೈಹಿಡಿದು ನಡೆಸುವ ದಾರಿ ತೋರುವ ಧಾರ್ಮಿಕ ಗ್ರಂಥಗಳಿವೆ, ರಾಮಾಯಣ, ಮಹಾಭಾರತ, ಭಾಗವತದಂತಹ ಅನೇಕ ಕೃತಿಗಳು ಜೀವನದ ಪ್ರತಿಯೊಂದು ಘಟನೆಗೂ ಕೂಡ ಸಮೀಕರಿಸಿಕೊಳ್ಳಬಹುದಾದಂತಹ ದೈವಿಕ ಬರಹಗಳು. ಯಾವುದೇ ಕ್ಷಣದಲ್ಲಿ ನೀವು ಇಂತಹ ಯಾವ ಗ್ರಂಥವನ್ನು ತೆಗೆದು ಓದಲು ಪ್ರಾರಂಭಿಸಿದರೂ, ಮನಸ್ಸಿಗೆ ಸಾಂತ್ವನ ನೀಡುವ, ಜೀವಕ್ಕೆ ಧೈರ್ಯ ನೀಡುವ , ಬದುಕಿಗೊಂದು ದಾರಿ ನೀಡುವ ಅನೇಕ ವಿಷಯಗಳು ನಮಗಿಲ್ಲಿ ಗೋಚರವಾಗುತ್ತಾ ಹೋಗುತ್ತವೆ. ಇವುಗಳನ್ನ ಮನೆ ಮನೆಯಲ್ಲಿ ನಾವು ಪಠಿಸುತ್ತೇವೆ, ಗುರುವಿನಂತೆ ಮನೆಯ ಹಿರಿಯಂತೆ ಇವು ನಮಗೆ ದಾರಿ ತೋರುತ್ತವೆ. ಆದ್ದರಿಂದಲೇ ನಾವು ನಮ್ಮ ಮಕ್ಕಳಿಗೆ ಕೊಡಬಹುದಾದ ಅತಿ ದೊಡ್ಡ ಕಾಣಿಕೆ ಎಂದರೆ ನಮ್ಮ ಸನಾತನ ಧರ್ಮ ಆಚರಣೆ ಮತ್ತು ಅದರ ಮಹತ್ವವನ್ನು ಅವರಿಗೆ ತಿಳಿ ಹೇಳಿ ಅವರೂ ಅದನ್ನು ಆಚರಿಸುವಂತೆ ಪ್ರೋತ್ಸಾಹಿಸುವುದು.

ಪರಮಾನಂದಕ್ಕಾಗಿ ಧ್ಯಾನ

ನೇರವಾಗಿ ನಮ್ಮ ಕಣ್ಣು ಹುಬ್ಬುಗಳ ನಡುವೆ ಹಿಂಭಾಗದಲ್ಲಿ ಮೆದುಳಿನ ಮಧ್ಯದಲ್ಲಿ ಬಟಾಣಿ ಗಾತ್ರದ ಶಂಖಾ ಕೃತಿಯ ಪಿನಲ್ ಗ್ರಂಥಿ ಎಂಬ ಒಂದು ಅವಯವ ಇದೆ. ಶರೀರ ಶಾಸ್ತ್ರದ ಪ್ರಕಾರ ಇದು ನರಕ್ಕೆ ಸಂಬಂಧಿಸಿದಂತೆ ಮೇಲಾಟೋನಿನ್ ಮತ್ತು ಸೆರೋಟೋನಿನ್ ಎಂಬುವುಗಳನ್ನು ಉತ್ಪಾದಿಸುತ್ತದೆ ಹಾಗೂ ಇವು ಕ್ರಮವಾಗಿ ನಿದ್ರೆ, ಚಕ್ರ, ಹಾಗೂ ನಮ್ಮ ಮನಸ್ಥಿತಿಗೆ ಕಾರಣವಾಗಿವೆ. ಇದನ್ನು ಮೂರನೇ ಕಣ್ಣು ಎಂದು ಕರೆಯುತ್ತಾರೆ; ಯಾಕೆಂದರೆ ಇದು ಸಾಮಾನ್ಯ ಕಣ್ಣಿನಂತೆ ಚಿತ್ರ ಸೆರೆ ಹಿಡಿಯುತ್ತದೆ.

ಎಲ್ಲ ಸಂಸ್ಕೃತಿಗಳಲ್ಲಿಯೂ ಇದನ್ನು ಬೇರೆ ಬೇರೆ ರೀತಿಯಾಗಿ ವರ್ಣಿಸಿರುತ್ತಾರೆ. ಉದಾಹರಣೆಗೆ- ಆಧ್ಯಾತ್ಮಿಕ ಜ್ಞಾನದ ಆತ್ಮದ ಸ್ಥಾನ ನಮ್ಮ ಐದು ಇಂದ್ರಿಯಗಳನ್ನು ಮೀರಿ ನೋಡುವ ಆರನೇ ಇಂದ್ರಿಯ, ಆಧ್ಯಾತ್ಮಿಕ ಜಾಗೃತಿಯ ಸಂಕೇತ, ಭೌತಿಕ ಹಾಗೂ ಆಧ್ಯಾತ್ಮಿಕ ಜಗತ್ತಿನ ಕೊಂಡಿ, ಹೀಗೆ ಅದನ್ನು ಕರೆದಿರುತ್ತಾರೆ. ಭಾರತೀಯ ಸಂಸ್ಕೃತಿಯಲ್ಲಿ ಕಣ್ಣು ಹುಬ್ಬುಗಳ ಮಧ್ಯದ ಸ್ಥಳವನ್ನು ಅಜ್ಞಾಚಕ್ರ ಎಂದು ಕರೆದಿರುತ್ತಾರೆ ಇದು ಪೀನಲ್ ಗ್ರಂಥಿಯನ್ನು ಪ್ರತಿನಿಧಿಸುತ್ತದೆ.

ಈ ಹಿನ್ನೆಲೆಯು ಮನಸ್ಸು ಹಾಗೂ ಇಂದ್ರಿಯಗಳನ್ನು ನಿಯಂತ್ರಿಸುವ ಕೃಷ್ಣ ಹೇಳಿದ ರೀತಿಯನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಅವನು ಹೇಳುತ್ತಾನೆ -ಬಾಹ್ಯ ಸುಖದ ಎಲ್ಲ ವಿಚಾರಗಳನ್ನು ಬಿಟ್ಟು ಕಣ್ಣು ಹುಬ್ಬುಗಳ ಮಧ್ಯದಲ್ಲಿ ಗಮನ ಕೇಂದ್ರೀಕರಿಸಿ ಮೂಗಿನ ಮೂಲಕ ಒಳಬರುವ ಹಾಗೂ ಹೊರಹೋಗುವ ಉಸಿರನ್ನು ಸಮತೋಲನಗೊಳಿಸಿ ಇದರಿಂದ ಇಂದ್ರಿಯ, ಮನಸ್ಸು, ಬುದ್ಧಿಯನ್ನು ನಿಯಂತ್ರಿಸಿ ಸಂತನು ಆಸೆ ಭಯದಿಂದ ಮುಕ್ತನಾಗುತ್ತಾನೆ ಹಾಗೂ ಸದಾ ಸ್ವತಂತ್ರವಾಗಿ ಜೀವಿಸುತ್ತಾನೆ.(5.27, 5.28) ಇದು ಭಗವಂತನು ಇಂದ್ರಿಯ ಮನಸ್ಸು ಹಾಗೂ ಬುದ್ಧಿಯನ್ನು ನಿಯಂತ್ರಿಸುವದಕ್ಕಾಗಿ ಅರ್ಜುನನಿಗೆ ಹೇಳಿದ ವಿಧಾನ ಅಥವಾ ತಂತ್ರವಾಗಿದೆ.

ಭಗವಾನ್ ಶಂಕರರು ನೀಡಿದವಿಜ್ಞಾನ ಭೈರವ ತಂತ್ರವು ಅಂತಹ 112 ವಿಧಾನಗಳನ್ನು ಒಳಗೊಂಡಿರುತ್ತದೆ. ಅದರಲ್ಲಿ ಒಂದು ತಂತ್ರವು ಹೇಳುತ್ತದೆ- ಯಾವುದೇ ವಿಚಾರ ಮಾಡದೆ ಕಣ್ಣು ಹುಬ್ಬುಗಳ ಮಧ್ಯೆ ಗಮನ ಕೇಂದ್ರೀಕರಿಸು. ಆಗ ದೈವೀಶಕ್ತಿ ಹೊರಬಂದು ತಲೆಯ ತುದಿಗೆ ಏರುತ್ತದೆ. ಆಗ ತಕ್ಷಣ ಪರಮಾನಂದವು ತುಂಬುತ್ತದೆ.


ನಿತ್ಯಜೀವನದಲ್ಲಿ ಭಗವದ್ಗೀತೆ
ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ಆಘಾತಗೊಂಡ ನಮ್ಮ ದೇಹದ ಭಾಗಗಳಿಗೆ ನಮ್ಮ ಗಮನವನ್ನು ಸೆಳೆಯುವ ಸಹಜ ಸಾಧನವೆಂದರೆ ನೋವು. ಇದು ನಾವು ಉಳಿದುಕೊಳ್ಳಲು ಸಹಾಯ ಮಾಡುತ್ತದೆ. ಹಾಗೆಯೇ ಅದು ನಮ್ಮ ಜಾಗೃತ ಗಮನವನ್ನು ಕಣ್ಣು ಹುಬ್ಬುಗಳ ಮಧ್ಯೆ ತರುತ್ತದೆ. ಇದು ಪೀನಲ್ ಗ್ರಂಥಿಯನ್ನು ಕ್ರಿಯಾಶೀಲಗೊಳಿಸುತ್ತದೆ. ಹೀಗೆ ಕ್ರಿಯಾಶೀಲಗೊಂಡ ಗ್ರಂಥಿ ನಮಗೆ ಆಂತರಿಕವಾಗಿ ಇತರ ಯಾವುದೇ ಇಂದ್ರಿಯಗಳ ಸಹಾಯವಿಲ್ಲದೆ ಪರಮಾನಂದವನ್ನು ನೀಡುತ್ತದೆ.

ಸಂಜು ಸ್ಯಾಮ್ಸನ್ ಹೊಸ ದಾಖಲೆ

ಮುಲ್ಲಾನ್‌ಪುರ: ರಾಜಸ್ಥಾನ್ ರಾಯಲ್ಸ್ ತಂಡವು ಶನಿವಾರದ ಐಪಿಎಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡದೆದುರು 50 ರನ್ ಅಮೋಘ ಜಯ ಸಾಧಿಸಿ ಹಾಲಿ ಆವೃತ್ತಿಯಲ್ಲಿ ಎರಡನೇ ಗೆಲುವು ತನ್ನದಾಗಿಸಿಕೊಂಡಿತು. ಗಾಯದಿಂದ ಚೇತರಿಕೆ ಕಂಡು ನಾಯಕನಾಗಿ ಮರಳಿದ ಮೊದಲ ಪಂದ್ಯದಲ್ಲೇ ಸಂಜು ಸ್ಯಾಮ್ಸನ್ ರಾಜಸ್ಥಾನ್ ಪರ ನೂತನ ದಾಖಲೆಯೊಂದನ್ನು ನಿರ್ಮಿಸಿದರು. ಆ ಗೆಲುವಿನೊಂದಿಗೆ ಸಂಜು ಅವರು ರಾಜಸ್ಥಾನ್ ರಾಯಲ್ಸ್ ಪರ ಅತ್ಯಧಿಕ ಗೆಲುವು ಸಾಧಿಸಿದ ಮೊದಲ ನಾಯಕ ಎನಿಸಿಕೊಂಡರು. ಇದಕ್ಕೂ ಮುನ್ನ ಈ ದಾಖಲೆ ಆಸ್ಟ್ರೇಲಿಯಾದ ಮಾಜಿ ನಾಯಕ ಶೇನ್ ವಾರ್ನ್ ಹೆಸರಿನಲ್ಲಿತ್ತು. ವಾರ್ನ್ ರಾಜಸ್ಥಾನ ಪರ 55 ಪಂದ್ಯಗಳಿಂದ 31 ಗೆಲುವು ಸಾಧಿಸಿದ್ದರು, ಅಲ್ಲದೆ ಚೊಚ್ಚಲ ಆವೃತ್ತಿಯಲ್ಲಿ ತಂಡವನ್ನು ಚಾಂಪಿಯನ್ ಪಟ್ಟಕ್ಕೇರಿಸಿದ್ದರು. ಸಂಜು ಸ್ಯಾಮ್ಸನ್ 62 ಪಂದ್ಯಗಳಿಂದ 32 ಪಂದ್ಯ ಗೆದ್ದಿದ್ದಾರೆ. ಸಂಜು ಗಾಯದ ಕಾರಣ ಆರಂಭಿಕ ಮೂರು ಪಂದ್ಯಗಳಲ್ಲಿ ಇಂಪ್ಯಾಕ್ಟ್ ಆಟಗಾರನಾಗಿ ಆಡಿದ್ದಾಗ ರಿಯಾನ್ ಪರಾಗ್ ಉಸ್ತುವಾರಿ ನಾಯಕನಾಗಿ ರಾಜಸ್ಥಾನ ತಂಡವನ್ನು ಮುನ್ನಡೆಸಿದ್ದರು.

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಡೆಲ್ಲಿ	03	03	00	06
ಬೆಂಗಳೂರು	03	02	01	04
ಗುಜರಾತ್	03	02	01	04
ಪಂಜಾಬ್	03	02	01	04
ಕೋಲ್ಕತ್ತಾ	04	02	02	04
ಲಖನೌ	04	02	02	04
ರಾಜಸ್ಥಾನ್	04	02	02	04
ಮುಂಬೈ	04	01	03	02
ಚೆನ್ನೈ	04	01	03	02
ಹೈದ್ರಾಬಾದ್	04	01	03	02

ಸಿಎಸ್‌ಕೆ: ಧೋನಿ ಕ್ಯಾಪ್ಟನ್?

ಚೆನ್ನೈ: ಚೆನ್ನೈ ಸೂಪರ್ ಕಿಂಗ್ಸ್ ತಂಡದ ಎಂ.ಎಸ್ ಧೋನಿ ಮತ್ತೆ ಸಿಎಸ್‌ಕೆ ತಂಡಕ್ಕೆ ನಾಯಕನಾಗಿ ಕಣಕ್ಕಿಳಿಯುವ ಸಾಧ್ಯತೆಯಿದೆ ಎಂದು ವರದಿಗಳು ತಿಳಿಸಿವೆ. ಶನಿವಾರ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ನಡೆಯಲಿರುವ ಪಂದ್ಯಕ್ಕೆ ಧೋನಿ ನಾಯಕನಾಗಿ ಕಣಕ್ಕಿಳಿಯುವ ಸಾಧ್ಯತೆಗಳಿವೆ. ಹಾಲಿ ಕ್ಯಾಪ್ಟನ್ ಋತುರಾಜ್ ಗಾಯಕ್ವಾಡ್ ಅವರು ಮುಂಗೈ ಗಾಯದ ಸಮಸ್ಯೆಯಿಂದ ಬಳಲುತ್ತಿರುವ ಕಾರಣ ಪಂದ್ಯಕ್ಕೆ ಅವರ ಲಭ್ಯತೆ ಬಗ್ಗೆ ಖಚಿತವಾಗಿಲ್ಲ, ಹಾಗಾಗಿ ಧೋನಿ ಅವರೇ ನಾಯಕತ್ವದ ಹೊಣೆ ಹೊರಲಿದ್ದಾರೆ ಎಂದು ತಿಳಿದುಬಂದಿದೆ. ಇತ್ತೀಚೆಗೆ ರಾಜಸ್ಥಾನ್ ರಾಯಲ್ಸ್ ವಿರುದ್ಧ ನಡೆದ ಪಂದ್ಯದಲ್ಲಿ ತುಷಾರ್ ದೇಶ್‌ಪಾಂಡೆ ಅವರ ಬೌಲಿಂಗ್‌ನಲ್ಲಿ ಚೆಂಡು ರುತುರಾಜ್ ಅವರ ಬಲಭಾಗದ ಮುಂಗೈಗೆ ಬಡಿದಿತ್ತು. ಈ ವೇಳೆ ಕೊಂಚ ಬ್ರೇಕ್ ತೆಗೆದುಕೊಂಡಿದ್ದರು, ಆದಾಗ್ಯೂ ಋತುರಾಜ್ ಬ್ಯಾಟಿಂಗ್ ಮುಂದುವರಿಸಿದ್ದರು. ಹಾಗಾಗಿ ಸದ್ಯ ಅವರು ಪಂದ್ಯದಲ್ಲಿ ಮುಂದುವರಿಯುವ ಸಾಧ್ಯತೆಗಳು ಕಡಿಮೆ ಇದೆ. 2023ರ ಆವೃತ್ತಿಯಲ್ಲಿ ಸಿಎಸ್‌ಕೆ ಎಂ.ಎಸ್ ಧೋನಿ ನಾಯಕತ್ವದಲ್ಲೇ ಚಾಂಪಿಯನ್ ಪಟ್ಟ ಗೆದ್ದುಕೊಂಡಿತ್ತು, ಬಳಿಕ ಧೋನಿ ತಮ್ಮ ನಾಯಕತ್ವಕ್ಕೆ ಕೆಳಗಿಳಿದ ಕಾರಣ 2024ರ ಆವೃತ್ತಿಯಿಂದ ಋತುರಾಜ್ ಗಾಯಕ್ವಾಡ್ ಸಿಎಸ್‌ಕೆ ತಂಡದ ನಾಯಕನಾಗಿ ಮುಂದುವರಿಯುತ್ತಿದ್ದಾರೆ.

ಚಹಲ್: ಪಂಜಾಬ್‌ಗೆ ದುಬಾರಿ

ಚಂಡೀಗಢ: ಇದುವರೆಗಿನ ಒಟ್ಟಾರೆ ಐಪಿಎಲ್ ಟೂರ್ನಿಗಳ ಯಶಸ್ವಿ ಬೌಲರ್‌ಗಳ ಪೈಕಿ ಒಬ್ಬರಾಗಿರುವ ಯುಜ್ವೇಂದ್ರ ಚಹಲ್ ಈ ಸಲದ ಟೂರ್ನಿಯಲ್ಲಿ ಲಯ ತಪ್ಪಿದ್ದಾರೆ. ಐಪಿಎಲ್ ಮೆಗಾ ಹರಾಜಿನ ಮೂಲಕ ಪಂಜಾಬ್ ಕಿಂಗ್ಸ್ ಫ್ರಾಂಚೈಸಿ ಯುಜ್ವೇಂದ್ರ ಚಹಲ್ ಅವರನ್ನು ಬರೋಬ್ಬರಿ 18 ಕೋಟಿ ರು. ನೀಡಿ ಖರೀದಿಸಿತ್ತು. ಪಂಜಾಬ್ ಕಿಂಗ್ಸ್ ಪರ ಈ ವರೆಗೆ 3 ಪಂದ್ಯಗಳಲ್ಲಿ ಕಣಕ್ಕಿಳಿದಿರುವ ಯುಜ್ವೇಂದ್ರ ಚಹಲ್ ನಿರೀಕ್ಷಿತ ಪ್ರದರ್ಶನ ತೋರಿಸಿಲ್ಲ, ಅದರಲ್ಲೂ ಕಳೆದ ಮೂರು ಪಂದ್ಯಗಳಲ್ಲಿ ಅವರು ಪಡೆದಿರುವುದು ಒಂದೇ ಒಂದು ವಿಕೆಟ್ ಮಾತ್ರ. 3 ಪಂದ್ಯಗಳಲ್ಲಿ ಯುಜ್ವೇಂದ್ರ ಚಹಲ್ ಒಟ್ಟು 10 ಓವರ್‌ಗಳನ್ನು ಎಸೆದು ಬರೋಬ್ಬರಿ 102 ರನ್‌ಗಳನ್ನು ಕೊಟ್ಟಿದ್ದಾರೆ, ಅಂದರೆ ಪ್ರತಿ ಓವರ್‌ನಲ್ಲಿ ಸರಾಸರಿ 10.20 ರನ್ ನೀಡಿದ್ದಾರೆ.

ಯುಜ್ವೇಂದ್ರ ಚಹಲ್ ಕೊನೆಯ 15 ಐಪಿಎಲ್ ಪಂದ್ಯಗಳಲ್ಲಿ ಪಡೆದಿರುವುದು ಕೇವಲ 13 ವಿಕೆಟ್‌ಗಳು ಮಾತ್ರ. ಅಲ್ಲದೆ ಕಳೆದ 15 ಪಂದ್ಯಗಳಲ್ಲಿ 10.2ರ ಸರಾಸರಿಯಲ್ಲಿ ರನ್ ನೀಡಿದ್ದಾರೆ, ಹೀಗಾಗಿಯೇ ರಾಜಸ್ಥಾನ್ ರಾಯಲ್ಸ್ ತಂಡ ಅವರನ್ನು ಈ ಬಾರಿ ಹರಾಜು ಪಡೆದಿರಲಿಲ್ಲ. ಪಂಜಾಬ್ ಕಿಂಗ್ಸ್ ತಂಡಕ್ಕೆ ಇನ್ನೂ 11 ಲೀಗ್ ಪಂದ್ಯಗಳಿವೆ. ಹಾಗಾಗಿ ಮುಂದಿನ ಪಂದ್ಯಗಳಲ್ಲಿ ಯುಜ್ವೇಂದ್ರ ಚಹಲ್ ಈ ಹಿಂದಿನಂತೆ ಸ್ಪಿನ್ ಮೋಡಿ ಮಾಡಲಿದ್ದಾರಾ ಎಂಬುದು ಕ್ರಿಕೆಟ್ ವಿಶ್ಲೇಷಕರ ಕುತೂಹಲ.



ದಾಖಲೆಯ ಸನಿಹದಲ್ಲಿ ಕೊಹ್ಲಿ



ಮುಂಬೈ: ಸೋಮವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ಆರ್‌ಸಿಬಿ ತಂಡವು ಮುಂಬೈ ಇಂಡಿಯನ್ಸ್ ವಿರುದ್ಧ ಆಡಲಿದ್ದು, ಆ ಪಂದ್ಯದಲ್ಲಿ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿಗೆ ನೂತನ ಮೈಲುಗಲ್ಲೊಂದನ್ನು ನಿರ್ಮಿಸುವ ಅವಕಾಶವಿದೆ. ಕೊಹ್ಲಿ ಪಂದ್ಯದಲ್ಲಿ 17 ರನ್ ಬಾರಿಸಿದರೆ ಟಿ20 ಕ್ರಿಕೆಟ್‌ನಲ್ಲಿ 13 ಸಾವಿರ ರನ್ ಪೂರೈಸಿದ ಮೊದಲ ಭಾರತೀಯ ಮತ್ತು ವಿಶ್ವದ ಐದನೇ ಬ್ಯಾಟರ್ ಆಗಲಿದ್ದಾರೆ. ಕೊಹ್ಲಿಗೆ ಕಳೆದ ಗುಜರಾತ್ ವಿರುದ್ಧದ ಪಂದ್ಯದಲ್ಲೇ ಈ ದಾಖಲೆ ನಿರ್ಮಿಸುವ ಅವಕಾಶವಿತ್ತು, ಆದರೆ ಆ ಪಂದ್ಯದಲ್ಲಿ ಕೊಹ್ಲಿ ಕೇವಲ 7 ರನ್‌ಗೆ ಔಟ್ ಆಗಿದ್ದರು. ಕೊಹ್ಲಿಯ ನೆಚ್ಚಿನ ಮೈದಾನ ಎನಿಸಿಕೊಂಡಿರುವ ವಾಂಖೆಡೆ ಸ್ಟೇಡಿಯಂನಲ್ಲಿ ಈಗಾಗಲೇ ಕೊಹ್ಲಿ ಹಲವು ದಾಖಲೆಗಳನ್ನು ನಿರ್ಮಿಸಿದ್ದಾರೆ. ಏಕದಿನ ಕ್ರಿಕೆಟ್‌ನ 50ನೇ ಶತಕ ಪೂರೈಸಿದ್ದು ಕೂಡ ಇದೇ ಮೈದಾನದಲ್ಲಿ ಎಂಬುದು ವಿಶೇಷ. ಹೀಗಾಗಿ ಕೊಹ್ಲಿಗೆ ವಾಂಖೆಡೆಯು ಅದೃಷ್ಟದ ಕ್ರೀಡಾಂಗಣ ಎಂದೆನಿಸಿಕೊಂಡಿದೆ. ಸೋಮವಾರ ಮುಂಬೈ ವಿರುದ್ಧ ಕೊಹ್ಲಿ ಉತ್ತಮ ಬ್ಯಾಟ್ ಬೀಸಿ 13 ಸಾವಿರ ರನ್ ಪೂರೈಸಲಿದ್ದಾರೆ ಎನ್ನುವುದು ಅಭಿಮಾನಿಗಳ ನಂಬಿಕೆ.

ಇಂದಿನ ಪಂದ್ಯ

7.30 PM

ರಾಯಲ್ ಚಾಲೆಂಜರ್ಸ್ ಬೆಂಗಳೂರು vs ಮುಂಬೈ ಇಂಡಿಯನ್ಸ್

ವಾಂಖೆಡೆ ಸ್ಟೇಡಿಯಂ, ಮುಂಬೈ



ಪವರ್ ಪ್ಲೇ ಬಹಳ ಮುಖ್ಯ: ಋತುರಾಜ್

'ಕಳೆದ ಮೂರು ಪಂದ್ಯಗಳಲ್ಲಿ ನಾವು ವೈಫಲ್ಯ ಅನುಭವಿಸಿದ್ದೇವೆ ಹಾಗೂ ಶನಿವಾರ ಕೂಡ ನಾವು ಚೆನ್ನಾಗಿ ಆಡಿಲ್ಲ. ಯೋಚಿಸಿದ ರೀತಿಯಲ್ಲಿ ನಮ್ಮ ಹಾದಿ ಸಾಗುತ್ತಿಲ್ಲ. ಬ್ಯಾಟಿಂಗ್ ವಿಭಾಗವಾಗಲಿ ಅಥವಾ ಬೌಲಿಂಗ್ ವಿಭಾಗವಾಗಲಿ ಪವರ್‌ಪ್ಲೇ ಅತ್ಯಂತ ಮುಖ್ಯವಾಗಿರುತ್ತದೆ. ನಾವು 15ರಿಂದ 20 ರನ್‌ಗಳನ್ನು ನೀಡುತ್ತಿದ್ದೇವೆ ಹಾಗೂ ಹೆಚ್ಚಿನ ವಿಕೆಟ್‌ಗಳನ್ನು ಕಳೆದುಕೊಂಡಿದ್ದೇವೆ. ಪವರ್‌ಪ್ಲೇನಲ್ಲಿ ಬೌಲಿಂಗ್ ಅಥವಾ ಬ್ಯಾಟಿಂಗ್ ಮಾಡುವವರ ಬಗ್ಗೆ ನಾವು ಸ್ವಲ್ಪ ಹೆಚ್ಚು ಕಾಳಜಿ ವಹಿಸುತ್ತೇವೆ, ಆದರೆ ಅತಿಯಾದ ನಿರ್ಬಂಧ ನಮಗೇ ಮುಳುವಾಗುತ್ತಿದೆ' ಎಂದು ಚೆನ್ನೈ ಸೂಪರ್ ಕಿಂಗ್ಸ್ ನಾಯಕ ಋತುರಾಜ್ ಗಾಯಕ್ವಾಡ್ ಹೇಳಿದ್ದಾರೆ. ಮೈದಾನದಲ್ಲಿ ತಮ್ಮ ತಂಡ ಯಾವಾಗಲೂ ಹಿನ್ನಡೆಯಲ್ಲಿದೆ ಎಂದು ಭಾವಿಸುವುದರಿಂದ ಪ್ರತಿಯೊಬ್ಬರೂ ಪರಿಹಾರವನ್ನು ಕಂಡುಕೊಳ್ಳ ಬೇಕಾಗಿದೆ ಎಂದೂ ಋತುರಾಜ್ ಹೇಳಿದ್ದಾರೆ. ಪ್ರಸ್ತುತ ನಡೆಯುತ್ತಿರುವ ಐಪಿಎಲ್ ಟೂರ್ನಿಯಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡ ಹ್ಯಾಟ್ರಿಕ್ ಸೋಲು ಅನುಭವಿಸಲು ಕಾರಣದ ಬಗ್ಗೆ ಅವರು ಈ ರೀತಿ ಬಹಿರಂಗಪಡಿಸಿದ್ದಾರೆ.

ಸಿರಾಜ್ ಮತ್ತೆ ಮಾರಕ ಬೌಲಿಂಗ್ | ಅಲ್ಪ ಮೊತ್ತಕ್ಕೆ ಕುಸಿದ ಸನ್ ರೈಸರ್ಸ್

ಹೈದರಾಬಾದ್‌ಗೆ 153 ರನ್ ಗುರಿ

ಹೈದರಾಬಾದ್: ಭಾನುವಾರ ಇಲ್ಲಿ ನಡೆದ ಐಪಿಎಲ್ ಟೂರ್ನಿಯ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆತಿಥೇಯ ಸನ್‌ರೈಸರ್ಸ್ ಹೈದರಾಬಾದ್ ತಂಡವು ಮತ್ತೆ ತನ್ನ ನೀರಸ ಪ್ರದರ್ಶನವನ್ನು ಮುಂದುವರಿಸಿದೆ. ಗುಜರಾತ್ ಬೌಲರ್‌ಗಳ ದಾಳಿಯನ್ನು ಸಮರ್ಥವಾಗಿ ಎದುರಿಸಲಾಗದೆ, ಕಮಿನ್ಸ್ ಪಡೆಯ ಬ್ಯಾಟರ್‌ಗಳು ಪೆವಿಲಿಯನ್ ಪರೇಡ್ ನಡೆಸುತ್ತಾ 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 152 ರನ್‌ಗಳಿಸಿ, ಪಂದ್ಯ ಗೆಲ್ಲಲು ಗುಜರಾತ್‌ಗೆ 153 ರನ್‌ಗಳ ಗುರಿ ನೀಡಿದೆ.

ಮೊದಲು ಬ್ಯಾಟಿಂಗ್ ಆರಂಭಿಸಿದ ಹೈದರಾಬಾದ್ ತಂಡಕ್ಕೆ ಗುಜರಾತ್ ಟೈಟನ್ಸ್‌ನ ಮೊಹಮ್ಮದ್ ಸಿರಾಜ್ ಮೊದಲ ಓವರ್‌ನಲ್ಲೇ ಹೊಡೆತ ನೀಡಿದರು. ಸಿರಾಜ್ ಆರಂಭಿಕ ಆಟಗಾರ ಟ್ರಾವಿಸ್ ಹೆಡ್(8) ಅವರನ್ನು ಪೆವಿಲಿಯನ್‌ಗೆ ಕಳುಹಿಸಿ ತನ್ನ ತಂಡಕ್ಕೆ ಮೊದಲ ಬ್ರೇಕ್ ನೀಡಿದರು. ಹೆಡ್ 5 ಎಸೆತಗಳಲ್ಲಿ ಕೇವಲ 8 ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು, ಇದು ಅವರ ಸತತ 3ನೇ ವೈಫಲ್ಯವಾಗಿದೆ. ನಂತರ ಮತ್ತೊಬ್ಬ ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ 16 ಎಸೆತಗಳಲ್ಲಿ 18 ರನ್ ಗಳಿಸಿ ಔಟಾದರು. ಬಳಿಕ ಕ್ರೀಸ್‌ಗೆ ಬಂದ ಇಶಾನ್ ಕಿಶನ್ 14 ಎಸೆತಗಳಲ್ಲಿ 17 ರನ್ ಗಳಿಸಿ ತಮ್ಮ ವಿಕೆಟ್ ಕಳೆದುಕೊಂಡರು.

ಪವರ್ ಪ್ಲೇನಲ್ಲೇ ಕ್ರೀಸ್‌ಗೆ ಬಂದ ನಿತೀಶ್ ಕುಮಾರ್ ನಿಧಾನಗತಿ ಬ್ಯಾಟಿಂಗ್‌ಗೆ ಮೊರೆ ಹೋದರು. ಅವರು 4ನೇ ವಿಕೆಟ್‌ಗೆ ಜೊತೆ ಹೆನ್ರಿಕ್ ಕ್ಲಾಸೆನ್ ಜೊತೆಗೆ 50 ರನ್‌ಗಳ ಜೊತೆಯಾಟ ನೀಡಿದರು. ಕ್ಲಾಸೆನ್ 19 ಎಸೆತಗಳಲ್ಲಿ 27 ರನ್ ಗಳಿಸಿ ನಿರ್ಣಾಯಕ ಹಂತದಲ್ಲಿ ವಿಕೆಟ್ ಒಪ್ಪಿಸಿದರು, ಅವರ ವಿಕೆಟ್ ಕಳೆದುಕೊಂಡ ಬೆನ್ನಲ್ಲೇ ಮತ್ತೆ ಹೈದರಾಬಾದ್ ತೀವ್ರ ಕುಸಿತ ಅನುಭವಿಸಿತು.

ನಿತೀಶ್ ಕುಮಾರ್ 34 ಎಸೆತಗಳಲ್ಲಿ 3 ಬೌಂಡರಿ ಸಹಿತ 31 ರನ್ ಗಳಿಸಿದರೆ, ಕಮಿಂಡು ಮೆಂಡಿಸ್ 5 ಎಸೆತಗಳಲ್ಲಿ ಕೇವಲ 1 ರನ್ ಗಳಿಸಿ ಔಟ್ ಆದರು. ಯುವ ಬ್ಯಾಟರ್ ಅನಿಕೇತ್ ವರ್ಮಾ ಆಟ ಕೇವಲ 18ರನ್‌ಗಳಿಗೆ ಮಾತ್ರ ಸೀಮಿತವಾಯಿತು. ಕಮಿನ್ಸ್ ಅಜೇಯ 22 ರನ್ ಗಳಿಸಿ ತಂಡದ ಮೊತ್ತವನ್ನು 150ರ ಗಡಿ ದಾಟಿಸಿದರು.

ಗುಜರಾತ್ ಟೈಟನ್ಸ್ ಪರ ಮೊಹಮ್ಮದ್ ಸಿರಾಜ್ 17 ರನ್ ನೀಡಿ 4 ವಿಕೆಟ್ ಪಡೆದು ಮಿಂಚಿದರೆ, ಪ್ರಸಿದ್ ಕೃಷ್ಣ 25 ರನ್ ನೀಡಿ 2 ವಿಕೆಟ್ ಹಾಗೂ ಸಾಯಿ ಕಿಶೋರ್ ಕೂಡಾ 24 ರನ್ ಕೊಟ್ಟು 2 ವಿಕೆಟ್ ಪಡೆದು ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಅಲ್ಪಮೊತ್ತಕ್ಕೆ ಕಟ್ಟಿಹಾಕಿದರು.

ಸಿರಾಜ್: ಶತಕ ವಿಕೆಟ್ ಸಾಧನೆ

ಸನ್‌ರೈಸರ್ಸ್ ಹೈದರಾಬಾದ್ ತಂಡದ ಸ್ಫೋಟಕ ಬ್ಯಾಟರ್‌ಗಳಾದ ಟ್ರಾವಿಸ್ ಹೆಡ್, ಅಭಿಷೇಕ್ ಶರ್ಮಾ, ಅನಿಕೇತ್ ವರ್ಮಾ ಮತ್ತು ಸಿಮರ್ಜೀತ್ ಸಿಂಗ್ ಅವರನ್ನು ಔಟ್ ಮಾಡಿದ ಸಿರಾಜ್ ಐಪಿಎಲ್‌ನಲ್ಲಿ ಶತಕದ ವಿಕೆಟ್ ಸಾಧನೆ ದಾಟಿದ್ದು, ಅವರ ವಿಕೆಟ್ ಗಳಿಕೆಯ ಸಂಖ್ಯೆ 102ಕ್ಕೆ ಏರಿದೆ. ತನ್ನ ಅಮೋಘ ಪ್ರದರ್ಶನದ ಮೂಲಕ ಸಿರಾಜ್ ಐಪಿಎಲ್ ಇತಿಹಾಸದಲ್ಲಿ 100 ವಿಕೆಟ್ ಪಡೆದ 26ನೇ ಬೌಲರ್ ಮತ್ತು 12ನೇ ಭಾರತೀಯ ವೇಗಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಐಪಿಎಲ್ 2022ರ ಆವೃತ್ತಿಯಿಂದ ಪವರ್‌ಪ್ಲೇನಲ್ಲಿ ಅತಿ ಹೆಚ್ಚು ವಿಕೆಟ್ ಪಡೆದ ಬೌಲರ್‌ಗಳ ಪಟ್ಟಿಯಲ್ಲಿ ಸಿರಾಜ್ ಮೂರನೇ ಸ್ಥಾನದಲ್ಲಿದ್ದಾರೆ. ಪವರ್‌ಪ್ಲೇನಲ್ಲಿ ಸಿರಾಜ್ ಇದುವರೆಗೆ ಒಟ್ಟು 24 ವಿಕೆಟ್‌ಗಳನ್ನು ಪಡೆದಿದ್ದಾರೆ.

3ನೇ ಜಯದ ನಿರೀಕ್ಷೆಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು

ಇಂದು ಆರ್‌ಸಿಬಿ ವಿರುದ್ಧ ಮುಂಬೈ

ಮುಂಬೈ: ಆತಿಥೇಯ ಮುಂಬೈ ಇಂಡಿಯನ್ಸ್ ತಂಡವು ಸೋಮವಾರ ಇಲ್ಲಿನ ವಾಂಖೆಡೆ ಸ್ಟೇಡಿಯಂನಲ್ಲಿ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವನ್ನು ಎದುರಿಸಲಿದೆ.



ಈಗಾಗಲೇ ಆಡಿರುವ 3 ಪಂದ್ಯಗಳ ಪೈಕಿ ಎರಡು ಪಂದ್ಯಗಳನ್ನು ಗೆದ್ದಿರುವ ಆರ್‌ಸಿಬಿ ಈ ಪಂದ್ಯದಲ್ಲಿ ಆತಿಥೇಯ ತಂಡಕ್ಕೆ ಪೈಪೋಟಿ ನೀಡುವುದಂತೂ ಖಚಿತ. ಮುಂಬೈ ತಂಡವು ಈ ಆವೃತ್ತಿಯ ಐಪಿಎಲ್‌ನಲ್ಲಿ ಒಟ್ಟು ನಾಲ್ಕು ಪಂದ್ಯಗಳನ್ನಾಡಿದ್ದು, ಒಂದೇ ಒಂದು ಪಂದ್ಯದಲ್ಲಿ ಮಾತ್ರ ಗೆದ್ದು, ಮೂರು ಪಂದ್ಯಗಳಲ್ಲಿ ಸೋತ ಒತ್ತಡದಲ್ಲಿದೆ.

ಮಾರ್ಚ್ 24ರಂದು ಕೋಲ್ಕತ್ತಾದಲ್ಲಿ ನಡೆದ ಉದ್ಘಾಟನಾ ಪಂದ್ಯದಲ್ಲಿ ಆತಿಥೇಯ ಕೆಕೆಆರ್ ತಂಡವನ್ನು 7 ವಿಕೆಟ್‌ಗಳಿಂದ ಸೋಲಿಸಿ ಬೆಂಗಳೂರು ತಂಡವು ಈ ಐಪಿಎಲ್ ಆವೃತ್ತಿಯಲ್ಲಿ ಶುಭಾರಂಭ ಮಾಡಿತ್ತು, ಆ ಬಳಿಕ ಮಾರ್ಚ್ 28ರಂದು ಸಿಎಸ್‌ಕೆ ವಿರುದ್ಧ ಚೆನ್ನೈ ವಿರುದ್ಧ ನಡೆದ ಪಂದ್ಯದಲ್ಲೂ ಆರ್‌ಸಿಬಿ 50 ರನ್‌ಗಳ ಭರ್ಜರಿ ಗೆಲುವನ್ನು ಪಡೆದಿತ್ತು.

ಆದರೆ ಏಪ್ರಿಲ್-2ರಂದು ತನ್ನ ತವರು ನೆಲವಾದ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಗುಜರಾತ್ ವಿರುದ್ಧ ನಡೆದ ಪಂದ್ಯದಲ್ಲಿ ಆರ್‌ಸಿಬಿ ತಂಡವು 8 ವಿಕೆಟ್‌ಗಳ ಸೋಲನ್ನೊಪ್ಪಿ, ಈ ಬಾರಿಯ ಐಪಿಎಲ್‌ನಲ್ಲಿ ಹ್ಯಾಟ್ರಿಕ್ ಗೆಲುವನ್ನು ತಪ್ಪಿಸಿಕೊಂಡಿತ್ತು.

ಬೆಂಗಳೂರು ತಂಡವನ್ನು ಸೋಮವಾರ ತನ್ನ ತವರು ಕ್ರೀಡಾಂಗಣದಲ್ಲಿ ಎದುರಿಸಲಿರುವ ಮುಂಬೈ ತಂಡವು, ಮಾರ್ಚ್-23ರಂದು ನಡೆದ ತನ್ನ ಮೊದಲ ಪಂದ್ಯದಲ್ಲೇ ಚೆನ್ನೈ ವಿರುದ್ಧ ಸೋಲುಂಡಿತ್ತು. ಆ ಬಳಿಕ ಮಾರ್ಚ್ 29ರಂದು ಗುಜರಾತ್ ಟೈಟನ್ಸ್ ವಿರುದ್ಧವೂ ಮುಂಬೈ ಇಂಡಿಯನ್ಸ್ ತಂಡವು 36 ರನ್‌ಗಳಿಂದ ಪರಾಭವ ಎದುರಿಸಿತ್ತು. ಆದರೆ ಮಾರ್ಚ್ 31ರಂದು ನಡೆದ ಪಂದ್ಯದಲ್ಲಿ ಮುಂಬೈ ತಂಡವು ಕೋಲ್ಕತ್ತಾ ವಿರುದ್ಧ 8 ವಿಕೆಟ್‌ಗಳ ಭರ್ಜರಿ ಜಯ ಗಳಿಸುವುದರ ಮೂಲಕ ಈ ಸಲದ ಐಪಿಎಲ್‌ನಲ್ಲಿ ತನ್ನ ಮೊದಲ ಗೆಲುವನ್ನು ದಾಖಲಿಸಿತ್ತು, ಬಳಿಕ ಮಾರ್ಚ್ 4ರಂದು ಮುಂಬೈ ತಂಡವು ಲಖನೌ ತಂಡದೆದುರು 12 ರನ್‌ಗಳ ಅಂತರದಲ್ಲಿ ಸೋಲನ್ನು ಕಂಡಿತ್ತು.

ತವರಿನಲ್ಲಿ ತಾನು ಆಡಿದ ಪಂದ್ಯದ ಸೋಲೊಂದು ಆರ್‌ಸಿಬಿಗೆ ಬಿಟ್ಟರೆ, ಉಳಿದ ಎರಡೂ ಕಡೆ ಗೆಲುವನ್ನು ದಾಖಲಿಸಿರುವುದರಿಂದ ಸೋಮವಾರ ವಾಂಖೆಡೆ ಮೈದಾನದಲ್ಲಿ ನಡೆಯುವ ಪಂದ್ಯದಲ್ಲಿ ಮುಂಬೈ ವಿರುದ್ಧ ಪಂದ್ಯ ಗೆಲ್ಲುವ ಆತ್ಮವಿಶ್ವಾಸದಲ್ಲಿದೆ. ಈ ವರೆಗೆ ನಡೆದಿರುವ ಮೂರು ಪಂದ್ಯಗಳ ಪೈಕಿ ಎರಡು ಪಂದ್ಯಗಳಲ್ಲಿ ಪಡೆದಿದ್ದ ಗೆಲುವು ಆರ್‌ಸಿಬಿಯ ಬ್ಯಾಟರ್‌ಗಳ ಮತ್ತು ಬೌಲರ್‌ಗಳ ಸಂಘಟಿತ ಯತ್ನವೆಂಬುದು ಮೇಲ್ನೋಟಕ್ಕೆ ಸ್ಪಷ್ಟವಾಗಿದೆ. ಆರ್‌ಸಿಬಿಯನ್ನು ಸೋಮವಾರ ಎದುರಿಸಲಿರುವ ಮುಂಬೈ ತಂಡದಲ್ಲಿ ಖ್ಯಾತ ಆಟಗಾರರಿದ್ದರೂ, ಈ ಐಪಿಎಲ್ ಆವೃತ್ತಿಯ ಆರಂಭದಿಂದಲೇ ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲಿ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಪ್ರದರ್ಶನ ನೀಡುವಲ್ಲಿ ಅವರೆಲ್ಲರೂ ವಿಫಲರಾಗಿದ್ದಾರೆ. ತಮ್ಮ ತವರು ನೆಲದಲ್ಲಿ ಪಂದ್ಯ ನಡೆಯಲಿರುವುದರಿಂದ ಮುಂಬೈ ತಂಡಕ್ಕೆ ತನ್ನ ಅಭಿಮಾನಿಗಳ ಹೆಚ್ಚಿನ ಬೆಂಬಲ ಸಿಗುವುದು ಸಹಜ. ಹಾಗಾಗಿ ವಾಂಖೆಡೆ ಸ್ಟೇಡಿಯಂನಲ್ಲಿ ಸೋಮವಾರ ಆರ್‌ಸಿಬಿ ಮತ್ತು ಮುಂಬೈ ನಡುವಿನ ಪಂದ್ಯ ಪೈಪೋಟಿಯಿಂದಲೇ ಕೂಡಿರಬಹುದೆಂಬುದು ಹೆಚ್ಚಿನ ಕ್ರಿಕೆಟ್ ವಿಶ್ಲೇಷಕರ ಅಭಿಮತ.

ಬೆಂಗಳೂರು ತಂಡ
ರಜತ್ ಪಾಟೀದಾರ್ (ನಾಯಕ)
ವಿರಾಟ್ ಕೊಹ್ಲಿ
ಯಶ್ ದಯಾಳ್
ಹ್ಯಾಝಲ್‌ವುಡ್
ಫಿಲ್ ಸಾಲ್ಟ್
ಜಿತೇಶ್ ಶರ್ಮಾ
ಲಿವಿಂಗ್‌ಸ್ಟೋನ್
ಸುಯಶ್ ಶರ್ಮಾ
ಭುವನೇಶ್ವರ್ ಕುಮಾರ್
ಕೃಣಾಲ್ ಪಾಂಡ್ಯ
ಜೇಕಬ್ ಬೆಥೆಲ್
ದೇವದತ್ ಪಡಿಕ್ಕಲ್
ನುವಾನ್ ತುಷಾರ
ಅಭಿನಂದನ್ ಸಿಂಗ್

ಮುಂಬೈ ತಂಡ
ಹಾರ್ದಿಕ್ ಪಾಂಡ್ಯ (ನಾಯಕ)
ರೋಹಿತ್ ಶರ್ಮಾ
ವಿಲ್ ಜ್ಯಾಕ್ಸ್
ಸೂರ್ಯಕುಮಾರ್
ತಿಲಕ್ ವರ್ಮಾ
ನಮನ್ ಧೀರ್
ಮಿಚೆಲ್ ಸ್ಯಾಂಟ್ನರ್
ದೀಪಕ್ ಚಹರ್
ಟ್ರೆಂಟ್ ಬೌಲ್ಟ್
ಅಶ್ವಿನಿ ಕುಮಾರ್
ವಿಘ್ನೇಶ್ ಪುತ್ತೂರು
ರಿಯಾನ್ ರಿಕೆಲ್ಟನ್
ಸತ್ಯನಾರಾಯಣ ರಾಜು
ಅರ್ಜುನ್ ತೆಂಡೂಲ್ಕರ್



ಮುಂಬೈ ತಂಡ ಸೇರಿದ ಬುಮ್ರಾ

ಸತತ ಸೋಲಿನಿಂದ ಕಂಗೆಟ್ಟಿದ್ದ ಮುಂಬೈ ಇಂಡಿಯನ್ಸ್ ತಂಡಕ್ಕೆ ಆರ್‌ಸಿಬಿ ವಿರುದ್ಧದ ಪಂದ್ಯಕ್ಕೂ ಮುನ್ನ ಆನೆ ಬಲ ಬಂದಂತಾಗಿದೆ. ತಂಡದ ಪ್ರಧಾನ ವೇಗಿ ಜಸ್‌ಪ್ರೀತ್ ಬುಮ್ರಾ ಮರಳಿದ್ದಾರೆ. ಈ ಸಂತಸದ ವಿಚಾರವನ್ನು ಭಾನುವಾರ ಮುಂಬೈ ಇಂಡಿಯನ್ಸ್ ತನ್ನ ಅಧಿಕೃತ ಟ್ವಿಟರ್ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದೆ. 'ಕಾಡಿನ ರಾಜ ತನ್ನ ರಾಜ್ಯಕ್ಕೆ ಮರಳಿದ್ದಾನೆ' ಎಂದು ಅದು ಬರೆದುಕೊಂಡಿದೆ. ಆಸ್ಟ್ರೇಲಿಯಾ ವಿರುದ್ಧದ ಬಾರ್ಡರ್-ಗವಾಸ್ಕರ್ ಟೆಸ್ಟ್ ಸರಣಿಯ ಅಂತಿಮ ಟೆಸ್ಟ್ ಪಂದ್ಯದಲ್ಲಿ ಬೆನ್ನುನೋವಿಗೆ ತುತ್ತಾಗಿದ್ದ ಬುಮ್ರಾ, ಕಳೆದ ಮೂರು ತಿಂಗಳಿನಿಂದ ಬಿಸಿಸಿಐ ಪುನಶ್ಚೇತನ ಶಿಬಿರದಲ್ಲಿದ್ದರು. ಗಾಯದಿಂದ ಸಂಪೂರ್ಣ ಗುಣಮುಖರಾಗಿದ್ದರೂ, ಬಿಸಿಸಿಐ ವೈದ್ಯಕೀಯ ತಂಡದಿಂದ ಆಡಲು ಅವರು ಅನುಮತಿಗಾಗಿ ಕಾಯುತ್ತಿದ್ದರು. ಇದೀಗ ಬುಮ್ರಾಗೆ ಆಡುವ ಅವಕಾಶ ದೊರೆತ್ತಿದ್ದು, ಮುಂಬೈ ತಂಡವನ್ನು ಕೂಡಿಕೊಂಡಿದ್ದಾರೆ.

ಫೈನಲ್‌ಗೆ ಕ್ಲಾರ್ಕ್-ಕ್ರಾಫರ್ಡ್

ಬೆಂಗಳೂರು: ಅಗ್ರ ಶ್ರೇಯಾಂಕದ ಜೇ ಕ್ಲಾರ್ಕ್ ಅವರು ಹೆಚ್ಚಿನ ಪ್ರಯಾಸವಿಲ್ಲದೇ ನೇರ ಸೆಟ್‌ಗಳಿಂದ ಭಾರತದ ಚಿರಾಗ್ ದುಹಾನ್ ಅವರನ್ನು ಸೋಲಿಸಿ ಎಸ್.ಎಂ. ಕೃಷ್ಣ ಸ್ಮರಣಾರ್ಥ ಓಪನ್ ಐಟಿಎಫ್ ಟೆನಿಸ್ ಟೂರ್ನಿಯ ಫೈನಲ್ ತಲುಪಿದ್ದಾರೆ. ಬ್ರಿಟನ್ ಆಟಗಾರ ಫೈನಲ್‌ನಲ್ಲಿ ಸ್ವದೇಶದ ಆಟಗಾರ, ಎರಡನೇ ಶ್ರೇಯಾಂಕದ ಒಲಿವರ್ ಕ್ರಾಫರ್ಡ್ ಅವರನ್ನು ಎದುರಿಸಲಿದ್ದಾರೆ. ವಿಶ್ವ ಕ್ರಮಾಂಕದಲ್ಲಿ 277ನೇ ಸ್ಥಾನದಲ್ಲಿರುವ ಬ್ರಿಟನ್‌ನ ಕ್ಲಾರ್ಕ್, ತಮಗಿಂತ ಸಾಕಷ್ಟು ಕೆಳಗಿನ ಸ್ಥಾನದಲ್ಲಿರುವ, 1016ನೇ ಕ್ರಮಾಂಕದ ದುಹಾನ್ ವಿರುದ್ಧ ಅನಿರೀಕ್ಷಿತಕ್ಕೆ ಅವಕಾಶ ನೀಡದೆ, 6-3, 6-3ರಲ್ಲಿ ಜಯಗಳಿಸಿದರು. 26 ವರ್ಷ ವಯಸ್ಸಿನ ಕ್ಲಾರ್ಕ್, 89 ನಿಮಿಷಗಳಲ್ಲಿ ಪಂದ್ಯ ಗೆದ್ದು, ಭಾರತದಲ್ಲಿ ಸತತ ನಾಲ್ಕನೇ ಐಟಿಎಫ್ ಟೂರ್ನಿಯ ಫೈನಲ್ ತಲುಪಿದ್ದಾರೆ. ಇನ್ನೊಂದು ಸೆಮಿಫೈನಲ್‌ನಲ್ಲಿ ಒಲಿವರ್ ಕ್ರಾಫರ್ಡ್ 6-4. 6-4 ಸೆಟ್‌ಗಳಿಂದ ಜಪಾನ್‌ನ ರುಕಿ ಮತ್ತುದಾ ಅವರನ್ನು ಹಿಮ್ಮೆಟ್ಟಿಸಿದರು.

ಇದೊಂದು ಉಪಕಾರ ಮಾಡಿಕೊಡಿ: ಮೋದಿಗೆ ಲಂಕಾ ಕ್ರಿಕೆಟಿಗರ ಮನವಿ

ಕೊಲಂಬೊ: ಪ್ರಧಾನಿ ನರೇಂದ್ರ ಮೋದಿ ಎರಡು ದಿನ ಶ್ರೀಲಂಕಾ ಪ್ರವಾಸ ಕೈಗೊಂಡಿದ್ದ ವೇಳೆ, 1996ರ ವಿಶ್ವಕಪ್ ಗೆದ್ದ ಶ್ರೀಲಂಕಾ ತಂಡದ ಸದಸ್ಯರಾದ ಜಯಸೂರ್ಯ, ಚಮಿಂಡ ವಾಸ್, ಅರವಿಂದ ಡಿ ಸಿಲ್ವಾ, ಮಾರ್ವನ್ ಅಟಪಟ್ಟು, ರವೀಂದ್ರ ಪುಷ್ಪಕುಮಾರ, ಉಪುಲ್ ಚಂದನ, ಕುಮಾರ ಧರ್ಮಸೇನ ಮತ್ತು ರೊಮೇಶ್ ಕಲುವಿತರಣ ಮುಂತಾದವರು ಅವರನ್ನು ಭೇಟಿಯಾಗಿ ಸಂವಾದ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಶ್ರೀಲಂಕಾ ಹಾಲಿ ಕೋಚ್ ಆಗಿರುವ ಸನತ್ ಜಯಸೂರ್ಯ ರವರು, ನರೇಂದ್ರ ಮೋದಿ ಅವರ ಬಳಿ ಜಾಫ್ನಾದಲ್ಲಿ ಅಂತಾರಾಷ್ಟ್ರೀಯ ಕ್ರೀಡಾಂಗಣ ನಿರ್ಮಿಸಲು ಭಾರತದ ಸಹಾಯ ಬೇಕೆಂದು ಕೇಳಿಕೊಂಡಿದ್ದಾರೆ.

ಸಭೆಯಲ್ಲಿ ಮಾತನಾಡಿದ ಜಯಸೂರ್ಯ, 'ಶ್ರೀಲಂಕಾದಲ್ಲಿ ಸಾಕಷ್ಟು ಸಮಸ್ಯೆಗಳಿದ್ದಾಗ, ಬಿಕ್ಕಟ್ಟಿದ್ದಾಗ ನೀವು ಮತ್ತು ಭಾರತ ಸರಕಾರ ನಮಗೆ ದೊಡ್ಡ ಸಹಾಯ ಮಾಡಿದ್ದೀರಿ. ಇದಕ್ಕಾಗಿ ನಾವು ಯಾವಾಗಲೂ ಕೃತಜ್ಞರಾಗಿದ್ದೇವೆ. ಶ್ರೀಲಂಕಾ ಕ್ರಿಕೆಟ್ ತಂಡ ದೇಶದಾದ್ಯಂತ ಆಡುತ್ತಿದೆ, ಆದರೆ ಜಾಫ್ನಾದಲ್ಲಿ ಆಡಲಾಗುತ್ತಿಲ್ಲ. ಜಾಫ್ನಾದಲ್ಲಿ ಅಂತಾರಾಷ್ಟ್ರೀಯ ಕ್ರೀಡಾಂಗಣ ನಿರ್ಮಿಸಲು ಭಾರತ ಸಹಾಯ ಮಾಡಿದರೆ, ಉತ್ತರ ಮತ್ತು ಪೂರ್ವ ಭಾಗದ ಜನರಿಗೆ ಇದು ದೊಡ್ಡ ಉಪಕಾರವಾಗುತ್ತದೆ, ಇದು ನನ್ನ ಸಣ್ಣ ಮನವಿ' ಎಂದು ಮೋದಿಯವರಲ್ಲಿ ಕೇಳಿಕೊಂಡಿದ್ದಾರೆ.

ಜಯಸೂರ್ಯರ ಮನವಿಗೆ ಪ್ರತಿಕ್ರಿಯಿಸಿದ ಪ್ರಧಾನಮಂತ್ರಿ ಮೋದಿ, 'ಭಾರತವು ಯಾವಾಗಲೂ ನೆರೆಹೊರೆ ರಾಷ್ಟ್ರಗಳ ಪರ ಮೊದಲು ಎಂಬ ನೀತಿಯಲ್ಲಿ ನಂಬಿಕೆ ಇಟ್ಟಿದೆ. ನಮ್ಮ ನೆರೆಯ ರಾಷ್ಟ್ರಗಳ ಸಂಕಷ್ಟಗಳಿಗೆ ಪ್ರತಿಕ್ರಿಯಿಸಲು ನಾವು ಯಾವಾಗಲೂ ಬಯಸುತ್ತೇವೆ. ಇತ್ತೀಚೆಗೆ ಮಯನ್ಮಾರ್‌ನಲ್ಲಿ ಉಂಟಾದ ಭೂಕಂಪದ ಸಂದರ್ಭದಲ್ಲಿ ನಾವೇ ಮೊದಲ ನೆರವಿನ ಹಸ್ತ ಚಾಚಿದ್ದೆವು. ಶ್ರೀಲಂಕಾದ ಸಂಕಷ್ಟದ ಸಮಯದಲ್ಲಿ, ಆ ದೇಶವು ಅದರಿಂದ ಹೊರಬರಬೇಕೆಂದು ನಾವು ಬಯಸಿದೆವು ಮತ್ತು ಅದಕ್ಕಾಗಿ ನಮ್ಮ ಕೈಲಾದಷ್ಟು ಪ್ರಯತ್ನಿಸಿದೆವು. ನೀವು ಜಾಫ್ನಾದಲ್ಲಿ ಅಂತಾರಾಷ್ಟ್ರೀಯ ಪಂದ್ಯಗಳು ನಡೆಯಬೇಕೆಂದು ಹೇಳಿದ್ದೀರಿ, ಇದು ತುಂಬಾ ಪ್ರಬಲ ಆಲೋಚನೆಯಾಗಿದೆ. ಹಾಗಾಗಿ ಇದಕ್ಕಾಗಿ ಸಾಧ್ಯವಿರುವ ಎಲ್ಲಾ ನೆರವು ನೀಡಲು ಪ್ರಯತ್ನಿಸುತ್ತದೆ ಎಂದು ನಾನು ಭರವಸೆ ನೀಡುತ್ತೇನೆ' ಎಂದು ತಿಳಿಸಿದರು.

ಪ್ರಧಾನಮಂತ್ರಿ ಮೋದಿ ಎರಡು ದಿನಗಳ ಶ್ರೀಲಂಕಾ ಭೇಟಿಯ ವೇಳೆ 1996ರ ವಿಶ್ವಕಪ್ ಗೆದ್ದ ಶ್ರೀಲಂಕಾ ತಂಡದ ಸದಸ್ಯರೊಂದಿಗೆ ಸಂವಾದ ನಡೆಸಿದರು. '1996ರಲ್ಲಿ ವಿಶ್ವಕಪ್ ಗೆದ್ದ ಶ್ರೀಲಂಕಾ ತಂಡದ ಸದಸ್ಯರೊಂದಿಗೆ ಭೇಟಿಯಾಗಿದ್ದು ಖುಷಿಯಾಯಿತು, ಆ ತಂಡ ಕ್ರೀಡಾಪ್ರಿಯರ ಗಮನ ಸೆಳೆದಿತ್ತು' ಎಂದು ಮೋದಿ ಎಕ್ಸ್ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ. ಭೇಟಿಯ ಸಂದರ್ಭದಲ್ಲಿ ತಂಡದ ಸದಸ್ಯರು ಮೋದಿಗೆ ಸ್ಮರಣಿಕೆಯನ್ನು ನೀಡಿ ಗೌರವಿಸಿದರು.

ರೋಹಿತ್ ಜತೆಗಿನ ಒಡನಾಟ ಬಿಚ್ಚಿಟ್ಟ ಕೊಹ್ಲಿ

ಮುಂಬೈ: ಸೋಮವಾರದ ಐಪಿಎಲ್ ಪಂದ್ಯಾವಳಿಯಲ್ಲಿ ಭಾರತೀಯ ಕ್ರಿಕೆಟ್‌ನ ಐಕಾನಿಕ್ ಆಟಗಾರರಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಮುಖಾಮುಖಿಯಾಗಲಿದ್ದಾರೆ.

ಪಂದ್ಯಕ್ಕೂ ಮುನ್ನ ವಿರಾಟ್ ಕೊಹ್ಲಿ ಅವರು ರೋಹಿತ್ ಜತೆಗಿನ ತಮ್ಮ ಒಡನಾಟದ ಬಗ್ಗೆ ಮುಕ್ತವಾಗಿ ಮಾತನಾಡಿದ್ದಾರೆ. ಕೊಹ್ಲಿ ಮಾತನಾಡಿರುವ ಒಂದೂವರೆ ನಿಮಿಷದ ವಿಡಿಯೊವನ್ನು ಆರ್‌ಸಿಬಿ ತನ್ನ ಟ್ವಿಟರ್ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದೆ.

'ಭಾರತ ಕ್ರಿಕೆಟ್ ತಂಡದ ನಾಯಕತ್ವದ ವಿಚಾರದಲ್ಲಿ ನಾವಿಬ್ಬರೂ ಬಹಳ ನಿಕಟವಾಗಿ ಮತ್ತು ಅನ್ಯೋನ್ಯವಾಗಿ ಕೆಲಸ ಮಾಡಿದ್ದೇವೆ, ಹಾಗಾಗಿ ಸಾಕಷ್ಟು ವಿಚಾರಗಳನ್ನು ಚರ್ಚಿಸಿದ್ದೇವೆ. ಯಾವುದೇ ನಿರ್ದಿಷ್ಟ ಪರಿಸ್ಥಿತಿ ಅಥವಾ ಪಂದ್ಯದ ಸಂದರ್ಭದಲ್ಲಿ ನಮ್ಮಿಬ್ಬರ ನಿಲುವುಗಳು ಹೆಚ್ಚೂ ಕಡಿಮೆ ಒಂದೇ ಆಗಿತ್ತು' ಎಂದು ಕೊಹ್ಲಿ ಹೇಳಿದ್ದಾರೆ. 'ನಾವಿಬ್ಬರು ಒಟ್ಟಿಗೆ ಆಡಿದ ಸಮಯವನ್ನು ಖಂಡಿತಾ ಸಂಭ್ರಮಿಸಿದ್ದೇವೆ, ಹಾಗಾಗಿಯೇ ದೀರ್ಘಕಾಲ ವೃತ್ತಿ ಜೀವನವನ್ನು ರೂಪಿಸಿಕೊಳ್ಳಲು ಸಾಧ್ಯವಾಯಿತು. ನಾವು ದೇಶದ ಪರ 15 ವರ್ಷ ಆಡುತ್ತೇವೆಯೇ ಎಂಬುದು ಖಾತ್ರಿ ಇರಲಿಲ್ಲ. ಇಷ್ಟು ದೀರ್ಘ ಮತ್ತು ನಿರಂತರ ಪ್ರಯಾಣ, ಹಂಚಿಕೊಂಡ ಎಲ್ಲಾ ನೆನಪುಗಳು, ಪ್ರತಿ ಕ್ಷಣಗಳಿಗೆ ಕೃತಜ್ಞರಾಗಿದ್ದೇವೆ' ಎಂದು ರೋಹಿತ್ ಜತೆಗಿನ ಒಡನಾಟವನ್ನು ಕೊಹ್ಲಿ ತೆರೆದಿಟ್ಟಿದ್ದಾರೆ.

ರೋಹಿತ್ ಮತ್ತು ಕೊಹ್ಲಿ ಕಳೆದ ವರ್ಷ ನಡೆದಿದ್ದ ಟಿ20 ವಿಶ್ವಕಪ್ ಗೆಲುವಿನ ಬಳಿಕ ಟಿ20 ಕ್ರಿಕೆಟ್‌ಗೆ ವಿದಾಯ ಹೇಳಿದ್ದರು. ಸದ್ಯ ಉಭಯ ಆಟಗಾರರು ಏಕದಿನ ಮತ್ತು ಟೆಸ್ಟ್ ಮಾತ್ರ ಮಾಡುತ್ತಿದ್ದಾರೆ.

ಕಳೆದ ಮೂರು ಪಂದ್ಯಗಳಲ್ಲಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿದ್ದ ರೋಹಿತ್ ಶರ್ಮಾ ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧದ ಪಂದ್ಯದಿಂದ ಹೊರಗುಳಿದಿದ್ದರು, ಆದರೆ ಸೋಮವಾರ ನಡೆಯುವ ಆರ್‌ಸಿಬಿ ವಿರುದ್ಧದ ಪಂದ್ಯದಲ್ಲಿ ಕಣಕ್ಕಿಳಿಯುವ ಸಾಧ್ಯತೆ ಇದೆ.

ಚೆನ್ನೈ ಸೂಪರ್ ಕಿಂಗ್ಸ್ ಕೋಚ್ ದಿಢೀರ್ ಸುದ್ದಿಗೋಷ್ಠಿ | ವದಂತಿಗಳಿಗೆ ಸ್ಪಷ್ಟನೆ

ಧೋನಿ ನಿವೃತ್ತಿಗೆ ಸಮಯ ಆಗಿಲ್ಲ: ಫ್ಲೆಮಿಂಗ್

ಚೆನ್ನೈ: ಈ ಐಪಿಎಲ್ ಟೂರ್ನಿಯಲ್ಲಿ ಮಹೇಂದ್ರ ಸಿಂಗ್ ಧೋನಿ ಉತ್ಸಾಹದಿಂದಲೇ ಆಡುತ್ತಿದ್ದಾರೆ ಮತ್ತು ಐಪಿಎಲ್ ಪ್ರಯಾಣವನ್ನು ಅಂತ್ಯಗೊಳಿಸುವ ಯಾವುದೇ ಸೂಚನೆಯನ್ನು ಅವರಿಗೆ ನೀಡಲಾಗಿಲ್ಲ ಎಂದು ಚೆನ್ನೈ ಸೂಪರ್ ಕಿಂಗ್ಸ್ ಮುಖ್ಯ ಕೋಚ್ ಸ್ಟೀಫನ್ ಫ್ಲೆಮಿಂಗ್ ಸ್ಪಷ್ಟಪಡಿಸಿದ್ದಾರೆ.

ಶನಿವಾರ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಚೆನ್ನೈ ಸೂಪರ್ ಕಿಂಗ್ಸ್ ಪಂದ್ಯದ ವೇಳೆ ಚೆಪಾಕ್ ಸ್ಟೇಡಿಯಂನಲ್ಲಿ ಧೋನಿ ಅವರ ಪೋಷಕರ ಉಪಸ್ಥಿತಿಯು ಅವರ ನಿವೃತ್ತಿಯ ಬಗ್ಗೆ ಮತ್ತೊಮ್ಮೆ ಸಾಮಾಜಿಕ ಮಾಧ್ಯಮಗಳು ಊಹಾಪೋಹಗಳಿಗೆ ಉತ್ತೇಜನ ನೀಡಿತ್ತು. ಆದರೆ ಡೆಲ್ಲಿ ವಿರುದ್ಧದ ಪಂದ್ಯದ ಬಳಿಕ ಸುದ್ದಿಗೋಷ್ಠಿಯಲ್ಲಿ ಸಿಎಸ್‌ಕೆ ಹೆಡ್ ಕೋಚ್ ಎಂಎಸ್ ಧೋನಿಯ ನಿವೃತ್ತಿಯ ಬಗೆಗಿನ ಎಲ್ಲಾ ಊಹಾಪೋಹಗಳನ್ನು ತಳ್ಳಿ ಹಾಕಿದ್ದಾರೆ.

ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದಲ್ಲಿ 25 ರನ್‌ಗಳಿಂದ ಸೋತ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸ್ಟೀಫನ್ ಫ್ಲೆಮಿಂಗ್, ಇಲ್ಲ, ಎಂಎಸ್ ಧೋನಿ ಪ್ರಯಾಣವನ್ನು ಕೊನೆಗೊಳಿಸುವುದು ನನ್ನ ಕೆಲಸವಲ್ಲ. ನನಗೇನೂ ಗೊತ್ತಿಲ್ಲ. ನಾನು ಅವರೊಂದಿಗೆ ಕೆಲಸ ಮಾಡುವುದನ್ನು ಆನಂದಿಸುತ್ತಿದ್ದೇನೆ, ಅವರು ಇನ್ನೂ ಬಲಶಾಲಿಯಾಗಿದ್ದಾರೆ. ಈ ದಿನಗಳಲ್ಲಿ ನಾನು ಕೇಳುವುದೇ ಇಲ್ಲ, ನೀವು ಮಾತ್ರ ಇದರ ಬಗ್ಗೆ ಕೇಳುತ್ತೀರಿ ಎಂದು ಗರಂ ಆಗಿದ್ದಾರೆ.

ಇದಕ್ಕೂ ಮುನ್ನ ಎಂಎಸ್ ಧೋನಿ ಅವರನ್ನು ಒಂಬತ್ತನೇ ಕ್ರಮಾಂಕಕ್ಕೆ ಕಳುಹಿಸುವ ನಿರ್ಧಾರವನ್ನು ತೀವ್ರವಾಗಿ ಟೀಕಿಸಲಾಗಿತ್ತು, ಆದರೆ ಶನಿವಾರ ಧೋನಿ ಏಳನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದಿದ್ದರು. ಆದಾಗ್ಯೂ ಅವರು 26 ಎಸೆತಗಳಲ್ಲಿ 30 ರನ್‌ಗಳ ಅಜೇಯ ಇನಿಂಗ್ಸ್ ಆಡಿದರು, ಆದರೂ ಅವರು ಲಯವನ್ನು ಕಂಡುಕೊಳ್ಳಲು ವಿಫಲರಾದರು, ಅಲ್ಲದೆ ತಮ್ಮ ತಂಡವನ್ನು ಹ್ಯಾಟ್ರಿಕ್ ಸೋಲಿನಿಂದ ತಪ್ಪಿಸಲು ಅವರಿಂದ ಸಾಧ್ಯವಾಗಲಿಲ್ಲ.

ವೈಟ್‌ಬಾಲ್ ಕ್ರಿಕೆಟ್ ಆಡುವ ಖುಷಿ ಮರಳಿ ಸಿಕ್ಕಿದೆ ಎಂದ ಕನ್ನಡಿಗ

ನನ್ನ ಈ ಯಶಸ್ಸಿಗೆ ನಾಯರ್ ಸಲಹೆ ಕಾರಣ: ರಾಹುಲ್

ಚೆನ್ನೈ: ಟೀಮ್ ಇಂಡಿಯಾದಲ್ಲಿ ಫಿನಿಷರ್ ಆಗಿ ಸೈ ಅನ್ನಿಸಿಕೊಂಡಿದ್ದ ವಿಕೆಟ್ ಕೀಪರ್-ಬ್ಯಾಟರ್ ಇದೀಗ ಮತ್ತೆ ಓಪನರ್ ಆಗಿ ಮಿಂಚಿದ್ದಾರೆ, ಬೆರಳು ತೋರಿಸಿ ಟೀಕಿಸಿದ್ದವರೇ ಇಂದು ಶಹಬ್ಬಾಸ್ ಎಂದು ಚಪ್ಪಾಳೆ ತಟ್ಟುತ್ತಿದ್ದಾರೆ. ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ನಡೆದ ಪಂದ್ಯದಲ್ಲಿ ಕೇವಲ 51 ಎಸೆತಗಳಲ್ಲಿ 77 ರನ್ ಗಳಿಸುವ ಮೂಲಕ ತಂಡದ ಜಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಈ ಯಶಸ್ಸಿನ ಶ್ರೇಯವನ್ನು ಇದೀಗ ಅವರು ಟೀಮ್ ಇಂಡಿಯಾ ಸಹ ಕೋಚ್ ಮತ್ತು ಕೋಲ್ಕತ್ತಾ ನೈಟ್ ರೈಡರ್ಸ್‌ನ ಮಾಜಿ ಕೋಚ್ ಅಭಿಷೇಕ್ ನಾಯರ್ ಅವರಿಗೆ ಸಲ್ಲಿಸಿದ್ದಾರೆ. ಭಾರತ ಟಿ20 ಕ್ರಿಕೆಟ್‌ಗೆ ಮರಳಲು ಶ್ರಮಿಸುತ್ತಿರುವ ಕೆಎಲ್ ರಾಹುಲ್, ವೈಟ್ ಬಾಲ್ ಕ್ರಿಕೆಟ್‌ನಲ್ಲಿ ಅಭಿಷೇಕ್ ನಾಯರ್ ಅವರ ಸಲಹೆ ಸೂಚನೆಗಳು ತನ್ನ ಪ್ರಗತಿಗೆ ಸಹಾಯ ಮಾಡಿವೆ ಎಂದಿದ್ದಾರೆ.

'ಕಳೆದ ಒಂದು ವರ್ಷದಿಂದ ನಾನು ನನ್ನ ವೈಟ್‌ಬಾಲ್ ಆಟದಲ್ಲಿ ತುಂಬಾ ಕಷ್ಟಪಟ್ಟಿದ್ದೇನೆ, ಅಭಿಷೇಕ್ ನಾಯರ್ ಅವರು ಭಾರತ ತಂಡಕ್ಕೆ ಸಹಾಯಕ ಕೋಚ್ ಆಗಿ ಬಂದಾಗಿನಿಂದ ನಾನು ಅವರೊಂದಿಗೆ ಬಹಳಷ್ಟು ಕೆಲಸ ಮಾಡಿದ್ದೇನೆ. ವೈಟ್‌ಬಾಲ್ ಕ್ರಿಕೆಟ್‌ನಲ್ಲಿ ನನ್ನನ್ನು ನಾನು ಹೇಗೆ ಉತ್ತಮ ಪಡಿಸಿಕೊಳ್ಳಬಹುದು ಎಂಬ ಬಗ್ಗೆ ಅವರ ಬಳಿ ಬಹಳಷ್ಟು ಚರ್ಚೆ ನಡೆಸಿದ್ದೇನೆ. ನಾವಿಬ್ಬರೂ ಕ್ರಿಕೆಟ್ ಬಗ್ಗೆ ನಾವು ಗಂಟೆಗಟ್ಟಲೆ ಮಾತನಾಡಿದ್ದೇವೆ. ಮುಂಬೈನಲ್ಲಿ ನಾವು ಗಂಟೆಗಟ್ಟಲೆ ಒಟ್ಟಿಗೇ ಕೆಲಸ ಮಾಡಿದ್ದೇವೆ, ಬದುಕಿನಲ್ಲಿ ವೈಟ್‌ಬಾಲ್ ಕ್ರಿಕೆಟ್ ಆಡುವುದರಲ್ಲಿ ಇರುವ ಖುಷಿಯನ್ನು ಮರಳಿ ಕಂಡುಕೊಂಡಿದ್ದೇನೆ ಎಂದು ನಾನು ಭಾವಿಸುತ್ತೇನೆ' ಎಂದು ತಿಳಿಸಿದ್ದಾರೆ.



'ಯಾವುದೋ ಹಂತದಲ್ಲಿ ನಾನು ಚೆಂಡನ್ನು ಬೌಂಡರಿ ಮತ್ತು ಸಿಕ್ಸರ್‌ಗೆ ಹೊಡೆಯುವ ಉತ್ಸಾಹವನ್ನೇ ಕಳೆದುಕೊಂಡೆ ಅನ್ನಿಸುತ್ತದೆ. ನಾನು ಈ ವಿಚಾರವನ್ನು ಬಹಳ ಗಂಭೀರವಾಗಿ ಪರಿಗಣಿಸಿದೆ ಅದನ್ನೇ ನನ್ನ ತಲೆಯಲ್ಲಿ ತುಂಬಿಕೊಂಡಿದ್ದೆ. ನಾನು ಮತ್ತೆ ಹಳೆಯ ಲಯಕ್ಕೆ ಮರಳಬೇಕು ಎಂದು ನಿರ್ಧರಿಸಿದೆ. ಈಗ ಆಟದ ಬಗ್ಗೆ ಹೆಚ್ಚು ಯೋಚಿಸುತ್ತಿಲ್ಲ, ಚೆಂಡನ್ನು ಗಮನಿಸಿ ಆಕ್ರಮಣಕಾರಿಯಾಗಿ ಆಡಲು ಇಷ್ಟಪಡುತ್ತೇನೆ. ಬೌಲರ್ ಮತ್ತು ಎದುರಾಳಿಗಳ ಮೇಲೆ ನಿರಂತರ ಒತ್ತಡ ಹೇರಲು ಪ್ರಯತ್ನಿಸುತ್ತೇನೆ ಮತ್ತು ಬೌಂಡರಿ ಹೊಡೆಯುವುದನ್ನು ಆನಂದಿಸುತ್ತೇನೆ' ಎಂದಿದ್ದಾರೆ.